"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

21ನೇ ಮಾರ್ಚ್ 2017
ಮಂಗಳವಾರ

## ವಿಷಯಾನುಕ್ರಮಣಿಕೆ


1. ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.
   ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಾಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ.
   – ಶ್ರೀ ಬಸವರಾಜ ಎಸ್.ಹೊರಟ್ಟಿ
   – ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
   – ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)
   – (ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು)

2. ಪ್ರಶ್ನೋತ್ತರಗಳು
   ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**1034** – ಕೊಡಗು ಜಿಲ್ಲೆಯಲ್ಲಿ ಬೆಳೆ ವಿಮೆ ಬಗ್ಗೆ.
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

**914** – ರಾಜ್ಯದ ದನಕರುಗಳಿಗೆ ಬೇಸಿಗೆಯ ಬರಗಾಲದಲ್ಲಿ ಸೂಕ್ತ ಮೇವು ಒದಗಿಸಲು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ.
– ಶ್ರೀ ರಾಮಚಂದ್ರಗೌಡ

**939** – ರಸ್ತೆ ನಿರ್ವಹಣೆ ಕಾಮಗಾರಿಗಳಲ್ಲಿ ಅವ್ಯವಹಾರ
– ಶ್ರೀ ರಘುನಾಥ ರಾವ್ ಮಲ್ಕಾಪೂರೆ

**921** – ಹೆದ್ದಾರಿಗಳಲ್ಲಿ ಅಪಘಾತದ ಬಗ್ಗೆ.
– ಶ್ರೀ ಬಸನಗೌಡ ಆರ್.ಪಾಟೀಲ್

**988** – ರಾಯಚೂರು ಜಿಲ್ಲೆಗೆ ಮಂಜೂರಾಗಿರುವ 'ಕೃಷಿಹೊಂಡ'ಗಳ ಬಗ್ಗೆ
– ಶ್ರೀ ಎನ್.ಎಸ್.ಬೋಸ್‌ರಾಜು

**1017** – ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಅರೆಕಾಲಿಕ ಸಿಬ್ಬಂದಿಯನ್ನು ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ.
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

**1020** – ರಾಜ್ಯದ ತೋಟಗಾರಿಕಾ ಫಾರಂಗಳ ಬಗ್ಗೆ.
– ಶ್ರೀ ಟಿ.ಎ.ಶರವಣ

**968+966** – ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪನೆ ಬಗ್ಗೆ
– ಶ್ರೀಮತಿ ತಾರಾಅನೂರಾಧ
– ಶ್ರೀ ಅರುಣ ಶಹಾಪುರ


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**1004** – ಕೃಷಿ ಉತ್ಪನ್ನ ಮಾರುಕಟ್ಟೆ ಸೆಸ್ ಶೇ.1.5 ಆವರ್ತಕ ನಿಧಿ ಬಗ್ಗೆ
– ಶ್ರೀ ಅಮರನಾಥ ಪಾಟೀಲ್

**973** – ಅಮೃತ್ ಮಹಲ್‌ಗಳ ವಿವರ ನೀಡುವ ಬಗ್ಗೆ.
– ಶ್ರೀ ಎಂ.ಎ.ಗೋಪಾಲಸ್ವಾಮಿ

**911** – ತೆಂಗಿನ ಮರಗಳಿಗೆ ಬಿಳಿ ಹುಳುಗಳ ಹಾವಳಿ ಬಗ್ಗೆ
– ಶ್ರೀ ಕಾಂತರಾಜು (ಬಿ.ಎಂ.ಎಲ್)

**1044** – ಪಶು ವೈದ್ಯಕೀಯ ಆಸ್ಪತ್ರೆಗಳ ಬಗ್ಗೆ
– ಶ್ರೀ ಎಂ.ನಾರಾಯಣಸ್ವಾಮಿ

**1013** – ಘನ ತ್ಯಾಜ್ಯ ನಿರ್ವಹಣೆ ವಿಚಾರದ ಬಗ್ಗೆ
– ಶ್ರೀ ಭಾನುಪ್ರಕಾಶ

**953** – ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಖಾಲಿ ಹುದ್ದೆ ಭರ್ತಿ ಮಾಡುವ ಬಗ್ಗೆ
– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

**820** – ಹೆಸರುಕಾಳು ಪ್ಯಾಕೇಟ್ ವಿತರಣೆಯಲ್ಲಿನ ಲೋಪಗಳ ಬಗ್ಗೆ.
– ಶ್ರೀ ಎಂ.ಕೆ.ಪ್ರಾಣೇಶ್

ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.

ಅ) ಕರ್ನಾಟಕ ರಾಜ್ಯದ ಖಾಸಗಿ ಐಟಿಐ ಸಂಸ್ಥೆಗಳಲ್ಲಿ ಎಸ್.ಟಿ.ವಿ.ಟಿ. ಅಡಿಯಲ್ಲಿ 2014-15 ಮತ್ತು 2015-16ನೇ ಸಾಲಿನ ಪರೀಕ್ಷೆಗಳು ವಿಳಂಬವಾಗುತ್ತಿರುವ ಬಗ್ಗೆ.
– ಶ್ರೀ ರಮೇಶ್ ಬಾಬು
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಆ) ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ಹೆಚ್ಚಳ ಮಾಡುವ ಬಗ್ಗೆ.
– ಶ್ರೀ ಬಸನಗೌಡ ಆರ್.ಪಾಟೀಲ್
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ತೋಟಗಾರಿಕೆ, ಕೃಷಿ ಮಾರುಕಟ್ಟೆ ಸಚಿವರು)

ಇ) ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರ ಉಪ ಚುನಾವಣೆ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ನಡೆದ ಗಲಭೆ ಬಗ್ಗೆ.
– ಶ್ರೀ ಸೋಮಣ್ಣ ಮ.ಬೇವಿನ ಮರದ
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರಗಾಲದಿಂದ ಕುಡಿಯುವ ನೀರಿನ ತೊಂದರೆ ಬಗ್ಗೆ.
– ಶ್ರೀಮತಿ ಮೋಟಮ್ಮ
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

ಉ) ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಳ ಕೋರಿ ಬೆಂಗಳೂರು ನಗರದಲ್ಲಿ ಹಗಲು-ರಾತ್ರಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ.
– ಶ್ರೀಮತಿ ತಾರಾಅನೂರಾಧ
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀಮತಿ ಮೋಟಮ್ಮ
– ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಸೋಮಣ್ಣ ಮ.ಬೇವಿನಮರದ
- ಡಾ:ಜಿ.ಪರಮೇಶ್ವರ್ (ಸಭಾ ನಾಯಕರು)
- ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು)
- ಶ್ರೀ ವಿ.ಎಸ್.ಉಗ್ರಪ್ಪ

4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ

ಅ) ಕೊಡಗು ಜಿಲ್ಲೆಯ ಮಡಿಕೇರಿ ಜಿಲ್ಲೆಯ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸದೇ ಹಣ ದುರ್ಬಳಕೆ ಮಾಡಿಕೊಂಡಿರುವ ಅಧಿಕಾರಿಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಯವರ ಪ್ರಸ್ತಾವ

– ಡಾ: ಜಿ.ಪರಮೇಶ್ವರ್, (ಸಭಾನಾಯಕರು)(ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)

ಆ) ಕೊಡಗು ಜಿಲ್ಲೆಯ ಕುಶಾಲ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಯವರ ಪ್ರಸ್ತಾವ

– ಡಾ: ಜಿ.ಪರಮೇಶ್ವರ್, (ಸಭಾನಾಯಕರು)(ಕಂದಾಯ ಸಚಿವರ ಪರವಾಗಿ)

ಇ) ಅರಣ್ಯ ಪ್ರದೇಶದಲ್ಲಿ ಕಾಡಿಗೆ ಬೆಂಕಿ ಹತ್ತಿಕೊಂಡಿರುವ ಬಗ್ಗೆ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ಪ್ರಸ್ತಾವ

– ಡಾ: ಜಿ.ಪರಮೇಶ್ವರ್, (ಸಭಾನಾಯಕರು)(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ)

ಈ)ವಿಜಯಪುರ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆ ಹಾನಿಯಾಗಿರುವ ಬಗ್ಗೆ ಶ್ರೀ ಅರುಣ್ ಶಹಾಪುರ್‌ರವರ ಪ್ರಸ್ತಾವ

–ಡಾ: ಜಿ.ಪರಮೇಶ್ವರ್(ಸಭಾನಾಯಕರು)(ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)

5. ನಿಯಮ 330ರ ಮೇರೆಗೆ ಚರ್ಚೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಸಮುದಾಯಗಳಿಗೆ ರುದ್ರಭೂಮಿಗಾಗಿ ಸರ್ಕಾರಿ ಜಮೀನು ಮಂಜೂರು ಮಾಡುವ ಬಗ್ಗೆ.

- ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ (ಅಣ್ಣಯ್ಯ)
- ಡಾ:ಜಿ.ಪರಮೇಶ್ವರ್(ಸಭಾನಾಯಕರು)
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ರಾಮಚಂದ್ರಗೌಡ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

- ಶ್ರೀ ಹೆಚ್.ಡಿ.ರೇವಣ್ಣ
- ಶ್ರೀ ಎಂ.ಕೆ.ಪ್ರಾಣೇಶ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಕಾಗೋಡು ತಿಮ್ಮಪ್ಪ (ಅರಣ್ಯ ಸಚಿವರು)

6. ಅರ್ಧ ಗಂಟೆ ಕಾಲಾವಧಿ ಚರ್ಚೆ

ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ–

- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
- ಶ್ರೀ ಅರುಣ ಶಹಾಪುರ
- ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ರಮೇಶ್ ಬಾಬು
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ರಾಮಚಂದ್ರಗೌಡ
- ಶ್ರೀಮತಿ ತಾರಾಅನೂರಾಧ

7. ಗಮನ ಸೆಳೆಯುವ ಸೂಚನೆ

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊದಗೇರಿಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ರಾಜಾಶ್ರೀ ಷಹಜೀಯವರ ಸಮಾಧಿ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ

- ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು)
- ಶ್ರೀ ಮಾನೆ ಶ್ರೀನಿವಾಸ

8. ಪ್ರಕಟಣೆ

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(308) 21.03.2017 11.10 RN-LL**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ 21ನೇ ಮಾರ್ಚ್, 2017**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ: 11 ಗಂಟೆ 01 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1.ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಾಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ ನಡೆಸುತ್ತಿರುವ ಬಗ್ಗೆ**

– – –

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಒಂದು ನಿಲುವಳಿ ಸೂಚನೆ ಬಗ್ಗೆ ತಿಳುವಳಿಕೆಯನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ತಾವು ಕೊಟ್ಟಂತಹ ನಿಲುವಳಿ ಸೂಚನೆಯ ತಿಳುವಳಿಕೆಯನ್ನು ನಾನು ನೋಡಿದೆ. ಒಂದು ನಿಮಿಷ. ದಯಮಾಡಿ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ...

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ತಾವು ನೀಡಿದಂತಹ ತಿಳುವಳಿಕೆ ನನಗೆ ಬಂದು ತಲುಪಿದೆ. ಅದರ ಬಗ್ಗೆ ನಾನು ಹೇಳುತ್ತೇನೆ. ಏತಕ್ಕೆ ಎಂದು..?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯ ಬಾರಿ ಸುಮಾರು 10–15 ಸಾವಿರ ಹೆಣ್ಣುಮಕ್ಕಳು ರಾತ್ರಿ ಹಗಲು ರಸ್ತೆ ಬಂದ್ ಮಾಡಿದ್ದಾರೆ. ಅದಕ್ಕೆ ತಾವು ಸ್ವಲ್ಪ...

**ಸಭಾಪತಿಯವರು:–** ನಾನು ಅದರ ಬಗ್ಗೆ ಹೇಳುತ್ತೇನೆ. ಒಂದು ನಿಮಿಷ. ಮೊದಲನೆಯದಾಗಿ...

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸರ್, ಇದು ಅಂಗನವಾಡಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ವಿಷಯವಾಗಿದ್ದು, ಅವರು ರಾತ್ರಿಯಿಡಿ ಪುಟ್‌ಪಾತ್‌ನಲ್ಲಿ ಮಲಗಿದ್ದಾರೆ. ಈ ವಿಚಾರದಲ್ಲಿ ಮಾನವೀಯತೆಯ ಪ್ರಶ್ನೆ ಬಹಳ ಮುಖ್ಯ.

**ಸಭಾಪತಿಯವರು:–** ಮೊದಲನೆಯದಾಗಿ.. ಆಯಿತು. ಮೊದಲನೆಯದಾಗಿ ಹೊರಟ್ಟಿಯವರು ಮತ್ತು 4–5 ಜನ ಗೌರವಾನ್ವಿತ ಸದಸ್ಯರು ಸಹಿ ಹಾಕಿ ಒಂದು ನಿಲುವಳಿ ಸೂಚನೆಯ ಮುಖಾಂತರ ಇದೇ ವಿಷಯವನ್ನು ಕೊಟ್ಟಿದ್ದಾರೆ. ಸುಮಾರು 5 ಜನ ಗೌರವಾನ್ವಿತ ಸದಸ್ಯರು ಶೂನ್ಯ ವೇಳೆಯಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ನಮ್ಮ ಸದನದಲ್ಲಿ ಕೆಲವು ಬಾರಿ ತಾಂತ್ರಿಕ ವಿಷಯಗಳಿಗೂ ಪ್ರಾಧಾನ್ಯತೆ ಬರುತ್ತದೆ. ಆದುದರಿಂದ, ಗೌರವಾನ್ವಿತ ಬಸವರಾಜ ಹೊರಟ್ಟಿಯವರು ನಿಲುವಳಿ ಸೂಚನೆ ಬಗ್ಗೆ ಕೊಟ್ಟಂತಹ ತಿಳುವಳಿಕೆ ನನ್ನ ಕಛೇರಿಗೆ 10.35ಕ್ಕೆ ಬಂದಿದೆ. ಅಲ್ಲಾ, ನನ್ನ ಕಛೇರಿಗೆ ಬಂದಿರುವುದಿಲ್ಲ. ಆದರೆ, ಕಾರ್ಯದರ್ಶಿಯವರ ಕಛೇರಿಗೆ 10.30 ಗಂಟೆಯ ನಂತರ ಬಂದಿದೆ. ಅದಕ್ಕಾಗಿ ದಯವಿಟ್ಟು ಕ್ಷಮಿಸಬೇಕೆಂದು ಕೋರಿದ್ದೇನೆ. ತಾವು ಶೂನ್ಯ ವೇಳೆಯಲ್ಲಿಯೇ 4–5 ಜನ ಸದಸ್ಯರ ಪರವಾಗಿ ಯಾರಾದರೂ ಒಬ್ಬರು ಓದಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಏನು ಮಾಡಿದೆನೆಂದರೆ, ನಿಲುವಳಿ ಸೂಚನೆ ಬಗ್ಗೆ ತಿಳುವಳಿಕೆ ನೀಡಲು ತಮ್ಮ ಕಛೇರಿಗೆ ಬಂದಾಗ ತಾವು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೀರೆಂದು ತಿಳಿಯಿತು. ಆದುದರಿಂದ, ಆ ತಿಳುವಳಿಕೆಯನ್ನು ತಮ್ಮ ಕಛೇರಿಯಲ್ಲಿಟ್ಟು ಹೊರಟೆವು.

**ಸಭಾಪತಿಯವರು:–** ಇದರಲ್ಲಿ ಸಮಯದ ಪ್ರಶ್ನೆ ಒಂದು ಬಂದಿದೆ. ಆದುದರಿಂದ, ಈ ನಿಲುವಳಿ ಸೂಚನೆಯ ವಿಷಯ ಸರ್ಕಾರದ ಗಮನಕ್ಕೆ ಹೋಗಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಆಯಿತು. ತಾಂತ್ರಿಕ ವಿಷಯಗಳನ್ನು ನಾನು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು. ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಅವಕಾಶ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಹೇಳುತ್ತೇನೆ. ಇವತ್ತು ನಾವು ಅಂಗನವಾಡಿ ಕಾರ್ಯಕರ್ತೆಯರು ಮುಷ್ಕರ ನಡೆಸುವಂತಹ ಜಾಗಕ್ಕೆ ಹೋಗಿದ್ದೆವು.

**ಸಭಾಪತಿಯವರು:–** ಈಗ ನಾನು ತಮ್ಮ ವಿಷಯವನ್ನು ಶೂನ್ಯ ವೇಳೆಯಲ್ಲಿ allow ಮಾಡುತ್ತೇನೆಂದು ಹೇಳಿದ್ದೇನೆ. Allow ಮಾಡುವುದು ಬೇಡವೇ?

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೆ, ಇದೊಂದು ಪ್ರಮುಖ ವಿಚಾರವಾಗಿರುವುದರಿಂದ ದಯಮಾಡಿ ಚರ್ಚೆಗೆ ಅವಕಾಶ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಸುಮಾರು 10–15 ಸಾವಿರ ಜನ ಹೆಣ್ಣುಮಕ್ಕಳು ರಾತ್ರಿಯಿಡಿ ಧರಣಿ ಕುಳಿತಿದ್ದಾರೆ...

**(ಗೊಂದಲ)**

**ಸಭಾಪತಿಯವರು:–** ಹಾಗಾದರೆ, ತಮ್ಮೆಲ್ಲರ ಅಭಿಪ್ರಾಯ ಈ ವಿಷಯವನ್ನು ನಿಲುವಳಿ ಸೂಚನೆಯ ಮುಖಾಂತರ ತೆಗೆದುಕೊಳ್ಳಬೇಕು ಎನ್ನುವುದೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಹೌದು.

**ಶ್ರೀ ಬಸವರಾಜ ಹೊರಟ್ಟಿ:–** ಹೌದು, ಮಾನ್ಯ ಸಭಾಪತಿಯವರೆ.

**ಸಭಾಪತಿಯವರು:–** ನಿಮ್ಮದು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಹೌದು, ಮಾನ್ಯ ಸಭಾಪತಿಯವರೆ.

**ಸಭಾಪತಿಯವರು:–** ನಿಮ್ಮ ಅಭಿಪ್ರಾಯ ಕೇಳುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

**ಶ್ರೀ ಕೆ.ಎಸ್. ಈಶ್ವರಪ್ಪ:–** ಈ ಅಭಿಪ್ರಾಯದಲ್ಲಿ ತಪ್ಪಿಲ್ಲ. ಮಾನ್ಯ ಸಭಾಪತಿಯವರೆ, ತಾಂತ್ರಿಕ ವಿಷಯಗಳ ಬಗ್ಗೆ ತಾವು ರೂಲಿಂಗ್ ಕೊಟ್ಟರೆ ನಾವುಗಳು ಮಾತನಾಡುವುದಕ್ಕಾಗುವುದಿಲ್ಲ. ಆದರೆ, ಇದು ಮಾನವೀಯತೆಯ ಪ್ರಶ್ನೆ. 15–20 ಸಾವಿರ ಹೆಣ್ಣುಮಕ್ಕಳು ಫುಟ್‌ಪಾತ್‌ನಲ್ಲಿ ಮಲಗಿದ್ದಾರೆ. ರಾತ್ರಿಯಿಡೀ ಅವರು ವಿಚಿತ್ರ ಪರಿಸ್ಥಿತಿಯಲ್ಲಿ ಇದ್ದಾರೆ. ಸರ್ಕಾರ ಈ ಕಡೆ ಗಮನ ಕೊಡಬೇಕಾಗುತ್ತದೆಯೆಂದು ಪ್ರಸ್ತಾಪ ಮಾಡುವುದು ನಮ್ಮ ಕರ್ತವ್ಯವಾಗಿದೆ. ರಸ್ತೆಯ ಮೇಲೆ ಅವರು ಮಲಗಿದ್ದಾರೆ. ನಾನು ಹೇಳುತ್ತಿರುವುದು ಇಷ್ಟೇ. ತಾವು ಈ ವಿಷಯವನ್ನು ನಿಲುವಳಿ ಸೂಚನೆಯ ಪ್ರಕಾರ ತೆಗೆದುಕೊಂಡು ಆ ನಂತರ ಪ್ರಶ್ನೋತ್ತರ ಅವಧಿ ತೆಗೆದುಕೊಂಡರೆ ನಮ್ಮ ಅಭ್ಯಂತರವೇನು ಇಲ್ಲ. ನೋಡಿ, ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ? ಹಾಗೆ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರ ಜೊತೆಯಲ್ಲಿ ಅವರ ಮಕ್ಕಳು ಕೂಡ ಆ ರಸ್ತೆಯಲ್ಲಿಯೇ ಮಲಗಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ತಮ್ಮ ತೀರ್ಮಾನ...

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ಸರ್ಕಾರ ಏನು ಹೇಳುತ್ತದೆ ಕೇಳೋಣ.

**(ಗೊಂದಲ)**

**ಶ್ರೀ ಡಿ.ಕೆ. ಶಿವಕುಮಾರ್(ಇಂಧನ ಸಚಿವರು):–** ಮಾನ್ಯ ಸಭಾಪತಿಯವರೆ, ಈ ಅಂಗನವಾಡಿ ಕಾರ್ಯಕರ್ತೆಯರ ವಿಚಾರವಾಗಿ ಮಾನ್ಯ ಸದಸ್ಯರುಗಳು ಏನು ಹೇಳುತ್ತಿದ್ದಾರೆ, ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸವೇ ಹೋಗಿ ಅವರನ್ನೆಲ್ಲಾ ಭೇಟಿ ಮಾಡಿ, ಅವರೊಂದಿಗೆ ಏನು ಮಾತುಕತೆ ಮಾಡಬೇಕಾಗಿತ್ತೋ ಅದನ್ನು ಮಾತನಾಡಿದ್ದಾರೆ. ಮಾನ್ಯ ಸದಸ್ಯರುಗಳು ಇನ್ನು ಕೆಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲಬೇಕು ಎನ್ನುವುದಾದರೆ, ಕಾನೂನಿನಡಿಯಲ್ಲಿ ಸರ್ಕಾರಕ್ಕೆ ಒಂದು ತಿಳುವಳಿಕೆ ನೀಡಬೇಕೋ ಅದನ್ನು ಮಾಡಲಿ. ನಂತರ ಅದಕ್ಕೆ ನಾವು ಉತ್ತರವನ್ನು ನೀಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ, ದಯಮಾಡಿ ಕುಳಿತುಕೊಳ್ಳಿ. ಈ ವಿಷಯದ ಗಂಭೀರತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ 5 ಜನ ಶೂನ್ಯ ವೇಳೆಯಲ್ಲಿ ಕೊಟ್ಟಿರುವುದನ್ನು ನಾನು ಪಟ್ಟಿ ಮಾಡಿದ್ದೇನೆ. ಅದಕ್ಕೆ ನಾನು ಅವಕಾಶ ಕೊಡುತ್ತೇನೆ. ಆದರೆ, ನಮ್ಮ ಸದನದಲ್ಲಿ ನಾವೇ ಅನುಸರಿಸಿಕೊಂಡು ಬರುತ್ತಿರತಕ್ಕಂತಹ ಕೆಲವು ಸಂಗತಿಗಳನ್ನು ಪಕ್ಕಕ್ಕೆ ತಳ್ಳಿ ಎಂದು ಹೇಳಿದರೆ, ಅದು ನನಗೆ ಒಪ್ಪಿಗೆಯಾಗುವುದಿಲ್ಲ. ಹಾಗಾಗಿ, ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಯಾರೇ ಓದಲಿ, ಹೊರಟ್ಟಿಯವರಾಗಲಿ, ಮತ್ತೊಬ್ಬರಾಗಲಿ, ಯಾರಾದರೂ ಮಾತನಾಡಬೇಕೆಂದರೆ ಅದಕ್ಕಾಗಿ ಸ್ವಲ್ಪ ಸಮಯ ಒದಗಿಸಿಕೊಡುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, rules are made in the interest of welfare of the State.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶಾಣಪ್ಪನವರೆ, ಈಗ ತಾವು ನನ್ನ ರೂಲಿಂಗ್ ಅನ್ನು ವಿರೋಧ ಮಾಡುತ್ತಿದ್ದೀರಾ?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ರೂಲಿಂಗ್ ಅನ್ನು ವಿರೋಧ ಮಾಡುತ್ತಿಲ್ಲ. ಅನಿವಾರ್ಯ ಪರಿಸ್ಥಿತಿಯಲ್ಲಿ ತಮಗೆ ಅಧಿಕಾರವಿದೆ.

**ಸಭಾಪತಿಯವರು:–** ಆಯಿತು. ದಯಮಾಡಿ ಕುಳಿತುಕೊಳ್ಳಿ. I have given my verdict. I have given my ruling. Please sit down and cooperate.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ತಮ್ಮ ಮಾತಿಗೆ ನಾವುಗಳು ಗೌರವ ಕೊಡುತ್ತೇವೆ.

**ಸಭಾಪತಿಯವರು:–** ಸರಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಆದರೆ, ಶೂನ್ಯ ವೇಳೆಯಲ್ಲಿ ಈ ವಿಷಯದ ಮೇಲೆ ಚರ್ಚೆ ಮಾಡಲು ಸ್ವಲ್ಪ ಅವಕಾಶ ನೀಡಬೇಕು.

**ಸಭಾಪತಿಯವರು:–** ಆಯಿತು. ನಾನು ಸ್ವಲ್ಪ ಸಮಯಾವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಸರಿ ಸರ್.

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ:1034**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, ಕೊಡಗು ಜಿಲ್ಲೆಯಲ್ಲಿ ಒಟ್ಟು ರೈತ ಬೆಳೆಗಾರರ ಸಂಖ್ಯೆ 68,881.0 ಎಂದು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು 45,289.0 ಎಂದು ಕೊಟ್ಟಿದ್ದಾರೆ. ಆದರೆ, ವಿಮೆ ವ್ಯಾಪ್ತಿಗೆ 7,823.0 ಮಂದಿ ಬರುತ್ತಾರೆಂಬ ಒಂದು ಅಂಕಿ–ಅಂಶವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇನ್ನೊಂದು ಪ್ರಶ್ನೆಯೆಂದರೆ, ಬೆಳೆ ವಿಮೆ ಸೌಲಭ್ಯದಿಂದ ರೈತರು ಪಡೆದ ಪರಿಹಾರ ಮೊತ್ತವೆಷ್ಟೆಂದು ಕೇಳಿದ್ದೇನೆ. ಅದರಲ್ಲಿ ಈಗಾಗಲೇ ವಿಮೆ ನಷ್ಟ ಪರಿಹಾರವನ್ನು ಬೆಳೆ ಸಾಲ ಪಡೆದ ರೈತರ ಉಳಿತಾಯ ಖಾತೆಗೆ ಜಮಾ ಮಾಡಲು ಹಾಗೂ ಬೆಳೆ ಸಾಲ ಪಡೆಯದ ರೈತರ ಫಲಾನುಭವಿಗಳ ಬೆಳೆ ವಿಮೆ ನಷ್ಟವನ್ನು ಪರಿಹಾರವನ್ನು ಅವರ ಆಧಾರ ಜೋಡಣೆಯ ಬ್ಯಾಂಕ್ ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿದ್ದಾರೆ. ಬೆಳೆ ಸಾಲ ಪಡೆದ ರೈತರ ಉಳಿತಾಯ ಖಾತೆ ಸರಿಯಿರುವ ಕುರಿತು ಪರಿಶೀಲನೆ ಹಾಗೂ ಬೆಳೆ ಸಾಲ ಪಡೆಯದ ರೈತರ ಖಾತೆಗೆ ಆಧಾರ ಜೋಡಣೆ ಸಹ ಪ್ರಗತಿಯಲ್ಲಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದರಲ್ಲಿ ನನ್ನ ಇನ್ನೊಂದು ವಿಚಾರವೆಂದರೆ, **"ಕೂರ್ಗ್ ಟುಡೇ"** ಎನ್ನುವಂತಹ ಪತ್ರಿಕೆಯಲ್ಲಿ *"ಬೆಳೆಗಾರರಿಗೆ ಬೇಡವಾದ ಕಾಫಿ ಬೆಳೆ ವಿಮೆ"* ಎಂಬ ಒಂದು ವರದಿ ಬಂದಿದೆ. ಬಹುಶಃ ಇದಕ್ಕೆ ಅನೇಕ ಕಾರಣಗಳು ಕೂಡ ಇದೆ. ಕಳೆದ ಸಾಲಿನಲ್ಲಿ ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದ ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆಗಾರರಿಗೆ ಬೆಳೆ ವಿಪರೀತ ನಷ್ಟವಾಗಿತ್ತು. ಆ ಸಂದರ್ಭದಲ್ಲಿ ನಮ್ಮ ಕೊಡಗಿನ ಜಿಲ್ಲಾಧಿಕಾರಿಗಳು ಅದರ ಅಂಕಿ–ಅಂಶವನ್ನು ಸಹ ಕಳುಹಿಸಿದ್ದಾರೆ. ಆದರೆ ಪರಿಹಾರ ಮೊತ್ತ ಬಹಳ ಕಡಿಮೆಯಿರುವುದರಿಂದ ಯಾವುದೇ ರೈತರು ಈ ಒಂದು ಬೆಳೆ ವಿಮೆಯ ಫಲಾನುಭವಿಗಳಾಗುವುದಕ್ಕೆ ಅವರು ಇಷ್ಟಪಡುತ್ತಿಲ್ಲ. ಹಾಗಾಗಿ ಸರ್ಕಾರಕ್ಕೆ ನನ್ನ ಮನವಿಯೇನೆಂದರೆ, ಕಾಫಿ ಬೆಳೆಗಾರರ ಬೇಡಿಕೆಯೇನಿದೆ ಅದರ ಅರ್ಧದಷ್ಟು ಅಂದರೆ ಶೇಕಡ 50ರಷ್ಟಾದರೂ ಪರಿಹಾರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮುಖ್ಯವಾಗಿ ಬೆಳೆ ವಿಮೆಗೆ ನೊಂದಣಿ ಕಡಿಮೆಯಾಗಿದೆ, ಅದು ಏತಕ್ಕಾಗಿಯೆಂದು ಕೇಳಿದ್ದಾರೆ. ಎರಡನೆಯದು, ಹಣ ಪಾವತಿ ಮಾಡಿದ್ದರೆ. ಅದು ಯಾವಾಗ ಎಂದು ಕೇಳಿದ್ದಾರೆ. ರಾಜ್ಯದಲ್ಲಿ ಮುಂಗಾರಿನಲ್ಲಿ ಬೆಳೆ ವಿಮೆಗೆ ಸುಮಾರು 11ಲಕ್ಷ ರೈತರಷ್ಟು ನೊಂದಣಿ ಆಗಿದ್ದರು. ಮುಂಗಾರು ಆರಂಭದಲ್ಲಿ ಬೆಳೆ ಹವಾಮಾನ ಪರಿಸ್ಥಿತಿ ಜುಲೈವರೆಗೂ ಚೆನ್ನಾಗಿದ್ದುದರಿಂದ, ವಿಮೆ ಕಡೆಗೆ ಹೆಚ್ಚಿನ ರೈತರು ಒಲವು ತೋರಿಸಲಿಲ್ಲ. ಈ ಬಗ್ಗೆ ನಾವು ಸಾಕಷ್ಟು ಪ್ರಚಾರ ಕೊಟ್ಟಿದ್ದೆವು. ಆದಾಗ್ಯೂ ಸಹ ರೈತರು ಹವಾಮಾನ ಪರಿಸ್ಥಿತಿ ಅನುಕೂಲ ಇದ್ದುದರಿಂದ, ವಿಮೆ ಕಡೆಗೆ ಗಮನ ಕೊಡಲಿಲ್ಲ. ಆದರೆ, ಹಿಂಗಾರಿನಲ್ಲಿ ರಾಜ್ಯದಲ್ಲಿ ಒಟ್ಟು ಬಿತ್ತನೆಯಾಗಿದ್ದಂತಹ ಪ್ರದೇಶ 26ಲಕ್ಷ ಹೆಕ್ಟೇರ್, ಅದರಲ್ಲಿ ಸುಮಾರು 16.77ಲಕ್ಷ ಹೆಕ್ಟೇರ್‌ನಷ್ಟು ಭೂಮಿಯನ್ನು ವಿಮೆಯೊಳಗೆ ರೈತರು ನೊಂದಾವಣಿ ಮಾಡಿಕೊಂಡಿದ್ದಾರೆ. ಅಂದರೆ, ಶೇಕಡ 65ರಷ್ಟು ರೈತರು ಹಿಂಗಾರಿನಲ್ಲಿ ವಿಮೆಗೆ ನೊಂದಾವಣಿ ಮಾಡಿಕೊಂಡರು. ಏತಕ್ಕೆ, ಹಿಂಗಾರಿನಲ್ಲಿ ರೈತರು ಬೆಳೆ ವಿಮೆಗೆ ನೊಂದಾವಣಿ ಮಾಡಿಕೊಂಡರು? ಅದು ಮುಂಗಾರಿನಲ್ಲಿ ಏತಕ್ಕೆ ಕಡಿಮೆಯಾಯಿತೆಂದರೆ, ಹಿಂಗಾರಿನಲ್ಲಿ ಬೆಳೆ ನಷ್ಟವಾಗುತ್ತದೆಯೆನ್ನುವುದು ಬಹಳ ಸ್ಪಷ್ಟವಾಗಿತ್ತು. ಅಷ್ಟರಲ್ಲಿ ಮಳೆ ಕೈಕೊಟ್ಟಿತ್ತು. ಹಾಗಾಗಿ ಹಿಂಗಾರಿನಲ್ಲಿ ರೈತರು ಮುಂದೆ ಬಂದರು. ಮುಂಗಾರಿನ ಆರಂಭದಲ್ಲಿ ಮಳೆ ಪರಿಸ್ಥಿತಿ ಚೆನ್ನಾಗಿ ಇದ್ದುದ್ದರಿಂದ ಆಗ ಸ್ವಲ್ಪ ಕಡಿಮೆಯಾಯಿತು. ಆದುದರಿಂದ, ರೈತರು ಯಾವಾಗ ತಮಗೆ ಅನುಕೂಲವಾಗುತ್ತದೆ ಎಂದಾಗ ಅವರಿಗೆ ಭಾವನೆ ಬರುತ್ತದೆ ಆಗ ಖಂಡಿತ ನೊಂದಾವಣಿಯಾಗುತ್ತಾರೆ ಎನ್ನುವುದಕ್ಕೆ ಹಿಂಗಾರಿನಲ್ಲಿ ಆಗಿರುವ ಬೆಳೆ ವಿಮೆ ನೊಂದಾವಣಿಯೇ ಪೂರಕವಾಗಿದೆ. ಕರ್ನಾಟಕದಲ್ಲಿ ಯಾವತ್ತು ಸಹ ಶೇಕಡ 65ರಷ್ಟು ದಾಖಲಾಗಿರಲಿಲ್ಲ. ಕಳೆದ ಹಿಂಗಾರಿನಲ್ಲಿ ಶೇಕಡ 65ರಷ್ಟು ಬೆಳೆ ವಿಮೆ ದಾಖಲಾಗಿದೆ. ಎರಡನೆಯದು, ಹಣ ಪಾವತಿ ಬಗ್ಗೆ ಕೇಳಿದ್ದಾರೆ. ನಾವು ಈಗಾಗಲೇ ಹಣ ಪಾವತಿ ಪ್ರಕ್ರಿಯೆಯನ್ನು ಚಾಲನೆ ಮಾಡಿದ್ದೇವೆ. ಸುಮಾರು 6 ಜಿಲ್ಲೆಗಳಲ್ಲಿ ವಿಮೆ ಪಾವತಿಯನ್ನು ಮಾಡಿದ್ದೇವೆ. ಇನ್ನು ಉಳಿದ ಜಿಲ್ಲೆಗಳಲ್ಲಿ ಈಗಾಗಲೇ ಪ್ರಕ್ರಿಯೆಯನ್ನು ಆರಂಭ ಮಾಡಿದ್ದೇವೆ. ಗರಿಷ್ಠ ಮೂರು ವಾರಗಳೊಳಗೆ ಈ ಕಳೆದ ವರ್ಷದ ಮುಂಗಾರಿನ ಸಂಪೂರ್ಣ ವಿಮೆಯನ್ನು ನಾವು ರೈತರ ಖಾತೆಗೆ ಜಮಾ ಮಾಡುತ್ತೇವೆ. ಸರಿಸುಮಾರು 800ಕೋಟಿ ರೂಪಾಯಿಗಳನ್ನು ಮುಂಗಾರಿನ ಹಂಗಾಮಿಗೆ ನಾವು ರೈತರಿಗೆ ವಿಮೆ ಪಾವತಿಯನ್ನು ಮಾಡುತ್ತಿದ್ದೇವೆ. ಇದರಲ್ಲಿ ಕೊಡಗು ಜಿಲ್ಲೆ ಕೂಡ ಸೇರಿಕೊಂಡಿದೆ. ಪ್ರಕ್ರಿಯೆ ಚಾಲನೆಗೊಂಡಿದೆ. ಗರಿಷ್ಠ ಮೂರು ವಾರದೊಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಹಣ ವಿಮೆದಾರರ ಖಾತೆಗೆ ತಲುಪುತ್ತದೆ. ಇನ್ನು ಭತ್ತ ಬೆಳೆ ವಿಮೆ ಬಗ್ಗೆ ಮಾತ್ರ ವಿಮಾ ಕಂಪನಿಯವರು ನಮ್ಮ ಆದೇಶವನ್ನು ಪ್ರಶ್ನೆ ಮಾಡಿದ್ದಾರೆ. ಭತ್ತದ ಬೆಳೆ ಒಂದು ಬಿಟ್ಟು ಇನ್ನು ಎಲ್ಲಾ ಬೆಳೆಗಳು ಸಹ ಇನ್ನು ಮೂರು ವಾರದೊಳಗೆ ರೈತರ ಖಾತೆಗೆ ವಿಮೆ ಜಮೆಯಾಗುತ್ತದೆ. ಮಾನ್ಯ ಸದಸ್ಯರು ಕಾಫಿ ವಿಚಾರವನ್ನು ಸಹ ಹೇಳಿದ್ದಾರೆ. ಅದನ್ನು ನಾನು ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಚಾರವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಸದಸ್ಯರಿಗೆ ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆ ನಂತರ ಕೊಡುತ್ತೇನೆ.

**(309)/21–2–2017/11–20/ಎಲ್‌ಎಂ/ವಿಕೆ**

**ಪ್ರಶ್ನೆ ಸಂಖ್ಯೆ:914**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರ ಜಿಲ್ಲೆ ಚನ್ನರಾಯ ಪಟ್ಟಣದ ತಾಲ್ಲೂಕಿನಲ್ಲಿ ಅಮೃತಮಹಲ್ ತಳಿ ಸಂವರ್ಧನ ಉಪ ಕೇಂದ್ರದಲ್ಲಿ ಸುಮಾರು 15ಕ್ಕೂ ಹೆಚ್ಚು ರಾಸುಗಳು ಮೇವಿನ ಅಭಾವದಿಂದ ಮೃತಪಟ್ಟಿರುವುದು ನಿಜವೇ ಎನ್ನುವುದು ನನ್ನ ಪ್ರಶ್ನೆ. ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇಲ್ಲಿರುವ 380ಕ್ಕಿಂತ ಹೆಚ್ಚು ಇರುವ ರಾಸುಗಳಿಗೆ ಪ್ರತಿರಾಸಿಗೆ ಕನಿಷ್ಠ ಎರಡು ಕೆಜಿ ಆಹಾರವನ್ನು ನೀಡಬೇಕು. ಈ ರಾಸುಗಳಿಗೆ ಮೇವು ನೀಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಇತರೆ ಗೋಶಾಲೆಗಳಿಗೆ ಹೇಗೆ ನೀವು ಮೇವು ಒದಗಿಸುತ್ತೀರಿ? ಹಾಸನ ಜಿಲ್ಲೆಯ ಧಾರ್ಮಿಕ ಕ್ಷೇತ್ರ ಹಿಕನಳ್ಳಿ ಚೌಡೇಶ್ವರಿ ದೇವಾಲಯಕ್ಕೆ ಹರಿಕೆಗೆ ಬಿಟ್ಟಿರುವ ಮೂರು ಮರಿ ಕೋಣಗಳು ಮೇವು ಸಿಗದೆ ಮೃತಪಟ್ಟಿವೆ. ಗುಂಡ್ಲೂಪೇಟೆ ಉತ್ತೂರು ತಾಲ್ಲೂಕಿನಲ್ಲಿ 8 ಜಾನುವಾರುಗಳು ಮೃತಪಟ್ಟಿವೆ. ಮುಂದಿನ ಮೂರು ತಿಂಗಳು ಅತ್ಯಂತ ಭೀಕರವಾದ ಧಾರುಣ ಸ್ಥಿತಿ ಎದುರಾಗಲಿದ್ದು ಗೋವುಗಳಿಗೆ ಒಂದು ಗೋಶಾಲೆ ತೆರೆಯುವಂತಹ ಯೋಜನೆ ಸರ್ಕಾರದಲ್ಲಿ ಇದೆಯೇ? ಡಾ: ಸಿದ್ದರಾಮಣ್ಣ ಎನ್ನುವವರು ಈ ಪರಿಸ್ಥಿತಿ ಬಗ್ಗೆ ಒಂದು ಹೊಸ ವ್ಯವಸ್ಥೆ ಕುರಿತು ಹೇಳಿದ್ದಾರೆ. ಸಾಮಾನ್ಯ ಮಣ್ಣಿನಲ್ಲಿ ಫಲವತ್ತತೆ ಇಲ್ಲದೆ ಇದ್ದರೂ ಕೂಡಾ ಬರಿ ನೀರು ಉಪಯೋಗಿಸಿ 15ರಿಂದ 20 ದಿನಗಳಲ್ಲಿ ಮೇವು ಬೆಳೆಯಬಹುದೆಂದು ಹೇಳಿದ್ದಾರೆ. ಅದು ಪತ್ತಿಕೆಯಲ್ಲಿಯು ಬಂದಿತ್ತು. ತಮಗೂ ಗೊತ್ತಿರಬಹುದು. ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ, ಆಡುಗೋಡೆ. ಇವರು 10 ದಿನಗಳಲ್ಲಿ ಸತ್ವಯುತವಾದ ಮೇವನ್ನು ಮಣ್ಣು ಭೂಮಿ ಇಲ್ಲದೆ ಬೆಳೆಯುವಲ್ಲಿ ಯಶಸ್ಸನ್ನು ಕಂಡಿದ್ದಾರೆ. ಇವರ ಹತ್ತಿರ ಹೋಗಿ ಇವರ ಜೊತೆಯಲ್ಲಿ ಏನಾದರೂ ಸಮಾಲೋಚನೆ ಮಾಡಿದ್ದೀರಾ? ಸಮಾಲೋಚನೆ ಮಾಡಿಲ್ಲ ಎನ್ನುವುದಾದರೆ ಏಕೆ ಮಾಡಿರುವುದಿಲ್ಲ? ಸಮಾಲೋಚನೆ ಮಾಡಿದ್ದರೆ ಅವರ ಸಲಹೆಗಳನ್ನು ಪಡೆದುಕೊಂಡಿದ್ದೀರಾ? ಇವೆಲ್ಲವು ಪ್ರಶ್ನೆಗಳು.

**ಸಭಾಪತಿಯವರು:–** ಪ್ರಶ್ನೆಗಳ ಪಟ್ಟಿಯನ್ನು ಕಳುಹಿಸಿ ಬಿಡಿ. ಇಲ್ಲದಿದ್ದರೆ ಅವರು ಉತ್ತರ ಹೇಳಲು ಕಷ್ಟವಾಗುತ್ತದೆ.

**ಶ್ರೀ ಎ. ಮಂಜು:–** ಮಾನ್ಯ ಸಭಾಪತಿಗಳೆ, ಅವರು ಹೇಳುತ್ತಿರುವುದು ಬೇರೆ, ಪ್ರಶ್ನೆ ಕೇಳಿರುವುದು ಬೇರೆ. ರಾಜ್ಯದಲ್ಲಿರುವ ದನ–ಕರುಗಳ ಸಂಖ್ಯೆ ಎಷ್ಟು , ರಾಜ್ಯದ ದನಕರುಗಳಿಗೆ ಮಾರ್ಚ್ ತಿಂಗಳಿಂದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜೂನ್–2017ರವರೆಗೆ ಬೇಕಾಗುವ ಮೇವಿನ ಅಂದಾಜು ಪ್ರಮಾಣ ಮತ್ತು ಕೊರತೆಯ ಪ್ರಮಾಣ ಎಷ್ಟು, ಈ ಬರಗಾಲದಲ್ಲಿ ದನಕರುಗಳಿಗೆ ಮೇವು ಒದಗಿಸಲು ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಇವುಗಳಿಗೆ ನಾವು ಉತ್ತರವನ್ನು ಕೊಟ್ಟಿದ್ದೇವೆ. 160 ತಾಲ್ಲೂಕುಗಳನ್ನು ಬರ ತಾಲ್ಲೂಕುಗಳು ಎಂದು ಘೋಷಣೆ ಮಾಡಿದ್ದೇವೆ. 1.80 ಕೋಟಿ ದನ ಮತ್ತು ಎಮ್ಮೆಗಳು ಇವೆ. ಅವರು ಕೇಳಿರುವುದೆಲ್ಲಕ್ಕೂ ಉತ್ತರವನ್ನು ಕೊಟ್ಟಿದ್ದೇವೆ. ಅವರು ಕೇಳಿರುವುದು concern ಇದೆ ನಿಜ.ನಮ್ಮ ಚನ್ನರಾಯಪಟ್ಟಣದ ಅಮೃತಮಹಲ್ ಕಾವಲಿನಲ್ಲಿ ದನ–ಕರುಗಳು ತೀರಿ ಹೋಗಿವೆ. ತೀರಿ ಹೋಗಿರುವ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದೇವೆ. 17/18 ವರ್ಷ ವಯಸ್ಸಾಗಿರುವ ರಾಸುಗಳು ತೀರಿ ಹೋಗಿವೆ ವಿನ: ಬೇರೆ ರಾಸುಗಳಲ್ಲ ಎಂದು ವೈದ್ಯರು ಪ್ರಮಾಣ ಪತ್ರವನ್ನು ಕೊಟ್ಟಿದ್ದಾರೆ. 93 ತಾಲ್ಲೂಕುಗಳಲ್ಲಿ ಒಟ್ಟು 8 ರಿಂದ 10 ವಾರಗಳಿಗೆ ಮೇವು ಸಾಕಾಗುತ್ತದೆ ಎನ್ನುವ ವರದಿ ನಮಗೆ ಬಂದಿದೆ. ಹೋಬಳಿ ಮಟ್ಟದಲ್ಲಿ ಮೇವು ಬ್ಯಾಂಕ್‌ನ್ನು ಪ್ರಾರಂಭ ಮಾಡಬೇಕೆಂದು ಈಗಾಗಲೆ 312 ಮೇವು ಬ್ಯಾಂಕ್‌ಗೆ ಆದೇಶ ಕೊಟ್ಟಿದ್ದೇವೆ. ಜಿಲ್ಲಾಡಳಿತ ಇದನ್ನು ಪ್ರಾರಂಭ ಮಾಡುತ್ತಿದೆ. ನಾಲ್ಕು ಸಾವಿರ ಮೇವು ಕಿಟ್‌ನ್ನು ಈಗಾಗಲೇ ರೈಥರಿಗೆ ವಿತರಣೆ ಮಾಡಿದ್ದೇವೆ. ಇದರಿಂದ ಸುಮಾರು 25ಲಕ್ಷ ಟನ್ ಹಸಿರು ಮೇವು ನಮಗೆ ಸಿಗುತ್ತದೆ. 702 ಸರ್ಕಾರಿ ಜಾಗ ಮತ್ತು ನಮ್ಮಲ್ಲಿ ಇರುವ 662 ಎಕರೆ ಜಾಗ ಒಟ್ಟು 1364 ಎಕರೆ ಜಾಗದಲ್ಲಿ ಮೇವನ್ನು ಉತ್ಪಾದನೆ ಅದನ್ನು ಗೋಶಾಲೆ ಮತ್ತು ಮೇವು ನಿಧಿ ಬ್ಯಾಂಕ್‌ಗಳಿಗೆ ಕೊಡುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮೇ–ಜೂನ್ ಹೊತ್ತಿಗೆ ನಮಗೆ ಮೇವು ಕಡಿಮೆಯಾಗುತ್ತದೆ ಎಂದು ತಿಳಿದು, ಈಗಾಗಲೆ ಎರಡು ತಂಡಗಳನ್ನು ರಚನೆ ಮಾಡಿ ಮಹಾರಾಷ್ಟ್ರ, ಆಂಧ್ರ, ಪಂಜಾಬ ರಾಜ್ಯಗಳಿಗೆ ಕಳುಹಿಸಿ ರಸ ಮೇವು ಎಲ್ಲೆಲ್ಲಿ ಇದೆ ಎನ್ನುವುದನ್ನು ತಿಳಿದುಕೊಂಡಿದ್ದೇವೆ. ಇದು ಅಲ್ಲದೆ ರೇಲ್ವೆ ಮಂತ್ರಿಗಳಿಗೆ ಕಾಗದ ಬರೆದು ಮೇವು ತರಿಸಿಕೊಳ್ಳಲು ಸಾರಿಗೆ ವ್ಯವಸ್ಥೆಯಲ್ಲಿ ರಿಯಾಯಿತಿ ಕೊಡಿ ಎಂದು ಕೇಳಿಕೊಂಡಿದ್ದೇವೆ. ರೇಲ್ವೆ ಇಲಾಖೆಯವರ ಉತ್ತರಕ್ಕಾಗಿ ಕಾಯುತ್ತಿದ್ದೇವೆ. ನಾನು ಪತ್ರ ಬರೆದು ನಾನು ತಮ್ಮನ್ನು ಭೇಟಿಯಾಗಬೇಕು ನನಗೆ ಸಮಯವನ್ನು ಕೊಡಿ ಎಂದು ಮನವಿ ಮಾಡಿಕೊಂಡಿದ್ದೇನೆ. ಅವರು ನನಗೆ ಸಮಯವನ್ನು ಕೊಡುತ್ತಾರೆ ಅನ್ನಿಸುತ್ತದೆ. ನಮ್ಮ ಸರ್ಕಾರ ಈಗಾಗಲೆ ಎಲ್ಲಾ ತಾಲ್ಲೂಕುಗಳಿಗೆ ತಹಸೀಲ್ದಾರ್ ಅವರ ಮಟ್ಟದಲ್ಲಿ, ಜಿಲ್ಲಾಡಳಿತದಿಂದ 20 ಲಕ್ಷ ರೂ.ಗಳನ್ನು ಮೇವಿಗಾಗಿ ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ದನ–ಕರುಗಳಿಗೆ ಕುಡಿಯುವ ನೀರಿಗಾಗಿ ಹಣವನ್ನು ಕೊಟ್ಟಿದ್ದೇವೆ. ಕಡಿಮೆ ಬೀಳುವ ಮೇವನ್ನು ಹೊರ ರಾಜ್ಯಗಳಿಂದ ತರಿಸಿಕೊಳ್ಳಲು ಈಗಾಗಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಟೆಂಡರ್‌ನ್ನು upload ಮಾಡಲು ಈಗಾಗಲೆ website ನಲ್ಲಿ ಹಾಕಿದ್ದೇವೆ. ರೇಲ್ವೆ ಇಲಾಖೆಯವರು ರಿಯಾಯಿತಿ ಕೊಟ್ಟರೆ ರೇಲ್ವೆಯಲ್ಲಿ ಮೇವು ತರುತ್ತೇವೆ. ರಿಯಾಯಿತಿ ಕೊಡದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದರೂ ಸಹ it is our duty, ಮೇವನ್ನು ತಂದು ನಮ್ಮ ಜಾನುವಾರುಗಳಿಗೆ ಕೊಡುವುದು ನಮ್ಮ ಜವಾಬ್ದಾರಿ.

**ಶ್ರೀ ಬಸವರಾಜ ಹೊರಟ್ಟಿ:–** ರೈಲು ಬಿಡುತ್ತಿದ್ದಾರೆ.

**ಶ್ರೀ ಎ.ಮಂಜು:–** ರೈಲನ್ನು ನಾವು ಬಿಡುತ್ತಿಲ್ಲ. ಈಗಾಗಲೆ ಬಿಟ್ಟಿದ್ದಾರೆ. ನಾನು ಮೊದಲನೆಯ ಸಾರಿ ಮಂತ್ರಿಯಾಗಿ ಇಷ್ಟು ಕೆಲಸಗಳನ್ನು ಮಾಡಿದ್ದೇನೆ. ಅವರು ಎಷ್ಟೊ ಸಾರಿ ಮಂತ್ರಿಗಳಿಗಳಾಗಿದ್ದಾರೆ. ಜ್ಯಾಸ್ತಿ ರೈಲು ಯಾರು ಬಿಟ್ಟಿದ್ದಾರೆ ಎನ್ನುವುದನ್ನು ನಾನು ಹೇಳುವುದಿಲ್ಲ. ನನಗೆ ಅವಕಾಶ ಕೊಟ್ಟಿದ್ದಾರೆ, ನಾನು ನನ್ನ ಕೆಲಸವನ್ನು ಮಾಡುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಅವರು ಕೊಟ್ಟಿರುವ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ 2,73,66.807 ಜಾನುವಾರಗಳು ಇವೆ. ನಮ್ಮ ಜನಸಂಖ್ಯೆಗೆ ಮೂರನೇ ಒಂದು ಭಾಗದಷ್ಟು ಇದೆ. ಲಕ್ಷಾನುಗಟ್ಟಲೇ ಮೇವು ಬೇಕಾಗಿದೆ. ಇವರು 10,000/15000 ಹೀಗೆ ಸಾವಿರ ಲೆಕ್ಕದಲ್ಲಿ ಖರೀದಿ ಮಾಡುತ್ತಿದ್ದಾರೆ. ಈ ರೀತಿ ಖರೀದಿ ಮಾಡಿದರೆ ಮೇವು ಸಾಕಾಗುತ್ತದೆಯೇ?

**ಸಭಾಪತಿಯವರು:–** ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದೀರಿ. ಮಂತ್ರಿಗಳು ಉತ್ತರ ಕೊಡಲಿ.

**ಶ್ರೀ ರಾಮಚಂದ್ರಗೌಡ:–** ಈ ರೀತಿ ಅವರು ಹಾರಿಕೆ ಉತ್ತರವನ್ನು ಕೊಟ್ಟರೆ ಆಗುವುದಿಲ್ಲ. ರಾಜ್ಯದಲ್ಲಿರುವ ಎಲ್ಲಾ ರಾಸುಗಳಿಗೆ ಮೇವು ಮತ್ತು ನೀರಿನ ಅವಶ್ಯಕತೆ ಇದೆ. ಮುಂದಿನ ಮೂರು ತಿಂಗಳು ಕಲ್ಪನೆಯನ್ನು ಮಾಡದಂತಹ ಬರಗಾಲ ಬರುತ್ತದೆ. ಅದಕ್ಕಾಗಿ ಸರ್ಕಾರ ಈಗಿನಿಂದಲೇ ಎಚ್ಚರಿಕೆ ವಹಿಸಬೇಕು. ಗೋವುಗಳಿಗೆ ಗೋಶಾಲೆಗಳನ್ನು ನಿರ್ಮಾಣ ಮಾಡಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಮೇವಿನ ಬೀಜಗಳಲ್ಲಿ ಕಳಪೆ ಬೀಜಗಳನ್ನು ಖರೀದಿ ಮಾಡಿದ್ದಾರೆ ಎನ್ನುವ ಮಾಹಿತಿ ಬಂದಿದೆ. 160ಕ್ಕೂ ಹೆಚ್ಚು ತಾಲ್ಲೂಕುಗಳು, 300ಕ್ಕೂ ಹೋಬಳಿಗಳು ಇರುವ ರಾಜ್ಯದಲ್ಲಿ ಕೇವಲ 71 ಗೋ ಶಾಲೆಗಳನ್ನು ನಿರ್ಮಾಣ ಮಾಡಿದ್ದರೆ ಹೇಗೆ? 300 ಹೋಬಳಿಗಳಿಗೆ ಬರಿ 71 ಗೋಶಾಲೆಗಳನ್ನು ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಮುಂದಿನ ಮೂರು ತಿಂಗಳ ಬರಗಾಲವನ್ನು ತಲೆಯಲ್ಲಿ ಇಟ್ಟುಕೊಂಡು ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದಕ್ಕೆ ಏನು ಮಾಡಬೇಕು ಎನ್ನುವುದು ಬಹಳ ಮುಖ್ಯ.

**ಸಭಾಪತಿಯವರು:–** ಮಂತ್ರಿಗಳು ಉತ್ತರ ಹೇಳಲಿ. ಅವರು ಕೇಳಿರುವ ಪ್ರಶ್ನೆಗೆ ನಿರ್ದಿಷ್ಟವಾಗಿ ಉತ್ತರವನ್ನು ಹೇಳಿ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಮೂರು ತಿಂಗಳಿಗೆ ಆಗುವಷ್ಟು ಮೇವನ್ನು ಬೇರೆ–ಬೇರೆ ರಾಜ್ಯಗಳಿಂದ ಖರೀದಿ ಮಾಡುತ್ತಿದ್ದೇವೆ. ಮಹಾರಾಷ್ಟ್ರದಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

70,000 ಟನ್, ಆಂಧ್ರಪ್ರದೇಶದ ಜೊತೆಯಲ್ಲಿ 15,000 ಟನ್‌ಗೆ, ಪಂಜಾಬ ಜೊತೆಗೆ 10,000 ಟನ್ ರಸ ಮೇವನ್ನು ತರಿಸಿಕೊಳ್ಳಲು ಮಾತನಾಡಿದ್ದೇವೆ. ನಮಗೆ ಮಾಹಿತಿ ಇರುವ ಪ್ರಕಾರ ನಮ್ಮ ಇಲಾಖೆ ಮತ್ತು ಕಂದಾಯ ಇಲಾಖೆಯಿಂದ ಕೊಟ್ಟಿರುವ ಮೇವು ಕೇವಲ 10ವಾರಗಳವರೆಗೆ ಸಾಕಾಗುತ್ತದೆ. ಮೇ–ಜೂನ್ ಹೊತ್ತಿಗೆ ನಾಲ್ಕು ಸಾವಿರ kit ಕೊಟ್ಟು ಬೆಳೆಸಿರುವಂತಹ ಮೇವು ಮತ್ತು buyback ಎಲ್ಲವನ್ನು ಸೇರಿಸಿದರೆ ಒಂದು ರಾಸಿಗೆ 5ಕೆಜಿ ಆಹಾರ ಕೊಡಲು ಮೇವು ಲಭ್ಯವಾಗುತ್ತದೆ ಎನ್ನುವ ನಂಬಿಕೆ ನನ್ನಗೆ ಇದೆ. ಇರುವ ಎಲ್ಲಾ ರಾಸುಗಳಿಗೆ ಮೇವನ್ನು ಕೊಡುವುದು ಸರ್ಕಾರದ ಜವಾಬ್ದಾರಿ. ಅದಕ್ಕಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

**(310)21.03.2017 YL-VK 11.30**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 939**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಿಗೆ ನಾನು ಕೇಳಿರುವ ಪ್ರಶ್ನೆಯೇನೆಂದರೆ, ಲೋಕೋಪಯೋಗಿ ಇಲಾಖೆಯ ಲೆಕ್ಕ ಶೀರ್ಷಿಕೆ 3054 ರಡಿಯಲ್ಲಿ ಬೀದರ್ ಜಿಲ್ಲೆಯ ಮಿರ್ಜಾಪುರ ಮಾಳೆಗಾಂವ್ ರಸ್ತೆ ಸೇರಿದಂತೆ ಹಲವು ರಸ್ತೆಗಳ ನಿರ್ವಹಣೆ ಕಾಮಗಾರಿಗಳಲ್ಲಿ ಗುಂಡಿ ಮುಚ್ಚುವ ಕೆಲಸವನ್ನು ನಿರ್ವಹಿಸದೆ ಹಣವನ್ನು ಪಡೆದುಕೊಂಡು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅಲ್ಲಿನ ಸಂಪೂರ್ಣ ವ್ಯವಹಾರವೂ ಎಲ್ಲಿಯವರೆಗೆ ಆಗಿದೆಯೆಂದರೆ, ಟೆಂಡರ್ ಪ್ರಕ್ರಿಯೆಯಿಂದ ಕಾಮಗಾರಿಯನ್ನು ಕೊಡುವವರೆಗೂ ಅವ್ಯವಹಾರ ಮಾಡಿರುವುದು ಪತ್ರಿಕೆಯಲ್ಲಿಯೂ ಬಂದಿದೆ. ಪತ್ರಿಕಾ ಹೇಳಿಕೆಯನ್ನು ಮಾನ್ಯ ಮಂತ್ರಿಗಳಿಗೂ ಬೇಕಾದರೆ ಕೊಡುತ್ತೇನೆ. ಗುಂಡಿ ಮುಚ್ಚುವ ಕೆಲಸದಲ್ಲಿ 1.97 ಕೋಟಿ ರೂಪಾಯಿಗಳಷ್ಟು . . .

ನಾನು ಇದರ ಬಗ್ಗೆ ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ನನ್ನ ವಿನಂತಿಯೇನೆಂದರೆ, ಟೆಂಡರ್ ಪ್ರಕ್ರಿಯೆಯನ್ನು ಹಿಡಿದುಕೊಂಡು ಕೆಲಸ ಮಾಡುವವರೆಗೂ ಹಾಗೂ ವೇತನವನ್ನು ಒದಗಿಸುವವರೆಗೂ ಒಂದು ದೊಡ್ಡ ಷಡ್ಯಂತರವೇ ಇದೆ. ಸದರಿ ಪ್ರಕ್ರಿಯೆ ಹಿಂದೆ ಅಧಿಕಾರಿಗಳು ಶಾಮೀಲಾಗಿದ್ದು, ಇದರಲ್ಲಿ ಒಂದು ದೊಡ್ಡ ಅವ್ಯವಹಾರವೇ ಆಗುತ್ತಿದೆ. ದಯವಿಟ್ಟು, ಇದರ ಬಗ್ಗೆ ಒಂದು ತನಿಖೆಯನ್ನು ಮಾಡಬೇಕಾಗಿ ವಿನಂತಿಸುತ್ತೇನೆ. ಎರಡನೆಯದಾಗಿ ಉಪ ಪ್ರಶ್ನೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರ ಬಗ್ಗೆಯೂ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಹೆಚ್ಚು ದಾಖಲಾತಿಗಳು ನನ್ನ ಹತ್ತಿರವಿಲ್ಲ. ಎಲ್ಲದಕ್ಕಿಂತಲೂ ಪ್ರಮುಖವಾಗಿ ನಾನು ಒಂದು ದೊಡ್ಡ ಅವ್ಯವಹಾರದ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಇಷ್ಟಪಡುತ್ತೇನೆ. 2015-16ನೇ ಸಾಲಿನ ಎಸ್.ಸಿ.ಪಿ / ಟಿ.ಎಸ್.ಪಿ. ಯೋಜನೆಯಡಿಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರ ಮತ್ತು ಅವರು ನಮೂದಿಸಿದ ದರಗಳು ಹಾಗೂ ಕಾಮಗಾರಿಗಳು ಯಾವುವು? ಗುತ್ತಿಗೆದಾರರ ವಿವರ ಒದಗಿಸುವುದು ಎಂಬ ಬಗ್ಗೆ ಮಾನ್ಯ ಸಚಿವರು ಅನುಬಂಧಗಳಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಆ ಅನುಬಂಧದಲ್ಲಿ ಬೀದರ್ ಜಿಲ್ಲೆಯ ಬಾಲ್ಕಿ ಮತ್ತು ಔರಾದ್, ಬಾಲ್ಕಿ ಮತ್ತು ಬಸವಕಲ್ಯಾಣ ಎಂಬ ಎರಡು ತಾಲ್ಲೂಕುಗಳಲ್ಲಿ ಟೆಂಡರ್ ಪ್ರಕ್ರಿಯೆ ಕಾಮಗಾರಿಯೂ ಸರಿಯಾಗಿದ್ದು, ಒಂದು ಅಥವಾ ಎರಡು ಕಾಮಗಾರಿಯೂ ಮಾತ್ರ ಸಿಂಗಲ್ ಟೆಂಡರ್ ಪ್ರಕ್ರಿಯೆ ಆಗಿದೆ. ಉಳಿದಂತೆ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕ್, ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕು, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕುಗಳಲ್ಲಿ ಸಿಂಗಲ್ ಟೆಂಡರ್ ಪ್ರಕ್ರಿಯೆಯ ಕಾಮಗಾರಿಯನ್ನು ಒಬ್ಬನೇ ವ್ಯಕ್ತಿಯೂ ಮಾಡಿದ್ದಾನೆ. ಸಿಂಗಲ್ ಟೆಂಡರ್ ಪ್ರಕ್ರಿಯೆಯನ್ನು ಮಾಡುವುದಕ್ಕೆ ಒಬ್ಬನೇ ವ್ಯಕ್ತಿಯೂ ಇರುವುದು. Single tender, single call. ಇಬ್ಬರೂ ಇಲ್ಲ. ಉದಾಹರಣೆಗೆ ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಪ್ಯಾಕೇಜ್ ನಂ.1 ರಲ್ಲಿ ಸುಮಾರು 15 ರಿಂದ 20 ಕಾಮಗಾರಿಯನ್ನು ಮಾಡಿದ್ದಾರೆ. ಈ ರೀತಿ 15 ರಿಂದ 20 ಟೆಂಡರ್ ಪ್ರಕ್ರಿಯೆಯ ಕಾಮಗಾರಿಯಿಂದ ಸಣ್ಣ ಸಣ್ಣ ಗುತ್ತಿಗೆದಾರರಿಗೂ ಕೆಲಸ ಸಿಗುತ್ತಿತ್ತು. ಆದರೆ, ಅದನ್ನು ಪ್ಯಾಕೇಜ್ ನಂ.1 ಎಂದು ಮಾಡಿ, ಒಂದೇ ಟೆಂಡರ್ ಕರೆದಿದ್ದಾರೆ. ಆ ಟೆಂಡರ್‌ಗೆ single contractor, L1- ಮಿರ್ಜಾ ವಾಹೀದ್ ಬೇಗ್, L2- technically rejected. ಇದು exactly 5 per cent above the DSR rate ಮಾಡಿದ್ದಾರೆ. ಎರಡನೆಯ ಕೆಲಸ ಪ್ಯಾಕೇಜ್ ನಂ.2 ನಲ್ಲಿ . . .

**ಸಭಾಪತಿಯವರು:-** ಮಾನ್ಯ ಸದಸ್ಯರೆ, ವಿಷಯವನ್ನು ಮಾತ್ರ ಹೇಳುತ್ತಿದ್ದೀರಿ. ನಿಮ್ಮ ಪ್ರಶ್ನೆ ಏನೆಂಬುದನ್ನು ಹೇಳಿ. What is it you want?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆಯನ್ನೇ ಹೇಳುತ್ತಿರುವುದು.

**ಸಭಾಪತಿಯವರು:-** ಏನು ಪ್ರಶ್ನೆ ಎಂಬುದನ್ನು ಮಾನ್ಯ ಸಚಿವರಿಗೆ ಕೇಳಿ.

“ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆಯ ಹುಮ್ನಾಬಾದ್, ಔರಾದ್ ಮತ್ತು ಬೀದರ್ ತಾಲ್ಲೂಕಿನ ಪಿ.ಡಬ್ಲ್ಯೂ.ಡಿ. ಕಾಮಗಾರಿಗಳಲ್ಲಿ ಎಸ್.ಸಿ.ಪಿ /ಟಿ.ಎಸ್.ಪಿ. ಯೋಜನೆಯ ಕಾಮಗಾರಿಗಳನ್ನು ಉದ್ದೇಶ ಪೂರ್ವಕವಾಗಿ ಸಣ್ಣ ಗುತ್ತಿಗೆದಾರರಿಗೆ ಕೆಲಸ ಸಿಗದ ರೀತಿಯಲ್ಲಿ ಪ್ಯಾಕೇಜ್‌ಗಳನ್ನು ಮಾಡಿ, ತಮಗೆ ಬೇಕಾದಂತಹ ಗುತ್ತಿಗೆದಾರರಿಗೆ ಕಛೇರಿಯಲ್ಲಿಯೇ ಕುಳಿತು ಸಿಂಗಲ್ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲಸ ಮಾಡುವುದನ್ನು ಕೊಟ್ಟಿದ್ದಾರೆ. ಇದು ಕಾನೂನು violate ಆಗುತ್ತದೆ. ಕೆ.ಟಿ.ಪಿ.ಪಿ. ಕಾಯ್ದೆ ಪ್ರಕಾರ ಈ ರೀತಿ ಮಾಡುವ ಹಾಗಿಲ್ಲ. ಸಿಂಗಲ್ ಟೆಂಡರ್ ಏನಾದರೂ ಒಂದು ವೇಳೆ ಬಂದರೆ, ಮತ್ತೆ ಮರುಟೆಂಡರ್ ಕರೆದು, ಯಾವ ಮಟ್ಟದಲ್ಲಿಯೂ ಕೆಲಸ ಮಾಡಿಲ್ಲವೆಂದು ಕರೆಯಬೇಕು. ಎಲ್ಲ ಕೆಲಸವನ್ನು exactly 5 per cent above the DSR rate ಮಾಡಿದ್ದಾರೆ. ಈ ರೀತಿ ಒಟ್ಟು ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ರೂಪಾಯಿ 4,99,32,763.00 ಕೋಟಿಯಷ್ಟು, ಹುಮ್ನಾಬಾದ್‌ನಲ್ಲಿ ರೂಪಾಯಿ 4,79,50,777 ಕೋಟಿಗಳು . . .

**ಸಭಾಪತಿಯವರು:–** ವಿವರವಾಗಿ ಹೋಗುವುದು ಬೇಡ. ನಿಮ್ಮ ಪ್ರಶ್ನೆ ಏನು. ಸರ್ಕಾರದಿಂದ ಏನಾಗಬೇಕು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ಕಾನೂನು ಬಾಹಿರವಾಗಿ ಸಿಂಗಲ್ ಟೆಂಡರ್ ಆಗಿರುವುದರಿಂದ ಕಾನೂನಿನ ಪ್ರಕಾರ ತಪ್ಪಾಗಿದೆ. ಇದರ ಬಗ್ಗೆ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ಕೈಗೊಳ್ಳುತ್ತಾರೆ ಕೈಗೊಳ್ಳಬೇಕು. ತಪ್ಪಿತಸ್ಥರನ್ನು ವಿಚಾರಣೆಗೆ ಕುರಿಸಬೇಕೆಂಬುದು ನನ್ನ ವಿನಂತಿ. ಜೊತೆಗೆ ಎಸ್‌ಸಿಪಿ / ಟಿಎಸ್‌ಪಿ ಕಾಮಗಾರಿಗಳಲ್ಲಿ ಕೆಲಸಗಳು ಆಗಬೇಕು.

**ಶ್ರೀ ಡಿ.ಕೆ.ಶಿವಕುಮಾರ್ (ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಭಾವನೆಯೂ ನಮಗೆ ಅರ್ಥವಾಗುತ್ತಿದೆ. ಅಲ್ಲಿ ನಡೆಯುತ್ತಿರುವಂಥ ಕೆಲಸದ ಬಗ್ಗೆ ತಕರಾರೇನು ಇಲ್ಲ. ಆದರೆ, Transparency ಯಾಗಿ ನಡೆಯಬೇಕೆಂಬುದು ಸದಸ್ಯರ ಭಾವನೆ. ನಮಗೆ ತಿಳಿದಿರುವ ಮಾಹಿತಿ ಪ್ರಕಾರ ಈಗಾಗಲೇ ಮಾನ್ಯ ಸದಸ್ಯರಿಗೆ ಯಾವುದೇ ಅವ್ಯವಹಾರವೂ ನಡೆದಿಲ್ಲವೆಂದು ಹೇಳಿದ್ದೇವೆ ಹಾಗೂ ಯಾವುದೇ documentation ಇಲ್ಲ. ಮಾನ್ಯ ಸದಸ್ಯರು ಏನು ಪತ್ರಿಕೆಯಲ್ಲಿ ಬಂದಂತಹ ವರದಿಯನ್ನು ಇಟ್ಟುಕೊಂಡಿದ್ದಾರೆ ಅದು ಒಳ್ಳೆಯದೇ. ಆದರೆ, ಅವ್ಯವಹಾರವಾಗಿರುವ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಕೊಡಿ, ಖಂಡಿತವಾಗಿ ನಾವು ಸರಿಪಡಿಸುತ್ತೇವೆ. ಇನ್ನೊಂದು ಏನೆಂದರೆ ಈ ಟೆಂಡರ್ ಕಾರ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಧಾನದಲ್ಲಿ, ಇವೆಲ್ಲವೂ ಆಗಬೇಕಾದರೆ ಒಂದೊಂದು ಸಣ್ಣ ಕೆಲಸವನ್ನು ಸೇರಿಸಿ, ದೊಡ್ಡ ದೊಡ್ಡ ಕೆಲಸವಾಗಿ ಮಾಡಿ, ಒಟ್ಟಾಗಿಯೇ ಒಂದು ಟೆಂಡರ್ ಮಾಡುವ ಪ್ರಕ್ರಿಯೆಯೂ ಇದೆ. ರೂಪಾಯಿ ಒಂದು ಲಕ್ಷಕ್ಕಿಂತ ಹೆಚ್ಚಾಗಿ ಯಾವುದೇ ಕೆಲಸವನ್ನು ಮಾಡಬೇಕಾದರೆ, without tender ಮಾಡುವುದಕ್ಕೆ ಅವಕಾಶವಿಲ್ಲ. ಕೆಲವು ಇಲಾಖೆಗಳಿಗೆ ರೂ.5.00 ಲಕ್ಷಗಳವರೆಗೂ ಕೊಟ್ಟಿದ್ದೇವೆ. ಮೊನ್ನೆ ಬರಗಾಲದ ಸಮಯದಲ್ಲಿ rain damages works ಗೆ, ಜಿಲ್ಲಾಧಿಕಾರಿಗಳಿಗೆ ಪ್ರತ್ಯೇಕವಾದಂತಹ ಒಂದಿಷ್ಟು ಹಣವನ್ನು ನೀಡಲಾಗುತ್ತದೆ. ನಿಮ್ಮಲ್ಲಿ ಸ್ವಲ್ಪ ಮಳೆ ಜಾಸ್ತಿಯಾಗಿ ಅತಿವೃಷ್ಟಿಯಾಗಿತ್ತು.

**Sri K.B. SHANAPPA:-** They have violated the tender process.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ನನಗೆ ಅದು ಗೊತ್ತಿಲ್ಲ. Generally I am telling you. That may not be the reason. ಅದೇನಾದರೂ ಇದ್ದರೆ ಮಾಡುತ್ತೇವೆ. ಈಗ ಏನಾದರೂ ಮಾಹಿತಿ ಇದ್ದರೆ ಕೊಡಿ. ಸಿಂಗಲ್ ಟೆಂಡರ್ ಪ್ರಕ್ರಿಯೆ ಆಗುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. Transparency ಯಾಗಿ ಟೆಂಡರ್ ಕರೆದು ಒಬ್ಬರೆ ಹಾಕಿದ ಮೇಲೆ, ಆದಷ್ಟು ಬೇಗ ಕೆಲಸ ತೆಗೆದುಕೊಳ್ಳಬೇಕೆಂದು ಸದಸ್ಯರೇ ಗಲಾಟೆ ಮಾಡಿ, ಬೇಗ ಕೆಲಸವನ್ನು ತೆಗೆದುಕೊಳ್ಳಿ ಎಂದು ಮಾಡಬಹುದು. Still to respect the Hon'ble Member. ತಾವು ದಯವಿಟ್ಟು ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಗಮನಿಸಬೇಕು ತಾಂತ್ರಿಕವಾಗಿ ಹಾಗೂ ಟೆಂಡರ್ ನಿಯಮದಂತೆ ಯಶಸ್ವಿಯಾದ ಗುತ್ತಿಗೆದಾರರು ಎಂದು ಹೇಳಿ, ಒಬ್ಬರೇ ಗುತ್ತಿಗೆದಾರರು, ಒಂದೇ ಟೆಂಡರ್ ಮಾಡಿದ್ದಾರೆ. ಇದು ಮೇಲ್ನೋಟಕ್ಕೆ ಕಾನೂನು ಬಾಹಿರವಲ್ಲವೇ? ನಾನು ಮಾನ್ಯ ಸಚಿವರನ್ನು ಗೌರವಿಸುತ್ತೇನೆ. ಹಿಂದೆ ಮೀಟರ್ ಖರೀದಿಯಲ್ಲಿ ಅವ್ಯವಹಾರವಾಗಿದ್ದನ್ನು ಆ ಸಂದರ್ಭದಲ್ಲಿ ಮಾನ್ಯ ಸಚಿವರು ತಪ್ಪಾಗಿದೆ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹಾಗೂ ವಿಚಾರಣೆ ಮಾಡುತ್ತಿದ್ದೇವೆಂದು ಒಪ್ಪಿಕೊಂಡಿದ್ದರು.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಪೂರ್ಣಗೊಳಿಸಿ ವರದಿಯನ್ನು ಕೂಡ ಸಲ್ಲಿಸಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ವರದಿ ಬಂದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ.ಶಿವಕುಮಾರ್:-** ಹೌದು,

**ಶ್ರೀ ಕೆ.ಎಸ್.ಈಶ್ವರಪ್ಪ:-** ಅದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಅದಕ್ಕಾಗಿಯೇ ನಾನು ಮಾನ್ಯ ಸಚಿವರನ್ನು ಗೌರವಿಸುತ್ತೇನೆಂದು ಹೇಳಿದ್ದು. ಆದರೆ, ಇಲ್ಲಿ ನೇರವಾಗಿ ಕಾಣುತ್ತಿದೆ. ತಾಂತ್ರಿಕವಾಗಿ ಟೆಂಡರ್ ನಿಯಮದಂತೆ ಯಾಶಸ್ವಿಯಾದ ಗುತ್ತಿಗೆದಾರರು ಒಂದೇ ಸಾರಿ ಒಬ್ಬರೇ ಹಾಕಿದ್ದಾರೆ. ದಯವಿಟ್ಟು ಇದನ್ನು ತಕ್ಷಣ ರದ್ದುಗೊಳಿಸಿ. ಇದನ್ನು ರದ್ದುಗೊಳಿಸಲು ಮಾನ್ಯ ಸಚಿವರಿಗೆ ಅಧಿಕಾರವಿದೆ. ಮರು ಟೆಂಡರ್ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ಎರಡನೆ ಸಲ ಟೆಂಡರ್ ಮಾಡುವ ಸಂದರ್ಭದಲ್ಲಿ ಯಾವ್ಯಾವ ಗುತ್ತಿಗೆದಾರರು ಬರುತ್ತಾರೆಂಬುದನ್ನು ನೋಡಿಕೊಂಡು ಬಗೆಹರಿಸಬೇಕು. ಮಾನ್ಯ ಸಚಿವರೆ, ಈ ರೀತಿ ಮಾಡಿಲ್ಲವೆಂದರೆ, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರು ಮೂವತ್ತೊಂಬತ್ತು ಕಾಲ್ ಕೋಟಿ . . .

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ತಾವು intervene ಆಗಬೇಕು. We know all the issues there. If you intervene, then we appreciate your Ministry.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸಿಂಗಲ್ ಟೆಂಡರ್ ಪ್ರಕ್ರಿಯೆಯನ್ನು ನಿಲ್ಲಿಸಿ, ಇದನ್ನು ಪರಿಶೀಲನೆ ಮಾಡಿ, ಮರುಟೆಂಡರ್ ಕರೆಯಿರಿ. ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದ ಪ್ರಕಾರ ಸಿಂಗಲ್ ಟೆಂಡರ್ ಪ್ರಕ್ರಿಯೆಯೂ ತುರ್ತಾಗಿರುವಂತಹ ಕೆಲಸವಲ್ಲ. ಅತಿವೃಷ್ಟಿ ಅನಾವೃಷ್ಟಿ ಕೆಲಸದಿಂದಾಗಿಲ್ಲ. 2015-16ನೇ ಯೋಜನೆಯಲ್ಲಿ ಎಸ್‌ಸಿಪಿ / ಎಸ್‌ಟಿಪಿ ಯೋಜನೆಯಡಿಯಲ್ಲಿ ಅಂದರೆ ಹರಿಜನ ಮತ್ತು ಗಿರಿಜನ ವಾರ್ಡ್‌ಗಳಲ್ಲಿ ಸಣ್ಣ ಸಣ್ಣ ಕೆಲಸಗಳನ್ನು ಪ್ಯಾಕೇಜ್ ರೀತಿಯಲ್ಲಿ ಮಾಡಿ, ತಮಗೆ ಬೇಕಾದಂತಹ ಗುತ್ತಿಗೆದಾರರಿಗೆ, ಅಧಿಕಾರಿಗಳಿಗೆ ಕೆಲಸವನ್ನು ಮಾಡಿಕೊಟ್ಟಿದ್ದಾರೆಂದು ಎಂದು ಬಹಳ ಜವಾಬ್ದಾರಿಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈ ವರ್ಷ ಮತ್ತೆ ಎಸ್‌ಸಿಪಿ ಇಡೀ ಜಿಲ್ಲೆಯ ಕಾಮಗಾರಿ ವೆಚ್ಚ 26.75 ಕೋಟಿ ರೂಪಾಯಿಗಳು ಹಾಗೂ ಟಿಎಸ್‌ಪಿ ಜಿಲ್ಲೆಯ ಕಾಮಗಾರಿಯ ವೆಚ್ಚ 12.54 ಕೋಟಿ ರೂಪಾಯಿಗಳು ಅಂದರೆ, ಒಟ್ಟಾರೆಯಾಗಿ ಕಾಮಗಾರಿಗೆ ತಗುಲಿದ ವೆಚ್ಚ 39.29 ಕೋಟಿ ರೂಪಾಯಿಗಳು ವ್ಯವಸ್ಥಿತವಾಗಿ ಅದರಲ್ಲಿಯೂ ವಿಶೇಷವಾಗಿ ಬಾಲ್ಕಿ ಮತ್ತು ಬಸವಕಲ್ಯಾಣದಲ್ಲಿ ಕೆಲವು ಕೆಲಸಗಳನ್ನು ಬಿಟ್ಟರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುಮ್ನಾಬಾದ್, ಬೀದರ್, ಔರಾದ್ ಮೂರು ತಾಲ್ಲೂಕುಗಳಲ್ಲಿ ಸಿಂಗಲ್ ಟೆಂಡರ್ ಪ್ರಕ್ರಿಯೆ ಇದೆ. ಉಳಿದಂತಹ ಟೆಂಡರ್ ಯಾರು ಹಾಕಿದ್ದಾರೆ ಅವರದ್ದು technically rejected. ಕಾನೂನು ಪ್ರಕಾರ ಯಾರು technical bid ನಲ್ಲಿ qualify ಆಗುವುದಿಲ್ಲವೋ ಅವರ financial bid ಅನ್ನು open ಮಾಡುವಾಗಿಲ್ಲ. ಆದರೆ, technical bid cancel ಮಾಡಿ, ಸಿಂಗಲ್ ಟೆಂಡರ್ ಮಾಡಿದರೆ ಅವ್ಯವಸ್ಥಿತವಾದ ಭ್ರಷ್ಟಚಾರವಾಗುತ್ತದೆ. ಆದುದರಿಂದ ದಯವಿಟ್ಟು ಸಚಿವರು ಇದರ ಬಗ್ಗೆ ವಿಚಾರಣೆ ಮಾಡಬೇಕು. ಈಗ ಕೆಲಸಗಳು ನಡೆಯುತ್ತಾ ಇದ್ದರೆ held up ಮಾಡಬೇಕು. ಹಣ ಪಾವತಿಯಾಗಿದ್ದರೆ ಈ ದಿನದಲ್ಲಿಯೇ ಕರೆಸಿ ಸೂಕ್ತವಾದಂತಹ ಕ್ರಮ ಕೈಗೊಳ್ಳಿ.

**ಸಭಾಪತಿಯವರು:-** ಅದನ್ನು ಹೇಳಿ. That is important. ನಿಮ್ಮ ಬೇಡಿಕೆಯನ್ನು ಇಟ್ಟಾಗಿದೆ. ಮಾನ್ಯ ಸಚಿವರು ಏನೆಂದು ಹೇಳುತ್ತಾರೆಂಬುದನ್ನು ಕೇಳೋಣ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿ ಏನೆಂಬುದು ಅರ್ಥವಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಕಾನೂನು ಚೌಕಟ್ಟಿನಲ್ಲಿ ಸಣ್ಣ ಸಣ್ಣ ಪ್ಯಾಕೇಜ್‌ಗಳನ್ನು ಒಟ್ಟಾಗಿ ಮಾಡಿ, ಬಹುಶ: ಕೆಲಸವೂ ಜರೂರಾಗಿ ನಡೆಯಬೇಕೆಂದು ಅವಕಾಶ ಮಾಡಿಕೊಡಲಾಗಿದೆ. ಟೆಂಡರ್‌ಗಳು ಜಾಸ್ತಿಯಾಗುತ್ತಿದೆಂದು ಸಿಂಗಲ್ ಟೆಂಡರ್ ಪ್ರಕ್ರಿಯೆಯ ಕಾಮಗಾರಿಯನ್ನು ಮಾಡುವುದು ಸಹಜ. ಇದು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಹಾಗೂ ಬೇರೆ ಇಲಾಖೆಗಳಲ್ಲಿ regular procedure. ಹಿಂದೆ ಮುನ್ಸಿಪಾಲಿಟಿಗಳನ್ನು ಮಾಡುವಂತಹ ಸಂದರ್ಭದಲ್ಲಿ, ಜಿಲ್ಲೆ ಜಿಲ್ಲೆಗಳಲ್ಲಿಯೇ ಒಂದೊಂದು ಪ್ಯಾಕೇಜ್ ಮಾಡಲಾಗಿತ್ತು. ಒಂದೊಂದು ತಾಲ್ಲೂಕು ಎಂದು ಪ್ಯಾಕೇಜ್ ಕೊಟ್ಟಿರುವುದನ್ನು ನಾವೆಲ್ಲಾ ನಗರೋತ್ಥಾನ ಯೋಜನೆಗಳಲ್ಲಿ ಇಡೀ ಜಿಲ್ಲೆಗಳಲ್ಲಿಯೇ ಆಗಿರುವುದನ್ನು ನಾವು ನೋಡಿದ್ದೇವೆ. Lapses ಏನಾದರೂ ಆಗಿದ್ದರೆ ಖಂಡಿತ we will examine this.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆಗಿದೇ ಎಂಬುದನ್ನು ಮಾನ್ಯ ಸಚಿವರಿಗೆ ಹೇಳಿ. ಮೇಲ್ನೋಟಕ್ಕೆ ದಾಖಲೆಯಲ್ಲಿ ಸಚಿವರೆ ಕೊಟ್ಟ ಉತ್ತರ . . .

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಅದೆಲ್ಲಾ....

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಒಂದು ನಿಮಿಷ. ನಮ್ಮ ದಾಖಲೆಗಳ ಪ್ರಕಾರ there is nothing illegal has been done and ಇಲ್ಲಿಯವರೆಗೂ ಯಾರು ಚಕಾರವೆತ್ತಿಲ್ಲ. ಯಾರು ದೂರನ್ನು ಕೊಟ್ಟಿಲ್ಲ. ನಮಗೆ ಎಲ್ಲಿಯೂ ಕೂಡ ದೂರು ಬಂದಿಲ್ಲ. ಕೆಲಸವು ನಡೆಯುತ್ತಿದೆ. ಮಾರ್ಚ್ 31ನೇ ತಾರೀಖು ಸಹ ಬರುತ್ತಿದೆ. ಈ ತಿಂಗಳಿನಲ್ಲಿಯೇ ಮುಕ್ತಾಯ ಮಾಡಬೇಕು. ಈ ಸಮಯದಲ್ಲಿ ಟೆಂಡರ್ ರದ್ಧುಗೊಳಿಸಿ, ನಿಲ್ಲಿಸಿಯೆಂದರೆ it is not possible from the Government side.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ದಯವಿಟ್ಟು ನೋಡಿ. ನೇರವಾಗಿ ಸಚಿವರೆ ಕೊಟ್ಟಂತಹ ದಾಖಲೆಗಳು. ಮೊದಲನೆಯ ಸಲದ ಟೆಂಡರ್ ಸಿಂಗಲ್ ಟೆಂಡರ್. ಇವೆರಡೂ ಕೂಡ ತಾಂತ್ರಿಕವಾಗಿ ಟೆಂಡರ್ ನಿಯಮದಂತೆ ಯಾಶಸ್ವಿಯಾದ ಗುತ್ತಿಗೆದಾರರೆಂದು ಸಚಿವರೆ ದಾಖಲೆ ಕೊಟ್ಟರೆ, ನಾವು ಒಪ್ಪಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೇ?

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಇದು ಸರ್ಕಾರಕ್ಕೆ ಒಪ್ಪಿಗೆಯಾಗುವಂತಹ ಉತ್ತರವಲ್ಲ. ದಯವಿಟ್ಟು ತಾವು ಕ್ಷಮಿಸಬೇಕು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೊಡುವಂತಹ ಉತ್ತರವನ್ನು ಒಪ್ಪುವುದಕ್ಕಾಗುವುದಿಲ್ಲ. Openly they have violated the entire rules. ಸದರಿ ಕಾಮಗಾರಿಯ ಕೆಲಸವನ್ನು club ಮಾಡಿ ಒಬ್ಬರಿಗೆ ಕೊಡುತ್ತಾರೆಂದರೆ ಇದರ ಅರ್ಥವೇನು? Is it not a mollified interest?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಆಯ್ತು, ಸಿಂಗಲ್ ಟೆಂಡರ್ ಕೊಡಬಾರದೆಂದು ಎಲ್ಲಿದೆ ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹಾಗಾದರೆ, ಸಿಂಗಲ್ ಟೆಂಡರ್ ಕೊಡಬೇಕೆಂದು ಇದೆಯೇ?

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಕೂಡಿಸಿ ಮಾಡಬೇಕೆಂದು ಎಲ್ಲಾದರೂ ಇದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಟೆಂಡರ್ ಕರೆಯಬೇಕು. ಟೆಂಡರ್ ಕರೆದಂತಹ ಸಂದರ್ಭದಲ್ಲಿ ಯಾರಿಗಾದರೂ ಗುತ್ತಿಗೆ ಕೊಟ್ಟಂತಹ ಸಂದರ್ಭದಲ್ಲಿ ಟೆಂಡರ್ ಇಲ್ಲದೆ, ಯಾರಿಗಾದರೂ ಗುತ್ತಿಗೆ ಕೊಟ್ಟಿದರೆ ಪರವಾಗಿಲ್ಲ. ಟೆಂಡರ್‌ಗೆ ಆಹ್ವಾನಿಸಿದಾಗ ಹತ್ತಾರು ಜನರು ಅರ್ಜಿ ಹಾಕುತ್ತಾರೆ. ಕೆಲವರು eligibility ಬರುತ್ತಾರೆ. ಇನ್ನೂ ಕೆಲವರು eligibility ಬರುವುದಿಲ್ಲ.

## (311)21.03.2017 BSD-BNS 11.40

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):**

ಅದರ ಬಗ್ಗೆ ತೀರ್ಮಾನ ಮಾಡಿ, within the parameter ಬಂದರೆ ಕೆಲಸ ಮಾಡಿಸಬಾರದೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ನಾನು ಸಿಂಗಲ್ ಟೆಂಡರ್ ಎಂದು ಮತ್ತೆ ಮತ್ತೆ ಹೇಳುತ್ತಿದ್ದೇನೆ. ನಾನು ಮಾನ್ಯ ಸಚಿವರನ್ನು ಸ್ಪಷ್ಟವಾಗಿ ಕೇಳುವುದೇನೆಂದರೆ ಸಿಂಗಲ್ ಟೆಂಡರ್ ಮಾಡಲು ಅವಕಾಶ ಇದೆಯೇ? ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅವರೇ ಸರ್ಕಾರವನ್ನು ನಡೆಸಿದ್ದು, ಅವರಿಗೆ ಪರಿಚಯ ಇರುವ ಅಧಿಕಾರಿಗಳನ್ನು ಕೇಳಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸಿಂಗಲ್ ಟೆಂಡರ್‌ಗೆ first time ಇರುವ ಸಂದರ್ಭ ಬರುವುದಿಲ್ಲ. ಇದನ್ನು ನಾನು ಹೇಳುತ್ತಿದ್ದೇನೆ ಮತ್ತು ಇದು ಅವರಿಗೂ ಗೊತ್ತು. ಈ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೂ.39 ಕೋಟಿಗಳ ಅವ್ಯವಹಾರ ಆಗುತ್ತಿರುವ ಸಂದರ್ಭದಲ್ಲಿ ಮಾನ್ಯ ಸಚಿವರು ನೇರವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಇದು ಯಾವ ನ್ಯಾಯ?

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, I am also a qualified Engineer. ನನಗೂ ಬದ್ಧತೆ ಮತ್ತು ಜವಾಬ್ದಾರಿ ಇದೆ. I know the things. ಯಾವುದೇ first call ನಲ್ಲಿ ಸಿಂಗಲ್ ಟೆಂಡರ್ ಇದ್ದರೆ ಒಪ್ಪಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇಲ್ಲ. ಒಬ್ಬನೇ ವ್ಯಕ್ತಿಗೆ ನಾಲ್ಕೈದು ಪ್ಯಾಕೇಜ್‌ಗಳನ್ನು ಸಿಂಗಲ್ ಕಾಂಟ್ರ್ಯಾಕ್ಟರ್‌ಗೆ ಕೊಟ್ಟರೆ, what is this? ಎಲ್ಲವೂ exactly 5% above the DSR. ಇದು ಕೈಯಲ್ಲಿರುವ ಹುಣ್ಣು ಇದ್ದಂತೆ ಇದ್ದು, ಇದಕ್ಕೆ ಕನ್ನಡಿಯ ಅವಶ್ಯಕತೆ ಇಲ್ಲ. ದಯವಿಟ್ಟು ಇದನ್ನು ವಿಚಾರಣೆ ಮಾಡಿಸಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಶೋಭೆ ತರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ. ಶಿವಕುಮಾರ್:-** ನನಗೆ ಅವರ ಭಾವನೆ ಅರ್ಥವಾಗುತ್ತಿದೆ. They are very serious. ಸಾರ್ವಜನಿಕ ಅಭಿವೃದ್ಧಿ ವಿಚಾರದಲಿè single contractor ಆಗಬಾರದು ಎನ್ನುವುದು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಸಿಂಗಲ್ ಏಜೆನ್ಸಿ.

**ಶ್ರೀ ಡಿ.ಕೆ. ಶಿವಕುಮಾರ್:-** ಆಯಿತು, ಸಿಂಗಲ್ ಟೆಂಡರ್ ಅಥವಾ ಸಿಂಗಲ್ ಏಜೆನ್ಸಿ ಎಂದು ಹೇಗಾದರೂ ಕರೆಯಲಿ. ಇದು ಆಗಬಾರದು ಎಂದು ಇದೆ. ಆದರೆ ಇಲ್ಲಿ ನಿರ್ದಿಷ್ಟವಾಗಿ ಏನಾದರೂ ಇದ್ದರೆ, the Government will definitely examine about this.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದಕ್ಕಿಂತ ನಿರ್ದಿಷ್ಟವಾಗಿ ಬೇಕೆ?

**ಶ್ರೀ ಡಿ.ಕೆ. ಶಿವಕುಮಾರ್:-** ಆಯಿತು, We will examine this. C°è there is no bar in accepting a single tender and the Government is very clear about it. ಎಲ್ಲಾ ಕಾಲದಲ್ಲಿಯೂ ನಡೆದಿರುವುದು. Except one or ಣತಿಂ ಕೇಸ್‌ಗಳಲ್ಲಿ ಸಿಂಗಲ್ ಟೆಂಡರ್ ಆಗಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಇಲ್ಲ ಸಾರ್.

**Sri D.K.SHIVAKUMAR**:- I am speaking on behalf of the Government.

**Sri RAGHUNATH RAO MALKAPURE**:- As a representative I am telling.

(ಗೊಂದಲ)

**ಶ್ರೀ ಈಶ್ವರ್ ಬಿ. ಖಂಡ್ರೆ:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ವತಿಯಿಂದ BMC ಗೆ ಟೆಂಡರ್ ಕರೆದಿದ್ದೇವೆ. ಎರಡು-ಮೂರು ಸಾರಿ ಟೆಂಡರ್ ಕರೆದರೂ ಒಬ್ಬ ಗುತ್ತಿಗೆದಾರ ಮಾತ್ರ ಟೆಂಡರ್ ಹಾಕಿದ್ದಾನೆ. ಅಂತಹ ಸಂದರ್ಭದಲ್ಲಿ ಸಿಂಗಲ್ ಟೆಂಡರ್ ಕೊಡಬೇಕಾಗುತ್ತದೆ. ಆರೆಂಟು ತಿಂಗಳು ಟೆಂಡರ್ ಕರೆದರೂ ಒಬ್ಬನೇ ಗುತ್ತಿಗೆದಾರ ಟೆಂಡರ್ ಹಾಕಿದ್ದಾನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಬೀದರ್ ನಗರದಲ್ಲಿ ಧೂಳು ಏಳುತ್ತಿದೆ. ರೂ.9 ಕೋಟಿ ಟೆಂಡರ್ ಅನ್ನು ಮೂರು ಸಾರಿ ಕರೆದರೂ ಹಾಕಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಯಾರಿಗಾದರೂ ಕೊಟ್ಟು ಕಾಮಗಾರಿ ಅನುಷ್ಠಾನ ಮಾಡಬೇಕಾಗುತ್ತದೆ. ಆದರೆ ಗುಣಮಟ್ಟದ ಕೆಲಸ ಆಗಿದೆಯೋ ಇಲ್ಲವೋ ಮತ್ತು ಅದರಲ್ಲಿ ದುರುದ್ದೇಶ ಇದ್ದರೆ ನಿರ್ದಿಷ್ಟವಾಗಿ ನೋಡಲಿ. ಸಿಂಗಲ್ ಟೆಂಡರ್ ಕೊಡಲು ಬರುವುದಿಲ್ಲ ಎನ್ನುವುದು ಸರಿಯಲ್ಲ. ಸಿಂಗಲ್ ಟೆಂಡರ್ ಇಲ್ಲದಿದ್ದರೆ ಟೆಂಡರ್ ಆಗುವುದೇ ಇಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಮಾನ್ಯ ಸದಸ್ಯರ ಪ್ರಸ್ತಾಪಿಸಿದ ವಿಚಾರವನ್ನು ನೋಡುವ ಬಗ್ಗೆ ಹೇಳಿದರು. ಆ ರೀತಿ ಏನಾದರೂ ಆಶ್ವಾಸನೆ .......

**ಶ್ರೀ ಡಿ.ಕೆ. ಶಿವಕುಮಾರ್:–** ಪತ್ರಿಕಾ ಪ್ರಕಟಣೆಗಳ ಕಟ್ಟಿಂಗ್ಸ್ ಇಟ್ಟುಕೊಂಡಿದ್ದು, we will examine this and if anything is there, ಖಂಡಿತ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಸಾಕು, ಪ್ರಶ್ನೋತ್ತರವ ಅವಧಿಯಲ್ಲಿ ಸಾಕು. ಈ ಅವಧಿಯಲ್ಲಿ ಛಿಂಟಛಿಟಣಜಜ ಮಾಡುವುದಕ್ಕೆ ಆಗುವುದಿಲ್ಲ. I can't conclude.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಒಂದೇ ಟೆಂಡರ್ ಇದೆ.

**Sri D.K.SHIVAKUMAR**:- Even that will be examined.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ಭಂಡತನ ತೋರಿಸುತ್ತಿದ್ದಾರೆ. ಇದೇನು ಅನ್ಯಾಯ!. ನೇರವಾಗಿ ಒಪ್ಪಿಕೊಳ್ಳುತ್ತಿದ್ದಾರೆ.

**ಸಭಾಪತಿಯವರು:–** ಒಂದು ಪ್ರಶ್ನೆಗೆ ಎಷ್ಟು ಸಮಯ! ಸಾಕು. ನಾನು ಇನ್ನೂ 13 ಪ್ರಶ್ನೆ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 921**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಉತ್ತರವನ್ನು ನೋಡಿದಾಗ ಬಹುತೇಕ ಸುವ್ಯವಸ್ಥಿತವಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಟ್ಟಿದ್ದಾರೆ ಎಂದು ಸಮಾಧಾನವಾಗುವ ರೀತಿ ಇದೆ. ಆದರೆ ವಾಸ್ತವಿಕವಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳ ವೇಗದ ರಭಸಕ್ಕೆ ಪ್ರಾಣಿಗಳು ಅಪಘಾತವಾಗಿ ಮೃತಪಡುತ್ತವೆ. ಅನೇಕ ಸಂದರ್ಭದಲ್ಲಿ ಕೊಲೆ ಮಾಡಿ ಮನುಷ್ಯನನ್ನು ಚೀಲದಲ್ಲಿ ಹಾಕಿಕೊಂಡು ಬಂದು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಾಕುವ ಘಟನೆಗಳನ್ನು ನಾನು ಸ್ವತಃ ಕಣ್ಣಾರೆ ನೋಡಿ ಪೊಲೀಸ್ ಇಲಾಖೆಗೆ ತಿಳಿಸಿದಂತಹ ಉದಾಹರಣೆಗಳೂ ಇವೆ. ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ಪ್ರತಿ 40 ಕಿಲೋಮೀಟರ್‌ಗಳ ವ್ಯವಸ್ಥೆಯಲ್ಲಿ patrolling vehicles, ambulance, crane ಮತ್ತು GPS tracking system ಮೂಲಕ ಪೊಲೀಸ್ ವ್ಯವಸ್ಥೆಯನ್ನು ಮಾಡಿರುವ ಬಗ್ಗೆ ತಿಳಿಸಿದ್ದಾರೆ. ಆದರೆ ನಾನು ಬಿಜಾಪುರ-ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಕಷ್ಟು ಸಲ ಓಡಾಡಿದ್ದು, ಒಂದು ಕಡೆಯೂ ಸಹ ಅವರು ಹೇಳಿದಂತೆ 40 ಕಿಲೋಮೀಟರ್‌ಗಳ ಅಂತರದಲ್ಲಿ ನೋಡಲಿಲ್ಲ. ಒಂದೂ ಕ್ರೇನ್ ನೋಡಲಿಲ್ಲ. ಕಚಿಣಡಿಂಟಟುಟಿರ ಎಂದರೆ ರಾತ್ರಿ ಮಾಮೂಲಿ ವಸೂಲಿ ಮಾಡಲು ಪೊಲೀಸರು ನಿಲ್ಲುತ್ತಾರೆ. ಖಟಿಥಿಂಟಜ ಖಿಚಿಥ ಆಜಿಂಚಿಡಿಣಟಜಟಿಣ ಅಧಿಕಾರಿಗಳು ಮಾಮೂಲಿ ವಸೂಲಿ ಮಾಡಲು ನಿಲ್ಲುತ್ತಾರೆ. ಇದರ ಹೊರತು ರಸ್ತೆಯಲ್ಲಿ ಆಗುವ ಅನಾಹುತಗಳನ್ನು ತಡೆಹಿಡಿಯಲು ಯಾವುದೇ ಕ್ರಮಗಳು ಆಗುತ್ತಿಲ್ಲ. ಕನಿಷ್ಟ ಒಂದೊಂದು ಹಳ್ಳಿಗಳಲ್ಲಿ ಮೊಬೈಲ್ ನಂಬರ್ ಕೊಟ್ಟು, ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ, ಅಪಘಾತಗಳಾದಾಗ ಯಾರನ್ನು ಸಂಪರ್ಕ ಮಾಡಬೇಕು ಎನ್ನುವ ಕನಿಷ್ಟ ನಾಮಫಲಕಗಳನ್ನು ಹಾಕುವುದರಿಂದ ಅಪಘಾತ ಆದ ತಕ್ಷಣ ನೆರವು ಸಿಗುತ್ತದೆ. ನಾನು ರಸ್ತೆಯಲ್ಲಿ ಅನೇಕ ಸಾರಿ ನೋಡಿದ್ದು, ಕುದುರೆ, ಎಮ್ಮೆ ಅಪಘಾತವಾಗಿ ಬಿದ್ದಿದ್ದರೂ ಅದರ ಮೇಲೆ ವಾಹನಗಳು ಹಾಯ್ದು ಹೋಗುತ್ತವೆ. ಎಷ್ಟೋ ಸಲ ಮೋಟಾರ್ ಸೈಕಲ್‌ಗಳಲ್ಲಿ ಅಪಘಾತಗಳಾಗಿ ಸಾಯುತ್ತಾರೆ. ನಾನು ಮಾರುತಿ ವ್ಯಾನ್ ಅಪಘಾತ ಸ್ವತಃ ನೋಡಿದೆ. ಅದನ್ನು ಪೊಲೀಸ್ ಠಾಣೆಗೆ ನಾನು ಹೇಳಬೇಕಾಯಿತು. ಪೊಲೀಸರು ಇದು **'ನಮಗೆ ಸಂಬಂಧಪಡುವುದಿಲ್ಲ, ರಾಷ್ಟ್ರೀಯ ಹೆದ್ದಾರಿಯವರಿಗೆ ಸಂಬಂಧಪಟ್ಟಿದೆ'** ಎನ್ನುವಂತಹ ಘಟನೆಗಳು ನಡೆಯುತ್ತಿವೆ. ಆದರೆ ಇಲ್ಲಿ ಈ ರೀತಿಯ ಸಮಾಧಾನಕರ

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರ ಕೊಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇದಕ್ಕೆ ನಿರ್ದಿಷ್ಟವಾಗಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)(ಲೋಕೋಪಯೋಗಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯ ಸ್ನೇಹಿತರು ಇಡೀ ರಾಜ್ಯಕ್ಕೆ ಅನ್ವಯವಾಗುವ ಪ್ರಶ್ನೆಯನ್ನು ಕೇಳಿದ್ದು, ಸಾಮಾನ್ಯವಾಗಿ ನಾವೂ ಇದನ್ನು ಗಮನಿಸಿದ್ದೇವೆ. ಮಾನ್ಯ ಸದಸ್ಯರು ಪ್ರತ್ಯೇಕವಾಗಿ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಪಟ್ಟಂತೆ ಕೇಳಿದ್ದಾರೆ. ಕಳೆದ ಹತ್ತು-ಹದಿನೈದು ವರ್ಷಗಳ ಹಿಂದೆ ಮಾನ್ಯ ವಾಜಪೇಯಿಯವರು Golden Triangle ಮಾಡಿದ್ದರಿಂದ ರಾಷ್ಟ್ರೀಯ ಹೆದ್ದಾರಿ ಒಂದು streamline ಗೆ ಬಂದಿದೆ. ಈಗಾಗಲೇ ರಾಜ್ಯದಲ್ಲಿ ಸುಮಾರು 332 ವಾಹನಗಳನ್ನು 40 ಕಿಲೋಮೀಟರ್ ಲೆಕ್ಕಹಾಕಿಕೊಂಡು ಖರೀದಿ ಮಾಡಿ ಕೊಟ್ಟಿದ್ದೇವೆ. ಪೊಲೀಸ್‌ನವರ 100 ವಾಹನಗಳು ಬಂದಿವೆ. ಅದಕ್ಕಾಗಿ 40 ಕಿಲೋಮೀಟರ್ ಅಂತರವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಅದು ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗೆ ಸೇರಿದ ರಸ್ತೆ ಎಂದು ಕಾಣುತ್ತದೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಅದು ಬಿಜಾಪುರ-ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 51 ಮತ್ತು ಗುಲ್ಬರ್ಗ-ಬಿಜಾಪುರ-ಚಿಕ್ಕೋಡಿಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 218ಎ ಆಗಿರುತ್ತದೆ.

**ಶ್ರೀ ಡಿ.ಕೆ. ಶಿವಕುಮಾರ್:-** ಈ ಎರಡೂ ರಸ್ತೆಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದು, ಇದರ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದು, ಏನಾದರೂ ಕೊರತೆಯಿದ್ದರೆ ತಿಳಿಸಿ. ಏಕೆಂದರೆ ಅದು ನಿಜ, ದನಗಳು ಹೆಚ್ಚು ಓಡಾಡುತ್ತಿರುತ್ತವೆ, ಅಪಘಾತಗಳು ಹೆಚ್ಚು ಆಗುತ್ತಿರುತ್ತವೆ. ಇದು ಬಹಳ traffic congestion ಇರುವಂತಹ ಜಾಗ. ಖಂಡಿತವಾಗಿಯೂ ಅವರ ಕಳಕಳಿಯನ್ನು ಗಮನಿಸಿ, ನಾವು ಕೈಗೊಂಡಿರುವ ಕ್ರಮಗಳ ಬಗ್ಗೆ ಅವರಿಗೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಈ ರೀತಿ ಅಪಘಾತಗಳಾದಾಗ ಕನಿಷ್ಠ ಹಾದಿಯಲ್ಲಿ ಹೋಗುವವರಿಗೆ ಮೊಬೈಲ್‌ನಲ್ಲಿ ಯಾರಿಗೆ ಮಾತನಾಡಿದರೆ ತೆರವು ಮಾಡುವ ಕೆಲಸ ಮಾಡುತ್ತಾರೆ ಎಂಬ ಮಾಹಿತಿ ಇರುವ ನಾಮಫಲಕ ಹಾಕುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ. ಶಿವಕುಮಾರ್:–** ಎಲ್ಲಾ ವಾಹನಗಳಿಗೂ ಫೋನ್ ನಂಬರ್ ಕೊಟ್ಟಿದ್ದೇವೆ. ಜೊತೆಗೆ ಸಲಕರಣೆಗಳನ್ನು ಕೊಟ್ಟಿದ್ದೇವೆ. ನಮ್ಮ ವಾಹನಗಳು ಏನು ಕೆಲಸ ಮಾಡುತ್ತಿವೆ ಎಂದು GPS tracking system ಕೂಡ ಇದೆ. ಮಾನ್ಯ ಸದಸ್ಯರು ಹೇಳಿದಂತೆ ತಕ್ಷಣ ಫೋನ್ ಮಾಡಿ ಎತ್ತಿ ಹಾಕುವಂತಹ ಕೆಲಸ ಮಾಡಬೇಕೆಂದು ತಿಳಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 988**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎಸ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಟ್ಟಿದ್ದು, ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ಹೆಚ್ಚು ಕೃಷಿ ಹೊಂಡಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ಈಗಾಗಲೇ ವಿನಂತಿ ಮಾಡಿದಂತೆ ಆ ಭಾಗದಲ್ಲಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಕಳೆದ 60 ವರ್ಷಗಳಿಂದ tail end ನ ಪ್ರದೇಶದಲ್ಲಿ ಅನೇಕ ಭೂಮಿಗಳು ನೀರಿನ ಕೊರತೆಯಿದ್ದು, ಅಲ್ಲಿ dry land ನಲ್ಲಿರುವ ಕೃಷಿ ಆಧಾರಿತದಲ್ಲಿ ಹೊಲಗಳಲ್ಲಿ ವ್ಯವಸಾಯ ಮಾಡುತ್ತಾರೆ. ಅದರಲ್ಲಿ ಕೃಷಿ ಹೊಂಡಗಳನ್ನು ಮಾಡಲು ಅವಕಾಶ ಕಲ್ಪಿಸಬೇಕೆಂದು ಹೋದ ಅಧಿವೇಶನದಲ್ಲಿ ಕೇಳಿಕೊಂಡಿದ್ದೇನೆ.

**(312 ) 21-03-2017 SK-BNS 11.50**

**ಶ್ರೀ ಎನ್. ಎಸ್. ಬೋಸ್‌ರಾಜು (ಮುಂದು);–**

ಅದರ ಬಗ್ಗೆ ರೈತರು ಅನೇಕ ಭಾರೀ ಜನಪ್ರತಿನಿಧಿಗಳಿಗೆ ಒತ್ತಡ ತರುತ್ತಿದ್ದಾರೆ. ಆ ವಿಷಯದಲ್ಲಿ ತಾವು ಗಮನಹರಿಸಬೇಕು. ರಾಯಚೂರು ಜಿಲ್ಲೆಯಲ್ಲಿ ಮುಂದಿನ ಮಾರ್ಚ್‌ವರೆಗೂ ಒಂದು ಸಾವಿರ ಕೃಷಿ ಹೊಂಡಗಳನ್ನು ಮಾಡುವುದಕ್ಕೆ ತಾವು ಈಗಾಗಲೇ ಪ್ರಸ್ತಾವನೆ ತಂದಿರುವ ಬಗ್ಗೆ ತಾವು ಒಂದು ಮಾತನ್ನು ಹೇಳಿದ್ದೀರಿ. ಇದು ಬಹಳ ಉತ್ತಮವಾದ ಯೋಜನೆ. ಈ ಯೋಜನೆಗೆ ರೈತರು ಉತ್ತಮವಾಗಿ ಸ್ಪಂದಿಸಿ, ಅವರವರ ಜಮೀನಿನಲ್ಲಿ ಕೃಷಿ ಮಾಡುವುದರ ಜೊತೆಗೆ ನಮಗೆ regenerate ಮಾಡುವುದಕ್ಕೆ ಸಹಿತ ಕೃಷಿ ಹೊಂಡಗಳು ಸಹ ಬಹಳಷ್ಟು ಉಪಯೋಗವಾಗುತ್ತಿದೆ. ಆ ಭಾಗದಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಹೊಂಡಗಳು ಮಾಡುವುದಕ್ಕೆ ಮುಂದಿನ ವರ್ಷ ಸರ್ಕಾರ ಪ್ರಯತ್ನ ಮಾಡಬೇಕು. ಆ ಭಾಗದಲ್ಲಿರುವ ತುಂಗಾಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಕಳೆದ 30 ವರ್ಷಗಳಿಂದ tail end ಪ್ರದೇಶದಲ್ಲಿ ನೀರು ಸಿಗುತ್ತಿಲ್ಲವೋ, ಆ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ಸಹಿತ ಕೃಷಿ ಹೊಂಡಗಳನ್ನು ಮಾಡುವುದಕ್ಕೆ ರೈತರಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸಚಿವರೆ ಅವರು ಒಳ್ಳೆಯ point ಅನ್ನು ಕೇಳಿದ್ದಾರೆ. ಮಾಡಬೇಕು. ಆಗಲೇಬೇಕು. ಇಲ್ಲದಿದ್ದರೆ Tail end ಪ್ರದೇಶಗಳಿಗೆ ನೀರು ಹೋಗುವುದಿಲ್ಲವೆಂದು ಅವರು specific ಆಗಿ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟುಬಿಡಿ. ಉಳಿದಿರುವುದು ಬೇಡ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಎರಡು ವಿಚಾರಗಳನ್ನು ಹೇಳಿದ್ದಾರೆ. ಇನ್ನು ಹೆಚ್ಚಿಗೆ ಕೊಡಬೇಕು ಎಂದು ಹೇಳಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ 1710 ಕೃಷಿ ಹೊಂಡಗಳು ಆಗಿವೆ. ಈ ಮಾರ್ಚ್‌ಯೊಳಗಡೆ ಇನ್ನೊಂದು 1000 ಕೃಷಿ ಹೊಂಡಗಳು ಮುಗಿಯುತ್ತದೆ. ಅದಲ್ಲದೇ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮತ್ತೆ ಇನ್ನೊಂದು 1000 ಕೃಷಿ ಹೊಂಡಗಳನ್ನು ಬೇಕಾದರೂ ಸಹ ರಾಯಚೂರು ಜಿಲ್ಲೆಯಲ್ಲಿ ಒದಗಿಸಿಕೊಡುತ್ತೇವೆ. ರಾಜ್ಯದಲ್ಲಿ ಒಟ್ಟು 1,30,000 ಕೃಷಿ ಹೊಂಡಗಳು ಇಲ್ಲಿಯವರೆಗೆ ಆಗುತ್ತದೆ.

**ಸಭಾಪತಿಯವರು:–** ಮತ್ತೆ ಬೇಕು ಎಂದು ಕೇಳುತ್ತಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಳೆಗಾಲಕ್ಕೆ ಮೊದಲು ಸುಮಾರು 20–30 ಸಾವಿರ ಕೃಷಿ ಹೊಂಡಗಳನ್ನು ರಾಜ್ಯದಲ್ಲಿ ಮಾಡಬೇಕೆಂದು ಗುರಿಯಿಟ್ಟುಕೊಂಡಿದ್ದೇವೆ. ಈಗಾಗಲೇ ಒಂದು ಸಾವಿರ ಎರಡು ನೂರು ಕೋಟಿ ರೂಪಾಯಿಗಳು ಖರ್ಚಾಗಿದೆ. ಈಗ ಇನ್ನು 600 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿಕೊಂಡಿದ್ದೇವೆ. ಅದನ್ನು ಮಾಡುತ್ತೇವೆ. ತಾವು ಹೇಳಿದ ಹಾಗೆ ಮುಖ್ಯವಾಗಿ ಅಚ್ಚು ಕಟ್ಟು ಪ್ರದೇಶದಲ್ಲಿ ಕೊಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ.

**ಸಭಾಪತಿಯವರು:–** ಅವರಿಗೆ ನೀರು reach ಆಗುತ್ತಿಲ್ಲ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಸ್ವಾಭಾವಿಕವಾಗಿ tail end ಪ್ರದೇಶ ಎಂದು ಏನು ಕರೆಯುತ್ತೇವೆ.

**ಸಭಾಪತಿಯವರು:–** ಅಲ್ಲಿ ಜಾಸ್ತಿ ಗಮನ ಕೊಡಿ ಎಂದು ಹೇಳುತ್ತಾರೆ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಇದು ಒಂದು ಪಾಲಿಸಿ ಆಧಾರದ ಮೇಲೆ ಕಾರ್ಯಕ್ರಮವನ್ನು ನಾವು ತೆಗೆದುಕೊಂಡು ಬಂದಿರುವುದು. ನಾವು ಆ ಪಾಲಿಸಿ ರೂಪಿಸಿದ್ದೇ ಮಳೆ ಆಶ್ರಿತ ಕೃಷಿಗೆ. Rainfed agriculture ಗೋಸ್ಕರವೇ ಈ ಯೋಜನೆಯನ್ನು ಮಾಡಿದ್ದೇವೆ. ಅಚ್ಚುಕಟ್ಟು ಪ್ರದೇಶಕ್ಕೆ ಕೊಟ್ಟರೆ ಮೂಲ ಉದ್ದೇಶದಲ್ಲಿಯೇ ಇದು dilute ಆಗುತ್ತದೆ. ಆದರೆ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳುವುದರಲ್ಲಿ ಸಮಂಜಸವಿದೆ. ಅದನ್ನು ನಾನು ತಳ್ಳಿ ಹಾಕುತ್ತಿಲ್ಲ. ಅದು ಚರ್ಚೆ ಸಹ ಆಗಿದೆ. ಏನಾದರೊಂದು ಪರಿಹಾರ ಹುಡುಕುವ ಪ್ರಯತ್ನವನ್ನು ಮಾಡುತ್ತೇವೆ. ಅವರಿಗೆ ಅನುಕೂಲವಾಗುತ್ತದೆ ಎಂಬುದು ನಿಜ ಸಹವಿದೆ. ಕನಿಷ್ಠ Catchment Area Development Authority (CADA) ರವರ ಜೊತೆಗೆ ಮಾತನಾಡಿ ಮತ್ತು ಜಲ ಸಂಪನ್ಮೂಲ ಇಲಾಖೆಯವರ ಜೊತೆಯಲ್ಲಿ ಮಾತನಾಡಿ, ಆ ಭಾಗದಲ್ಲಿ ಸಾಕಷ್ಟು ಬೇಡಿಕೆ ಇರುವುದರಿಂದ ಅದಕ್ಕೆ ಏನಾದರೊಂದು ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:–** ಅವರಿಗೆ ಧನ್ಯವಾದಗಳನ್ನು ಹೇಳಿಬಿಡಿ ಸಾಕು.

**ಶ್ರೀ ಎನ್. ಎಸ್. ಬೋಸ್‌ರಾಜು :–** ಸನ್ಮಾನ್ಯ ಸಭಾಪತಿಯವರೇ, suffering ಅಚ್ಚುಕಟ್ಟು ಬಗ್ಗೆ ನಾವು ಕೇಳುತ್ತಿರುವುದು. ಅದು ರೈತರಿಗೆ ಗೊತ್ತು.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಆದರೆ classification ಆ ತರಹವಿಲ್ಲ. Suffering ಎಂದು ಇಲ್ಲ. Tail end ಎನ್ನುವುದಕ್ಕೆ ಎಲ್ಲಿಯೂ definition ಇಲ್ಲ. ಹಾಗಾಗಿ ನಮಗೆ ಕಷ್ಟವಾಗುತ್ತಿದೆ.

**ಸಭಾಪತಿಯವರು:–** ಆಯಿತು ಬಿಡಿ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಳೆ ಆಶ್ರಿತ ಕಾರ್ಯಕ್ರಮವನ್ನು dilute ಮಾಡಿ, ಅಚ್ಚುಕಟ್ಟಿಗೆ ಕೊಟ್ಟರೆ, ಮಳೆ ಆಶ್ರಿತ ಬೇಸಾಯ ಕಾರ್ಯಕ್ರಮ ಎಂದು ಉಳಿಯಲ್ಲ.

**ಸಭಾಪತಿಯವರು:–** ಸರಿ ಇದೆ. Fine.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, CADA ದವರ ಜೊತೆ ಮಾತನಾಡಿ ಏನಾದರೊಂದು ಪರಿಹಾರವನ್ನು ಹುಡುಕಬಹುದು.

**ಚುಕ್ಕೆ ಗುರುತಿನ ಪ್ರಶ್ನೆ 1017**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ್ ಎಸ್. ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು ನಾಲ್ಕು ಕೃಷಿ ವಿಶ್ವವಿದ್ಯಾಲಯಗಳಿವೆ. ಗುತ್ತಿಗೆ, ಸಂಚಿತ ವೇತನ, ಹೊರಗುತ್ತಿಗೆ ಆಧಾರದ ಮೇಲೆ ಎಷ್ಟು ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸವನ್ನು ಮಾಡುತ್ತಾರೆಂದು ನಾನು ಕೇಳಿದ್ದೇನೆ. ಒಟ್ಟು 2256 ಜನ ತಾತ್ಕಾಲಿಕವಾಗಿ ಕೆಲಸ ಮಾಡುತ್ತಾರೆ. ಸಚಿವರು ಗುತ್ತಿಗೆ/ಸಂಚಿತ ವೇತನ/ ಹೊರಗುತ್ತಿಗೆ ಸಿಬ್ಬಂದಿ ಬಗ್ಗೆ ತಿಳಿಸಿದ್ದಾರೆ. ಜೊತೆಗೆ ಋತುಮಾನಕ್ಕನುಗುಣವಾಗಿ ಅವರನ್ನು ಕಾರ್ಯದಲ್ಲಿ ತೊಡಗಿಸುವುದಾಗಿವೆ ಎಂದು ಹೇಳಿದ್ದೀರಿ. ಇವರು sanctioned post ನಲ್ಲಿ ಕೆಲಸ ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತೇನೆಂದರೆ ರಾಜ್ಯದಲ್ಲಿ ಏನಾಗಿದೆ ಎಂದರೆ ಈ ಸ್ಥಳಗಳಿಗೆ ತುಂಬದೇ ಇರುವುದರಿಂದ, temporarily ಮತ್ತು contract basis ನಲ್ಲಿ ಇವರನ್ನೆಲ್ಲಾ ತೆಗೆದುಕೊಳ್ಳುತ್ತಾರೆ. ಸುಮಾರು 10-15 ವರ್ಷಗಳ ಕಾಲ ಕೆಲಸ ಮಾಡಿದ ನಂತರ ಅವರಿಗೆ ಇವುಗಳೆಲ್ಲಾ ಸಮಸ್ಯೆಗಳಾಗುತ್ತವೆ. ನಾನು ಅದಕ್ಕೆ ಏನು ಹೇಳುತ್ತೇನೆಂದರೆ ಈಗ ಒಟ್ಟು 2256 ಜನರು ಸುಮಾರು 8-10 ವರ್ಷಗಳಿಂದ ಕೆಲಸ ಮಾಡುತ್ತಾರೆ. Sanctioned posts ನಲ್ಲಿ ಕೆಲಸ ಮಾಡುವವರು ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರು ಎಷ್ಟು ಜನರಿದ್ದಾರೆ ಅಷ್ಟು ಮಾತ್ರ ಹೇಳಿ. ನಾನು outsourcing ಬಗ್ಗೆ ಮಾತನಾಡುವುದಿಲ್ಲ. ನೀವು outsourcing ಬಗ್ಗೆ ಮಾಡಿದರೆ ಮಾಡಿ. Sanctioned posts ಇರುವುದನ್ನು contract basis ಮೇಲೆ ಅವುಗಳನ್ನು ತೆಗೆದುಕೊಳ್ಳಬಾರದು. ಏನು ಇರುತ್ತವೆಯೋ ಅಲ್ಲಾ, ಇವುಗಳನ್ನು ತೆಗೆದುಕೊಳ್ಳಬಾರದು. ಆಗಲೇ ಈ posts ಗಳನ್ನು ತುಂಬಿದ್ದರೆ ಈ ಸಮಸ್ಯೆ ಬರುವುದಿಲ್ಲ. Permanent ಮಾಡಿ ಎನ್ನುತ್ತಾರೆ strike ಮಾಡುತ್ತೇವೆ ಎಂದು ಹೇಳುತ್ತಾರೆ. ಅದಕ್ಕೆ ಈ ರೀತಿಯ ಎಲ್ಲಾ ಸಮಸ್ಯೆಗಳು ಬರುತ್ತವೆ. ದಯಮಾಡಿ, ನಾನು ಏನು ಹೇಳುತ್ತೇನೆಂದರೆ particularly, ಇವು ಕೃಷಿ ವಿಶ್ವವಿದ್ಯಾಲಯಗಳು. ಇಲ್ಲಿ ಕೆಲವರನ್ನು temporary ಆಗಿ ತೆಗೆದುಕೊಳ್ಳುತ್ತಾರೆ. ಆದರೆ ಅವರನ್ನು temporary ಆಗಿ ಹತ್ತತ್ತು ವರ್ಷ ಕೆಲಸ ಮಾಡಿರುವ ಬಗ್ಗೆ ನನ್ನ ಬಳಿ documents ಇದೆ. ಪದೇ ಪದೇ ಬರುವುದು ಮತ್ತು strike ಮಾಡುವುದನ್ನು ತಪ್ಪಿಸುವುದಕ್ಕೆ sanctioned posts ಅನ್ನು immediately ತುಂಬುತ್ತೀರಾ ಹೇಗೆ? ಇಷ್ಟು ಜನರಲ್ಲಿ ಎಷ್ಟು ಜನ permanent ಆಗಿ ಅವರ ಜಾಗದಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ತಿಳಿಸಿ.

**ಶ್ರೀ ಕೃಷ್ಣ ಬೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾಲ್ಕು ವಿಶ್ವವಿದ್ಯಾಲಯಗಳಿಂದ ಗುಂಪು 'ಸಿ' ಮತ್ತು 'ಡಿ' ಯಲ್ಲಿ ಒಟ್ಟು ಹುದ್ದೆಗಳು ಸಂಖ್ಯೆ 3089 ಮಂಜೂರಾಗಿವೆ. ಈಗ ಅದರಲ್ಲಿ ಖಾಯಂ ನೇಮಕಾತಿಯಾಗಿರುವವರು ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರನ್ನು, ಈ ಎರಡನ್ನು ಸೇರಿಸಿದರೆ ಒಟ್ಟು 4239 ಆಗುತ್ತದೆ. ಮಂಜೂರಾತಿ ಆಗಿರುವ ಹುದ್ದೆಗಳಿಗಿಂತ ಹೆಚ್ಚು ಜನರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರು ನಾನಾ ರೂಪದಲ್ಲಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸಮಂಜಸವೆಂಬುದು ಉದ್ಭವಿಸುತ್ತದೆ.

ಎರಡನೆಯದಾಗಿ, ತಾವು ಹೇಳಿರುವ ವಿಚಾರವೇನೆಂದರೆ, ಇದು ಆದಷ್ಟು ನೇಮಕಾತಿ ಮುಖಾಂತರ ಮಾಡಿದರೆ ಒಳ್ಳೆಯದು. ಇಲ್ಲ ಎಂದರೆ ಈ ರೀತಿ ತಾತ್ಕಾಲಿಕವಾಗಿ ತೆಗೆದುಕೊಳ್ಳುವುದು, ಅವರು ನಮಗೆ ಖಾಯಂ ಮಾಡಿ ಎಂದು ಒತ್ತಾಯ ಮಾಡುವುದು. ನನಗಿಂತಲೂ ತುಂಬಾ ಚೆನ್ನಾಗಿ ಗೊತ್ತಿದೆ. ಸುಪ್ರೀಂ ಕೋರ್ಟ್‌ನ 'ಉಮಾದೇವಿ' ಪ್ರಕರಣದಲ್ಲಿ ಖಾಯಂ ಮಾಡುವುದಕ್ಕೆ ಬಹಳ ಕಟ್ಟುನಿಟ್ಟಾಗಿ ಮಾಡಿದ್ದಾರೆ. ಕರ್ನಾಟಕದಲ್ಲಿ ಇದೊಂದು ವಿಶೇಷ ಪ್ರಕರಣ ಎಂದು ಹೇಳಿ ಒಂದು 'ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ' ತೆಗೆದುಕೊಂಡು ಬಂದು, ಅದರಲ್ಲಿ ಸುಮಾರು 596 ಜನರಿಗೆ ಖಾಯಂ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದರಲ್ಲಿ ಏನು 'ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ' ಎಂದು ನಾವು ಮಾಡಿದ್ದೇವೆ. ಅದರ ಅಡಿಯಲ್ಲಿ 596 ಜನರ ಇದರಲ್ಲಿ eligible ಆದವರನ್ನು ಅವರನ್ನು ಆ ಅಧಿನಿಯಮದ ಪ್ರಕಾರ ಅವರಿಗೆ ಸವಲತ್ತುಗಳನ್ನು ಸಹ ಕೊಡುತ್ತಿದ್ದೇವೆ. ಆದರೆ ಹೆಚ್ಚಿಗೆ ನೇಮಕಾತಿಗಳಾಗಬೇಕೆಂಬುದು ತಮ್ಮ ಒತ್ತಾಯವಿದೆ. ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಈ ವರ್ಷ ಗರಿಷ್ಟ ಪ್ರಮಾಣದಲ್ಲಿ ನೇಮಕಾತಿಗಳಾಗುತ್ತಿದೆ. ನನಗೆ ಒಂದು ಹತ್ತು ನಿಮಿಷ ಸಮಯ ಕೊಟ್ಟರೆ, ಎಷ್ಟು ನೇಮಕಾತಿಗಳಾಗುತ್ತಿದೆ ಎಂಬುದನ್ನು ಸಂಖ್ಯೆಗಳನ್ನು ನಾನು ಕೊಡುತ್ತೇನೆ. ಮಾನ್ಯ ಸಭಾಪತಿಯವರೇ ನಾನು ಇಷ್ಟಂತೂ ಹೇಳಬಲ್ಲೆ, ಈ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಈ ವರ್ಷ ಗರಿಷ್ಟ ಪ್ರಮಾಣದಲ್ಲಿ ನೇಮಕಾತಿಗಳಾಗುತ್ತಿದೆ.

**ಸಭಾಪತಿಯವರು:–** ಹೇಳಿ.

**ಶ್ರೀ ಬಸವರಾಜ್ ಎಸ್ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸುಮಾರು 3997 sanctioned posts ಇವೆ. ಸುಮಾರು 4296 ಹುದ್ದೆಗಳನ್ನು ಹೆಚ್ಚಿಗೆ ತೆಗೆದುಕೊಳ್ಳಲಾಗಿದೆ. ಏಕೆ ಈ ರೀತಿ ಹೆಚ್ಚಿಗೆ ತೆಗೆದುಕೊಳ್ಳಬೇಕು? ಈ ರೀತಿ ಅವರನ್ನು ವಿನಕಾರಣ ಹೆಚ್ಚಿಗೆ ತೆಗೆದುಕೊಳ್ಳುವುದು, ಯಾರೋ Vice Chancellor ಹೊಸದಾಗಿ ಬಂದಾಗ ತಮಗೆ ಬೇಕಾದವರನ್ನು ತೆಗೆದುಕೊಳ್ಳುವುದು ಈ ರೀತಿ ಎಲ್ಲ ನಡೆಯುತ್ತಿದೆ. ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಕಟ್ಟುನಿಟ್ಟಾಗಿ sanctioned posts ನಲ್ಲಿ ಮಾತ್ರ ತೆಗೆದುಕೊಳ್ಳಬೇಕೆಂದು ಒಂದು ಆದೇಶವನ್ನು ನೀವು ಕಳುಹಿಸಿದರೆ, ಈ ಸಮಸ್ಯೆಗಳು ಉದ್ಭವವಾಗುವುದಿಲ್ಲ ಎಂದು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಧನ್ಯವಾದಗಳು. ಅವರು ಒಪ್ಪಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಹೇಳುವುದು ಸರಿಯಿದೆ. ಈ ರೀತಿ ಇಷ್ಟ ಬಂದಂತೆ ಮಾಡಿಕೊಳ್ಳುವುದು ಯಾವ ಕೆಲಸಕ್ಕಾಗಿ, ಯಾವ ಪುರುಷಾರ್ಥಕ್ಕಾಗಿ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಕೃಷಿ ಇಲಾಖೆ ನಡೆಸುವುದಕ್ಕೆ 8000 sanctioned posts ಇವೆ. ಬರೀ ನಾಲ್ಕು ವಿಶ್ವವಿದ್ಯಾಲಯಗಳನ್ನು ನಡೆಸುವುದಕ್ಕೆ 6300 sanctioned strength ಇದೆ. ಇಡೀ State ನಲ್ಲಿ ನಮ್ಮ ಇಲಾಖೆ ನಡೆಸುವುದಕ್ಕೆ ಸುಮಾರು 8000 ಹುದ್ದೆಗಳಿವೆ. ಆದರೂ ಅದಕ್ಕಿಂತ excess ತೆಗೆದುಕೊಳ್ಳುವುದು ಸರಿಯಲ್ಲ. ಅದಕ್ಕೂ ಕೂಡ ಸೂಚನೆ ಕೊಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ 1020**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ. ಶರವಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲೋ ಒಂದು ಕಡೆ ಉತ್ತರ ಹೇಗಿದೆ ಎಂದರೆ, 'ಬಾಯಿಗೆ ತುತ್ತು ಇಟ್ಟರೆ ತಿನ್ನಲಾರದು' ಎನ್ನುವಂತಹ ಪರಿಸ್ಥಿತಿಯಿದೆ. 'ಕುದುರೆ ಕರೆದುಕೊಂಡು ನೀರು ಕುಡಿಸಬೇಕೆಂದರೆ, ಅದು ಕುಡಿಯಲಾರದು.' ತೋಟಗಾರಿಕಾ ಇಲಾಖೆ ಬಗ್ಗೆ ತಾವು ಇವತ್ತು ಏನು ಹೇಳಿದ್ದೀರಿ. ರಾಜ್ಯದಲ್ಲಿರುವ ನೂರಾರು ಎಕರೆ ತೋಟಗಾರಿಕಾ ಫಾರಂಗಳ ಬಗ್ಗೆ ನಾನು ಕೇಳಿದ್ದೇನೆ. ಇಲ್ಲಿ ಸಮರ್ಪಕ ಬೆಳಕಿಗಾಗಿ ಈ ವಿಭಾಗೀಯ ಮಟ್ಟದಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಆದೇಶ ಹೊರಡಿಸಿದರೂ ಸಹ ಐದು ತಿಂಗಳು ಕಳೆದರೂ ಅದು ಅನುಷ್ಠಾನಕ್ಕೆ ಬಂದಿಲ್ಲ. ಇದು ಏತಕ್ಕೆ ಎಂದು ಹೇಳಬೇಕಾಗುತ್ತದೆ.

ಎರಡನೆಯದಾಗಿ, ಇವತ್ತು ಸರ್ಕಾರದ ಖಜಾನೆಗೆ ಹೊರೆಯಾಗುತ್ತಿರುವ ಹುದ್ದೆಗಳು ಏನಿವೆ? ಅದನ್ನು ತಾವು ಏನು ಸರ್ಕಾರದ ವರದಿಯಲ್ಲಿ ಏನು ಆದೇಶ ಮಾಡಿದ್ದೀರಿ.

**(313 ) 21-03-2017 HV-GR 12.00**

**ಶ್ರೀ ಟಿ.ಎ.ಶರವಣ(ಮುಂದು):**

ಸನ್ಮಾನ್ಯ ಸಭಾಪತಿಯುವರೇ, ಸರ್ಕಾರ ಮಾಡಿರುವ ಆದೇಶವನ್ನು ಗಾಳಿಗೆ ತೂರಿ ಕಛೇರಿ ಸ್ಥಾಪನೆಗೆ ಅನುಮತಿ ನೀಡದೇ ಸರ್ಕಾರವೇ ರಚಿಸಿದ ಸಮಿತಿಗೆ ಅವಮಾನ ಮಾಡುವಂತಹ ಕೆಲಸವನ್ನು ಅಲ್ಲಿರುವಂತಹ ಕೆಲವು ಅಧಿಕಾರಿಗಳು ಮಾಡುತ್ತಿದ್ದಾರೆ ಇದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟನೆಯನ್ನು ಕೇಳುತ್ತಿದ್ದೇನೆ. ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವಂತಹ ತೆಂಗು ಮತ್ತು ಅಡಿಕೆ ಬೆಳಗಾರರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಸಂಕಷ್ಟದಲ್ಲಿದ್ದಾರೆ. ಈ ರೈತರ ಪರವಾಗಿ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿರುವ ವಿಚಾರ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸಂಕಷ್ಟದಲ್ಲಿರುವ ರೈತರಿಗೆ ನೆರವನ್ನು ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸುದೀರ್ಘವಾಗಿ ಉತ್ತರವನ್ನು ನೀಡಲಾಗಿದೆ. ಅವರು ಕೇಳಿರುವಂತಹ ಉಪಪ್ರಶ್ನೆಗಳ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಗಮನಹರಿಸುತ್ತದೆ. ರೈತರಿಗೆ ಉಪಯೋಗವಾಗುವಂತೆ ಆವರ್ತನಾನಿಧಿಯಿಂದ ಬೆಂಬಲ ಬೆಲೆಯನ್ನು ನೀಡಲಾಗುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಕೊಬ್ಬರಿಗೆ ಬೆಂಬಲ ಬೆಲೆ ನೀಡುವ ಬಗ್ಗೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಬೆಂಬಲ ಬೆಲೆಯ ಪ್ರಮಾಣವನ್ನು ಹೆಚ್ಚಿಸುವಂತೆ ಕೇಳಿಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಹೆಚ್.ಡಿ.ದೇವೇಗೌಡರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡು, ಅವರಿಗೂ ಸಹ ಒಂದು ಪತ್ರವನ್ನು ಬರೆದಿದ್ದೇವೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಬೆಂಬಲ ಬೆಲೆಯ ಪ್ರಮಾಣ ಬಂದ ಕೂಡಲೇ ಅದಕ್ಕೆ ಸರಿಸಮಾನವಾಗಿ ರಾಜ್ಯ ಸರ್ಕಾರ ಅನುದಾನವನ್ನು ನೀಡುವುದಕ್ಕೆ ತಯಾರಿದೆ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ವಿಭಾಗೀಯ ಮಟ್ಟದ ಕಛೇರಿಗಳನ್ನು ಸ್ಥಾಪನೆ ಮಾಡಲು ಆದೇಶ ಮಾಡಿ ಸುಮಾರು 5–6 ತಿಂಗಳುಗಳು ಕಳೆದಿದ್ದರೂ ಸಹ ಬಹಳಷ್ಟು ಕಡೆಗಳಲ್ಲಿ ವಿಭಾಗೀಯ ಮಟ್ಟದ ಕಛೇರಿಗಳ ಸ್ಥಾಪನೆ ಆಗಿಲ್ಲ. ಆಯವ್ಯಯದಲ್ಲಿ ಈ ಕಛೇರಿಗಳ ಸ್ಥಾಪನೆಗೆ ನೆರವು ನೀಡಲಾಗುತ್ತದೆ ಎನ್ನುವ ಆಶ್ವಾಸನೆಯನ್ನು ನೀಡಿದ್ದಾರೆ. ಆದರೂ ಸಹ ಇದು ಕಾರ್ಯಗತವಾಗದೇ ಇರುವುದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಅವರು ತಿಳಿಸಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ವಿಭಾಗೀಯ ಮಟ್ಟದ ಕಛೇರಿಗಳ ಸ್ಥಾಪನೆ ತಡವಾಗಿರುವುದಕ್ಕೆ ಕಾರಣವೇನು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ತಮ್ಮ ಬಳಿ ಮಾಹಿತಿ ಲಭ್ಯವಿದ್ದರೆ, ಅದನ್ನು ನೀಡಿ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:–** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತರಿಸಿಕೊಂಡು ಅವರಿಗೆ ಒದಗಿಸಲಾಗುತ್ತದೆ.

**ಸಭಾಪತಿಯವರು:–** ಆ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ:968+966**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾ ಅನೂರಾಧ ಅವರ ಪ್ರಶ್ನೆಗಳೇ Starred Questions ಆಗುತ್ತಿವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರೇ Star ಆಗಿದ್ದಾರೆ. ಆ ಕಾರಣಕ್ಕಾಗಿ ಅವರ ಪ್ರಶ್ನೆಗಳು Star ಆಗುತ್ತಿವೆ.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಕೇವಲ ಶ್ರೀಮತಿ ತಾರಾ ಅನೂರಾಧರವರ ಪ್ರಶ್ನೆಗಳೇ Starred Questions ಆಗುತ್ತಿವೆ. ಕಾರಣವೇನು ಎನ್ನುವುದರ ಬಗ್ಗೆ ತಾವು ಒಂದು ತನಿಖೆ ನಡೆಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದಲ್ಲಿ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಯಾಕೋ star ಆಗುತ್ತಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ನಾನು star ಆಗುವುದು ಒಂದು ಕಡೆ ಇರಲಿ, ಅವರು star ಆಗುವುದಕ್ಕೆ ಹೊರಟಿರುವುದನ್ನು ನೋಡಿ ನಾವು ಸಂತೋಷಪಡುತ್ತಿದ್ದೇವೆ.

**(ಸದನದಲ್ಲಿ ನಗೆಯ ಅಲೆ)**

**ಶ್ರೀಮತಿ ತಾರಾಅನೂರಾಧ:–** ಸನ್ಮಾನ್ಯ ಸಭಾಪತಿಯವರೇ, ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಸೋಲಾರ್ ವಿದ್ಯುತ್ ಘಟಕಗಳ ಸ್ಥಾಪನೆಗೆ ಕೈಗೊಂಡಿರುವ ಕ್ರಮಗಳೇನು ಎನ್ನುವ ಪ್ರಶ್ನೆಗೆ, '2014–2021ರವರೆಗೆ ಅಂದರೆ, ಒಟ್ಟು 7 ವರ್ಷಗಳಲ್ಲಿ 6 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.' ಎನ್ನುವ ಉತ್ತರವನ್ನು ನೀಡಿದ್ದಾರೆ. ಅವಕಾಶವನ್ನು ಕಲ್ಪಿಸಿ ಕೊಟ್ಟಿರುವುದು ನಿಜ, ಅದನ್ನು ನಾನು ಒಪ್ಪುತ್ತೇನೆ. ಮುಂದುವರೆದು, '6178 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕಗಳನ್ನು ಹಂಚಿಕೆ ಮಾಡಲಾಗಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಸ್ವಲ್ಪ ಗೊಂದಲವಿದೆ ಅದನ್ನು ನಿವಾರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, 'ಫೆಬ್ರವರಿ 2017ರೊಳಗೆ 550.5 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಈ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿದೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. 7 ವರ್ಷಗಳ ಈ ಯೋಜನೆಯಲ್ಲಿ ಈಗಾಗಲೇ ಸುಮಾರು 3 ವರ್ಷಗಳು ಕಳೆದು ಹೋಗಿವೆ. ಇನ್ನೊಂದು ವರ್ಷ ಕಳೆದರೆ ಈ ಸರ್ಕಾರ ಹೋಗಿ, ಹೊಸ ಸರ್ಕಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಕ್ಕೆ ಬರುತ್ತದೆ. ಆದ್ದರಿಂದ ಈ ಯೋಜನೆ ಸರ್ಕಾರದ ನಿರೀಕ್ಷೆಯಷ್ಟು ವೇಗವಾಗಿ ಸಾಗುತ್ತಿದೆಯೇ? ಇಲ್ಲವಾದರೆ, ನಿಧಾನಗತಿಯಿಂದ ಸಾಗಲು ಕಾರಣವೇನು ಎನ್ನುವುದನ್ನು ತಿಳಿಸಬೇಕಾಗುತ್ತದೆ. ಸುಮಾರು 7 ವರ್ಷಗಳಲ್ಲಿ 6 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕಗಳ ಸ್ಥಾಪನೆಯ ಗುರಿಯಲ್ಲಿ, ಕಳೆದ 3 ವರ್ಷಗಳಲ್ಲಿ ಕೇವಲ 550.5 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಗಳನ್ನು ಮಾತ್ರ ಅನುಷ್ಠಾನಗೊಳಿಸಲಾಗಿದೆ. ಇದು ಅಜಗಜಾಂತರ ವ್ಯತ್ಯಾಸವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕ ಭಾಗವನ್ನು ಕರ್ನಾಟಕದ 'ಸೂರ್ಯ ನಗರಿ' ಎಂದು ಕರೆಯಲಾಗುತ್ತದೆ. ಆ ಭಾಗಗಳಲ್ಲಿ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಸಹಾಯಧನವನ್ನು, ಸಬ್ಸಿಡಿಯನ್ನು ಅಥವಾ ಪ್ರೋತ್ಸಾಹಧನವನ್ನು ನೀಡುವಂತಹ ಯೋಜನೆ ಸರ್ಕಾರದಲ್ಲಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಪ್ರಶ್ನೆಯನ್ನು ಶ್ರೀಮತಿ ತಾರಾರವರು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾ ಅನೂರಾಧರವರು ಮೂರು ಬಾರಿ ಪ್ರಶ್ನೆಗಳನ್ನು ಕೇಳಿದ್ದಾರೆ, ಮಾನ್ಯ ಸಚಿವರು ಮೂರು ಬಾರಿಯೂ ಇದೇ ರೀತಿ ಹೇಳಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಬೆಳಕಿದೆ. ಆ ಬೆಳಕಿನಿಂದ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಉತ್ತರ ಕರ್ನಾಟಕದ ಬಗ್ಗೆಯೂ ಚಿಂತನೆ ಮಾಡಿ ಎಂದು ಅವರು ಕೇಳುತ್ತಿದ್ದಾರೆ. ಅಂತಹ ಪ್ರಶ್ನೆಯನ್ನು ಮಾನ್ಯ ಸಂದೇಶ್ ನಾಗರಾಜ್‌ರವರು ಒಮ್ಮೆಯೂ ಕೇಳಿಲ್ಲ. ಅವರೂ ಸಹ ಆ ರೀತಿಯ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಆ ರೀತಿಯ ಪ್ರಶ್ನೆ ಕೇಳುವುದಕ್ಕೂ Star ಇರಬೇಕು.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2020ನೇ ಇಸವಿಯವರೆವಿಗೂ 6 ಸಾವಿರ ಮೆಗಾವ್ಯಾಟ್ ಸೌರ ವಿದ್ಯುತ್ ಅನ್ನು ಉತ್ಪಾದನೆ ಮಾಡಬೇಕೆನ್ನುವ ನೀತಿಯನ್ನು ರೂಪಿಸಿದ್ದೇವೆ. ಇದನ್ನು ಒಂದೇ ಒಂದು ವರ್ಷದಲ್ಲಿ ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ನಾನು ಇಂಧನ ಸಚಿವನಾಗಿ ಅಧಿಕಾರವನ್ನು ಸ್ವೀಕರಿಸಿದಂತಹ ಸಂದರ್ಭದಲ್ಲಿ ಕೇವಲ 17 ಮೆಗಾವ್ಯಾಟ್‌ನಷ್ಟು ಮಾತ್ರ ಸೌರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿತ್ತು. ಮೊದಲು ಸಕ್ಕರೆ ಕಾರ್ಖಾನೆಗಳಲ್ಲಿ ಕೋ–ಜನರೇಶನ್‌ಗೆ ಅವಕಾಶಗಳನ್ನು

ಮಾಡಿಕೊಡಲಾಗುತ್ತಿತ್ತು. ಥರ್ಮಲ್ ಯೋಜನೆಯನ್ನು ಪ್ರಾರಂಭ ಮಾಡೋಣವೆಂದರೆ, ಕರಾವಳಿ ಪ್ರದೇಶದವರು ಅದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಇದಕ್ಕೆ ಬಹಳಷ್ಟು ಸ್ಕೋಪ್ ಇದೆ. ಕರಾವಳಿಯ ಎರಡು ಕಡೆಗಳಿಂದ ಬರುತ್ತಿರುವ ಕಲ್ಲಿದ್ದಲಿನ ಪ್ರಮಾಣ ಕಡಿಮೆಯಾಗುತ್ತಿದೆ. ಉಳಿದಂತೆ ರಾಜ್ಯದ ಹೊರಗಡೆಯಿಂದ ನಮಗೆ ಕಲ್ಲಿದ್ದಲು ಬರಬೇಕಾಗಿದೆ. ಅಲ್ಲಿಂದ ನಮ್ಮ ರಾಜ್ಯಕ್ಕೆ ಬರುವಷ್ಟರಲ್ಲಿ ಸುಮಾರು 3000 ರೂಪಾಯಿಗಳಷ್ಟು ವೆಚ್ಚ ತಗಲುತ್ತದೆ. ಆದ್ದರಿಂದ ಇದರ ದರ ಹೆಚ್ಚಾಗುತ್ತಿದೆ. ಈಗಿನ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು 'ಗ್ರೀನ್ ಏನರ್ಜಿ'ಗೆ ಹೆಚ್ಚು ಒತ್ತನ್ನು ಕೊಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರದೇ ಆಗಿರುವ ಕೆಲವೊಂದು ಪರಿಕಲ್ಪನೆಗಳನ್ನು ಈ ರಾಷ್ಟ್ರಕ್ಕೆ ಕೊಟ್ಟಿದ್ದಾರೆ. ವಾಯುಶಕ್ತಿ ಮತ್ತು ಸೌರಶಕ್ತಿಗಳು ಸೇರಿ 'ಗ್ರೀನ್ ಏನರ್ಜಿ' ಆಗಿದೆ. ಇದರಲ್ಲಿ ಸೌರಶಕ್ತಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ನಮ್ಮ ರಾಜ್ಯದ ಸೌರ ವಿದ್ಯುತ್ ಉತ್ಪಾದನೆಯ ನೀತಿಯಲ್ಲಿ 6 ಸಾವಿರ ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನೆಯನ್ನು ಒಂದು ಕಾಲಮಿತಿಯಲ್ಲಿ ಅಂದರೆ, 7 ವರ್ಷಗಳಲ್ಲಿ ಮುಟ್ಟುವಂತಹ ಗುರಿಯನ್ನು ಇಟ್ಟುಕೊಳ್ಳಲಾಯಿತು. Plant Load Factor(PLF) ನಲ್ಲಿ 17–20 ಮೆಗಾ ವ್ಯಾಟ್‌ನಷ್ಟು ಮಾತ್ರ ವಿದ್ಯುತ್ ಬರುತ್ತದೆ. ಉಳಿದವುಗಳಲ್ಲಿ ಹೆಚ್ಚಾಗಿ ಬರುತ್ತದೆ. ಈಗ ನಮ್ಮ ಸರ್ಕಾರ ಸೌರ ವಿದ್ಯುತ್ ಉತ್ಪಾದನೆಯ ಯೋಜನೆಗಳನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳುತ್ತಿದೆ. ಇಲ್ಲಿಯವರೆಗೆ ಸುಮಾರು 505.5 ಮೆಗಾವ್ಯಾಟ್‌ನಷ್ಟು ಸೌರ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಬಹುಶಃ ಈ ವರ್ಷದ ಅಂತ್ಯದಲ್ಲಿ 2 ಸಾವಿರ ಮೆಗಾವ್ಯಾಟ್‌ನಷ್ಟು ಸೌರ ವಿದ್ಯುತ್ ಸೇರ್ಪಡೆಗೊಳ್ಳಲಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈಗ ಇರುವಂತಹ 505.5 ಮೆಗಾವ್ಯಾಟ್ ಬಿಟ್ಟು ಹೊಸದಾಗಿ 2 ಸಾವಿರ ಮೆಗಾವ್ಯಾಟ್ ಸೇರ್ಪಡೆಗೊಳ್ಳುತ್ತದೆಯೇ?

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಹೊಸದಾಗಿ 2 ಸಾವಿರ ಮೆಗಾವ್ಯಾಟ್ ಸೇರ್ಪಡೆಗೊಳ್ಳುತ್ತದೆ. ಅದು ಪೈಪ್‌ಲೈನ್‌ನಲ್ಲಿ ಇದೆ. ಶ್ರೀಮತಿ ತಾರಾರವರು ಉತ್ತರ ಕರ್ನಾಟಕದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇಡೀ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿಯೇ ಮೊದಲನೆಯ ಬಾರಿಗೆ distributed generation ಪರಿಕಲ್ಪನೆಯನ್ನು ಜಾರಿಗೆ ತಂದಿದ್ದೇವೆ. ಎಲ್ಲಾ ತಾಲ್ಲೂಕುಗಳಿಗೂ 20 ಮೆಗಾವ್ಯಾಟ್ ಕೊಡುತ್ತಾ ಬಂದಿದ್ದೇವೆ. ಏಕೆಂದರೆ, ಅಲ್ಲೇ ಸ್ಟೇಶನ್‌ಗಳು ಮತ್ತು ಸಬ್–ಸ್ಟೇಶನ್‌ಗಳು ಇವೆ. ಈಗ ಪಾವಗಡದಲ್ಲಿ ಮತ್ತು ಬೇರೆ ಕಡೆಗಳಲ್ಲಿ 'ಸೌರ ಪಾರ್ಕ್' ಅನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಮೂಲಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ಇದಕ್ಕೆ ಎರಡರಷ್ಟು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೆಚ್ಚವಾಗುತ್ತದೆ. ಹಿಂದೆ 7 ಕೋಟಿ ಅಥವಾ 7.5 ಕೋಟಿ ರೂಪಾಯಿಗಳ ವೆಚ್ಚ ತಗಲುತ್ತಿತ್ತು. ಈಗ ಪ್ರತಿ ತಾಲ್ಲೂಕುಗಳಲ್ಲಿ distributed generation ಮಾಡುವ ಸಲುವಾಗಿ ಸಣ್ಣ ಸಣ್ಣ ಸ್ಟೇಶನ್‌ಗಳಿವೆ. ವಿದ್ಯುತ್ ನಷ್ಟ ಎನ್ನುವುದು ಶೇಕಡಾ 15 ರಿಂದ 20ರಷ್ಟು ಆಗುತ್ತಿತ್ತು. ಈಗ ಅದರ ಪ್ರಮಾಣ ಶೇಕಡಾ 14-15ಕ್ಕೆ ಇಳಿದಿದೆ. ಮೊದಲನೆಯ ಬಾರಿಗೆ ಎಲ್ಲಾ ತಾಲ್ಲೂಕುಗಳಿಗೂ distributed generation ಮಾಡುವ ಸಲುವಾಗಿ ಸಣ್ಣ ಸಣ್ಣ ಸ್ಟೇಶನ್‌ಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ನಾನು ಸುಮಾರು 60 ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇನ್ನೂ 50 ತಾಲ್ಲೂಕುಗಳನ್ನು Solar Energy Corporation of India Ltd., (SECI) ಅವರಿಗೆ ಕೊಡಲಾಗಿದೆ. ಒಟ್ಟು 110 ತಾಲ್ಲೂಕುಗಳಲ್ಲಿ 10-20 ತಾಲ್ಲೂಕುಗಳಿಗೆ 20 ಮೆಗಾವ್ಯಾಟ್ ಸೌರ ವಿದ್ಯುತ್ ಅನ್ನು ಹಂಚಿಕೆ ಮಾಡಲಾಗಿದೆ. ಎಲ್ಲ ಕಡೆಗಳಲ್ಲಿಯೂ ಟೆಂಡರ್ ಕರೆಯಲಾಗಿದೆ. ಎಲ್ಲ ಕಡೆಗಳಲ್ಲಿ 4 ರಿಂದ 6 ರೂಪಾಯಿಗಳವರೆಗೆ ಟೆಂಡರ್‌ದಾರರು ದರವನ್ನು ನಿಗದಿ ಮಾಡಿದ್ದಾರೆ. ಸೌರಶಕ್ತಿ ಎನ್ನುವುದು Day Power. ಏಕೆಂದರೆ, ಇದು ಹಗಲು ಹೊತ್ತಿನಲ್ಲಿ ದೊರೆಯುವಂತಹ ಶಕ್ತಿಯ ಮೂಲವಾಗಿದೆ. ಇನ್ನೂ 40 ತಾಲ್ಲೂಕುಗಳಲ್ಲಿ distributed generation ಮಾಡುವ ಸಲುವಾಗಿ ಸಣ್ಣ ಸಣ್ಣ ಸ್ಟೇಶನ್‌ಗಳನ್ನು ನೀಡುವುದು ಬಾಕಿ ಉಳಿದುಕೊಂಡಿದೆ. ಮಲೆನಾಡಿನ ಕೆಲವು ಭಾಗಗಳನ್ನು ನಾನು ಬಿಟ್ಟುಬಿಟ್ಟಿದ್ದೇನೆ. ಮಲೆನಾಡಿನಲ್ಲಿರುವ ಅರೆ ಮಲೆನಾಡನ್ನು ಇದರ ವ್ಯಾಪ್ತಿಗೆ ಸೇರಿಸುವಂತಹ ಕೆಲಸವನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು.

ಸನ್ಮಾನ್ಯ ಸಭಾಪತಿಯವರೇ, ಪಾವಗಡದಲ್ಲಿ 'ಸೋಲಾರ್ ಪಾರ್ಕ್' ಅನ್ನು ಸ್ಥಾಪನೆ ಮಾಡಲಾಗುತ್ತಿದೆ. ಈ ವರ್ಷದ ಜೂನ್ ಅಂತ್ಯದೊಳಗೆ ಎನ್.ಟಿ.ಪಿ.ಸಿ., ಯವರು 600 ಮೆಗಾವ್ಯಾಟ್ ಸೌರ ವಿದ್ಯುತ್‌ನ್ನು ನೀಡುತ್ತಾರೆ. ನಂತರ ಸೆಪ್ಟೆಂಬರ್ 2018ರ ಅಂತ್ಯದೊಳಗೆ 1000 ಮೆಗಾವ್ಯಾಟ್ ಸೌರ ವಿದ್ಯುತ್ ಅನ್ನು ನೀಡಲಿದ್ದಾರೆ. ಇದರ ಶಂಕುಸ್ಥಾಪನೆಗೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಆಹ್ವಾನಿಸಬೇಕೆನ್ನುವ ನಿಟ್ಟಿನಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಇದು ಇಡೀ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಸೋಲಾರ್ ಪಾರ್ಕ್ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಕಳೆದ 50 ವರ್ಷಗಳಿಂದ ಬರಗಾಲ ಪ್ರದೇಶವೆಂದು ಘೋಷಣೆ ಮಾಡಿರುವ ಪಾವಗಡದಲ್ಲಿ ಇಲ್ಲಿಯವರೆಗೆ ಒಂದು ಎಕರೆ ಭೂಮಿಯನ್ನು ನಾವು ಖರೀದಿ ಮಾಡಿಲ್ಲ ಅಥವಾ ಸ್ವಾಧೀನಪಡಿಸಿಕೊಂಡಿಲ್ಲ. ರೈತರಿಂದ 20-25 ವರ್ಷಗಳ ಅವಧಿಗೆ ಬಾಡಿಗೆ ಭೂಮಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ 21 ಸಾವಿರ ರೂಪಾಯಿಗಳನ್ನು ಬಾಡಿಗೆಯ ರೂಪದಲ್ಲಿ ರೈತರಿಗೆ ನೀಡಲಾಗುತ್ತಿದೆ. ಒಂದು ವರ್ಷಕ್ಕೆ ಶೇಕಡಾ 5ರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಬಾಡಿಗೆ ಹೆಚ್ಚು ಮಾಡಲಾಗುತ್ತದೆ. ರೈತರು ಇದರಿಂದ ಸಂತೋಷಗೊಂಡಿದ್ದಾರೆ. ಭೂಮಿ ಕೊಡುವುದಕ್ಕೆ ರೈತರು 'ತಾ ಮುಂದು, ನಾ ಮುಂದು' ಎಂದು ಬರುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾರವರು ಸಬ್ಸಿಡಿ ನೀಡುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಕೆಲವು ಕಡೆಗಳಿಗೆ ಪ್ರೋತ್ಸಾಹಧನವನ್ನು ನೀಡಿದ್ದೇವೆ. ಸೋಲಾರ್ ಪಾರ್ಕ್ ಮಾಡುತ್ತೇವೆ ಎನ್ನುವವರಿಗೆ ಸುಮಾರು ಒಂದು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ನೀಡಲು ಕೆಲವು ತಾಲ್ಲೂಕುಗಳನ್ನು ಗುರುತಿಸಲಾಗಿತ್ತು.

**(314) 21.03.2017 ಟಿ.ಸಿ.ಹೆಚ್/ಜಿ.ಆರ್, 12.10**

**ಶ್ರೀ ಡಿ.ಕೆ.ಶಿವಕುಮಾರ್(ಮುಂದು):-**

ಈಗ ಡಿಮ್ಯಾಂಡ್ ಜಾಸ್ತಿ ಆಗಿದೆ. ಬ್ಯಾಂಕ್ ಲೋನ್ ಕಡಿಮೆ ಆಗಿದೆ. ಕೇಂದ್ರ ಸರ್ಕಾರ, ಈ Wheeling and Banking Charges ನಲ್ಲಿ ಸ್ವಲ್ಪ ಫೆಸಿಲಿಟೀಸ್ ಅನ್ನು ಕೊಟ್ಟಿದೆ. ನಾವು ನಮ್ಮ ಕೆಲವು ಟ್ಯಾಕ್ಸ್ ಮತ್ತು ವ್ಯಾಟ್ ಅನ್ನು ಕಡಿಮೆ ಮಾಡಿದ್ದೇವೆ. ಆದುದರಿಂದ 5 ಕೋಟಿ ರೂಪಾಯಿಗಳಿಗೆ ಒಂದು ಮೆಗಾವ್ಯಾಟ್ ಅನ್ನು ಮಾಡುವುದಕ್ಕೆ ಸಾಮರ್ಥ್ಯವಿದೆ. ಆದುದರಿಂದ ಪ್ರೈವೇಟ್ ಪ್ಲೇಯರ್ಸ್‌ರವರು ಬಹಳ ಜನ ಬರುತ್ತಿದ್ದಾರೆ. ಪ್ರೈವೇಟ್ ಪ್ಲೇಯರ್ಸ್ ಇವರು ಬಂದು, ಸಾರ್ವಜನಿಕರಿಗೆ ನಾವು 7-8 ರೂಪಾಯಿಗಳಲ್ಲಿ ಕೊಡಬೇಕೆಂದು ಬರುತ್ತಿದ್ದಾರೆ. Therefore, the policy what we have brought here is one of the best policies accepted by the Government of India. ಇದೆಲ್ಲಾ ಬರುತ್ತಿದೆ. ಇನ್ನೂ ತಮ್ಮದು ಏದಾದರೂ ಈ ಬಗ್ಗೆ ಸಲಹೆಗಳು ಇವೆಯೇ? If there is any suggestion from you, we are open to it. Everything will be on a transparent mode. We are open to it. We are ready to accept it. ನಮ್ಮದನ್ನು ಕೇಂದ್ರ ಸರ್ಕಾರದ ಇಂಧನ ಸಚಿವರಾದ ಶ್ರೀ ಪೀಯೂಷ್ ಗೋಯಲ್ ಸಾಹೇಬರು ನಾವು ಹೇಳಿದ್ದನ್ನೆಲ್ಲವನ್ನೂ ಅವರು ಒಪ್ಪಿಕೊಂಡು, ಎಲ್ಲಾ ಕಡೆಯಲ್ಲಿಯೂ "You go and follow the Karnataka model" ಎಂದು ಎಲ್ಲರಿಗೂ ಹೇಳಿ ಕಳುಹಿಸುತ್ತಿದ್ದಾರೆ. If anything is there, ನಿಮಗೆಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ, we are open at it. We will take up good suggestions and we are ready to implement the same.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾಪತಿಯವರು:- ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 1004**
**(ಉತ್ತರ ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವಿಧಿಸಲಾಗುತ್ತಿರುವಂತಹ ಈ ಸೆಸ್‌ಗಳಾದ ಶೇ.1.5 ಸೆಸ್ ಬಗ್ಗೆ ಕೇಳಿದ್ದೆನು. ಇದರಲ್ಲಿ ಎರಡು ಭಾಗಗಳು ಉತ್ತರವನ್ನು ಕೊಟ್ಟಿದ್ದಾರೆ. ಒಂದನೆಯದು, ಈ ಆವರ್ತನಿಧಿ ಇದರಲ್ಲಿ ಶೇ.1.5 ಸೆಸ್ ಅನ್ನು ಸಂಗ್ರಹಣೆ ಮಾಡುತ್ತಿದ್ದೇವೆ ಮತ್ತು ಶೇ.1 ಕೃಷಿ ಉತ್ಪನ್ನ ಮಾರುಕಟ್ಟೆಗಳ ಮೂಲಭೂತ ಸೌಕರ್ಯಗಳಿಗೆಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. 0.5 ಆವರ್ತ ನಿಧಿಗಾಗಿ ರಿಸರ್ವ್ ಫಂಡ್‌ಗಾಗಿ ಸಂಗ್ರಹ ಮಾಡುತ್ತಿರುವಂತಹ ಈ ಸೆಸ್ ಇದರ ಗುರಿ ಏನು ಎಂದು ಕೇಳಿದ್ದೆನು. ಅದರ ಗುರಿ ಏನು ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ಆಗಿರುವಂತಹ ಆ ಆವರ್ತನಿಧಿಯ ಒಟ್ಟು ಕ್ವಾಂಟಮ್ ಎಷ್ಟು ಎಂದು ಕೇಳಿದಾಗ, 1548 ಕೋಟಿ ರೂಪಾಯಿಗಳನ್ನು ಇಲ್ಲಿಯವರೆಗೆ ನಾವು ಸಂಗ್ರಹಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ನಾನು ತಮ್ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದಿಷ್ಟೆ. ಕಳೆದ ಸುಮಾರು 20 ವರ್ಷದಿಂದ ಈ ಸೆಸ್ ಅನ್ನು ಆವರ್ತ ನಿಧಿಗಾಗಿ ಸಂಗ್ರಹಣೆ ಮಾಡುತ್ತಿದ್ದಾರೆ. ಹಲವಾರು ಬಾರಿ ರೈತರ ಸೌಲಭ್ಯಕ್ಕಾಗಿ ಮತ್ತು ಕೃಷಿ ಮಾರುಕಟ್ಟೆ ವ್ಯಾಪಾರದ ಸೌಲಭ್ಯಕ್ಕಾಗಿ ಇದು ಪ್ರತಿ ಹಂತದಲ್ಲೂ, ಪ್ರತಿ ವರ್ಷದಲ್ಲೂ ರೈತರು ಮತ್ತು ಎ.ಪಿ.ಎಂ.ಸಿ ಯಾರ್ಡ್‌ರವರು ಸರ್ಕಾರಕ್ಕೆ ಇದನ್ನು ರೆಪ್ರೆಸೆಂಟ್ ಮಾಡಿದ್ದಾರೆ. ಇದನ್ನು ನೀವು ಕಡಿಮೆ ಮಾಡಬೇಕು ಮತ್ತು ಇದಕ್ಕೆ ಟಾರ್ಗೆಟ್ ಅನ್ನು ಕೊಡಬೇಕೆನ್ನುತ್ತಾರೆ. ಅದನ್ನು ಹೇಳಿದಾಗ, ಆಗಾಗ ಹಿಂದಿನ ಸರ್ಕಾರಗಳು ಈ ನಿಟ್ಟಿನಲ್ಲಿ ನಾವು 500 ಕೋಟಿ ರೂಪಾಯಿಗಳ ಒಂದು ಲಿಮಿಟ್ ಅನ್ನು ಫಿಕ್ಸ್ ಮಾಡುತ್ತೇವೆ. ಇದಾದ ಮೇಲೆ ಅದು ಶೇ.5ರ ಬಾಂಡ್ ಅನ್ನು ತೆಗೆದುಬಿಡುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಕಳೆದ ಸುಮಾರು 15-20 ವರ್ಷಗಳಿಂದ ಕೊಟ್ಟಿದ್ದಾರೆ. ಆದರೆ ಇನ್ನೂ ಕೂಡ ನೀವು ಆ ಒಂದು ಆವರ್ತನಿಧಿ 1500 ಕೋಟಿ ರೂಪಾಯಿ ಆಗಿದ್ದರೂ ಸಹ ಇನ್ನೂ ಸೆಸ್ ಅನ್ನು ಮುಂದುವರೆಸಿದ್ದೀರಿ. ಇದರಿಂದ ಏನಾಗುತ್ತಿದೆ ಎಂದರೆ, ನಮ್ಮ ರಾಜ್ಯದಲ್ಲಿ ಈ ಶೇ.1.5 ಸೆಸ್ ಇರುವುದರಿಂದ, ನೆರೆ ರಾಜ್ಯಗಳಲ್ಲಿ ಇವತ್ತಿನ ದಿವಸ ತೆಲಂಗಾಣ, ಆಂದ್ರ ಪ್ರದೇಶ, ತಮಿಳುನಾಡು, ಹರಿಯಾಣದಲ್ಲಿ ಶೇ.1 ರಷ್ಟು ಸೆಸ್ ಇದೆ. ಕೇರಳದಲ್ಲಿ ಇರುವುದಿಲ್ಲ. ಹೀಗಾಗಿ, ವಿಶೇಷವಾಗಿ ನಮ್ಮ ಹೈದ್ರಾಬಾದ್-ಕರ್ನಾಟಕದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಬಳ್ಳಾರಿ ಈ ಜಿಲ್ಲೆಗಳು ಮತ್ತು ಆಂದ್ರಪ್ರದೇಶಕ್ಕೆ ಮತ್ತು ಮಹಾರಾಷ್ಟ್ರಕ್ಕೆ ಹೊಂದಿದಂತಹ ಜಿಲ್ಲೆಗಳು. ಹೀಗಾಗಿ, ಅಲ್ಲಿನ ಕೃಷಿ ಉತ್ಪನ್ನಗಳು ನೆರೆ ರಾಜ್ಯಕ್ಕೆ ಡೈವರ್ಟ್ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ, ಈ ಶೇ.1.5

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೆಸ್ ಬಹಳ ದೊಡ್ಡ ಹೊಡೆತ ಇವತ್ತಿನ ದಿವಸ ಗಡಿ ಪ್ರದೇಶಗಳಿಗೆ ಆಗುತ್ತಿರುವುದರಿಂದ, ರೈತರಿಗೂ ಅನಾನುಕೂಲವಾಗುತ್ತಿದೆ ಮತ್ತು ಅಲ್ಲಿನ ಕೃಷಿ ಉತ್ಪನ್ನದ ವ್ಯಾಪಾರಕ್ಕೂ ಒಂದು ದೊಡ್ಡ ಹೊಡೆತ ಇದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮೂಲಕ ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಅವರು ಏನು ಹೇಳುತ್ತಾರೋ ಕೇಳಿ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಒಂದನೆಯದು ಈ ಶೇ.0.5 ಸೆಸ್ ಅನ್ನು ಇದಕ್ಕೆ ಲಿಮಿಟ್ ಅನ್ನು ತೆಗೆದು ಹಾಕಬೇಕು. ಎರಡನೆಯದು, ಈ ಶೇ.1 ಸೆಸ್‌ನ ಬಗ್ಗೆ ತಾವು ಹೇಳಿದ್ದೀರಿ. ಈ ಮೂಲಭೂತ ಸೌಕರ್ಯಗಳನ್ನು ನಾವು ಅಭಿವೃದ್ಧಿಪಡಿಸುತ್ತೇವೆಂದು ಹೇಳಿದ್ದೀರಿ. ಇದನ್ನು ನಾನು ಬಹಳ ವಿಷಾದದಿಂದ ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಯಾವುದೇ ಒಂದು ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ, ಎ.ಪಿ.ಎಂ.ಸಿ ಯಾರ್ಡ್‌ಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಾದ ರೈತರಿಗೆ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ರಸ್ತೆಗಳು ಇರಬಹುದು, ಶೌಚಾಲಯಗಳು ಇರಬಹುದು, ವಿದ್ಯುತ್ ದೀಪಗಳು ಇರಬಹುದು. ಯಾವುದೇ ಸೌಲಭ್ಯಗಳನ್ನು ಕೊಡುವುದಕ್ಕೆ ನಿಮ್ಮ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಈ ನಿಟ್ಟಿನಲ್ಲಿ ವಿಶೇಷವಾಗಿ ನಮ್ಮ ಹೈದ್ರಾಬಾದ್–ಕರ್ನಾಟಕದ 6 ಜಿಲ್ಲೆಗಳ ಮಾರ್ಕೆಟ್ ಯಾರ್ಡ್‌ಗಳನ್ನು ತಾವು ಪರಿಶೀಲನೆ ಮಾಡಿ, ಅಲ್ಲಿ ಆಗಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ನೋಡಬೇಕು. ನೀವು ಏನೆಂದು ಹೇಳುತ್ತಿದ್ದೀರಿ. ನೆರೆ ರಾಜ್ಯಗಳಲ್ಲಿ ಮಾರುಕಟ್ಟೆ ಶುಲ್ಕ ವಿಧಿಸುವ ಪದ್ಧತಿ ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ, ಅಲ್ಲಿನ ಪರಿಸ್ಥಿತಿ ಎಂದರೆ, ನಮ್ಮ ರಾಜ್ಯ ಏನು ಆ ರಾಜ್ಯಗಳಿಗೆ ಬಿಟ್ಟು ಬೇರೆ ಕಡೆ ಇದೆಯೇ ಸರ್. ನೆರೆ ಹೊಂದಿದಂತಹ ರಾಜ್ಯಗಳಲ್ಲಿ ಸೆಸ್ ಅನ್ನು ಕೊಡುವುದಕ್ಕೆ ಬಹಳಷ್ಟು ಕಡಿಮೆ ಇವೆ. ಇಲ್ಲಿ ಏಕೆ ಸೆಸ್ ಹೆಚ್ಚು ಎನ್ನುವಂತಹ ಈ ನಿಟ್ಟಿನಲ್ಲಿ ತಾವು ಕ್ರಮ ವಹಿಸಬೇಕು. ಈ ಸೆಸ್ ಅನ್ನು ಕಡಿಮೆ ಮಾಡಬೇಕು ಎನ್ನುವಂತಹ ಒಂದು ಮಾತನ್ನು ಮಾನ್ಯ ಸಚಿವರಿಗೆ ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಈ ಮಾರುಕಟ್ಟೆ ಸೆಸ್ ಶೇ.1.5 ಇರುವುದರ ಬಗ್ಗೆ ನಮ್ಮ ಮಾನ್ಯ ಶಾಸಕರು ಹೇಳುತ್ತಿದ್ದಾರೆ. ಮುಖ್ಯವಾಗಿ ಈಗ ತಾನೆ ಅವರು ಹೇಳಿದರು. ನಮಗೆ ಆವರ್ತ ನಿಧಿಯಿಂದ ಆ ಬೆಳೆ ಹಾನಿ ಆಗಿದೆ. ಈ ಬೆಳೆ ಹಾನಿಯಾಗಿದ್ದು, ಇದಕ್ಕೆ ತಾವು ಅನುದಾನವನ್ನು ಕೊಡಬೇಕು. ಇದಕ್ಕೆ ಸರ್ಕಾರದ ವತಿಯಿಂದ ಅನುದಾನವನ್ನು ಒದಗಿಸಬೇಕೆಂದು ಹೇಳುತ್ತಿದ್ದಾರೆ. ನಾವು ದುಡ್ಡನ್ನು ಎಲ್ಲಿಂದ ತರಬೇಕು? ಈ ಶೇ.1.5 ನಲ್ಲೇ ಸುಮಾರು 1500 ಕೋಟಿ ರೂಪಾಯಿಗಳ ಅನುದಾನದಲ್ಲಿ ಈಗ ತೊಗರಿ ಖರೀದಿ ನಡೆಯುತ್ತಿದೆ. ಅದೇ ರೀತಿ ಕೊಬರಿ ಖರೀದಿ ನಡೆಯುತ್ತಿದೆ. ಅದಕ್ಕೋಸ್ಕರ ಈ ಅನುದಾನವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಟ್ಟುಕೊಂಡು ರೈತರಿಂದ ಏನು ಖರೀದಿ ಮಾಡಿದಂತಹ ವಸ್ತುವಿಗೆ ನಾವು ಬೆಂಬಲ ಬೆಲೆಯನ್ನು ಘೋಷಣೆ ಮಾಡುವುದಕ್ಕೆ...

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಹೇಳಿ?

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಆ ಬಗ್ಗೆ ಹೇಳುತ್ತೇನೆ. ಈಗ 1500 ಕೋಟಿ ರೂಪಾಯಿಯಲ್ಲಿ ಹೆಚ್ಚು ಕಡಿಮೆ ನಮ್ಮ ಸರ್ಕಾರದಿಂದ ಈಗ 400 ಕೋಟಿ ರೂಪಾಯಿಗಳನ್ನು, ಕೇಂದ್ರ ಸರ್ಕಾರದಿಂದ ಇನ್ನೂ turnover ನಲ್ಲೇ ಇರುತ್ತದೆ. Transaction ನಲ್ಲೇ ಸಾವಿರ ಕೋಟಿ ರೂಪಾಯಿಗಳು ಅಂದಾಜಿನಲ್ಲಿ ಇದೆ. ಈಗ ಕಳೆದ ವರ್ಷದ್ದು ಮತ್ತು ಈ ವರ್ಷ ಬರಬೇಕಾಗಿರುತ್ತದೆ. ಒಟ್ಟು ಎಲ್ಲಾ ಸೇರಿ 1500 ಕೋಟಿ ರೂಪಾಯಿಗಳು ನಮ್ಮ ಅನುದಾನ ಇರುತ್ತದೆ. ಈಗ ತೊಗರಿ ಖರೀದಿಗೂ ನಾವು ಸಾಕಷ್ಟು ಹಣವನ್ನು ತೆಗೆದುಕೊಂಡಿದ್ದೇವೆ. ಅದರ ವಿವರವನ್ನು ಕೇಳಿಲ್ಲ. ಉತ್ತರ ನನ್ನ ಹತ್ತಿರ ಇಲ್ಲ. ಆಮೇಲೆ ಬೇಕಾದರೆ ಉತ್ತರವನ್ನು ಕೊಡುತ್ತೇನೆ. ಅದರ ಜೊತೆಗೆ ತಾವು ಸಾಕಷ್ಟು ಅಭಿವೃದ್ಧಿ ಆಗಿಲ್ಲವೆಂದು ಹೇಳುತ್ತಿದ್ದೀರಿ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಎಸ್.ಡಿ.ಎಫ್., ಅನುದಾನ ಮತ್ತು ಇತರೆ ಬೇರೆ ಬೇರೆ ಅನುದಾನಗಳು ಸಾಕಷ್ಟು ಬರುತ್ತಿವೆ. ಈ ವರ್ಷ, ಕಳೆದ ವರ್ಷ ಎರಡು ವರ್ಷದಿಂದ ಹೆಚ್ಚು ಕಡಿಮೆ ಪ್ರತಿ ಮಾರ್ಕೆಟ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದೇ ರೀತಿ ಈಗ ನಾವು ಗೋಡೌನ್‌ಗಳನ್ನು ಕಟ್ಟುತ್ತಿದ್ದೇವೆ. ಈ ಸದನದಲ್ಲೇ ಇದ್ದಾರೆ. ಶ್ರೀ ಪಿಯಾಂಕ ಖರ್ಗೆರವರು, ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೂ ಈ ಬಾರಿ ಹೆಚ್ಚು ಕಡಿಮೆ 3 ಕೋಟಿ ರೂಪಾಯಿಗಳ ಗುಲ್ಬರ್ಗಾ ಜಿಲ್ಲೆಗೆ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್‌ಗೆ ಅನುದಾನವನ್ನು ಒದಗಿಸಿಕೊಟ್ಟಿದ್ದೇವೆ. ಆ ರೀತಿ ಸಾಕಷ್ಟು ಅನುದಾನಗಳು ಒದಗಿಬರುತ್ತಿವೆ. ಇದರ ಬಗ್ಗೆ ಯಾವ ಅನುಮಾನವು ಬೇಡ. ನಮ್ಮ ಸರ್ಕಾರದ ವತಿಯಿಂದ ಆಗಬೇಕಾಗಿರುವ ಮೂಲಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:– ಮಾನ್ಯ ಸಭಾಪತಿಯವರೆ,** ಈ ನೆರೆ ರಾಜ್ಯಗಳಲ್ಲಿ ಸೆಸ್ ಕಡಿಮೆ ಇದೆ. ನಮ್ಮ ರಾಜ್ಯದಲ್ಲಿ ಹೆಚ್ಚು ಇರುವುದರಿಂದ...

**ಸಭಾಪತಿಯವರು:–** ಈ ರಾಜ್ಯದಿಂದ ಆ ರಾಜ್ಯಗಳಿಗೆ business transfer ಆಗುತ್ತದೆ. ಅದಕ್ಕೆ ಏನಾದರೂ ಸೆಸ್ ಅನ್ನು ಕಡಿಮೆ ಮಾಡುವ ಯೋಚನೆ ಇದೆಯೇ ಎಂದು ಕೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಸರ್ಕಾರದಿಂದ ಕಡಿಮೆ ಮಾಡುವ ಯಾವ ಯೋಚನೆಯೂ ಬಂದಿಲ್ಲ.

**ಪ್ರಶ್ನೆ ಸಂಖ್ಯೆ: 973**
**(ಉತ್ತರ ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ಎಂ.ಎ.ಗೋಪಾಲ ಸ್ವಾಮಿ:–** ಮಾನ್ಯ ಸಭಾಪತಿಯವರೆ, ರಾಜ್ಯಾದ್ಯಂತ ಇರುವ ಅಮೃತ್ ಮಹಲ್ ರಾಸುಗಳ ಸಂಖ್ಯೆಯ ವಿವರವನ್ನು ನೀಡಿದ್ದಾರೆ. ಹಾಗೆಯೇ, ಅಮೃತ್ ಮಹಲ್ ಇರುವ ರಾಸುಗಳ ಮೇವಿನ ಸೌಲಭ್ಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಸಹ ವಿವರವನ್ನು ಒದಗಿಸಲಾಗಿದೆ. ಹಾಗೂ 3ನೇ ಪ್ರಶ್ನೆ, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಅಮೃತ್ ಮಹಲ್‌ನಲ್ಲಿರುವ ರಾಸುಗಳೆಷ್ಟು, ಸದರಿ ರಾಸುಗಳಿಗೆ ಕುಡಿಯುವ ನೀರಿನ ಸೌಕರ್ಯ ಮತ್ತು ಮೇವಿನ ವ್ಯವಸ್ಥೆ ಮಾಡಲಾಗಿದೆಯೇ ಎಂದು ಕೇಳಿದ್ದೆನು. ವಿಧಾನ ಪರಿಷತ್ತಿನ ಹಿರಿಯ ಸದಸ್ಯರಾದ ಮಾನ್ಯ ರಾಮಚಂದ್ರೇಗೌಡ್ರು ಹೇಳಿದ ಹಾಗೆ, ನುಗ್ಗೇಹಳ್ಳಿಯಲ್ಲಿ 15 ರಾಸುಗಳು ಸಾವು ಆಗಿರುವುದಿಲ್ಲ. ಏಕೆಂದರೆ ಅಲ್ಲಿ ಸುಮಾರು 200 ರಾಸುಗಳು ಆರೋಗ್ಯವಾಗಿವೆ. ಅಜ್ಜಂಪುರದಿಂದ ಅಲ್ಲಿಗೆ ಆ ಹಸುಗಳನ್ನು ತರಬೇಕಾದಂತ ಸಂದರ್ಭದಲ್ಲಿ 2–3 ಹಸುಗಳು ಸತ್ತಿವೆ ಎಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದರ ಬಗ್ಗೆ ಅಧಿಕಾರಿಗಳು ಏನು ಕ್ರಮ ಜರುಗಿಸಿರುತ್ತಾರೆ? ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಡಿಮೆ ಇದೆ. ಬೋರ್‌ವೆಲ್ ವ್ಯವಸ್ಥೆ ಮತ್ತು ಕೃಷಿ ಸಚಿವರಿಗೆ ಆ ಬಗ್ಗೆ ಹೇಳಿ, ಅಲ್ಲಿ ಹೊಂಡಗಳ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಅಲ್ಲಿ ಸುಮಾರು 1500 ಎಕರೆ ಜಮೀನು ವಿಸ್ತಾರವಾಗಿದೆ. ಅಲ್ಲಿ ರಾಸುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ರಾಸುಗಳನ್ನು ನೋಡಿಕೊಳ್ಳಲು ಕಾರ್ಮಿಕರನ್ನು ಹೆಚ್ಚಿಗೆ ಮಾಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಗೋಪಾಲಸ್ವಾಮಿಯವರು ಕೇಳಿರತಕ್ಕಂತಹ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಅವರೇ ಹೇಳಿದ್ದಾರೆ. ಒಟ್ಟು 45 ಕಾವಲುಗಳಿದ್ದು, ಅದರಲ್ಲಿ 40 ಸಾವಿರ ಎಕರೆ ಇದೆ. ಬಹುಶಃ ಅಜ್ಜಂಪುರ ಕೇಂದ್ರದಲ್ಲಿ 227 ರಾಸುಗಳಿದ್ದು, ಅದರಲ್ಲಿ 96 ಟನ್ ಹಸಿರು ಮೇವು ಈಗಾಗಲೇ ಲಭ್ಯವಿದೆ. ಜೊತೆಗೆ 20.08 ಟನ್ ಮೇವು ಅಲ್ಲಿ ಹಾಲಿ ಇದೆ. ಬಾಸೂರು ಕೇಂದ್ರದಲ್ಲಿ 214 ರಾಸುಗಳಿದ್ದು, ಅದರಲ್ಲಿ 20.78 ಟನ್ ಮೇವು ಲಭ್ಯವಿರುತ್ತದೆ. ರಾಮಗಿರಿ ಕೇಂದ್ರದಲ್ಲಿ 198 ರಾಸುಗಳಿದ್ದು, ಅದರಲ್ಲಿ 45 ಟನ್ ಮೇವು ಲಭ್ಯವಿರುತ್ತದೆ. ಚಿಕ್ಕೆಮ್ಮಿಗನೂರು ಕೇಂದ್ರದಲ್ಲಿ 272 ರಾಸುಗಳಿದ್ದು, ಅದರಲ್ಲಿ 18 ಟನ್ ಮೇವು ಲಭ್ಯವಿರುತ್ತದೆ. ಲಿಂಗದಹಳ್ಳಿ ಕೇಂದ್ರದಲ್ಲಿ 318 ರಾಸುಗಳಿದ್ದು, ಅದರಲ್ಲಿ 9.378 ಟನ್ ಮೇವು ಅಂದಾಜಿದ್ದು, ಆ ಪೈಕಿ 32 ಟನ್ ಹಸಿರು ಮೇವು ಸಹ ಲಭ್ಯವಿರುತ್ತದೆ. ಹಬ್ಬನಘಟ್ಟ ಕೇಂದ್ರದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

340 ರಾಸುಗಳಿದ್ದು, ಅದರಲ್ಲಿ 14.73 ಟನ್ ಮೇವು ಲಭ್ಯವಿರುತ್ತದೆ. ಬೀರೂರು ಕೇಂದ್ರದಲ್ಲಿ 120 ರಾಸುಗಳಿದ್ದು, 16.05 ಟನ್ ಮೇವು ಲಭ್ಯವಿರುತ್ತದೆ.

**(315) 21.3.2017 12.20 ಪಿಕೆ:ಎಂಡಿ.**

ಶ್ರೀ ಎ.ಮಂಜು(ಮುಂದು):

ರಾಯಸಂದ್ರ ಕೇಂದ್ರದಲ್ಲಿ 203 ರಾಸುಗಳಿದ್ದು 8 ಟನ್ ಮೇವು ದಾಸ್ತಾನು ಇರುತ್ತದೆ. ಚೆನ್ನರಾಯಪಟ್ಟಣ ತಾಲ್ಲೂಕಿನ ರಾಯಸಂದ್ರ ಕಾವಲಿನಲ್ಲಿ 203 ರಾಸುಗಳಿದ್ದು ಕೊಳವೆ ಬಾವಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಹಾಲಿ 8 ಟನ್ ಮೇವು ದಾಸ್ತಾನು ಇದೆ. ಅಮೃತ್ ಮಹಲ್ ತಳಿಯ ವಯಸ್ಸಾದಂತಹ ರಾಸುಗಳನ್ನು ಇಲ್ಲಿಗೆ ತಂದು ಪೋಷಣೆ ಮಾಡುವಂತಹ ಪದ್ಧತಿ ಇದೆ. ವಯಸ್ಸಾದ ಕೆಲವು ರಾಸುಗಳು ಸತ್ತಿರುವುದು ನಿಜ. ಅಲ್ಲಿನ ಮೇವಿನ ವ್ಯವಸ್ಥೆಗೆ ರೂ. 13.50 ಲಕ್ಷಗಳನ್ನು ಒದಗಿಸಲಾಗಿದೆ. ಮತ್ತೆ, ತಪ್ಪಿತಸ್ಥ ಅಧಿಕಾರಿಯನ್ನು ಸಸ್ಪೆಂಡ್ ಮಾಡುವಂತಹ ಕ್ರಮ ಕೈಗೊಂಡಿದ್ದೇವೆ.

<u>**ಪ್ರಶ್ನೆ ಸಂಖ್ಯೆ:911**</u>

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜು(ಬಿಎಂಎಲ್):-**ಮಾನ್ಯ ಸಭಾಪತಿಗಳೆ, ತುಮಕೂರು ಜಿಲ್ಲೆಯನ್ನು ಕಲ್ಪತರುನಾಡು ಎಂದು ಕರೆಯುತ್ತಾರೆ. ಆದರೆ ಇವತ್ತು ಬರಗಾಲದ ಹಿನ್ನೆಲೆಯಲ್ಲಿ ತೊಂದರೆ ಅನುಭವಿಸುವಂತಾಗಿದೆ. ಕಪ್ಪು ಹುಳು ಮತ್ತು ಬಿಳಿ ಹುಳಗಳು ನಮ್ಮ ತೆಂಗಿನ ಮರಗಳನ್ನು ನಾಶ ಮಾಡುತ್ತಿವೆ. ಮಾನ್ಯ ಸಚಿವರು ಉತ್ತರದಲ್ಲಿ, ಶೇಕಡ 12 ರಿಂದ ಶೇಕಡ 15ರಷ್ಟು ಮಾತ್ರ ಇಳುವರಿ ಕಡಿಮೆಯಾಗುತ್ತದೆ ಎಂದು ಹೇಳಿದ್ದಾರೆ. ಆದರೆ, ನಿಮ್ಮ ಅಧಿಕಾರಿಗಳು ಈ ಕುರಿತು ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ಶೇಕಡ 50ಕ್ಕಿಂತಲೂ ಹೆಚ್ಚು ಇಳವರಿ ಕಡಿಮೆ ಆಗುತ್ತದೆ. ಉತ್ತರದಲ್ಲಿ, 2 ಹೆಕ್ಟೇರ್‌ಗೆ ರೂ.5250 ಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ರೈತರು ಬರಗಾಲದಿಂದ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ರೈತರಿಗೆ ಉಚಿತವಾಗಿ ಔಷಧಿ ಕೊಡಬೇಕು. ನಮ್ಮ ಜಿಲ್ಲೆಯ 6 ರಿಂದ 7 ತಾಲ್ಲೂಕುಗಳಲ್ಲಿ ತೆಂಗಿನಮರ ಹಾಕಿ ಜೀವನ ನಡೆಸುತ್ತಿರುವ ಕುಟುಂಬಗಳು ಹೆಚ್ಚಾಗಿವೆ. ಇಂಥವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಳೆಯ ಪ್ರಮಾಣ ಕಡಿಮೆಯಾಗಿದೆ. ಸಾಮಾನ್ಯವಾಗಿ ಈ ರೋಗ ಜನವರಿ ತಿಂಗಳ ನಂತರ ಕಂಡು ಬರುತ್ತದೆ. ಆದರೆ ಈ ಸಲ ಮಳೆ ಕಡಿಮೆ ಆಗಿದ್ದು ನವೆಂಬರ್ ತಿಂಗಳಲ್ಲೇ ರೋಗ ಹೆಚ್ಚಾಗಿಬಿಟ್ಟಿದೆ. ಹಾಗಾಗಿ ತಾವು ಉಚಿತವಾಗಿ ಔಷಧಿ ವಿತರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ, ನಿಮ್ಮ ಅಧಿಕಾರಿಗಳು ಯಾರೂ ಕಚೇರಿ ಬಿಟ್ಟು ಆಚೆ ಬರುವುದಿಲ್ಲ. ರೈತರಿಗೆ ಇದರ ಬಗ್ಗೆ ಮಾಹಿತಿ ಕೊಡುವುದಿಲ್ಲ. ಜನಪ್ರತಿನಿಧಿಗಳಿರಬಹುದು, ರೈತರ ಮುಖಂಡರಿರಬಹುದು ಅಥವಾ ಯಾರೇ ಇದ್ದರೂ ನಿಮ್ಮ ಅಧಿಕಾರಿಗಳು ಅವರಿಗೆ ಮಾಹಿತಿ ಕೊಡುತ್ತಿಲ್ಲ. ಔಷಧಿಯನ್ನು ಯಾವರೀತಿ ಹೊಡೆಯಬೇಕು, ಯಾವರೀತಿ ಉಪಯೋಗಿಸಬೇಕು ಎಂಬ ಮಾಹಿತಿ ಕೊಡುತ್ತಿಲ್ಲ. ಸಬ್ಸಿಡಿ ಬಗ್ಗೆ ನೀವೇನು ಮಾಹಿತಿ ಕೊಟ್ಟಿದ್ದೀರೋ ಅದರ ಬಗ್ಗೆ ಶೇಕಡ 95ರಷ್ಟು ರೈತರಿಗೆ ಗೊತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ, ಪರಿಹಾರವನ್ನೇನು ಕೊಡುತ್ತೇವೆ ಎಂದು ಹೇಳಿದ್ದೀರೋ ಅದನ್ನು ಆದಷ್ಟು ಬೇಗ ನಮ್ಮ ರೈತರಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:-** ಒಂದು ಕಡೆ, ಆವರ್ತನಿಧಿ ಕಡಿಮೆ ಮಾಡಿ ಎಂದು ಹೇಳುತ್ತೀರಿ, ಇನ್ನೊಂದು ಕಡೆ, ಜಾಸ್ತಿ ದುಡ್ಡು ಕೊಡಿ ಎಂದು ಕೇಳುತ್ತೀರಿ. ಎರಡೂ ನೀವೇ ಮಾತನಾಡುತ್ತೀರಿ. ತುಮಕೂರು ಜಿಲ್ಲೆಯಲ್ಲಿ ಸಾಕಷ್ಟು ಮರಗಳು ಚಂಡುಬಿದ್ದು ಹಾಳಾಗಿರುವುದನ್ನು ನಾವೂ ನೋಡಿದ್ದೇವೆ. ಈ ಸಮಸ್ಯೆ ಕಪ್ಪು ಹುಳುಗಳಿಂದ ಬಂದಿರುವುದಲ್ಲ. ಮಳೆ ಕೊರತೆಯಿಂದ ಗಿಡಗಳು ಸಾಕಷ್ಟು ಹಾಳಾಗಿ ಬಿದ್ದುಹೋಗಿವೆ. ಕಪ್ಪುಹುಳುಗಳ ನಿಯಂತ್ರಣಕ್ಕೆ ಸರ್ಕಾರದ ವತಿಯಿಂದ 1 ಹೆಕ್ಟೇರ್‌ಗೆ ರೂ.5250ಗಳನ್ನು ನಿಗದಿಪಡಿಸಲಾಗಿದೆ. ಅದು ಹತೋಟಿಗೂ ಬರುತ್ತಿದೆ. ಪ್ರಕೃತಿಯ ಮುಂದೆ ನಾವೂ ಇಲ್ಲ, ನೀವೂ ಇಲ್ಲ. ಒಳ್ಳೆಯ ಮಳೆ ಬಂದರೆ ಎಲ್ಲಾ ಸುಸೂತ್ರವಾಗಿ ಸರಿಹೋಗುತ್ತದೆ. ಮುಂದಿನ ದಿನಗಳಲ್ಲಿ ಒಳ್ಳೆಯ ಮಳೆಯಾಗಲಿ ಎಂದು ನಾವು ನೀವು ದೇವರಲ್ಲಿ ಪ್ರಾರ್ಥಿಸೋಣ. ಮುಖ್ಯವಾಗಿ, ನಮ್ಮ ಅಧಿಕಾರಿಗಳ ಬಗ್ಗೆ ಏನು ಹೇಳಿದ್ದಾರೋ ಆ ಕುರಿತು ಮಾಹಿತಿ ಪಡೆದುಕೊಂಡು ತಮಗೆ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1044**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ನಾನು, ಬೆಂಗಳೂರು ನಗರ ಜಿಲ್ಲೆಯಾದ್ಯಂತ ಇರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಈ ಕುರಿತು ತಾಲ್ಲೂಕುವಾರು ಮಾಹಿತಿ ಕೊಟ್ಟಿದ್ದಾರೆ. ನನ್ನದೊಂದು ಉಪಪ್ರಶ್ನೆ ಇದೆ. ಉತ್ತರದಲ್ಲಿ, ಬೆಂಗಳೂರು ನಗರ ಜಿಲ್ಲೆಯಲ್ಲಿ ಏನು 103 ಪಶುವೈದ್ಯಕೀಯ ಸಂಸ್ಥೆಗಳಿವೆಯೋ ಅಲ್ಲೆಲ್ಲಾ ಪಶುವೈದ್ಯರು ಇದ್ದಾರೆಯೇ ಎನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳಬಯಸುತ್ತಿದ್ದೇನೆ. ಬೆಂಗಳೂರು ನಗರದ ಸುತ್ತ ಇರುವ ಈ ತಾಲ್ಲೂಕುಗಳೇನಿವೆ ಅವು ನಗರ ಪ್ರದೇಶವೂ ಅಲ್ಲ, ಗ್ರಾಮೀಣ ಪ್ರದೇಶವೂ ಅಲ್ಲ. ರಾಸುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಹಳಷ್ಟು ಕಷ್ಟವಾಗುತ್ತಿದೆ. ಇನ್ನೂ ಹೆಚ್ಚು ಪಶುವೈದ್ಯಕೀಯ ಸಂಸ್ಥೆಗಳನ್ನು ಕೊಡಬೇಕು ಎಂದು ಕೇಳಿದರೆ, ಈ ವರ್ಷದಲ್ಲಿ ಯಾವುದೂ ಕೂಡ ಕೊಡುವುದಕ್ಕಾಗುತ್ತಿಲ್ಲ ಎಂದು ಹೇಳಿದ್ದಾರೆ. ನಾವು ಆಸ್ಪತ್ರೆಗಳಿಗೆ ಹೋದರೆ, ವೈದ್ಯರು ಹೊರಗೆ ಹೋಗಿದ್ದಾರೆ, ಇನ್ಸ್‌ಪೆಕ್ಷನ್‌ಗೆ ಹೋಗಿದ್ದಾರೆ ಎಂಬ ಮಾತುಗಳು ಕೇಳಿ ಸಾಕಾಗುತ್ತಿದ್ದೇವೆ. ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಪಶುವೈದ್ಯರು ಇದ್ದಾರೆಯೇ? ಇಲ್ಲದೇ ಇದ್ದರೆ ಆದಷ್ಟು ಬೇಗ ನೇಮಕ ಮಾಡುವ ಕೆಲಸವನ್ನು ಸರ್ಕಾರ ಮಾಡುತ್ತದೆಯೇ? ಪಶುವೈದ್ಯರು ಯಾರು ಇನ್ಸ್‌ಪೆಕ್ಷನ್‌ಗೆಂದು ಹೊರಗೆ ಹೋಗುತ್ತಾರೋ ಅವರು ಕಚೇರಿಯಲ್ಲಿಯೇ ಇರುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎ.ಮಂಜು:–**ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರ ಜಿಲ್ಲೆಯಲ್ಲಿ 103 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 20 ಪಶು ಆಸ್ಪತ್ರೆಗಳು, 41 ಪಶು ಚಿಕಿತ್ಸಾಲಯಗಳು, 37 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು, 4 ಸಂಚಾರಿ ಪಶು ಚಿಕಿತ್ಸಾಲಯಗಳು ಮತ್ತು 1 ಪಾಲಿಕ್ಲಿನಿಕ್ ಇದೆ. 20 ಪಶು ಆಸ್ಪತ್ರೆ, 41 ಪಶು ಚಿಕಿತ್ಸಾಲಯ, 1 ಪಾಲಿಕ್ಲಿನಿಕ್ ಹಾಗೂ 4 ಸಂಚಾರಿ ಪಶುಚಿಕಿತ್ಸಾಲಯಗಳಲ್ಲಿ 67 ತಜ್ಞ ಪಶುವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 20 ಜನ ಜನ ಸ್ನಾತಕೋತ್ತರ ಪದವೀಧರರಿರುತ್ತಾರೆ, 47 ಜನ ಪದವೀಧರ ಪಶುವೈದ್ಯರಿರುತ್ತಾರೆ. ಸರ್ಕಾರ 550 ಪಶುವೈದ್ಯರನ್ನು ನೇರ ನೇಮಕಾತಿ ಮಾಡುವುದಕ್ಕೆ ಕ್ರಮ ಕೈಗೊಂಡಿದೆ. 371 ಹುದ್ದೆಗಳನ್ನೇನು ಕೆಪಿಎಸ್‌ಸಿ ಮುಖಾಂತರ ಕರೆಯಬೇಕಾಗಿತ್ತೋ ಅವುಗಳನ್ನೂ ಕೂಡ ವಿತ್‌ಡ್ರಾ ಮಾಡಿಕೊಂಡು ನೇರ ನೇಮಕಾತಿ ಮಾಡಲು ಹೊರಟಿದ್ದು, ಸುಮಾರು 660 ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ನೋಟಿಫಿಕೇಷನ್ ಹೊರಡಿಸಿದ್ದೇವೆ. ಬಹುಶಃ ಮುಂದಿನ ದಿನಗಳಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು ಕೆಲಸ ನಿರ್ವಹಿಸುತ್ತಿರುತ್ತಾರೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಹಾಗೆ, ಪಶುವೈದ್ಯರು ಆಚೆ ಬೇರೆ ಬೇರೆ ಕಡೆ ಹೋಗಿರುತ್ತಾರೆ. ತಾಲ್ಲೂಕಿಗೊಂದರಂತೆ ಏನು ಆಂಬುಲೆನ್ಸ್ ಕೊಟ್ಟಿದ್ದೇವೆಯೋ ಅದಕ್ಕೆ ಜಿಪಿಎಸ್ ಅಳವಡಿಸುತ್ತೇವೆ. ಪಶುವೈದ್ಯರಿಗೆ ಮೊಬೈಲ್ ಕೊಡುತ್ತೇವೆ. ಇದರಿಂದ, ಅವರು ಎಲ್ಲೆಲ್ಲಿ ಹೋಗಿದ್ದಾರೆ ಎನ್ನುವುದನ್ನು ಕಂಡುಹಿಡಿಯಬಹುದಾಗಿದ್ದು, ಈ ದಿಸೆಯಲ್ಲಿ ಮುಂದುವರೆಯಲು ಈ ಬಜೆಟ್‌ನ ಅಡಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ರೀತಿ ತೊಂದರೆ ಆಗಬಾರದು. ನಮ್ಮ ವೈದ್ಯರುಗಳ ಕೆಲಸಕ್ಕೂ, ಬೇರೆ ವೈದ್ಯರುಗಳ ಕೆಲಸಕ್ಕೂ ವ್ಯತ್ಯಾಸ ಇದೆ. ನಮ್ಮ ವೈದ್ಯರು ಪೇಷೆಂಟ್ ತನಕ ಹೋಗಬೇಕಾಗುತ್ತದೆ, ಪೇಷೆಂಟ್ ವೈದ್ಯರ ಹತ್ತಿರ ಬರುವುದಿಲ್ಲ. ಈ ವೈದ್ಯರು ಹೊರಗಡೆ ಎಂದು ಹೇಳಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಎಲ್ಲಿ ಹೋಗಿದ್ದಾರೆ, ಅವರು ಸುಳ್ಳು ಹೇಳುತ್ತಾರೋ ನಿಜ ಹೇಳುತ್ತಾರೋ ಎಂದು ಕಂಡುಹಿಡಿಯಲು ಜಿಪಿಎಸ್ ವ್ಯವಸ್ಥೆಯನ್ನು ಅಳವಡಿಸುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-**ಇಲಾಖೆಯಲ್ಲಿರುವ ವೈದ್ಯರನ್ನು ಎರವಲು ಸೇವೆಗೆಂದು ಬೇರೆ ಇಲಾಖೆಗೆ ಕಳುಹಿಸಿ ಕೊಟ್ಟಿದ್ದಾರೆ. ಹಾಗಾಗಿ ಇಲ್ಲಿ ವೈದ್ಯರ ಸೇವೆ ಸರಿಯಾಗಿ ಸಿಗುತ್ತಿಲ್ಲ. ಅವರನ್ನು ವಾಪಸ್ಸು ಕರೆಸಿಕೊಳ್ಳಿ ಎನ್ನುವುದು ನಮ್ಮ ಮನವಿಯಾಗಿದೆ.

**ಶ್ರೀ ಎ.ಮಂಜು:-** ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜವಾಗಿದೆ. ಮೊದಲು, ವಿಶ್ವವಿದ್ಯಾಲಯ ಮಾಡಿದಾಗ ಅಲ್ಲಿ ಪ್ರೊಫೆಸರ್‌ಗಳು ಇರಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಲಭ್ಯವಿದ್ದಂಥ, ಕ್ವಾಲಿಫೈಯ್ಡ್ ಇದ್ದಂಥ, ಪಿಜಿ. ಮಾಡಿದ್ದಂಥವರನ್ನು ನಾವು ಕರೆದುಕೊಂಡಿದ್ದೆವು. ಹಾಗೆ ಮಾಡದೆ ಇದ್ದಿದ್ದರೆ ನಮಗೆ ಅಫಿಲಿಯೇಷನ್ ಸಿಗುತ್ತಿರಲಿಲ್ಲ. ಅಲ್ಲೇ ನೇಮಕಾತಿ ಮಾಡಿಕೊಳ್ಳಬೇಕು ಎನ್ನುವುದು ಅವರ ಬೇಡಿಕೆಯೂ ಆಗಿದೆ. ಅವರು ನಿಜವಾಗಲೂ ಅಲ್ಲೇ ಕೆಲಸ ಮಾಡುತ್ತಿರುವುದರಿಂದ ಅವರನ್ನು ಅಲ್ಲೇ ಮುಂದುವರೆಸಬೇಕಾದುದು ನಮ್ಮ ಧರ್ಮ. ಈ ಪ್ರೊಫೆಸರ್‌ಗಳು ಹೋಗಿದ್ದರಿಂದ ಸದರಿ ವಿಶ್ವವಿದ್ಯಾಲಯಕ್ಕೆ ಮಾನ್ಯತೆ ದೊರೆಯಿತು. ಇವರು ಪ್ರೊಫೆಸರ್‌ಗಳಾಗಿದ್ದಾರೆ, ಕ್ವಾಲಿಫೈಯ್ಡ್ ಆಗಿದ್ದಾರೆ. ಈಗೇನು ಸುಮಾರು 600 ಹುದ್ದೆಗಳನ್ನು ತುಂಬುತ್ತಿದ್ದೇವೆಯೋ ಅದರಿಂದ ಎಲ್ಲವೂ ಪರಿಪೂರ್ಣವಾಗುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹೋಗಿದ್ದ ಕೆಲವು ವೈದ್ಯರನ್ನು ವಾಪಸ್ಸು ಕರೆಸಿಕೊಂಡಿದ್ದೇವೆ. ಕೆಲವು ಪಶುವೈದ್ಯರು ಶಾಸಕರ ಒತ್ತಡದ ಹಿನ್ನೆಲೆಯಲ್ಲಿ ಅಲ್ಲೇ ಉಳಿದುಕೊಂಡಿದ್ದಾರೆ.

**(316)21.03.2017 MM-MD-12.30**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಆರ್‌ಡಿಪಿಆರ್ ಇಲಾಖೆಗೆ ಕಳುಹಿಸಿರುವ ವೈದ್ಯರನ್ನು ದಯವಿಟ್ಟು ತಕ್ಷಣ ವಾಪಸ್ ಕರೆಸುವ ಕೆಲಸ ಆಗಬೇಕು.

**ಸಭಾಪತಿಯವರು:-** ಬೇರೆ ಇಲಾಖೆಗೆ ಕಳುಹಿಸಿರುವವರನ್ನೂ ವಾಪಸ್ ಕರೆಸುವ ವ್ಯವಸ್ಥೆ ಮಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಆರ್‌ಡಿಪಿಆರ್ ಇಲಾಖೆಗೇ ಜಾಸ್ತಿ ವೈದ್ಯರನ್ನು ಕಳುಹಿಸಿದ್ದಾರೆ.

**ಶ್ರೀ ಎ. ಮಂಜು:-** ಮಾನ್ಯ ಸಭಾಪತಿಯವರೆ, ಅವರನ್ನು ವಾಪಸ್ ಕರೆಸಬಹುದು. ಗೌರವಾನ್ವಿತ ಸದಸ್ಯರುಗಳು ಸಚಿವರುಗಳ ಬಳಿ ಬಂದು ಬೇಡಿಕೊಳ್ಳುತ್ತಾರೆ. ಇವರು ಬಂದು ಕೇಳದ ಹಾಗೆ ದಯವಿಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾವೇ ಇವರಿಗೆ ತಿಳಿಸಿ. ಇವರೂ ಆದೇಶ ಮಾಡಬೇಕು. ಪ್ರಶ್ನೆಗಳನ್ನು ಕೇಳುವವರೂ ಇವರೇ, ಇಂತಹ ಊರುಗಳಿಗೆ ಹಾಕಿಕೊಡಿ ಎಂದು ಬಂದು ಕೇಳುವವರೂ ಇವರೇ ಆಗಿದ್ದಾರೆ.

**ಸಭಾಪತಿಯವರು:–** ಧನ್ಯವಾದಗಳು.

**ಚುಕ್ಕೆ ಪ್ರಶ್ನೆ ಸಂಖ್ಯೆ:– 1013**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೇನೆ. ಸ್ಥಳೀಯ ಸಂಸ್ಥೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಮಾಡದೇ ಎಲ್ಲಾ ಕಡೆಗಳಲ್ಲಿಯೂ ಬೇರೆ ಬೇರೆ ಕಡೆಗಳಲ್ಲಿ ಸುರಿಯುತ್ತಿದ್ದಾರೆ ಎಂದು ಕೇಳಿದ್ದೇನೆ ಅದಕ್ಕೆ ಸರ್ಕಾರ 'ಹೌದು' ಎಂದು ಉತ್ತರಿಸಿದೆ. ನಿರ್ವಹಣೆ ಘಟಕವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂದು ಕೇಳಿರುವುದಕ್ಕೆ ಅದಕ್ಕೂ ಸಹ 'ಹೌದು' ಎಂದು ಉತ್ತರಿಸಿದೆ. ಸಾಮಾನ್ಯವಾಗಿ ಅದು ನಮ್ಮ 'ಗಮನಕ್ಕೆ ಬಂದಿಲ್ಲ' ಎಂದು ಹೇಳಿದರೆ ಮುಂದಿನ 'ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಹೇಳಿದರೆ ಮುಗಿಯಿತು. ಆದರೆ ಮಾನ್ಯ ಸಚಿವರು ಎರಡು ಪ್ರಶ್ನೆಗಳಿಗೂ ಹೌದು ಎಂದು ಹೇಳಿರುವುದರಿಂದ ಸಮಸ್ಯೆಯ ಗಮನ ಅವರ ಕಡೆಗಿದೆ ಎಂದು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ಆದರೆ ಸ್ಥಳೀಯ ಸಂಸ್ಥೆಗಳು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದಕ್ಕೋಸ್ಕರ ತಯಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಇವತ್ತಿನ ದಿವಸ ಘನತ್ಯಾಜ್ಯ ಎನ್ನುವುದು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಮನೆಗಳಿಗೆ ಇರುವ ಸಮಸ್ಯೆಯಾಗಿದೆ. ಒಟ್ಟಾರೆ ಅದರ cumulative effect ನಗರಸಭೆ, ಪುರಸಭೆ, ಪಟ್ಟಣಪಂಚಾಯ್ತಿ ಮತ್ತು ಕಾರ್ಪೋರೇಷನ್‌ಗಳ ಮೇಲೆ ಬೀಳುತ್ತದೆ. ಎಲ್ಲಾ ಕಡೆಗಳಲ್ಲೂ ಇದರ ಬಗ್ಗೆ ಎಷ್ಟು ಗಲಾಟೆಯಾಗುತ್ತಿದೆ ಎಂದರೆ, ನಗರಸಭೆಯಿಂದ ಘನತ್ಯಾಜ್ಯಗಳನ್ನು ತೆಗೆದುಕೊಂಡು ಹೋಗಿ ಯಾವುದಾದರೂ ಹಳ್ಳಿಗೆ ಸುರಿಯುವುದು ಆಗ ಆ ಹಳ್ಳಿಯವರು ಇವರುಗಳ ಮೇಲೆ ಗಲಾಟೆ ಮಾಡುವುದು ಈ ರೀತಿ ನಡೆಯುತ್ತಿದೆ. ಹಾಗಾಗಿ ಮುಂದಿನ ವರ್ಷಗಳಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗುವುದರಿಂದ ವೈಜ್ಞಾನಿಕವಾಗಿ ಅಂದರೆ ಬಹಳ ವಿಶೇಷವಾದ ರೀತಿಯಲ್ಲಿ ಪ್ರಯತ್ನ ಮಾಡಿ ಇದನ್ನು ಪರಿಹಾರ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಸರ್ಕಾರ ಏಕೋ ಇದನ್ನು ಬಹಳ ನಿಧಾನಗತಿಯಲ್ಲಿ ಮಾಡುತ್ತಿದೆ ಎಂದು ಅನಿಸುತ್ತಿದೆ. ಏಕೆಂದರೆ, ದಿನಾಂಕ 02–10–2014ರಂದು ಜಾರಿಗೆ ತಂದಿರುವ ಸ್ವಚ್ಛ ಭಾರತ ಅಭಿಯಾನದಲ್ಲಿ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯನ್ನು ಪ್ರಾರಂಭ ಮಾಡಿದರು. ಅದಕ್ಕು ಮುಂಚೆ ಕೂಡ ಸ್ಥಳೀಯ ಸಂಸ್ಥೆಗಳಲ್ಲಿ cess ಮುಂತಾದವುಗಳನ್ನು ಸಂಗ್ರಹ ಮಾಡಲಾಗುತ್ತಿತ್ತು. ಅದರ ಒಂದು ದೊಡ್ಡ awareness ಅನ್ನು 2014ರಲ್ಲಿ ಪ್ರಾರಂಭ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಯಿತು. ಆದರೆ ಇದನ್ನು ಮಾಡಬೇಕೆಂದು ಎರಡು ವರ್ಷದ ನಂತರ ದಿನಾಂಕ 03–12–2016ರಂದು ರಾಜ್ಯಸರ್ಕಾರದಿಂದ ಪತ್ರವೊಂದನ್ನು ಹೊರಡಿಸಲಾಯಿತು. ಒಟ್ಟು 274 ಸಂಸ್ಥೆ ಇದೆ. ಇದರಲ್ಲಿ 56 ಸಂಸ್ಥೆಗಳಿಗೆ ಒಂದು ಪೈಸೆ ಹಣವನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ. 09 ಸಂಸ್ಥೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅವುಗಳೆಂದರೆ, ಹೊಳಲ್ಕೆರೆ, ಹೊಸದುರ್ಗ, ಶಿರಾಳಕೊಪ್ಪ, ಯಳಂದೂರು, ಸಕಲೇಶಪುರ ಇವರೆಲ್ಲರೂ ಒಂದು ಪೈಸೆ ಹಣವನ್ನೂ ಖರ್ಚು ಮಾಡಿಲ್ಲ. 70 ಸಂಸ್ಥೆಯವರು ಯೋಜನಾ ವರದಿಯನ್ನು ಕೊಡಬೇಕೆಂದು ದಿನಾಂಕ 02–10–2016ರಂದು ಪತ್ರವೊಂದನ್ನು ಬರೆದಾಗ 70 ಸಂಸ್ಥೆಯವರು ಒಂದು ದೊಡ್ಡ ಉನ್ನತಾಧಿಕಾರ ಸಮಿತಿ ಇದೆ, ಒಂದು ಆ ಸಮಿತಿಯವರು ಅನುಮೋದನೆ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಅವರು ಇನ್ನೂ ಏನನ್ನೂ ಪ್ರಾರಂಭ ಮಾಡಿಲ್ಲ. ನಾಲ್ಕನೆಯದಾಗಿ 24 ಸಂಸ್ಥೆಗಳು ಪರಿಶೀಲನೆಯಲ್ಲಿದೆ. ಇನ್ನು 125 ಸಂಸ್ಥೆಗಳ ಬಗ್ಗೆ ಏನಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಒಟ್ಟು 46,624 ಲಕ್ಷ ರೂಪಾಯಿಗಳು ಬಿಡುಗಡೆಯಾಗಿತ್ತು. ಆ ಪೈಕಿ 25,687 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 21,937 ಅಂದರೆ 219 ಕೋಟಿ ಹಣ ಉಳಿದಿದೆ. ಯಾವುದಾದರೂ ಒಂದು ಕಾಮಗಾರಿ ಹಣ ಇಲ್ಲದಿದ್ದರೆ ನಿಂತು ಹೋಗುತ್ತದೆ. ಹಣವಿದ್ದರೂ ಹೀಗೇಕೆ ಆಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ನನ್ನ ಪ್ರಶ್ನೆಯೇನೆಂದರೆ, ವೈಜ್ಞಾನಿಕವಾಗಿ ಪ್ರತಿ ಸ್ಥಳೀಯ ಸಂಸ್ಥೆಗಳಲ್ಲಿ ಎಷ್ಟು ಟನ್ ಕಸ ಉತ್ಪತ್ತಿಯಾಗುತ್ತದೆ? ಅದರ ವಿಲೇವಾರಿಯನ್ನು ಹೇಗೆ ಮಾಡಬೇಕು? ಇದನ್ನು ವಿಜ್ಞಾನ ಎಂದು ಹೇಳುತ್ತಾರೆ. ಕಸವನ್ನು ತೆಗೆದುಕೊಂಡು ಹೋಗಿ ಸುರಿಯುವುದಲ್ಲ. ಈ ರೀತಿ ಮಾಡಬಹುದೇ? ಇದು ಮೊದಲನೆಯದು. ಎಲ್ಲಾ ಕಡೆಗಳಲ್ಲೂ Environmental Engineers and Health Inspectors ಇರಬೇಕು. ಎಷ್ಟು ಜನರು ನೇಮಕವಾಗಿದ್ದಾರೋ ಗೊತ್ತಿಲ್ಲ. ಇವತ್ತಿನ ದಿವಸ Environmental Engineers ಗೆ ಕೆಲಸವೇನೆಂದರೆ ಪಿ.ಎ ಆಗಿಯೋ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿಯೋ ಕೆಲಸ ಮಾಡುತ್ತಾರೆ ಹೊರತು ಪರಿಸರ ಇಂಜಿನಿಯರ್‌ಗೂ ಕೆಲಸ ಕೊಡುವುದಿಲ್ಲ Health Inspectors ಗೂ ಯಾವುದೆ ಕೆಲಸ ಕೊಡುವುದಿಲ್ಲ. ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿ ಎಲ್ಲಿಗೋ ಹೋಗುವುದು ಇಷ್ಟನ್ನೇ ಮಾಡುತ್ತಿದ್ದಾರೆ. ನಿರ್ದಿಷ್ಟವಾಗಿ ಜವಾಬ್ದಾರಿ ಕೊಡುವುದು, ಎಲ್ಲಿ ಪರಿಸರ ಇಂಜಿನಿಯರ್ಸ್ ಇಲ್ಲ ಅವರನ್ನು ನೇಮಕ ಮಾಡುವರೇ? ಮೂರನೆಯದಾಗಿ ಸಾಮಾನ್ಯವಾಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳು ಪ್ರಗತಿ ಪರಿಶೀಲನೆ ಮಾಡುತ್ತಾರೆ ಹಾಗು ಮಾನ್ಯ ಸಚಿವರು ಹೋದಾಗ ಪ್ರಗತಿ ಪರಿಶೀಲನೆ ಮಾಡುತ್ತಾರೆ. ಅದರಲ್ಲಿ ಕಸ ಸುರಿಯುವಂತಹ ಘಟಕಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ ಇದರ ಮೇಲೆ ನೀವು ಎಷ್ಟು ಬೇಕಾದರೂ ಖರ್ಚು ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂದರೆ ಆರೋಗ್ಯಕ್ಕೆ, ನೀರಾವರಿಗೆ. ಇದೊಂದು ಚೆನ್ನಾಗಿಲ್ಲದಿದ್ದರೆ ಎಲ್ಲರ ಆರೋಗ್ಯವೂ ಹಾಳಾಗುತ್ತದೆ. ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ಜಗಳಗಳಾಗುತ್ತವೆ. ಇದನ್ನು ತಪ್ಪಿಸುವುದಕ್ಕೆ ಯಾವ ವ್ಯವಸ್ಥೆಗಳನ್ನು ಮಾಡುತ್ತೀರಿ ಎಂದು ಕೇಳಬಯಸುತ್ತೇನೆ.

**ಶ್ರೀ ಈಶ್ವರ ಬಿ. ಖಂಡ್ರೆ:-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರು ನಮ್ಮ ಗಮನಕ್ಕೆ ತಂದಿರುವ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರ 274 ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ವಹಿಸಿದ್ದೇವೆ. ಇವತ್ತಿನ ದಿವಸ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಸ್ವಚ್ಛ ಭಾರತ ಅಭಿಯಾನದ ರೀತಿ ರಾಜ್ಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆಗಾಗಿ ಒಂದು ವಿಸ್ತೃತವಾದ ಯೋಜನಾ ವರದಿಯನ್ನು ತಯಾರು ಮಾಡಿ, ರಾಜ್ಯ ಮಟ್ಟದಲ್ಲಿ ಒಂದು ಉನ್ನತಾಧಿಕಾರದ ಸಮಿತಿ ಇದೆ. ಆ ಸಮಿತಿಯಲ್ಲಿ ವಿಸ್ತೃತವಾದ ಯೋಜನಾ ವರದಿಯನ್ನು ತಯಾರು ಮಾಡಿ ಕಳುಹಿಸಿದ್ದಾರೆ. ಅದು feasible ಇದೆಯೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಅದಕ್ಕೆ ಅನುಮೋದನೆ ಮಾಡಿ ಕೇಂದ್ರ ಸರ್ಕಾರ ಶೇ.35 ರಷ್ಟು ಅನುದಾನವನ್ನು ಕೊಡುತ್ತದೆ, ಮೂರನೇ ಒಂದು ಭಾಗ ರಾಜ್ಯಸರ್ಕಾರವು ಕೊಡುತ್ತದೆ, ಬಾಕಿ ಹಣವನ್ನು ಸ್ಥಳೀಯ ಸಂಸ್ಥೆಗಳು ಕೊಡುತ್ತವೆ. ಇದೊಂದು ನಿರಂತರವಾದ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಸ್ವಲ್ಪ ವಿಳಂಬವಾಗಿದ್ದಕ್ಕೆ ಕಾರಣವೇನೆಂದರೆ, ಯಾವುದೇ ಯೋಜನೆಯನ್ನು ಅನುಷ್ಠಾನಕ್ಕೆ ತಂದ ನಂತರ ಅದು ನಡುನಡುವೆ ನಿಲ್ಲಬಾರದು. ಇದು ಅತ್ಯಂತ ಮಹತ್ವದ್ದಾದುದಾಗಿದೆ. ಇವತ್ತಿನ ದಿವಸ ಸುಮಾರು ಶೇ.40 ರಷ್ಟು ಜನರು ನಗರಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಘನತ್ಯಾಜ್ಯ ವಿಲೇವಾರಿ ಮಾಡುವುದು ನಮ್ಮೆಲ್ಲರಿಗೂ ಸವಾಲಾಗಿದೆ. ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕೆಂಬುದಕ್ಕೆ ನಮ್ಮ ಇಲಾಖೆ ಸುಮಾರು ಸಲ ಸ್ಥಳೀಯ ಮಟ್ಟಕ್ಕೆ ಅನುಗುಣವಾಗಿ ಡಿಪಿಆರ್ ಅನ್ನು ತಯಾರು ಮಾಡಿದೆ. ಅವುಗಳಲ್ಲಿ 70 ಮಾತ್ರ ಈಗಾಗಲೇ ಅನುಮೋದನೆಗೊಂಡಿವೆ. ಬಾಕಿ ಉಳಿದ ಕೆಲವು ಕಡೆಗಳಲ್ಲಿ ನೆಲಭರ್ತಿ ಜಾಗಗಳ ಕೊರತೆ ಇದೆ, ಕೆಲವು ಕಡೆ ಸ್ಥಳೀಯವಾಗಿ ಸಮಸ್ಯೆಗಳಿವೆ, ಅವರೆಲ್ಲರಿಗೆ ವಿಶೇಷವಾದಂತಹ ಸೂಚನೆ, ಮಾರ್ಗಸೂಚಿಗಳನ್ನು ಈಗಾಗಲೆ ಕೊಟ್ಟಿದ್ದೇವೆ. ಇದರ ನಿಟ್ಟಿನಲ್ಲಿ ಹಿಂದೆಯೂ ಮಾನ್ಯ ಸಚಿವರು ನಮ್ಮ ಗಮನಕ್ಕೆ ತಂದಂತೆ ಹಳೆಯದಾಗಿ ಘನತ್ಯಾಜ್ಯ ವಿಲೇವಾರಿಗೆ ಏನು ಅನುದಾನವನ್ನು SFC (State Finance Commission) ಯಲ್ಲಿ, CMSMTDP (Chief Minister's Small and Medium Towns Development Programme) ಯಲ್ಲಿ ಕೊಟ್ಟಿದ್ದೇವೆ, 14ನೇ ಹಣಕಾಸು ಆಯೋಗದಲ್ಲಿ ಕೊಟ್ಟಿದ್ದೇವೆ, 13ನೇ ಹಣಕಾಸು ಆಯೋಗದಲ್ಲಿ ಕೊಟ್ಟಿದ್ದೇವೆ. ಕೆಲವೊಂದು ಸ್ಥಳೀಯ ಸಂಸ್ಥೆಗಳು ಅದನ್ನು ಬಳಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಂಡಿವೆ, ಕೆಲವು ಸ್ಥಳೀಯ ಸಂಸ್ಥೆಗಳು ಅಲ್ಲಿ ಅದಕ್ಕೆ ಉಪಯೋಗವಾಗುವುದಿಲ್ಲ ಎನ್ನುವಂತಹ ರೀತಿಯಲ್ಲಿ ಇಟ್ಟಿದ್ದಾರೆ. ಈಗ ನಿರ್ವಹಣೆ ಮಾಡುವುದಕ್ಕೆ ಹೊಸದಾಗಿ O & M (Operation and Maintenance) ಇದೆ. ಒಂದು ವರ್ಷಕ್ಕೆ ನಿರ್ವಹಣೆ ಮಾಡಲು ಒಂದು ಕೋಟಿ ರೂಪಾಯಿ ಅನುದಾನವನ್ನು ಖರ್ಚು ಮಾಡಿದರೆ ಕನಿಷ್ಟ ಶೇ. 50 ರಷ್ಟಾದರೂ ವಾಪಸ್ ಬರಬೇಕು. ನಾವು ಇವತ್ತಿನ ದಿವಸ ಏನು ಮೆಷಿನರಿ ತೆಗೆದುಕೊಳ್ಳುತ್ತಿದ್ದೇವೆ, ಹೊಸದಾಗಿ ಸಿಬ್ಬಂದಿ ವರ್ಗವನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಆ ನೇಮಕಾತಿ ಮಾಡಿಕೊಳ್ಳುವಂತಹದ್ದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಕೂಡ ಗಮನಿಸಬೇಕಾಗುತ್ತದೆ. ಏಕೆಂದರೆ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲ ಏನಿದೆ ಅದರ ಅಡಿಯಲ್ಲೇ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರ ಪ್ರತಿವರ್ಷ ಅದಕ್ಕೆ ಅನುದಾನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ತಯಾರಿಸುತ್ತಿರುವ ವಿಸ್ತೃತವಾದ ಯೋಜನಾ ವರದಿಯು ಒಳ್ಳೆಯ ರೀತಿಯಿಂದ ಅನುಷ್ಠಾನಕ್ಕೆ ಬರುವ ನಿಟ್ಟಿನಲ್ಲಿ ಇದನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನಕ್ಕೆ ತರುತ್ತಿದ್ದೇವೆ. ಇದನ್ನು ಮೂರು ತಿಂಗಳ ಒಳಗಾಗಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ DPR (Detailed Project Report) ಗಳನ್ನು ಅಂತಿಮವಾಗಿ ತಯಾರು ಮಾಡಿ ಅದನ್ನು ಅನುಮೋದನೆ ಮಾಡಿ ಅನುಷ್ಠಾನಕ್ಕೆ ತರಲು ಮತ್ತು ಉಳಿಕೆಯಾಗಿರುವ ಅನುದಾನವನ್ನು ಪ್ರತ್ಯೇಕವಾಗಿ ಘನತ್ಯಾಜ್ಯ ವಿಲೇವಾರಿಗೆ ಮಾತ್ರ ಅವರು ಉಪಯೋಗ ಮಾಡಿಕೊಳ್ಳಬೇಕೆಂದು ಸೂಚನೆಯನ್ನು ಕೊಟ್ಟು, ಅದನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮನೆ-ಮನೆಗಳಿಂದ ಕಸವನ್ನು ವಿಲೇವಾರಿ ಮಾಡುವಂತಹದ್ದು, ಮೂಲದಲ್ಲಿಯೇ ಕಸವನ್ನು ಬೇರ್ಪಡಿಸಿ ಮಾಡುವಂತಹದ್ದು, ಹಸಿ ಕಸ, ಒಣ ಕಸ ಮತ್ತು ಪ್ಲಾಸ್ಟಿಕ್ ಇರುವಂತಹದ್ದನ್ನು RDF (Refuse-derived fuel) ಮುಖಾಂತರ ಬೇರೆ ರೀತಿಯಲ್ಲಿ ವಿಲೇವಾರಿ ಮಾಡುವಂತಹದ್ದು ಇಂತಹ ಅನೇಕ ಸೂಚನೆಗಳನ್ನು ಕೊಟ್ಟಿದ್ದೇವೆ. DPR preparation ಉಳಿದ ಕಡೆಗಳಲ್ಲಿ ನಡೆಯುತ್ತಿದೆ. ಅದನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಲಿಚ್ಛಿಸುತ್ತೇನೆ.

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, ಉನ್ನತಾಧಿಕಾರದ ಸಮಿತಿಯವರು ತಡ ಮಾಡುವ ಹಾಗೆ ಇಲ್ಲ. ಈಗ ಉಳಿದಿರುವ ಸುಮಾರು 219 ಕೋಟಿ ರೂಪಾಯಿಗೆ ಸಂಬಂಧಿಸಿದಂತೆ ಇವರಿಗೆ ಕಸವನ್ನು ಉಳಿಸಬಾರದು ಎಂದು ಹೇಳಿದ್ದೇವೆ ಹೊರತು ಹಣವನ್ನು ಉಳಿಸುವುದಕ್ಕೆ ಇವರಿಗೆ ಹೇಳಿಲ್ಲ. ಹಾಗಾಗಿ ಇವರು ಹಣವನ್ನು ಉಳಿಸಬಾರದು. ಶಿವಮೊಗ್ಗದಲ್ಲಿ Chamber of Commerce ನ ಅಧ್ಯಕ್ಷರಾಗಿರುವ ಶ್ರೀ ಅರುಣ್ ಎಂಬುವವರು ಒಬ್ಬ ತರುಣರಾಗಿದ್ದು, ಅವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಸ್ಥಳೀಯ ಜನರನ್ನೆಲ್ಲಾ ಸೇರಿಸಿಕೊಂಡು ಅವರೇ ಒಂದು machine ತಂದು ಆ machine ನಲ್ಲಿ ಸುಮಾರು 100 ಟನ್ ಕಸವನ್ನು ವಿಲೇವಾರಿ ಮಾಡುವುದಕ್ಕೆ ಮುನ್ಸಿಪಲ್‌ನಲ್ಲಿ ಒಂದು ನಿವೇಶನವನ್ನು ತೆಗೆದುಕೊಂಡು ಮಾಡಿದ್ದಾರೆ. ಹಾಗೆ local participation ಮಾಡುವುದಕ್ಕೂ ಇವರು ಆಹ್ವಾನವನ್ನು ಕೊಡಬಹುದು. ಏಕೆಂದರೆ ನಿಮ್ಮಲ್ಲಿ ಹಣವಿದೆ ಆದರೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ infrastructure ಇಲ್ಲ. Scientific ಆಗಿ ಅದರಿಂದ ಬೇರೆ ಬೇರೆ ಏನನ್ನೋ ತಯಾರು ಮಾಡುತ್ತೇವೆಂದು ಹೇಳಿದ್ದಾರೆ ನನಗೆ ಅದರ ಮಾಹಿತಿ ಇಲ್ಲ. ಆದರೆ ಶಿವಮೊಗ್ಗದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅದನ್ನು ಸುಟ್ಟು ಹಾಕಿದರೆ ಅತ್ಯಂತ ಕಡಿಮೆ ತ್ಯಾಜ್ಯ ಆಗಿ ಉಳಿಯುತ್ತದೆ ಎಂಬುದನ್ನು ಕಣ್ಣಾರೆ ಕಂಡಿದ್ದೇನೆ. ಆ ರೀತಿ ಮಾಡುವುದಕ್ಕಾದರೂ ಸರ್ಕಾರಕ್ಕೆ ಮನಸ್ಸಿದೆಯೇ? ಉನ್ನತಾಧಿಕಾರ ಸಮಿತಿಯೆಂದರೆ ಯಾರು ಎಂಬುದನ್ನು ದಯಮಾಡಿ ಸ್ಪಷ್ಟಪಡಿಸಿ.

**(317) 21-3-2017/12.40/ಡಿಎಸ್-ಎಕೆ**

**ಶ್ರೀ ಭಾನುಪ್ರಕಾಶ(ಮುಂದು):-**

ಆ ತರಹ ಮಾಡುವುದಕ್ಕೆ ಸರ್ಕಾರಕ್ಕೆ ಮನಸ್ಸು ಇದೆಯೇ? ಉನ್ನತ ಅಧಿಕಾರದ ಸಮಿತಿ ಎಂದರೆ ಯಾರು ಎಂಬುದನ್ನು ದಯಮಾಡಿ ಸ್ಪಷ್ಟ ಮಾಡಿ.

**ಶ್ರೀ ಈಶ್ವರ ಬಿ.ಖಂಡ್ರೆ:-** ಮಾನ್ಯ ಸಭಾಪತಿಯವರೆ, ಈಗಾಗಲೇ ನಮ್ಮ ಕರ್ನಾಟಕ ರಾಜ್ಯದಲ್ಲಿ ನಗರಾಭಿವೃದ್ಧಿ ಇಲಾಖೆ ವತಿಯಿಂದ ಬಿಬಿಎಂಪಿ ಗೆ ಹೊರತುಪಡಿಸಿ ಏನು ನಮ್ಮಲ್ಲಿ ಸ್ಥಳೀಯ ಸಂಸ್ಥೆಗಳಿವೆ ಅದರಲ್ಲಿ ದಿನಾ ಸುಮಾರು 6,000 ಮೆಟ್ರಿಕ್ ಟನ್ ಘನ ತಾಜ್ಯ ಉತ್ಪಾದನೆ ಆಗುತ್ತಿದೆ. 6,000 ಮೆಟ್ರಿಕ್ ಟನ್‌ನಲ್ಲಿ ಶೇಕಡ 80 ರಷ್ಟು ನಾವು door-to-door ಘನ ತ್ಯಾಜವನ್ನು ಸಂಗ್ರಹಣೆ ಮಾಡುತ್ತೇವೆ. ಈಗಾಗಲೇ ನಾವು 1500 ಮೆಟ್ರಿಕ್ ಟನ್ ಕಾಂಪೋಸ್ಟ್ ತಯಾರು ಮಾಡುತ್ತಿದ್ದೇವೆ. ಬಾಕಿ 4500 ಟನ್ ಕಾಂಪೋಸ್ಟ್ ತಯಾರು ಮಾಡಿ ವಿಲೇವಾರಿ ಮಾಡಬೇಕಾಗಿದೆ. 1500 ಮೆಟ್ರಿಕ್ ಟನ್‌ಗೆ ಡಿ.ಪಿ.ಆರ್. ತಯಾರು ಮಾಡುವಂತಹ ಹಂತದಲ್ಲಿದೆ. ಉನ್ನತ ಅಧಿಕಾರದ ಸಮಿತಿ ಎಂದರೆ ನಮ್ಮ ಕಾರ್ಯದರ್ಶಿ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಪ್ರತಿಯೊಂದು ಡಿ.ಪಿ.ಆರ್. ಗಳನ್ನು ಬಹಳಷ್ಟು ಅಧ್ಯಯನ ಮಾಡಿ ಮುಂದಿನ ದಿನಮಾನಗಳಲ್ಲಿ ಅದನ್ನು ನಾವು ನಿರ್ವಹಣೆ ಮಾಡಬೇಕಾಗುತ್ತದೆ. ಡಿ.ಪಿ.ಆರ್. ನಿರ್ವಹಣೆ ಮಾಡುವುದಕ್ಕೆ ಅದು feasible ಇರಬೇಕು, ನಿರ್ವಹಣೆ ಮಾಡುವಂತಹ ಪರಿಸ್ಥಿತಿಯಲ್ಲಿರಬೇಕು. ಪುನಃ ಪ್ರತಿ ವರ್ಷ ಹಣ ಕೇಳಿದರೆ ಈಗೇನು D.P.R. (Detailed

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Project Report) ತಯಾರು ಮಾಡುತ್ತಾರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದರೆ ಸೆಸ್ ಮುಖಾಂತರವಾಗಲಿ, ಇನ್ನಿತರ ಆದಾಯದ ಮುಖಾಂತರವಾಗಲಿ ತನ್ನದೇ ಆದಂತಹ ಸ್ವಂತ ಆದಾಯವನ್ನು ಸ್ಥಳೀಯ ಸಂಸ್ಥೆಗಳು ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಮಾಡಿಕೊಂಡು ನಾವು ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ feasible ಇರುವಂತಹ ಡಿ.ಪಿ.ಆರ್. ತಯಾರು ಮಾಡಿ ಕಳುಹಿಸಬೇಕೆಂದು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ಕೊಟ್ಟಿದ್ದೇವೆ. ಆದಷ್ಟು ಬೇಗ ಎಲ್ಲಾ ಡಿ.ಪಿ.ಆರ್. ಗಳನ್ನು ಈಗೇನು ಅರ್ಧ ಮಾಡಿ ಮುಗಿಸಿದ್ದೇವೆ, ಇನ್ನು ಅರ್ಧ ಸ್ಥಳೀಯ ಸಂಸ್ಥೆಗಳಲ್ಲಿ ಡಿ.ಪಿ.ಆರ್. ಗಳಿಗೆ ಅಂತಿಮವಾದ ಅನುಮೋದನೆ ಕೊಡಬೇಕಾಗಿದೆ. ಅದನ್ನು ಅನುಮೋದನೆ ಕೊಟ್ಟು ಜಾರಿಗೆ ಮಾಡುವಂತಹ ಕೆಲಸ ಮಾಡುತ್ತೇವೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ,.....

**ಸಭಾಪತಿಯವರು:–** ಈ ಪ್ರಶ್ನೆಗೆ 20 ನಿಮಿಷ ಸಮಯ ಕೊಟ್ಟಿದ್ದೇನೆ, ಸಾಕು. ನೀವು ಮಾತನಾಡುವುದಾದರೆ ಬೇರೆ ರೂಪದಲ್ಲಿ ನೋಟಿಸ್ ಕೊಡಿ. ನೋಟಿಸ್ ಕೊಟ್ಟರೆ ಅವಕಾಶ ಕೊಡುತ್ತೇನೆ. ಪ್ರಶ್ನೆ ಕೇಳಿದವರಿಗೆ ಮಾತ್ರ ಅವಕಾಶ ಕೊಡುತ್ತಿದ್ದೇನೆ. ಬೇರೆಯವರಿಗೆ ಅವಕಾಶ ಕೊಡುತ್ತಿಲ್ಲ.

**ಪ್ರಶ್ನೆ ಸಂಖ್ಯೆ: 953**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಕೆಲವು ವ್ಯತ್ಯಾಸಗಳಿವೆ. ನಾನು ನಗರಸಭೆಗೆ ಭೇಟಿ ಕೊಡುವಂತಹ ಸಂದರ್ಭದಲ್ಲಿ ಸುಮಾರು 84 ಖಾಲಿ ಹುದ್ದೆಗಳ ಸಂಖ್ಯೆ ಕೊಟ್ಟಿದ್ದರು. ಮಾನ್ಯ ಸಚಿವರು ಉತ್ತರದಲ್ಲಿ ಮಡಿಕೇರಿ ನಗರಸಭೆಯಲ್ಲಿ 36, ಕುಶಾಲನಗರ ಪಟ್ಟಣ ಪಂಚಾಯಿತಿಯಲ್ಲಿ 6 ಖಾಲಿ ಹುದ್ದೆಗಳು ಇವೆ ಎಂದು ಕೊಟ್ಟಿದ್ದಾರೆ. ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ ಎಲ್ಲಾ ಹುದ್ದೆಗಳು ಭರ್ತಿಯಾಗಿವೆ ಎಂದು ಕೊಟ್ಟಿದ್ದಾರೆ. ಸೋಮವಾರಪೇಟೆ ಪಟ್ಟಣ ಪಂಚಾಯಿತಿಯಲ್ಲಿ 9 ಖಾಲಿ ಹುದ್ದೆಗಳು ಇವೆ ಎಂದು ಹೇಳಿದ್ದಾರೆ. ಆದರೆ ನಾನು ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅವರು ಮಾಹಿತಿ ಕೊಟ್ಟಂಥ ಪ್ರಕಾರ ಎಲ್ಲವೂ ವ್ಯತ್ಯಾಸದಲ್ಲಿದೆ. ಕುಶಾಲ ನಗರದಲ್ಲಿ 13 ಹುದ್ದೆಗಳು, ಸೋಮವಾರಪೇಟೆಯಲ್ಲಿ 17 ಹುದ್ದೆಗಳು, ವಿರಾಜಪೇಟೆಯಲ್ಲಿ 7 ಹುದ್ದೆಗಳು ಖಾಲಿ ಇವೆ. ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯ ವ್ಯತ್ಯಾಸದ ಉತ್ತರಗಳನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ 3012 ಹುದ್ದೆಗಳಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ನೇಮಕಾತಿ ಪ್ರಕ್ರಿಯೆ ಮುಗಿಸುವುದಕ್ಕೆ ಅವಧಿಯನ್ನು ನಿಗದಿಪಡಿಸಿದ್ದಾರೆಯೇ?

**ಶ್ರೀ ಈಶ್ವರ್ ಬಿ.ಖಂಡ್ರೆ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಕ್ರಮ ಜರುಗಿಸಿದೆ. ಆರ್ಥಿಕ ಇಲಾಖೆ ಅನುಮೋದನೆ ಕೊಟ್ಟಿದೆ. ಸುಮಾರು 2600 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 1080 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಿದ್ದೇವೆಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಅನುಮತಿಯನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಪರಿಸರ ಅಭಿಯಂತರರು 20 ಜನ ಬಂದು ನಮ್ಮ ಇಲಾಖೆಯಲ್ಲಿ ನೇಮಕಾತಿ ಆಗಿದ್ದಾರೆ. ಈಗಾಗಲೇ 'ಡಿ' ದರ್ಜೆ ಹುದ್ದೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ಅವರಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಪೌರ ಕಾರ್ಮಿಕರನ್ನು ಖಾಯಂ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಅದನ್ನು ಮಾಡುವಂತಹ ಪ್ರಕ್ರಿಯೆ ಜಾರಿಯಲ್ಲಿದೆ. ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ನಾವೇ ಹೇಳಿಕೆಯನ್ನು ಕೊಟ್ಟಿದ್ದೇವೆ. ಕೊಡಗು ಜಿಲ್ಲೆಯಲ್ಲಿ ಗ್ರೂಪ್-ಎ, ಗ್ರೂಪ್-ಬಿ ಮತ್ತು ಗ್ರೂಪ್-ಸಿ ಹುದ್ದೆಗಳು ಖಾಲಿ ಇರುವಂಥದ್ದನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೊಟ್ಟಿರುವ ಮಾಹಿತಿಗೂ ನಾವು ಕೊಟ್ಟಿರುವ ಮಾಹಿತಿಗೂ ಸ್ವಲ್ಪ ವ್ಯತ್ಯಾಸ ಇದೆ. ನಮಗೆ ಇಲಾಖೆ ವತಿಯಿಂದ ಕೊಟ್ಟಿರುವ ಮಾಹಿತಿ ಸರಿಯಾಗಿದೆ. ಆ ಮಾಹಿತಿಯಲ್ಲಿ ಏನಾದರೂ ವ್ಯತ್ಯಾಸ ಇದ್ದರೆ, ತಪ್ಪಾದ ಮಾಹಿತಿಯನ್ನು ನಮ್ಮ ಅಧಿಕಾರಿಗಳೇನಾದರೂ ಕೊಟ್ಟಿದ್ದರೆ ಅವರ ಮೇಲೆ ಶಿಸ್ತು ಕ್ರಮ ಜರುಗಿಸುವ ಕೆಲಸ ನಾನು ಮಾಡುತ್ತೇನೆ. ಅವರಿಗೆ ಎಲ್ಲಿ confusion ಆಗಿರಬಹುದೆಂದರೆ, 'ಡಿ' ದರ್ಜೆ ಹುದ್ದೆಗಳೇನಿವೆ ಆ ಹುದ್ದೆಗಳು ಮಂಜೂರಾಗಿರುವಂತಹ ಹುದ್ದೆಗಳಿಗಿಂತ ಹೆಚ್ಚು ಜನ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ ಇವತ್ತಿನ ದಿವಸ ಆ ಹುದ್ದೆಗಳನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಹೊರ ಗುತ್ತಿಗೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅವರಿಗೆ ನಾವು ಅವಕಾಶ ಕೊಟ್ಟಿದ್ದೇವೆ. ಗ್ರೂಪ್ ಎ, ಬಿ, ಸಿ, ಹುದ್ದೆಗಳಲ್ಲಿ ಏನಾದರೂ ಅನುಮೋದನೆಯಾದ, ಮಂಜೂರಾದ ಹುದ್ದೆಗಳು ನಾವೇನು ಖಾಲಿ ಇವೆ ಎಂದು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ ಅದರಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ. ತಪ್ಪು ಮಾಹಿತಿ ಕೊಟ್ಟವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ:1016**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ:ಸಿ.ಆರ್.ಮನೋಹರ್‌ರವರು ಗೈರು ಹಾಜರಾಗಿದ್ದರು)**

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೆ, ಅವರ ಪರವಾಗಿ ನಾನು ಪ್ರಶ್ನೆ ಕೇಳುತ್ತೇನೆ.

**ಸಭಾಪತಿಯವರು:–** ಆ ರೀತಿ ಆಗುವುದಿಲ್ಲ. ನೀವು ಕಳುಹಿಸಿರುವ ಚೀಟಿಯನ್ನು ನಾನು ನೋಡಿದೆ. ಸದಸ್ಯರು ಸಹಿ ಮಾಡಿರುವುದ್ದಕ್ಕೆ ಮಾತ್ರ ಇಲ್ಲಿ ಬೆಲೆ.

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೆ, ಎರಡು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ಆಗುವುದಿಲ್ಲ, ದಯಮಾಡಿ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ತಡೆಹಿಡಿಯಲಾದ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

**ಪ್ರಶ್ನೆ ಸಂಖ್ಯೆ: 820**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯಡಿ ವಿತರಿಸಲಾಗುತ್ತಿರುವ "ಹೆಸರುಕಾಳು" ಪ್ಯಾಕೆಟ್‌ನಲ್ಲಿ 1 ಕೆ.ಜಿ. ಬದಲು 750 ಗ್ರಾಂ, 800 ಗ್ರಾಂ ಅಥವಾ 1 ಕೆ.ಜಿ. ಗಿಂತ ಕಡಿಮೆ ಪ್ರಮಾಣದಲ್ಲಿ ಹೆಸರುಕಾಳನ್ನು ವಿತರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. 'ಇಲ್ಲ' ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ ನನಗೆ ಆಶ್ಚರ್ಯವಾಯಿತು. ಇದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡುತ್ತಿತ್ತು. ನಾನು ನೋಡೋಣವೆಂದು ಹೆಸರುಕಾಳು ಪ್ಯಾಕೆಟ್‌ನ್ನು ತರಿಸಿ ತೂಕವನ್ನು ಮಾಡುವಂತಹ ಕೆಲಸ ಮಾಡಿದೆ. ತೂಕ ಮಾಡಿದಂತಹ ಸಂದರ್ಭದಲ್ಲಿ ಅದು 750 ಗ್ರಾಂ, 800 ಗ್ರಾಂ ಇತ್ತು. ನಾನು ಮೊನ್ನೆ ಮಾನ್ಯ ಸಚಿವರ ಹತ್ತಿರ ಖುದ್ದಾಗಿ ಮಾತನಾಡಿದಾಗ ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಮಾನ್ಯ ಸಚಿವರು ಊರಿನಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ. ಅವರು ನಮ್ಮ ರಾಜ್ಯದಲ್ಲಿದ್ದರೋ ಗೊತ್ತಿಲ್ಲ. ವಿಶ್ವವಾಣಿ ಪತ್ರಿಕೆಯಲ್ಲಿ 'ಬಡವರ ಬೇಳೆಯಲ್ಲೂ ಮೋಸ ಭಾಗ್ಯ' ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. 750 ಗ್ರಾಂ ಇದೆ, ಯಾವ ರೀತಿ ಒಳಗಡೆ ಮೋಸ ಆಗುತ್ತಿದೆ ಎಂಬುದನ್ನು ಸರ್ಕಾರ ಗಮನಿಸಬೇಕೆಂದು ಹೇಳಿದ್ದಾರೆ. ಆದರೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಇಲ್ಲಿಯವರೆಗೆ ಸರ್ಕಾರ ಗಮನಕ್ಕೆ ತೆಗೆದುಕೊಂಡಿಲ್ಲವೆಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದು ಜವಾಬ್ದಾರಿಯೋ ಬೇಜವಾಬ್ದಾರಿಯೋ ಎಂಬುದು ಗೊತ್ತಿಲ್ಲ. ಮಾನ್ಯ ಸಚಿವರು ನನಗೆ ಮಾಹಿತಿ ಬಂದಿಲ್ಲ, ಈ ರೀತಿ ಆಗಿರುವುದಕ್ಕೆ ಸಾಕ್ಷಿ ಬೇಕು ಎನುವುದನ್ನು ಪ್ರಸ್ತಾಪ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ಹೆಸರುಕಾಳು ಪ್ಯಾಕೆಟ್ ಇದೆ. ಆ ಪ್ಯಾಕೆಟ್‌ನಲ್ಲಿರುವಂಥದ್ದನ್ನು ಮಾನ್ಯ ಸಚಿವರು ನೋಡಬಹುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರು "ಹೆಸರುಕಾಳು" ಪ್ಯಾಕೆಟ್‌ನ್ನು ಸದನದಲ್ಲಿ ಪ್ರದರ್ಶಿಸಿದರು)**

ಈ ಪ್ಯಾಕೆಟ್‌ನ್ನು ನೋಡಿದರೆ ಎಷ್ಟು ಸುಲಭವಾಗಿ ಓಪನ್ ಮಾಡುವಂತಹ ವ್ಯವಸ್ಥೆಯನ್ನು ಇಟ್ಟಿದ್ದಾರೆ. ಹಾಗೆ ಅಷ್ಟೇ ಸುಲಭವಾಗಿ ಅದನ್ನು ಮುಚ್ಚುವಂಥದ್ದನ್ನು ಮಾಡಿದ್ದಾರೆ. ನ್ಯಾಯಬೆಲೆಯ ಅಂಗಡಿಯಲ್ಲಿ ಇದು ಬರುತ್ತಿದೆ. ನ್ಯಾಯಬೆಲೆ ಅಂಗಡಿಯವರನ್ನು ಕೇಳಿದರೆ ಇದು 700 ಗ್ರಾಂ ನಿಂದ 800 ಗ್ರಾಂ ಅಲ್ಲಿಂದಲೇ ಬರುತ್ತಿರುವಂಥದ್ದು ಎಂದು ಹೇಳುತ್ತಾರೆ. ಇಲ್ಲ, ನ್ಯಾಯಬೆಲೆ ಅಂಗಡಿಯಲ್ಲಿ ಎಲ್ಲರೂ ಸೇರಿ ಮೋಸ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದನ್ನು ಸರ್ಕಾರ ಇಲ್ಲಿಯವರೆಗೆ ಏಕೆ ಗಮನಹರಿಸಿಲ್ಲ? ಇಷ್ಟೊಂದು ಜವಾಬ್ದಾರಿಯಲ್ಲಿರುವಂಥವರು ಪತ್ರಿಕೆಯಲ್ಲಿ, ಮಾಧ್ಯಮದ ಮುಖಾಂತರ ಹೇಳಿದರೂ ಕೂಡ ನಮಗೆ ಏನು ಗೊತ್ತಿಲ್ಲ, ಅನ್ಯಾಯವಾಗುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಇಷ್ಟು ವರ್ಷ ಕಾಲ ಸರ್ಕಾರ P.D.S. ಮುಖಾಂತರ carbohydrates ಅಂದರೆ ಅಕ್ಕಿ ಕೊಡುವ ವಿಚಾರ ಮಾತ್ರ ಇತ್ತು. ಈಗ balanced diet ಇರಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಆದೇಶದ ಪ್ರಕಾರ ಈ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ carbohydrates ಜೊತೆಯಲ್ಲಿ ಬಡವರಿಗೆ proteins ಕೂಡ ಸಿಗಬೇಕು, ಆರೋಗ್ಯವಂತರಾಗಿರಬೇಕೆನ್ನುವ ಉದ್ದೇಶದಿಂದ ಈ ಐತಿಹಾಸಿಕ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ. ಕಳೆದ ತಿಂಗಳಿನಿಂದ ನಾವು ಪ್ರಾರಂಭ ಮಾಡಿದ್ದೇವೆ. ಈಗ ನಮ್ಮ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಎಲ್ಲಾ ಗೋದಾಮುಗಳಿಗೆ, ನಮ್ಮ ಡಿಪೋ ಮ್ಯಾನೇಜರ್‌ಗಳಿಗೆ ಆದೇಶ ಮಾಡಿದ್ದೇವೆ. ಅವರಿಗೆ ಎಲ್ಲಿಂದ ಸ್ಟಾಕ್ ಬರುತ್ತದೆ ಅದರ ಪ್ರತಿಯೊಂದು random check ಮಾಡಿ ನಮಗೆ ಅದು ಸರಿ ಇದೆಯೋ ಇಲ್ಲವೋ ಎಂಬ ಮಾಹಿತಿ ಕೊಡಬೇಕು. ಎರಡನೆಯದು, ನ್ಯಾಯಬೆಲೆ ಅಂಗಡಿಯಲ್ಲಿ ಏನಾದರೂ ತೊಂದರೆಯಾದರೆ ಗ್ರಾಹಕರು ದೂರನ್ನು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಬಂದು ಕೊಟ್ಟರೆ ಯಾರು ನಮಗೆ ಸರಬರಾಜು ಮಾಡುತ್ತಾರೆ ಅವರ ವಿರುದ್ಧ ಕಠಿಣವಾದ ಕ್ರಮವನ್ನು ಇಲಾಖೆ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರು ಯಾವ ವಿಚಾರವನ್ನು ಹೇಳಿದ್ದಾರೆ ಅದನ್ನು ನಾನು ಸಾಮಾಜಿಕ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾಲತಾಣದಲ್ಲಿ ನೋಡಿದ್ದೇನೆ, ಒಂದು ಕಡೆ ಓಪನ್ ಮಾಡಿ ಅದರಿಂದ ತೆಗೆದು ಮತ್ತೆ ಅದನ್ನು ತೂಕ ಮಾಡಿರುವ ಚಿತ್ರ ಕೂಡ ಅದರಲ್ಲಿ ಇದೆ. ಪ್ರತಿಯೊಂದು ಗೋದಾಮಿನಲ್ಲೂ ಈ ರೀತಿಯ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರು ಮಾಹಿತಿ ಕೊಟ್ಟಿರುವುದರಿಂದ ನಾವು ಇದರ ಬಗ್ಗೆ ನಮ್ಮ ಎಲ್ಲಾ ಇಲಾಖಾಧಿಕಾರಿಗಳಿಗೂ ಹೇಳಿದ್ದೇವೆ. ಗೋದಾಮಿನಿಂದ ಸರಿಯಾಗಿ ಬರುತ್ತದೆಯೋ ಇಲ್ಲವೋ ಪರಿಶೀಲನೆ ಮಾಡಿ ಎಂದು ಹೇಳಿದ್ದೇವೆ. ಅಲ್ಲಿಂದ ನ್ಯಾಯಬೆಲೆ ಅಂಗಡಿಗೆ ಸರಬರಾಜು ಮಾಡಿ ಅಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಿ ಕಡಿಮೆ ಕೊಟ್ಟರೆ ಗ್ರಾಹಕರು ಜಾಗೃತರಾಗಿ ನಮಗೆ ದೂರನ್ನು ಕೊಟ್ಟರೆ ಸೂಕ್ತ ಕ್ರಮ ಜರುಗಿಸುತ್ತೇವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇಷ್ಟೆ, ಮಾನ್ಯ ಸಚಿವರು ಈಗ ನನ್ನ ಗಮನಕ್ಕೆ ಬಂದಿದೆ, ನಾನು ಅಧಿಕಾರಿಗಳಿಗೆ ಏನು ಮಾಡಬೇಕು ಎಂಬುದನ್ನು ಹೇಳಿದ್ದೇನೆ ಎಂದು ಹೇಳಿದರು.

**(318) 21.03.2017/ 12.50/ ಕೆಹೆಚ್/ಎಕೆ**

**ಶ್ರೀ ಪ್ರಾಣೇಶ್ ಎಂ.ಕೆ (ಮುಂದು):-**

ಈಗ ಮಾನ್ಯ ಮಂತ್ರಿಗಳು ನನ್ನ ಗಮನಕ್ಕೆ ಬಂದಿದೆಂದು ಹೇಳುತ್ತಿದ್ದಾರೆ. ನಾನು ಅಧಿಕಾರಿಗಳಿಗೆ ಅದನ್ನು ಏನು ಮಾಡಬೇಕೆಂದು ಹೇಳಿದ್ದೇನೆ. ಆದರೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ . . . .

**ಸಭಾಪತಿಯವರು:-** ಈಗ ಉತ್ತರವನ್ನು ಬದಲಾವಣೆ ಮಾಡಿದ್ದಾರೆ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದಕ್ಕೋಸ್ಕರ ಕೂಡಲೇ . . . .

**ಸಭಾಪತಿಯವರು:-** ಉತ್ತರವನ್ನು ಬದಲಾವಣೆ ಮಾಡಿಬಿಟ್ಟಿದ್ದಾರೆ. ಶ್ರೀ ಪೂಜಾರಿಯವರೆ ಶ್ರೀ ಪ್ರಾಣೇಶ್ ರವರು ಕೇಳುತ್ತಿದ್ದಾರೆ. ಅವರಿಗೆ ಕೇಳುವುದಕ್ಕೆ ಬಿಡಿ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೆ, ನಾನು ಅದನ್ನೇ ಕೇಳುವುದಕ್ಕೆ ಹೊರಟಿದ್ದೇನೆ. ಅವರು ದೂರು ಕೊಡುವ ತನಕ ಸರ್ಕಾರ ಏಕೆಂದರೆ, ಮಾಧ್ಯಮದವರು ಸಹ ದೂರಿನ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ಕೊಡುವಂತಹ ಒಂದು ವ್ಯವಸ್ಥೆಯಿದೆ. ಆ ವ್ಯವಸ್ಥೆಯೊಳಗೆ ಬಂದಂತಹದ್ದು. ಈಗ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂತ್ರಿಗಳು ಗ್ರಾಹಕರಿಂದ ದೂರು ಬಂದರೆ ನಾವು ಪರಿಶೀಲನೆ ಮಾಡುತ್ತೇವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ಉತ್ತರ ಇನ್ನೂ ಸಮಂಜಸವಾಗಿಲ್ಲ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಪ್ರಶ್ನೆಯ ಬಗ್ಗೆ ultimate ವಿಚಾರಯೇನಿದೆಯೆಂದರೆ, ಜನಸಾಮಾನ್ಯರಿಗೆ ಸರ್ಕಾರದಿಂದ ಕೊಡುವಂತಹ ಪದಾರ್ಥಗಳು ಸರಿಯಾದ ತೂಕದಲ್ಲಿ ಸಿಗಬೇಕೆನ್ನುವ ವಿಚಾರವಷ್ಟೇ. ಈಗ ಇದರ ಬಗ್ಗೆ ಚರ್ಚೆಯಾಗುತ್ತಿದೆ. ನೀವು ಈ ವಿಚಾರದ ಬಗ್ಗೆ ನಮ್ಮ ಗಮನಕ್ಕೆ ತಂದಿದ್ದೀರಿ. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮ ದಾಸ್ತಾನು ಮಳಿಗೆಗೆ ಯಾರು ಪದಾರ್ಥಗಳನ್ನು ಸರಬರಾಜು ಮಾಡುತ್ತಾರೆ. ಅದರಲ್ಲಿ ಏನಾದರೂ ಹೆಚ್ಚು-ಕಡಿಮೆ ಇದ್ದರೆ, ಪ್ರತಿಯೊಂದು ದಾಸ್ತಾನು ಮಳಿಗೆಯಲ್ಲೂ ಪ್ರತಿ ತಿಂಗಳು random check ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಒಂದು ನ್ಯಾಯ ಬೆಲೆ ಅಂಗಡಿಗೆ ಕೊಟ್ಟಾಗ, ನ್ಯಾಯ ಬೆಲೆ ಅಂಗಡಿಯಲ್ಲಿ ಪದಾರ್ಥಗಳನ್ನು ಗ್ರಾಹಕರಿಗೆ ಹೆಚ್ಚು-ಕಡಿಮೆ ಕೊಡುವುದು ಗೊತ್ತಾದರೆ, ಅದು ನಮ್ಮ ಗಮನಕ್ಕೆ ತಂದರೆ ಆ ನ್ಯಾಯ ಬೆಲೆ ಅಂಗಡಿಯ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ. ಸಮಸ್ಯೆಗಳನ್ನು  ಬಗೆಹರಿಸುವುದಕ್ಕೆ ಸರ್ಕಾರ ಇವತ್ತು ಬದ್ಧವಾಗಿದೆ. ನ್ಯಾಯಯುತವಾಗಿ ನ್ಯಾಯಬೆಲೆ ಅಂಗಡಿಯ ಮೂಲಕ ವ್ಯವಸ್ಥೆಯನ್ನು ಮಾಡುತ್ತೇವೆ.

**ಸಭಾಪತಿಯವರು:-** ದೂರುಗಳನ್ನು ಕೊಟ್ಟರೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೆ, ಇವರಿಗೆ ಸರ್ಕಾರಿ ತಾಲ್ಲೂಕು ಕಛೇರಿಯ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲವೇ? ಇವರು ಕೂಡಲೇ ತನಿಖೆಯನ್ನು ಮಾಡಿಸಿ ಕ್ರಮ ತೆಗೆದುಕೊಳ್ಳಬೇಕಲ್ಲವೇ? ದೂರುಗಳು ಬರುವವರೆಗೂ ಕಾಯಬೇಕಾ? ಇದಕ್ಕೆ ಗ್ರಾಹಕರೇ ಬರಬೇಕಾ?

**Mr. CHAIRMAN:** Complaint ಕೊಟ್ಟರೆ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೆ, ನಿಮ್ಮನ್ನು ಕಾಣುವುದಕ್ಕೆ ಮಂತ್ರಿಗಳು ಸಿಗಬೇಕಲ್ಲವೇ? ಸಾಮಾನ್ಯ ಜನರು ದೂರು ಕೊಡುವುದಕ್ಕೆ ಮಾಧ್ಯಮಗಳ ಮುಖಾಂತರ ಬರಬೇಕು. ಸಾಮಾನ್ಯ ಜನರು ಮಂತ್ರಿಗಳನ್ನು ನೇರವಾಗಿ ಭೇಟಿ ಮಾಡುವುದಕ್ಕೆ ಹೇಗೆ ಸಾಧ್ಯ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಶ್ರೀ ಪ್ರಾಣೇಶ್‌ರವರಿಗೆ ನಾನು ಹೇಳುವ ವಿಚಾರವಿಷ್ಟೆ. ನನ್ನ ಗಮನಕ್ಕೆ ಬಂದರೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ಈಗ ದಾಸ್ತಾನು ಮಳಿಗೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರಿಯಾಗಿದೆಯೆಂದು ಲೆಕ್ಕ ಹಾಕೋಣ. ನ್ಯಾಯ ಬೆಲೆ ಅಂಗಡಿಯಲ್ಲಿ 90 ಜನರಿಗೆ ಸರಿಯಾಗಿ ಕೊಡುತ್ತಾರೆ. ಒಬ್ಬರಿಗೆ ಸರಿಯಾಗಿ ಕೊಡುವುದಿಲ್ಲ. ಬಹುಶ: ಈಗ ಶ್ರೀ ಪ್ರಾಣೇಶ್‌ರವರು ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಬಗೆಹರಿಸುವುದಕ್ಕೆ ಸರ್ಕಾರ ತಯಾರಾಗಿದೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ದಿನಾಂಕ: 21ನೇ ಮಾರ್ಚ್ 2017 ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 137 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:- ಕರ್ನಾಟಕ ರಾಜ್ಯದ ಖಾಸಗಿ ಐಟಿಐ ಸಂಸ್ಥೆಗಳಲ್ಲಿ ಎಸ್.ಸಿ.ವಿ.ಟಿ ಅಡಿಯಲ್ಲಿ 2014-15 ಮತ್ತು 2015-16ನೇ ಸಾಲಿನ ಪರೀಕ್ಷೆಗಳು ವಿಳಂಬವಾಗುತ್ತಿರುವ ಬಗ್ಗೆ.**

***

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಉದ್ಯೋಗ ಮತ್ತು ತರಬೇತಿ ಇಲಾಖೆಯವರು ಎಸ್.ಸಿ.ವಿ.ಟಿ ಅಡಿಯಲ್ಲಿ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಸಂಯೋಜನೆಯನ್ನು ಪಡೆದು ಕೈಗಾರಿಕಾ ತರಬೇತಿ ನೀಡಲು ಅನುಮತಿಯನ್ನು ನೀಡಿರುತ್ತಾರೆ. ಸದರಿ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ಶೈಕ್ಷಣಿಕ ವರ್ಷಗಳಿಗೆ ಒಂದೇ ಬಾರಿ ಸಂಯೋಜನೆಯನ್ನು ನೀಡುತ್ತಿದ್ದರು. ಸಾಮಾನ್ಯವಾಗಿ ಶೈಕ್ಷಣಿಕ ವರ್ಷದ ಮೇ ತಿಂಗಳಿನಲ್ಲಿ ಸಂಯೋಜನೆ ಬಿಡುಗಡೆ ಮಾಡಿ ಜೂನ್ ತಿಂಗಳಿನಲ್ಲಿ ಪರೀಕ್ಷೆ ಬರೆಯುವುದಕ್ಕೆ ಅನುಮತಿ ನೀಡುತ್ತಿದ್ದರು. ಅಲ್ಲದೇ ಶೈಕ್ಷಣಿಕ ವರ್ಷದಲ್ಲಿ ಜುಲೈ ಅಥವಾ ಆಗಸ್ಟ್ ತಿಂಗಳಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುತ್ತಿದ್ದರು.

ಆದರೆ ಆಡಳಿತಾತ್ಮಕ ಕಾರಣಗಳ ನೆಪವೊಡ್ಡಿ ಉದ್ಯೋಗ ಮತ್ತು ತರಬೇತಿ ಇಲಾಖಾ ಆಯುಕ್ತರು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿದ್ಯಾರ್ಥಿಗಳು 2014-15 ಮತ್ತು 2015-16ನೇ ಸಾಲಿನಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಿರುವುದಿಲ್ಲ. ಸಂಬಂಧಪಟ್ಟ ಸಚಿವರು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಠಿಯಿಂದ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಸೂಚನೆ ನೀಡಿದರೂ ಇಲ್ಲಿಯವರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರೀಕ್ಷೆಗೆ ಅನುಮತಿಯನ್ನು ನೀಡಲು ಇಲಾಖೆಯು ವಿಫಲವಾಗಿರುತ್ತದೆ. ಇದರಿಂದ ಕರ್ನಾಟಕ ರಾಜ್ಯದ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಭವಿಷ್ಯವು ಡೋಲಾಯಮಾನವಾಗಿರುತ್ತದೆ. ರಾಜ್ಯದಲ್ಲಿ ಸುಮಾರು 6000 ವಿದ್ಯಾರ್ಥಿಗಳು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶಾಕಾಶವನ್ನು ಪಡೆದಿದ್ದು, ಅವರಿಗೆ ಪರೀಕ್ಷೆಯನ್ನು ಬರೆಯಲು ಅನುಮತಿ ನೀಡುವುದು ಅವಶ್ಯಕವಾಗಿರುತ್ತದೆ. ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯವನ್ನು ಸಹಾನುಭೂತಿಯಿಂದ ಪರಿಗಣಿಸಿ ಪರೀಕ್ಷೆಗೆ ಅನುಮತಿಯನ್ನು ನೀಡಬೇಕಾಗಿದ್ದು, ಸದರಿ ವಿಷಯವನ್ನು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಉತ್ತರವನ್ನು ಸಿದ್ಧಪಡಿಸಿಕೊಂಡು ನಾಳೆ ಅಥವಾ ನಾಡಿದ್ದು ಉತ್ತರವನ್ನು ಒದಗಿಸುತ್ತೇನೆ.

**ಆ) ವಿಷಯ:- ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ಹೆಚ್ಚಳ ಮಾಡುವ ಕುರಿತು.**

***

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳು. ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಶೇಕಡಾ 70 ರಷ್ಟು ತೊಗರಿ ಬೆಳೆಯನ್ನು ಬೆಳೆಯುತ್ತಿದ್ದು, ರೈತರು ಬೆಳೆದ ತೊಗರಿಯನ್ನು ಖರೀದಿಸುವ ಸಲುವಾಗಿ ಸರ್ಕಾರವು ಪ್ರಾರಂಭಿಸಿರುವ ಖರೀದಿ ಕೇಂದ್ರಗಳ ಸಂಖ್ಯೆ ಬಹಳ ಕಡಿಮೆ ಇದ್ದು, ಇದರಿಂದ ರೈತರು ಬೆಳೆದ ತೊಗರಿಯನ್ನು ಸಕಾಲಕ್ಕೆ ಸರಿಯಾಗಿ ಖರೀದಿಸಲು ಸಾಧ್ಯವಾಗದೆ ರೈತರು ತುಂಬ ನಷ್ಟವನ್ನು ಅನುಭವಿಸುವಂತಾಗಿರುತ್ತದೆ ಹಾಗೂ ತೊಗರಿ ಖರೀದಿಗೆ ಸಂಬಂಧಿಸಿದಂತೆ, ತುಂಬಲು ಚೀಲಗಳ ಕೊರತೆ ಮತ್ತು ಸಿಬ್ಬಂದಿಗಳ ಕೊರತೆ ಹಾಗೂ ಇನ್ನಿತರ ಸಮಸ್ಯೆಗಳಿಂದ ತೊಗರಿ ಬೆಳೆ ಬೆಳೆಗಾರರು ಸರಿಯಾದ ಸಮಯದಲ್ಲಿ ತೊಗರಿ ಮಾರಾಟ ಮಾಡಲು ಸಾಧ್ಯವಾಗದೆ ಹಾನಿಗೊಳಗಾದ ತೊಗರಿಯಿಂದ ರೈತರು ಹೆಚ್ಚಿನ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ಉಂಟಾಗುತ್ತದೆ.

ಆದ್ದರಿಂದ ರೈತರು ಬೆಳೆದ ತೊಗರಿ ಬೆಳೆಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಒದಗಿಸಲು ಹಾಗೂ ರೈತರನ್ನು ನಷ್ಟದಿಂದ ಪಾರು ಮಾಡುವ ಸಲುವಾಗಿ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ಹೆಚ್ಚಳ ಮಾಡಿ ಸೂಕ್ತ ಸಿಬ್ಬಂದಿಯನ್ನು ನೇಮಕ ಮಾಡುವುದರ ಮೂಲಕ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಖಾಲಿ ಚೀಲಗಳನ್ನು ಸಂಪೂರ್ಣವಾಗಿ ಪೂರೈಸುವುದರ ಮೂಲಕ ಈ ತೊಂದರೆಯನ್ನು ನಿವಾರಣೆ ಮಾಡಿ ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ತೋಟಗಾರಿಕೆ, ಕೃಷಿ ಮಾರುಕಟ್ಟೆ ಸಚಿವರು):–** ಮಾನ್ಯ ಸಭಾಪತಿಯವರೆ, ಉತ್ತರ ಸಿದ್ಧವಾಗಿದ್ದು, ಲಿಖಿತವಾಗಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ಮುಖ್ಯವಾಗಿ ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಒಟ್ಟು ಸುಮಾರು 12.35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ನಾವು ಈಗಾಗಲೇ ಖರೀದಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರು ಇನ್ನು ಹೆಚ್ಚು ಖರೀದಿ ಕೇಂದ್ರಗಳಾಗಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ. ಎರಡನೆಯದಾಗಿ, ನಮ್ಮ Sub-Committee ಯ meeting ನಲ್ಲಿ pass ಮಾಡಿ, ಇವತ್ತು ಬಿಜಾಪುರ ಮತ್ತು ಒಟ್ಟು 64 ಖರೀದಿ ಕೇಂದ್ರಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟು, ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಸಹ ಹೊರಡಿಸಿದ್ದೇವೆ. ಮೂರನೆಯದಾಗಿ ಖಾಲಿ ಚೀಲಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನಾವು ಕೇಂದ್ರ ಸರ್ಕಾರವನ್ನು ಕೇಳಿಕೊಂಡಾಗ ಅವರು ಸಾಕಷ್ಟು ರಜೆಗಳು ಇದ್ದುದರಿಂದ ಹೋಳಿ ಹುಣ್ಣಿಮೆ ಪ್ರಯುಕ್ತ ರಜಾ ಇದ್ದುದರಿಂದ ಬಹಳ ತಡವಾಗಿತ್ತು. ಆದರೆ ನೆನ್ನೆಯ ದಿವಸ ಅದು ಪರಿಹಾರವಾಗಿದೆ. ನೆನ್ನೆಯ ದಿವಸ ಗುಲ್ಬರ್ಗಾಕ್ಕೆ ಒಂದು ಲಕ್ಷ ಕ್ವಿಂಟಾಲ್ ತೊಗರಿ ಚೀಲಗಳು ಬಂದಿದೆ ಮತ್ತು ನಾವು ಸ್ಥಳೀಯವಾಗಿ ಖರೀದಿ ಮಾಡುವುದಕ್ಕೆ ಆದೇಶವನ್ನು ಮಾಡಿ ಆದಷ್ಟು ಬೇಗನೇ ಸಂಪೂರ್ಣವಾಗಿ ಚೀಲದ ವ್ಯವಸ್ಥೆಯನ್ನು ಸರಿಪಡಿಸುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತಿದ್ದೇನೆ.

**ಇ. ವಿಷಯ:– ಗುಂಡ್ಲುಪೇಟೆ ವಿಧಾನ ಸಭೆ ಕ್ಷೇತ್ರ ಉಪ ಚುನಾವಣೆ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ನಡೆದ ಗಲಭೆ ಬಗ್ಗೆ.**

***

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳು. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಯು ಸಂಬಂಧಪಟ್ಟ ಅಧಿಕಾರಿಗಳಿಂದ ನಾಮಪತ್ರ ಸಲ್ಲಿಸುವ ಮೊದಲು ನಡೆಸುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೆರವಣಿಗೆ ಸಾಗುವ ರಸ್ತೆ ಮತ್ತು ಅದಕ್ಕೆ ಬೇಕಾದ ಸಮಯದ ಕುರಿತು ಅಧಿಕೃತ ಅನುಮತಿ ಪಡೆದುಕೊಂಡಿದ್ದರೂ ಅದೇ ಸಮಯದಲ್ಲಿ ಬೇರೆ ಪಕ್ಷದ ಅಭ್ಯರ್ಥಿ ಹಾಗೂ ಅವರ ಬೆಂಬಲಿಗರು ಅಡ್ಡ ರಸ್ತೆಗಳಿಂದ ಆಗಮಿಸಿ ಉತ್ಸಾಹದಿಂದ ಸಾಗುತ್ತಿದ್ದ ಮೆರವಣಿಗೆಯ ಮೇಲೆ ಕಲ್ಲು ಹಾಗೂ ಚಪ್ಪಲಿ ತೂರಾಟ ನಡೆಸಿ ಗಲಭೆಯನ್ನು ಸೃಷ್ಟಿಸಿದ ಸಂದರ್ಭದಲ್ಲಿ ಬಂದೋಬಸ್ತ್‌ಗಾಗಿ ನೇಮಿಸಲ್ಪಟ್ಟ ಪೊಲೀಸ್ ಸಿಬ್ಬಂದಿಗಳು ಮೂಕ ಪ್ರೇಕ್ಷಕರಾಗಿ ನಿಂತು ಗಲಭೆಕೋರರಿಗೆ ಬೆಂಬಲ ನೀಡಿರುತ್ತಾರೆ. ಈ ಗಲಭೆಯಲ್ಲಿ ಎರಡು ಮಂದಿ ಕಾರ್ಯಕರ್ತರ ತಲೆಗೆ ಏಟು ಬಿದ್ದಿದ್ದು ನಾಲ್ಕು ಮಂದಿ ಕಾರ್ಯಕರ್ತರ ಕೈಕಾಲುಗಳಿಗೆ ಗಂಭೀರ ಗಾಯಗಳಾಗಿರುತ್ತವೆ.

ಸ್ಥಳದಲ್ಲಿರುವ ಪೊಲೀಸ್ ಅಧಿಕಾರಿ ಸಂದೀಪ್ ಕುಮಾರ್ ಅವರು ಗಲಭೆಕೋರರ ಮೇಲೆ ಕ್ರಮ ಕೈಗೊಳ್ಳುವ ಬದಲಾಗಿ ಮೆರವಣಿಗೆಯಲ್ಲಿ ಉತ್ಸಾಹದಿಂದ ಸಾಗುತ್ತಿದ್ದ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದು ಏಕಪಕ್ಷೀಯವಾಗಿ ವರ್ತಿಸಿರುತ್ತಾರೆ. ಈ ಕುರಿತಾಗಿ ವಿಡಿಯೋ ಕ್ಲಿಪಿಂಗ್‌ಗಳ ಸಹಿತ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಉಪ ಚುನಾವಣೆಯ ಪ್ರಾರಂಭದಲ್ಲಿಯೇ ದುಷ್ಟ ಶಕ್ತಿಗಳನ್ನು ಉಪಯೋಗಿಸಿ ಚುನಾವಣೆಯ ಪ್ರಕ್ರಿಯೆಯನ್ನು ಅಡ್ಡಿಗೊಳಿಸುವ ಈ ರೀತಿಯ ಪ್ರಯತ್ನಗಳಿಗೆ ಆಡಳಿತ ಯಂತ್ರದ ದುರುಪಯೋಗ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭಂಗಗೊಳಿಸುವ ಹಿತಾಸಕ್ತಿಗಳ ವಿರುದ್ಧ ಅತ್ಯಂತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಹಾಗೂ ಉಪ ಚುನಾವಣೆಯಲ್ಲಿ ಅತ್ಯಂತ ಪಾರದರ್ಶಕವಾಗಿ ಹಾಗೂ ಯಾವುದೇ ಅಡೆತಡೆ ಇಲ್ಲದೆ, ಉಪ ಚುನಾವಣೆಯಲ್ಲಿ ಭಾಗವಹಿಸುವ ಎಲ್ಲ ಪಕ್ಷಗಳಿಗೂ ಸಮಾನ ಅವಕಾಶಗಳು ದೊರೆಯುವಂತೆ ಮತ್ತು ಒಟ್ಟು ಚುನಾವಣಾ ಪ್ರಕ್ರಿಯೆಗೆ ಅಡ್ಡಿ ಮಾಡಲು ಪ್ರಯತ್ನಿಸುವ ಎಲ್ಲ ದುಷ್ಟಶಕ್ತಿಗಳನ್ನು ನಿಗ್ರಹಿಸುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಇಂಧನ ಸಚಿವರು):-** ಮಾನ್ಯ ಸಭಾಪತಿಯವರೆ, ಚುನಾವಣಾ ಸಂದರ್ಭದಲ್ಲಿ ಮೆರವಣಿಗೆ ಹೋಗಬೇಕಾದರೆ ಗಲಾಟೆಯಾಗಿದೆ ಎನ್ನುವ ಪ್ರಸ್ತಾಪವನ್ನು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಕೂಡ ನ್ಯಾಯ ದೊರೆಯಬೇಕು. Free and fair election ನಡೆಯಬೇಕು. ಇದು ಸರ್ಕಾರದ ಬದ್ಧತೆಯಾಗಿದೆ. ಯಾವುದೇ ಸರ್ಕಾರವಿರಲಿ ಇದನ್ನು ಮಾಡಬೇಕಾದುದು. ತಾವು ಏನು ಆತಂಕವನ್ನು ವ್ಯಕ್ತಪಡಿಸಿದ್ದೀರಿ. ಇದನ್ನು ಖಂಡಿತವಾಗಿ ಒಬ್ಬ senior officer ಕಳುಹಿಸಿ, ಇದರ ಬಗ್ಗೆ ವಿಚಾರಣೆ ಮಾಡಿ ಕ್ರಮ ಕೈಗೊಂಡು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ರೀತಿಯ ಘಟನೆಗಳು ಮುಂದೆ ಆಗದೇ ಇರುವ ಹಾಗೆ ಏನಾದರೂ ತಪ್ಪಾಗಿದ್ದರೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮುಂದೆ ಏನು ಘಟನೆ ಆಗದೇ ಇರುವ ಹಾಗೆ ಎಲ್ಲರೂ ಕೂಡ ಶಾಂತಿಯಿಂದ ಯಾವುದೇ ಪಾರ್ಟಿಯವರಾದರೂ ಸಹ ಚುನಾವಣೆ ನಡೆಸುವುದಕ್ಕೆ ನಾವೆಲ್ಲರೂ ಸಹಕಾರ ಮಾಡೋಣ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ರೀತಿಯಲ್ಲಿ ಪೊಲೀಸರು ಮೆರವಣಿಗೆಯಲ್ಲಿ ಹೋಗುತ್ತಿರುವಂತಹ ವ್ಯಕ್ತಿಗಳ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ.

**319/21-03-2017/1-00/bkp-rn**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

11 ಜನರು ಆಸ್ಪತ್ರೆ ಸೇರುವಂತೆ ಹೊಡೆದಿದ್ದಾರೆ. ಆ ಸಂದೀಪ್ ಕುಮಾರ್‌ರವರು ನಿಂತು ಹೊಡೆಸಿದ್ದಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ನಾವು ಚುನಾವಣೆ ಮಾಡೋಣ. ಚುನಾವಣೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಜನರು ಯಾರಿಗೆ ಓಟು ಕೊಡುತ್ತಾರೆ, ಅವರು ಗೆಲ್ಲುತ್ತಾರೆ, ಆ ಪ್ರಶ್ನೆ ಬೇರೆ. ಪೊಲೀಸ್ ಅಧಿಕಾರಿಗಳು ಯಾವುದೇ ಪಕ್ಷಕ್ಕೆ ಯಾವುದೇ ಸರ್ಕಾರಕ್ಕೆ ಗುಲಾಮರಾಗುವುದಿಲ್ಲ. ಸಮಯ ಕೊಟ್ಟಿದ್ದಕ್ಕಿಂತ ಮುಂಚೆ ಮೆರವಣಿಗೆ ಹೊರಡುತ್ತಾರೆ. ಇದು ಕಂಡಿದೆ. ಚಪ್ಪಲಿ, ಕಲ್ಲಿನಲ್ಲಿ ಎಸೆಯುತ್ತಿದ್ದಾರೆ. ಯಾರನ್ನು ಹೊಡೆಯಬೇಕೋ ಅವರನ್ನು ಬಿಟ್ಟು, ಶಾಂತಿಯಿಂದ ಮೆರವಣಿಗೆಯಲ್ಲಿ ಹೋಗುತ್ತಿರುವಂತಹ, ಉತ್ಸಾಹದಲ್ಲಿ ಹೋಗುತ್ತಿರುವಂತಹ ವ್ಯಕ್ತಿಗಳ ಮೇಲೆ ಎರಡೆರಡು ಕಡೆಯಿಂದ ಬಂದು ಚಪ್ಪಲಿ–ಕಲ್ಲುಗಳನ್ನು ಎಸೆದಂತಹ ಸಂದರ್ಭದಲ್ಲಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಈ ರೀತಿಯಲ್ಲಿ ಅಮಾಯಕರನ್ನು ಹೊಡೆದು, ಅವರುಗಳನ್ನು ಆಸ್ಪತ್ರೆಗೆ ಹಾಕಿದ್ದಾರಲ್ಲಾ, ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ಆದ್ದರಿಂದ, ಸಂದೀಪ್ ಕುಮಾರ್ ಎನ್ನುವವರನ್ನು ದಯವಿಟ್ಟು ಸಸ್ಪೆಂಡ್ ಮಾಡಿ. ಅಂತಹ ವ್ಯಕ್ತಿಯನ್ನು ಸರ್ಕಾರ ಸಸ್ಪೆಂಡ್ ಮಾಡಲಿಲ್ಲವೆಂದರೆ ಇದಕ್ಕೆ ಸರ್ಕಾರವೇ ಈ ರೀತಿಯ ಗೂಂಡಾ ಪೊಲೀಸ್‌ಗಳಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಅಂತಹ ವ್ಯಕ್ತಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಈ ರೀತಿಯಲ್ಲಿ ಕೆಲಸ ಮಾಡಿರುವುದಕ್ಕೆ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿ, ಏನು ವಿಚಾರಣೆ, ವಿಡಿಯೋ ಕ್ಲಿಪಿಂಗ್ಸ್ ತೆಗೆದುಕೊಳ್ಳಲಾಗುತ್ತಿದೆ. ಏಕೆಂದರೆ, ಎಲ್ಲಾ ಕಡೆಯೂ ವಿಡಿಯೋ ಕ್ಲಿಪಿಂಗ್ಸ್ ಆಗಿದೆ. ಅದರ ಜೊತೆಗೆ ಬೇರೆ ಟೀಮ್ ಸಹ ಎಲ್ಲಾ ಕಡೆ ಇಂತಹ ಸಂದರ್ಭದಲ್ಲಿ ರೆಕಾರ್ಡ್ ಮಾಡಿ ಇಟ್ಟಿದ್ದಾರೆ. ಖಂಡಿತವಾಗಿಯೂ ಸಹ ತಾವು ಏನು ಹೇಳುತ್ತಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಏಕಾಏಕಿ ಇವರನ್ನು ಸಸ್ಪೆಂಡ್ ಮಾಡುತ್ತೇವೆ ಎನ್ನುವಂತಹ ಹಕ್ಕು ಸರ್ಕಾರಕ್ಕೆ ಇರಬಹುದು. ಆದರೆ, ನಮಗೆ ಇನ್ನು ಸರಿಯಾದಂತಹ ಮಾಹಿತಿ ಇಲ್ಲದೇ ಇರುವುದರಿಂದ we will enquire the matter.

**ಶ್ರೀ ಕೆ.ಎಸ್.ಈಶ್ವರಪ್ಪ:-** ವಿಡಿಯೋ ಕ್ಲಿಪಿಂಗ್ಸ್ ನಿಮ್ಮ ಹತ್ತಿರವೇ ಇದೆ. ಕ್ಲಿಪಿಂಗ್ಸ್ ಇರುವಂತಹ ಸಂದರ್ಭದಲ್ಲಿ . . .

**ಶ್ರೀ ಡಿ.ಕೆ.ಶಿವಕುಮಾರ್:-** ಯಾರು ತಪ್ಪು ಮಾಡಿದ್ದಾರೆಂದು ನೋಡೋಣ.

**ಸಭಾಪತಿಯವರು:-** ಮಾನ್ಯ ಸಚಿವರು ಅದನ್ನು ನೋಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ಎಸ್.ಪಿ.ಯವರಿಗೆ ಫೋನ್ ಮಾಡಿದರೆ ಅವರು ಹೇಳುತ್ತಾರೆ. ಅವರ ಹತ್ತಿರ ಕ್ಲಿಪಿಂಗ್ಸ್ ಇದೆ. ಈ ರೀತಿಯಲ್ಲಿ ನೇರವಾಗಿ ಲಾಠಿ ಚಾರ್ಜ್ ಮಾಡಿ, ಅವರುಗಳಿಗೆ ಹೊಡೆದು, ಗಲಾಟೆ ಮಾಡಿ, ಅವರುಗಳನ್ನು ಆಸ್ಪತ್ರೆಗಳಿಗೆ ಹಾಕಿದ್ದಾರೆ. ಇದೇನು ಸರ್?

**ಶ್ರೀ ಡಿ.ಕೆ.ಶಿವಕುಮಾರ್:-** ನೋಡೋಣ, ನ್ಯಾಯಯುತವಾದ ಎಲೆಕ್ಷನ್ ನಡೆಸೋಣ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನ್ಯಾಯಯುತವಾದ ಎಲೆಕ್ಷನ್ ನಡೆಸಿ. ಗೂಂಡಾ ಪೋಲೀಸ್‌ನವರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ನ್ಯಾಯಯುತವಾದ ಎಲೆಕ್ಷನ್ ಹೇಗೆ ಆಗುತ್ತದೆ. ಅದಕ್ಕೆ ನಾನು ಹೇಳುತ್ತಿರುವುದು. ಇದು ಪೊಲೀಸ್ ರಾಜ್ಯವೇ? ನಾಮಿನೇಷನ್ ಹಾಕಬೇಕಾದರೆ ಗಲಾಟೆ ಮಾಡಿದರೆ ಏನು ಮಾಡುತ್ತೀರಿ? ನೀವೇ ಯೋಚನೆ ಮಾಡಿ ನೊಡೋಣ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಉಪ ಚುನಾವಣೆ ನಡೆಯಬೇಕಾದರೆ ಅದು ಸುಸೂತ್ರವಾಗಿ ನಡೆಯಬೇಕು. ಸರ್ಕಾರದಿಂದ ಅದಕ್ಕೆ ಒಂದು ಸಂದೇಶ ಹೋಗಬೇಕು. ಅಧಿಕಾರಿಗಳು ಸರ್ಕಾರದ ಆದೇಶವನ್ನು ಪಾಲನೆ ಮಾಡಬೇಕು.

**ಸಭಾಪತಿಯವರು:-** ಯಾರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಮಾತನಾಡಬೇಕು. ಉಳಿದವರೆಲ್ಲರೂ ಕುಳಿತುಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸರ್ಕಾರದ ವತಿಯಿಂದ ಈ ರೀತಿ ನೀವು ಉತ್ತರ ಕೊಟ್ಟರೆ, ನೀವು ಅವರನ್ನು ರಕ್ಷಣೆ ಮಾಡಿದಂತಾಗುತ್ತದೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಯಾರಿಗೂ ಭಯವಿಲ್ಲದಂತಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳದಿದ್ದರೆ, ಅವರು ನಾವು ಏನು ಬೇಕಾದರೂ ಮಾಡಬಹುದು ಎಂದು ತಿಳಿದುಕೊಂಡರೆ ಇದು ಗೂಂಡಾ ರಾಜ್ಯವಾಗಿಬಿಡುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಬೇಗ ವಿಚಾರಣೆ ಮಾಡಿ ತಪ್ಪು ಮಾಡಿದವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:-** ಬೇಡಿ, ಇಲ್ಲಿ ಚರ್ಚೆ ಬೇಡ.

**ಶ್ರೀ. ವಿ.ಎಸ್.ಉಗ್ರಪ್ಪ:-** ನೀವು ಆ ಕಡೆಯಲ್ಲಿ ಅಷ್ಟು ಜನರಿಗೆ ಅವಕಾಶ ಕೊಟ್ಟಿದ್ದೀರಿ. ನೀವು ನಮಗೆ ಎರಡು ವಾಕ್ಯಗಳನ್ನು ಹೇಳಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನ್ಯಾಯಯುತವಾದ ಎಲೆಕ್ಷನ್ ನಡೆಸುವುದು ಸರ್ಕಾರದ ಜವಾಬ್ದಾರಿ ಅಲ್ಲ. ಅದು ಚುನಾವಣಾ ಆಯೋಗದ ಕೆಲಸ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಆ ರೀತಿ ಏನಾದರೂ ನಡೆಸಿದ್ದರೆ, ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಶ್ರೀಯುತ ಉಗ್ರಪ್ಪನವರು ಸರ್ಕಾರವಲ್ಲ, ಉತ್ತರ ಕೊಡಲಿಕ್ಕೆ ಅವರು ಯಾರು? ನೀವು ಸರ್ಕಾರವಲ್ಲ. ದಯವಿಟ್ಟು ಕುಳಿತುಕೊಳ್ಳಿ. You are not the Government. ಸಾಕು ಕುಳಿತುಕೊಳ್ಳಿ. ನಾನು ಅವರಿಗೆ ಹೇಳುತ್ತೇನೆ ಕುಳಿತುಕೊಳ್ಳಿ. ನೀವು ಯಾರು ಹೇಳುವುದಕ್ಕೆ? ಅವರನ್ನು ಉದ್ದೇಶಿಸಿ ನೀವು ಏತಕ್ಕೆ ಮಾತನಾಡುತ್ತೀರಿ? ಕುಳಿತುಕೊಳ್ಳಿ. ನೀವು ಕುಳಿತುಕೊಳ್ಳುವುದಿಲ್ಲವೇ?

**(ಗೊಂದಲ)**

ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರೂ ಕುಳಿತುಕೊಳ್ಳಿ. ಸಾಕು ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ನೋಡಿ, ಉಗ್ರಪ್ಪನವರೆ, ನೀವು ಸರ್ಕಾರವಲ್ಲ. ಇದರ ಬಗ್ಗೆ ವಿಚಾರಣೆ ಮಾಡುತ್ತೇವೆ, ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸರ್ಕಾರ ಹೇಳಿದೆ, there ends the matter. Please sit down.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಇವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ತಪ್ಪಿದ್ದಲ್ಲಿ ಚುನಾವಣಾಧಿಕಾರಿಗಳ ಗಮನಕ್ಕೆ ತರುತ್ತೇವೆ.

**ಸಭಾಪತಿಯವರು:-** ನೀವು ಅವರಿಗೆ ಏತಕ್ಕೆ ಮಾತನಾಡುತ್ತಿದ್ದೀರಿ. ಅವರು ಸರ್ಕಾರವಲ್ಲ. ಅವರ ಜೊತೆ ನೀವು ಏನು ಚರ್ಚೆ ಮಾಡುತ್ತೀರಿ? ಅವರು ಸರ್ಕಾರವಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅದನ್ನು ಸರ್ಕಾರ ಹೇಳುತ್ತದೆ. ಸರ್ಕಾರ ಏನಾದರೂ ಹೇಳುವುದಿದ್ದರೆ ಹೇಳಲಿ. ಈ ವಿಷಯವನ್ನು ಮುಕ್ತಾಯ ಮಾಡುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ನಾನು ಕ್ಲಿಯರ್ ಆಗಿ ಹೇಳಿದ್ದೇನೆ. ಅವರಿಗೆ ಪಾಪ, ಅನುಮಾನವಿದೆ. ಅವರು ವಿವರವಾಗಿ ಹೇಳಿದ್ದಾರೆ. ಹೆಚ್ಚು ಕಡಿಮೆ ಆಗಿದೆ ಎಂದು ಹೇಳಿದ್ದಾರೆ. Free and fair election, ಎಲೆಕ್ಷನ್ ಕಮಿಷನ್ ನಡೆಸುವುದು ಇದ್ದರೂ ಕೂಡ, ನಾವು ಸರ್ಕಾರದ ವತಿಯಿಂದ ಸರಿಯಾದ ರೀತಿಯಲ್ಲಿ. . ಇದರಲ್ಲಿ ಯಾವುದೇ ರೀತಿ ಅನ್ಯಾಯವಾಗದ ರೀತಿ **ಲಾ ಅಂಡ್ ಆರ್ಡರ್** ನಿರ್ವಹಣೆ ಮಾಡಬೇಕಾಗುತ್ತದೆ. ನಾವು ಖಂಡಿತವಾಗಿಯೂ ಸಹ ಈ ಒಂದು ಕೆಲಸವನ್ನು ಮಾಡುತ್ತೇವೆ. ಅವರು ಏನು ಹೇಳಿದ್ದಾರೆ, ಆ ವಿಚಾರವಾಗಿ ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯೊಬ್ಬರನ್ನು ಕಳುಹಿಸಿ, we will enquire this matter ಎಂದು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಈ) ವಿಷಯ:– ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರಗಾಲದಿಂದ ಕುಡಿಯುವ ನೀರಿನ ಬಗ್ಗೆ.**

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಕಳೆದ 3–4 ವರ್ಷಗಳಿಂದ ತೀವ್ರ ಬರಗಾಲವಿದ್ದು, ಈ ಬಾರಿ ಎಂದೂ ಕೇಳದೇ ಇದ್ದ ಬರಗಾಲ ನಮ್ಮ ಮಲೆನಾಡಿಗೂ ಬಂದಿದ್ದು, ನಿಜಕ್ಕೂ ನಮ್ಮ ರಾಜ್ಯದ ದುರ್ದೈವ. ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಯಗಚಿಯಿಂದ ಅಂಬಳೆ ಹೋಬಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು, ಕಾರ್ಯಗತವಾಗಿರುವುದಿಲ್ಲ. ಈ ಮೂಲಕ ತಮ್ಮಲ್ಲಿ ಕೋರುವುದೇನೆಂದರೆ, ಬರಗಾಲವಿರುವುದರಿಂದ ವಿಶೇಷ ಪರಿಹಾರ ಘೋಷಣೆ ಮಾಡಿ, ಕೂಡಲೇ ಈ ಭಾಗದ ಜನತೆಗೆ ಬಹುಗ್ರಾಮ ಕುಡಿಯುವ ನೀರಿನ ಈ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು, ಈ ವಿಚಾರವಾಗಿ ಶೂನ್ಯವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಸೆಳೆಯಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಏನು ಹೇಳುತ್ತಿದ್ದಾರೆ, ಎಲ್ಲಾ ಕಡೆಯೂ ಕುಡಿಯುವ ನೀರನ್ನು ಕೊಡಬೇಕೆಂದು ಸರ್ಕಾರಕ್ಕೆ ಬದ್ಧತೆ ಇದೆ. ಆದರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಒಂದು ವರದಿಯನ್ನು ತರಿಸಿ, ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:–** 5 ಜನ ಮಾನ್ಯ ಸದಸ್ಯರು ಶೂನ್ಯವೇಳೆಗೆಂದು ಒಂದೇ ವಿಚಾರವಾಗಿ ಅಂದರೆ, ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಳ ಕೋರಿ, ಬೆಂಗಳೂರು ನಗರದಲ್ಲಿ ಹಗಲು–ರಾತ್ರಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ನನಗೆ ನೊಟೀಸ್ ಕೊಟ್ಟಿದ್ದಾರೆ. ಇದಲ್ಲದೆ, ಹಿರಿಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಮತ್ತು ಸ್ನೇಹಿತರು ಕೊಟ್ಟಿದ್ದಾರೆ. ಶ್ರೀಯುತ ಹೊರಟ್ಟಿಯವರು ನನಗೆ ಎರಡು ನೋಟೀಸ್ ಕೊಟ್ಟಿದ್ದಾರೆ. ಒಂದನ್ನು ಶೂನ್ಯವೇಳೆಗೆ ಕೊಟ್ಟಿದ್ದಾರೆ. ಶೂನ್ಯವೇಳೆಗೆ ಸಂಬಂಧಪಟ್ಟಂತೆ ಕೊಟ್ಟಿರುವ 5 ಜನರ ಪೈಕಿ ಯಾರಾದರೂ ಇಬ್ಬರು ಅವರು ಕೊಟ್ಟಿರುವ ನೋಟೀಸ್‌ಗಳನ್ನು ಓದಲಿ. ಅಮೇಲೆ ಶ್ರೀಯುತ ಹೊರಟ್ಟಿಯವರು ಮತ್ತು ಬೇರೆ ಯಾರಾದರೂಬ್ಬರು ಮಾತನಾಡುವವರು ಇದ್ದರೆ ಒಬ್ಬರಿಬ್ಬರಿಗೆ ಅದೇ ವಿಷಯವಾಗಿ ಮಾತನಾಡಲಿಕ್ಕೆ ನಾನು ಅವಕಾಶವನ್ನು ಕೊಡುತ್ತೇನೆ. ಯಾರು ಮೊದಲು ಮಾತನಾಡುತ್ತೀರಾ? ಯಾರಾದರೊಬ್ಬರು ಇದನ್ನು ಓದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉ) ವಿಷಯ:- ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಳ ಕೋರಿ, ಬೆಂಗಳೂರು ನಗರದಲ್ಲಿ ಹಗಲು-ರಾತ್ರಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ.**

- - -

**ಶ್ರೀಮತಿ ತಾರಾಅನೂರಾಧ:-** ಮಾನ್ಯ ಸಭಾಪತಿಯವರೆ, ಮಹಿಳೆಯಾಗಿ ನಾನು ಮೊದಲು ಮಾತನಾಡುತ್ತೇನೆ. ಏಕೆಂದರೆ, ಎಲ್ಲರೂ ಪುರುಷರೇ ನೋಟೀಸ್ ಕೊಟ್ಟಿದ್ದಾರೆ. ಆದ್ದರಿಂದ, ಮಹಿಳೆಯಾಗಿ ನಾನು ಮೊದಲು ಮಾತನಾಡುತ್ತೇನೆ.

ಇಂದಿನ ಎಲ್ಲಾ ದಿನ ಪತ್ರಿಕೆಗಳಲ್ಲಿ, ಟಿ.ವಿ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಿ ರಸ್ತೆಯಲ್ಲಿಯೇ ತಮ್ಮ ಮಕ್ಕಳೊಂದಿಗೆ ರಾತ್ರಿಯನ್ನು ಕಳೆದಿದ್ದಾರೆ. ಈ ಹೋರಾಟಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಕಳೆದ 20 ವರ್ಷಗಳಿಂದ ಹೋರಾಟ ಮಾಡಿದ್ದಾರೆ. ಆದರೆ, ಕಳೆದ 20 ವರ್ಷಗಳಲ್ಲಿ ಈ 3 ವರ್ಷಗಳಿಂದ ಇವರ ಹೋರಾಟವು ಅತ್ಯಂತ ತೀವ್ರಗತಿಯಲ್ಲಿ ಸಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಬಾರಿಯ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇವಲ 1,000 ಹಾಗೂ ಸಹಾಯಕಿಯರಿಗೆ 500 ರೂಪಾಯಿ ಗೌರವಧನವನ್ನು ಹೆಚ್ಚಿಸಿದೆ. ಆದರೆ, ನೆರೆಯ ರಾಜ್ಯಗಳಲ್ಲಿ ಕ್ರಮವಾಗಿ 10,000 ಹಾಗೂ 7,000 ರೂಪಾಯಿಗಳನ್ನು ನೀಡಲಾಗುತ್ತಿದೆ ಎನ್ನುವ ವಿಚಾರ ಎಲ್ಲಾ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ತಿಳಿಸಲಾಗುತ್ತಿದೆ. ಸದ್ಯ ಕಾರ್ಯಕರ್ತೆಯರಿಗೆ 7 ಸಾವಿರ ಹಾಗೂ ಸಹಾಯಕಿಯರಿಗೆ ರೂ. 3,500 ರೂಪಾಯಿಗಳನ್ನು ನಮ್ಮ ರಾಜ್ಯದಲ್ಲಿ ನೀಡಲಾಗುತ್ತಿದೆ ಎನ್ನುವ ಕೊರಗು ಅವರಲ್ಲಿ ಇದೆ. ಕಡಿಮೆ ವೇತನದಲ್ಲಿ ಕುಟುಂಬ ನಿರ್ವಹಣೆ ದುಸ್ತರವಾಗಿದೆ ಎಂಬುದು ಹೋರಾಟಗಾರರ ಅಳಲಾಗಿದೆ. ಈ ಹೋರಾಟಗಾರರು ತಮ್ಮ ವೇತನವನ್ನು ಹೆಚ್ಚಳ ಮಾಡದ ಹೊರತು ಹೋರಾಟವನ್ನು ಕೈಬಿಡುವುದಿಲ್ಲ ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಮಹಿಳೆಯೇ ಆಗಿದ್ದು, ಸಂವೇದನೆಯನ್ನು ಕಳೆದುಕೊಂಡಿದ್ದಾರೆಂದು ಸಂದೇಹವಾಗುತ್ತಿದೆ. ಈ ಕುರಿತು ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಹೋರಾಟಗಾರರ ವೇತನವನ್ನು ಹೆಚ್ಚಳ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಿ, ಸಾವಿರಾರು ಕುಟುಂಬಗಳ ರಕ್ಷಣೆಗೆ ಧಾವಿಸಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಆರ್.ಚೌಡರೆಡ್ಡಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಾಯಿಸಿ, ರಸ್ತೆ ಮೇಲೆ ಮಲಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿಂದೆ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದಾಗ ಸರ್ಕಾರದ ಪರವಾಗಿ ಸ್ವತ: ಮಾನ್ಯ ಮುಖ್ಯಮಂತ್ರಿಗಳೇ ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದರು.

ಈಗ 2017–18ನೇ ಸಾಲಿನ ಬಜೆಟ್‌ನಲ್ಲಿ ಈ ಕುರಿತು ಯಾವುದೇ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸುತ್ತಿದ್ದಾರೆ.

ಇದರಿಂದಾಗಿ ಇಡೀ ಬೆಂಗಳೂರಿನ ಜನಜೀವನ ಅಸ್ಥವೆಸ್ಥಗೊಂಡಿದ್ದು, ರಾಜಾಜಿನಗರ, ಓಕಳಿಪುರಂ, ಆನಂದರಾವ್ ವೃತ್ತ, ರೇಸ್‌ಕೋರ್ಸ್ ರಸ್ತೆ, ಚಾಲುಕ್ಯ ವೃತ್ತ, ಪ್ಯಾಲೇಸ್ ರಸ್ತೆ, ಹಾಗೂ ಮೆಜೆಸ್ಟಿಕ್ ಸುತ್ತಮುತ್ತ ವಾಹನ ಸಂಚಾರ ದಟ್ಟಣೆ ಉಂಟಾಗಿರುತ್ತದೆ. ಅಲ್ಲದೇ ಓರ್ವ ಅಂಗನವಾಡಿ ಮಹಿಳೆ ಅಸ್ಥವ್ಯಸ್ಥಗೊಂಡಿದ್ದು ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆದ್ದರಿಂದ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು ನ್ಯಾಯಯುತವಾಗಿದ್ದು, ಈ ಬೇಡಿಕೆಗಳನ್ನು ಈಡೇರಿಸುವ ಕುರಿತು ಇಂದೇ ಸರ್ಕಾರ ತನ್ನ ನಿರ್ಧಾರವನ್ನು ತಿಳಿಸಲು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**(320) 21.03.17 SPR RN 1.10**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹೋರಾಟಗಾರರು ಬೇರೆ ಬೇರೆ ಕಾರಣಗಳಿಗಾಗಿ ಹೋರಾಟಗಳನ್ನು ಮಾಡುತ್ತಿರುವುದು ನಮ್ಮ ರಾಜ್ಯದಲ್ಲಿ ಅನೇಕ ವರ್ಷಗಳಿಂದ ಬಂದಂತಹ ವಿಷಯವಾಗಿದೆ. ಆದರೆ, ಹೋರಾಟದ ರೂಪುರೇಷೆಗಳನ್ನು ನೋಡಿಯೂ ಸಹ ಸರ್ಕಾರವು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಚೌಡರೆಡ್ಡಿ ತೂಪಲ್ಲಿ ರವರು ಈಗಷ್ಟೇ ಪ್ರಸ್ತಾಪಿಸಿದ ವಿಷಯಗಳು ನಿನ್ನೆಯ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಅದೇನೆಂದರೆ, ಆರರಿಂದ ಎಂಟು ಗಂಟೆಗಳವರೆಗೆ ಸಂಚಾರದ ಸಮಸ್ಯೆಯುಂಟಾಗಿತ್ತು. ನಾನು ಬೆಳಿಗ್ಗೆ ಹೋರಾಟದ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಅಲ್ಲಿ ಹನ್ನೆರೆಡು ಸಾವಿರ ಜನ ಇದ್ದರು. ಅಲ್ಲಿದ್ದ ಹೆಣ್ಣುಮಕ್ಕಳು ರಾತ್ರಿ ರಸ್ತೆಯ ಮೇಲೆ ಮಲಗಿದ್ದರು. ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಹೋ ರಾತ್ರಿ ಧರಣಿ ನಡೆಸುತ್ತಿರುತ್ತಾರೆ ಅದು ಬೇರೆ ವಿಚಾರ. ಹನ್ನೆರೆಡು ಸಾವಿರ ಜನ ರಸ್ತೆಯಲ್ಲಿಯೇ ಮಲಗಿದ್ದರು. ಈ ಬಗ್ಗೆ ಸರ್ಕಾರ ವಿಚಾರ ಮಾಡಬೇಕು. ಅವರಿಗೆ ಕನಿಷ್ಟ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ಮಾಡಬೇಕು. ನನಗೆ ತಿಳಿದುಬಂದಹಾಗೆ ಪಾಪ ! ಅವರುಗಳು ನೈಸರ್ಗಿಕ ಕ್ರಿಯೆಯನ್ನೂ ಸಹ ರಸ್ತೆಯಲ್ಲಿಯೇ ಮಾಡುತ್ತಿದ್ದರು. ಇದನ್ನು ಸದನದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುವುದಕ್ಕೂ ಸಹ ನಮಗೆ ಅಸಹ್ಯವೆಂದೆನಿಸುತ್ತದೆ. ಇಷ್ಟರ ಮಟ್ಟಿಗೆ ಸರ್ಕಾರವು ಬೇಜವಾಬ್ದಾರಿಯಿಂದ ವರ್ತಿಸಿದರೆ ಹೇಗೆ? ಇವತ್ತಿನ ದಿವಸ ಸಚಿವರೊಬ್ಬರು ಸ್ಥಳಕ್ಕೆ ಭೇಟಿ ನೀಡಿದ್ದರು. ಹೋರಾಟಗಾರರು ರಾತ್ರಿ ಮಲಗಿದ್ದರೋ ಅಥವಾ ಇಲ್ಲವೋ? ಅಥವಾ ಅವರುಗಳು ಸ್ಥಳವನ್ನು ಬಿಟ್ಟುಹೋಗಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸದಸ್ಯರು ವಿಚಾರಿಸಬೇಕಾಗಿತ್ತು. ಇದು ಸಚಿವರ ಜವಾಬ್ದಾರಿಯಾಗಿರುತ್ತದೆ. ನಾನು ನೋಡಿದ ಹಾಗೆ ಹನ್ನೆರೆಡು ಸಾವಿರ ಜನ ಅದೇ ರಸ್ತೆಯಲ್ಲಿದ್ದರು. ಒಂದು ಇರುವೆಯೂ ಹೋಗುವಷ್ಟು ಜಾಗ ಅಲ್ಲಿರಲಿಲ್ಲ. ನಾನು ಹೇಳುವುದೇನೆಂದರೆ, ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಕನಿಷ್ಟವಾಗಿ ಸ್ಪಂದಿಸಬೇಕು. ಹೋರಾಟಗಾರರ ಬೇಡಿಕೆ ಈಡೇರಿಸುವುದನ್ನು ಅಥವಾ ಬಿಡುವುದನ್ನು ನಂತರದಲ್ಲಿ ಚರ್ಚಿಸೋಣ. ಸರ್ಕಾರಕ್ಕೆ ಕನಿಷ್ಠ ಮನುಷ್ಯತ್ವವಾದರೂ ಇರಬೇಕು. ಸ್ಥಳಕ್ಕೆ ಹೋಗಿ ಬರುವುದಕ್ಕಾಯೇ ಮಂತ್ರಿಗಳು ಇರುವರೇ? ಬೆಂಗಳೂರಿನಂತಹ ನಗರದಲ್ಲಿ ಏನು ಬೇಕಾದರೂ ಅಕ್ರಮ ಚಟುವಟಿಕೆಗಳು ನಡೆಯುತ್ತವೆ. ಹೋರಾಟ ನಿರತ ಹೆಣ್ಣುಮಕ್ಕಳಿಗೆ ರಾತ್ರಿ ವೇಳೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಯಾರು ಜವಾಬ್ದಾರರು? ಅಲ್ಲಿಗೆ ನಿಯೋಜನೆಗೊಂಡ ಪೊಲೀಸರೂ ಎಷ್ಟು ಅಂತ ನೋಡುತ್ತಾರೆ. ನಾನು ಆ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಈ ಕೊನೆಯಿಂದ ಆ ಕೊನೆಯವರೆಗೂ ಪೂರ್ಣವಾಗಿ ಜನ ಸಂದಣಿ ಇದ್ದು, ಅಲ್ಲಿ ಒಂದು ಇಂಚಿನಷ್ಟೂ ಸ್ಥಳ ಇಲ್ಲ. ಇದನ್ನು ನೋಡಿದಾಗ, ಮೊದಲಿಗೆ ಸರ್ಕಾರವು ಅಸ್ತಿತ್ವದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬ ಭಾವನೆ ನಮಗೆ ಬರುತ್ತಿದೆ. ನೀವೇ ಈ ಬಗ್ಗೆ ವಿಚಾರ ಮಾಡಿ. ಅದೇ ಸ್ಥಳದಲ್ಲಿ ನಮ್ಮ ಮನೆಯ ಅಕ್ಕ-ತಂಗಿಯರಿದ್ದರೆ ನಾವುಗಳು ಏನು ಮಾಡುತ್ತಿದ್ದೇವು? ಹೋರಾಟಗಾರರ ಬೇಡಿಕೆಯ ಬಗ್ಗೆ ಸರ್ಕಾರ ಏನು ಉತ್ತರವನ್ನು ನೀಡುತ್ತದೋ ನೀಡಲಿ. ಇಂತಹ ಘಟನೆಯನ್ನು ನಾನು ನನ್ನ 36-37 ವರ್ಷಗಳ ಸೇವಾನುಭವದಲ್ಲಿ ಮೊಟ್ಟ ಮೊದಲನೇಯದಾಗಿ ನೋಡಿದ್ದೇನೆ. ಯಾವಾಗಲಾದರೂ ಈ ರೀತಿಯಾಗಿ ಹತ್ತರಿಂದ ಹನ್ನೆರೆಡು ಸಾವಿರದಷ್ಟು ಹೆಣ್ಣುಮಕ್ಕಳು ರಸ್ತೆಯಲ್ಲಿ ಮಲಗಿರುವುದ್ದನ್ನು ನಾನು ನೋಡಿಯೇ ಇಲ್ಲ. ಅವರುಗಳು ಊಟವನ್ನು ಎಲ್ಲಿ ಮಾಡಬೇಕು? ಅವರಿಗೆ ಔಷಧೋಪಚಾರ ಎಲ್ಲಿ? ನಾನು ಟಿ.ವಿ.ಯಲ್ಲಿ ವಿಷಯವನ್ನು ನೋಡಿ, ಬೆಳಿಗ್ಗೆ ಆರು ಗಂಟೆಯ ಸಮಯದಲ್ಲಿ ವಾಯುವಿಹಾರಕ್ಕೆ ಹೋಗುವ ಸಂದರ್ಭದಲ್ಲಿ ಸ್ಥಳಕ್ಕೆ ಹೋಗಿದ್ದೇನು. ಅಲ್ಲಿ ಅಸ್ವಸ್ಥಗೊಂಡ ಇಬ್ಬರು ಹಣ್ಣುಮಕ್ಕಳನ್ನು ನಗರದ ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿನ ಎಷ್ಟೋ ಜನ ಹೆಣ್ಣುಮಕ್ಕಳಿಗೆ ಕುಡಿಯುವುದಕ್ಕೆ ನೀರೂ ಸಹ ಇಲ್ಲ. ಅಲ್ಲಿನ ಪರಿಸ್ಥಿತಿ ಹೇಗಿದೆ ಎಂದರೆ, ಒಬ್ಬರಿಗೆ ಕುಡಿಯುವ ನೀರಿನ ಬಾಟಲ್‌ನ್ನು ನೀಡಿದರೆ, 20 ಜನ ಅದನ್ನು ಕಿತ್ತುಕೊಳ್ಳುತ್ತಾರೆ. ಪರಿಸ್ಥಿತಿ ಹೀಗಿರುವಾಗ, ಶ್ರೀಮತಿ ಮೋಟಮ್ಮನವರೇ ನೀವೇ ಹೇಳಿ. ನಾನು ಇಲ್ಲಿ ರಾಜಕೀಯದ ಬಗ್ಗೆ ಖಂಡಿತವಾಗಿಯೂ ಮಾತನಾಡುವುದಿಲ್ಲ. ನಮ್ಮ ನಿಮ್ಮ ಮನೆಗಳಲ್ಲಿರುವ ಒಬ್ಬ ಹೆಣ್ಣುಮಗಳು ಅಲ್ಲಿರುವ ಹನ್ನೆರೆಡು ಸಾವಿರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನದೊಳಗೆ ಅಲ್ಲಿಯೇ ರಾತ್ರಿಯಿಡಿ ವಾಸ್ತವ್ಯ ಹೂಡಿದಾಗ, ಅಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ, ಯಾರು ಜವಾಬ್ದಾರರು? ಬೆಂಗಳೂರು ನಗರದ ಪರಿಸ್ಥಿತಿ ಹೇಗಿದೆ ಎಂಬುದು ತಮಗೆ ಗೊತ್ತಿರುವ ವಿಚಾರವಾಗಿದೆ. ಇಲ್ಲಿ ನಿತ್ಯವೂ ಕೊಲೆಗಳಾಗುತ್ತವೆ, ಹೆಣ್ಣುಮಕ್ಕಳನ್ನು ಅಪಹರಿಸುತ್ತಾರೆ, ಅವರುಗಳ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಾರೆ. ಇಂತಹ ಅಕ್ರಮ ಚಟುವಟಿಕೆಗಳಾದರೆ ಯಾರು ಹೊಣೆ? ಅಲ್ಲಿನ ಪೋಲೀಸರು ಇದ್ದಾರೆ ಇಲ್ಲವೆಂದಲ್ಲ. ಆದರೆ, ಅಲ್ಲಿ ಎಷ್ಟು ಜನ ಪೊಲೀಸರಿದ್ದಾರೆ? ಆ ಕಡೆ ನಾಲ್ಕು ಜನ ಹಾಗೂ ಈ ಕಡೆ ನಾಲ್ಕು ಜನ ಪೊಲೀಸರಿರುತ್ತಾರೆ ಅಷ್ಟೇ. ನಾನು ಬೆಳಿಗ್ಗೆ ನೋಡಿದ ಹಾಗೆ ಒಟ್ಟಿನಲ್ಲಿ 20 ಜನ ಮಾತ್ರ ಪೊಲೀಸಿನವರಿದ್ದರು. ಈ ಬಗ್ಗೆ ಅಲ್ಲಿನ ಜನರನ್ನು ವಿಚಾರಿಸಿದಾಗ, ರಾತ್ರಿ ಯಾರೂ ಪೊಲೀಸಿನವರೂ ಇರಲಿಲ್ಲವೆಂದು ಹೇಳಿದರು. ಅಲ್ಲಿನ ಹೆಣ್ಣುಮಕ್ಕಳ ರೋದನೆಯನ್ನು ನೋಡುವುದಕ್ಕಾಗುವುದಿಲ್ಲ. ನಾನು ಬಹಳ ಗಂಭೀರವಾದಂತಹ ಚಿಂತನೆಯನ್ನು ಮಾಡುತ್ತೇನೆ. ಯಾವುದೇ ರಾಜಕಾರಣಕ್ಕಾಗಿ ಅಲ್ಲ. ದಯಮಾಡಿ ಮೊದಲು ಸರ್ಕಾರದವರು ಈ ರಾಜ್ಯದ ಜನತೆಯ ಕ್ಷಮೆಯನ್ನು ಕೇಳಬೇಕು. ಈ ರೀತಿಯಾಗಿ ಹೆಣ್ಣುಮಕ್ಕಳನ್ನು ನಡೆಸಿಕೊಂಡಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಬೇಕು. ನಂತರದಲ್ಲಿ ಹೋರಾಟಗಾರರ ಬೇಡಿಕೆಗಳೇನಿವೆ ಅವುಗಳು ಬಗ್ಗೆ ಅವರುಗಳು ಚರ್ಚೆಯನ್ನು ಮಾಡುತ್ತಾರೆ. ಇಲ್ಲಿ ಹೋರಾಟಗಾರರ ಬೇಡಿಕೆಗಳನ್ನು ಕೊಟ್ಟಿದ್ದೇವೆ. ನಮ್ಮ ಮಾನ್ಯ ಇಬ್ಬರು ಸದಸ್ಯರುಗಳು ಇಲ್ಲಿ ಈ ವಿಚಾರದ ಬಗ್ಗೆ ಓದಿದ್ದಾರೆ. ನಮ್ಮ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು ಮತ್ತು ಗೋವಾಗಳಲ್ಲಿ ನೀಡುತ್ತಿರುವ ರೂಪಾಯಿ 14,000, 12,000 ಗಳ ವೇತನಗಳ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಹಿನ್ನೆಲೆಯಲ್ಲಿ ಇದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ ಹಾಗೂ ಅವರು ಈ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳೇ ಸ್ವತ: ಇದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಬೇಕು ಅಥವಾ ಏಳೆಂಟು ಸಚಿವರುಗಳು ಒಟ್ಟಾಗಿ ಸೇರಿಕೊಂಡು ಈ ಬಗ್ಗೆ ನಿರ್ಧಾರ ಮಾಡಬೇಕು. ಪರಿಸ್ಥಿತಿ ಹೀಗಾದಾಗ, ಸರ್ಕಾರ ಅಸ್ತಿತ್ವದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಅನುಮಾನ ಮೂಡುತ್ತದೆ. ಇದಕ್ಕೆ ನೀವೇ ಉತ್ತರವನ್ನು ಹೇಳಿ. ಸರ್ಕಾರದವರು ಯಾವ ನೈತಿಕತೆಯಿಂದ ಉತ್ತರವನ್ನು ಹೇಳುತ್ತಾರೋ ಹೇಳಲಿ. ಹೋರಾಟಗಾರರ ಬೇಡಿಕೆಗಳ ಬಗ್ಗೆ ನಂತರದಲ್ಲಿ ಚರ್ಚೆಯನ್ನು ಮಾಡೋಣ. ಈ ಘಟನೆಯ ಬಗ್ಗೆ ಸರ್ಕಾರಕ್ಕೆ ಏನೂ ಅನ್ನಿಸುವುದಿಲ್ಲ. ಇದಕ್ಕೆ ಸರ್ಕಾರವೇನಾದರೂ ಸ್ಪಂದಿಸಿದೆಯೇ? ಇಲ್ಲಿ ಬೇಕಾದಷ್ಟು ಮಹಿಳೆಯರು ಸದಸ್ಯರುಗಳು, ಮಂತ್ರಿಗಳಾಗಿದ್ದೀರಿ. ಹೆಣ್ಣುಮಗಳು ಒಬ್ಬ ಮಂತ್ರಿಯಾಗಿ ಸರ್ಕಾರದ ಹತ್ತಿರ ಅಥವಾ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈ ವಿಷಯವನ್ನು ಪ್ರಸ್ತಾಪಿಸಲಿ. ಜೀವ ಹೋಗುವಂತಹ ಪರಿಸ್ಥಿತಿ ಇದಾಗಿದೆ. ಮುಖ್ಯಮಂತ್ರಿಗಳು, ಹಿರಿಯ ಏಳೆಂಟು–ಹತ್ತು ಸಚಿವರುಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಥಳಕ್ಕೆ ಭೇಟಿ ಕೊಡಬೇಕು. ಸಮಸ್ಯೆಯನ್ನು ಬಗೆಹರಿಸಲು ಏನಾದರೊಂದು ಪ್ರಯತ್ನವನ್ನು ಮಾಡಬೇಕು. ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ, ನನ್ನ ಮನಸ್ಸಿಗೆ ಬಹಳ ನೋವುಂಟಾಗಿದೆ.

ಇವತ್ತಿನ ದಿವಸ ನಾವು ಬಹಿರ್ದೆಸೆಗೆ ಯಾರೂ ಬಯಲಿಗೆ ಹೋಗಬಾರದು ಎಂಬುದಾಗಿ ಪ್ರಚಾರ ಮಾಡುತ್ತೇವೆ. ಎಲ್ಲರಿಗೂ ಮರ್ಯಾದೆ ಇದೆ. ಅಲ್ಲಿನ ಪರಿಸ್ಥಿತಿಯನ್ನು ನಾನು ಹೇಳಬಾರದು. ಅಲ್ಲಿನ ಕಂಪೌಂಡ್‌ನೊಳಗೆ ಹೋಗದಂತಹ ಪರಿಸ್ಥಿತಿಯುಂಟಾಗಿದೆ. ಈ ರೀತಿಯಾಗಿ ಅಲ್ಲಿನ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಸರ್ಕಾರಕ್ಕೆ ಸ್ವಲ್ಪವಾದರೂ ನೈತಿಕತೆ ಇರಬೇಕು. ಈ ಹಿನ್ನೆಲೆಯಲ್ಲಿ ಮೊದಲು ನಾನು ಹೇಳುವುದೇನೆಂದರೆ, ಸರ್ಕಾರ ಈ ಬಗ್ಗೆ ಸ್ಪಷ್ಟವಾದ ನಿರ್ಧಾರವನ್ನು ನಮಗೆ ಹೇಳಬೇಕು.

ಮತ್ತೊಂದು ವಿಚಾರವೆನೆಂದರೆ, ಸರ್ಕಾರವು ಹತ್ತು, ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಹೋರಾಟಗಾರರಿಗೆ ಬೇಡಿಕೆಗಳನ್ನು ಪೂರೈಸುವುದಕ್ಕೆ 612 ಕೋಟಿ ರೂಪಾಯಿಗಳು ಬೇಕಾಗುತ್ತವೆ ಎಂಬುದಾಗಿ ಹೇಳಿದ್ದಾರೆ. ಆದರೆ ಈ ಸಂಬಂಧ ಆಯವ್ಯಯದಲ್ಲಿ ನೂರು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ನನ್ನ ಮನವಿ ಏನೆಂದರೆ, ದಯಮಾಡಿ ಐನೂರು-ಆರು ನೂರು ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮಂಜೂರು ಮಾಡಿ ಅವರನ್ನು ಕಳುಹಿಸಿ ಕೊಡಿ. ಅವರುಗಳು ನಿರ್ವಹಿಸುತ್ತಿರುವ ಕೆಲಸಗಳ ಬಗ್ಗೆ ಎಲ್ಲವನ್ನೂ ವಿವರಿಸಿದ್ದಾರೆ. ಐದು ಜನ ಹೆಣ್ಣುಮಕ್ಕಳು ಮಾಡುವಂತಹ ಕೆಲಸಗಳನ್ನು ಕೇವಲ ಇಬ್ಬರು ಮಾಡುತ್ತಿದ್ದಾರೆ. ಕಳೆದ ಆರೆಂಟು ತಿಂಗಳುಗಳಿಂದ ಅವರುಗಳಿಗೆ ಎರಡು ಗಂಟೆಗಳ ಹೆಚ್ಚಿನ ಅವಧಿಯನ್ನು ನಿಗದಿ ಮಾಡಿದ್ದಾರೆ. ಅವರುಗಳು ಹಗಲು-ರಾತ್ರಿ ದುಡಿಯುತ್ತಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡಬೇಕು ಎಂಬ ಯೋಜನೆಯನ್ನು ಸರ್ಕಾರದವರು ಅನುಷ್ಠಾನಗೊಳಿಸಿದ್ದಾರೆ. ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡುವವರಿಗೇ ಪೌಷ್ಠಿಕ ಆಹಾರ ಇಲ್ಲದಂತಾಗಿದೆ. ಅವರುಗಳು ಪ್ರತಿಭಟನೆಯನ್ನೂ ಸಹ ಮಾಡಿದ್ದಾರೆ. ಇವತ್ತಿನ ದಿವಸ ಸ್ಥಳದ್ದಲ್ಲಿದ್ದ ಎಷ್ಟೋ ಜನರಿಗೆ ಸ್ಮೃತಿ ತಪ್ಪಿಹೋಗಿದೆ. ಆ ಹಿನ್ನೆಲೆಯಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವರುಗಳ ಹೋರಾಟದಿಂದಾಗಿ ಎಂಟು ಗಂಟೆಗಳವರೆಗೆ ರಸ್ತೆಯಲ್ಲಿ ಸಂಚಾರಕ್ಕೆ ವ್ಯತ್ಯಯವುಂಟಾಗಿರುವ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಹೋರಾಟಗಾರರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಹೋರಾಟಗಾರರು ತಮ್ಮಗಳ ಮೇಲೆ ಗುಂಡು ಹಾರಿಸಿದರೂ ಕೂಡ ಅವರುಗಳು ಸ್ಥಳದಿಂದ ಹೋಗುವುದಿಲ್ಲವೆಂಬುದಾಗಿ ಹೇಳುತ್ತಾರೆ. ಸರ್ಕಾರವು ತಕ್ಷಣವೇ ತನ್ನೆಲ್ಲಾ ಕೆಲಸಗಳನ್ನು ಬಿಟ್ಟು ಈ ಸಂಬಂಧ ಮುಖ್ಯಮಂತ್ರಿಗಳ ಅಥವಾ ಇನ್ನಾವುದೇ ಸಚಿವರುಗಳ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಕರೆದು ಅಲ್ಲಿ ಒಂದು ತೀರ್ಮಾನವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳಬೇಕು. ಸದರಿ ಸಭೆಗೆ ನಮ್ಮನ್ನೂ ಕರೆಯಿರಿ. ಒಟ್ಟಿನಲ್ಲಿ ಏನಾದರೊಂದು ಕ್ರಮವನ್ನು ತೆಗೆದುಕೊಳ್ಳಿ. ನಾನು ಕೇವಲ ಸರ್ಕಾರದವರ ಮೇಲೆ ಆಪಾದನೆ ಮಾಡುವುದಿಲ್ಲ. ಇದರಲ್ಲಿ ನಮ್ಮೆಲ್ಲರ ಜವಾಬ್ದಾರಿಯೂ ಇದೆ. ಮುಖ್ಯಮಂತ್ರಿಗಳು ತಕ್ಷಣ ಎರಡೂ ಮನೆಗಳ ನಾಯಕರುಗಳ ಸಭೆಯನ್ನು ಕರೆದು ಅಲ್ಲಿ ಚರ್ಚೆ ಮಾಡಿ ಏನಾದರೊಂದು ತೀರ್ಮಾನವನ್ನು ಮಾಡಿದರೆ ನಮ್ಮೆಲ್ಲರ ಮರ್ಯಾದೆ ಉಳಿಯುತ್ತದೆ. ನಾನು ಕೇವಲ ಸರ್ಕಾರದ ಬಗ್ಗೆ ಮಾತ್ರವೇ ಹೇಳುವುದಕ್ಕೆ ಹೋಗುವುದಿಲ್ಲ. ಶಾಸನ ಸಭೆಗಳು ನಡೆದಿವೆ. ನಾವುಗಳೆಲ್ಲರೂ 300 ಜನ ಶಾಸಕರಿದ್ದೇವೆ. ನಾಳೆಯ ದಿವಸ ಜನ, ಮಾಧ್ಯಮ ಪ್ರತಿನಿಧಿಗಳು ನಮ್ಮ ಬಗ್ಗೆ ಏನು ಹೇಳುತ್ತಾರೆ? ನಮಗೆ ಮನುಷ್ಯತ್ವವಿದೆಯೇ ಎಂದು ಕೇಳುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಬಹಳ ಕಳಕಳಿಯಿಂದ ತಮಗೆ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ಈ ಸಂಬಂಧ ತತ್‌ಕ್ಷಣವೇ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇಲ್ಲಿರುವ ಒಂದೇ ಸಮಸ್ಯೆ ಏನೆಂದರೆ . . .

**ಸಭಾಪತಿಯವರು:–** ಶ್ರೀ ಈಶ್ವರಪ್ಪನವರೇ ಒಂದು ನಿಮಿಷ ಕುಳಿತುಕೊಳ್ಳಿ. ನಾನು ಈ ದಿನ ಬೆಳಿಗ್ಗೆ ಒಂದು ಮಾತನ್ನು ಹೇಳಿದ್ದೇನೆ. ಶೂನ್ಯ ವೇಳೆಯಲ್ಲಿ ಕೊಟ್ಟಿರುವಂತಹ ವಿಷಯಕ್ಕೆ ಸಹಿ ಮಾಡಿರುವ ಸದಸ್ಯರುಗಳೇ ನಿಯಮ 59 ರಡಿ ನಿಲುವಳಿ ಸೂಚನೆಗೂ ಸಹ ಸಹಿಯನ್ನು ಮಾಡಿದ್ದಾರೆ. ಆದರೆ ತಾಂತ್ರಿಕ ಕಾರಣಗಳಿಗಾಗಿ ನಾನು ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ನೀಡುವುದಕ್ಕೆ ಬರುವುದಿಲ್ಲ. ಶೂನ್ಯ ವೇಳೆಯ ಸಂದರ್ಭದಲ್ಲಿ ಅದಕ್ಕೆ ಸಹಿ ಮಾಡಿರುವಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರಿಗೆ ಸ್ವಲ್ಪ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಶೂನ್ಯವೇಳೆಯಲ್ಲಿ ನೋಟೀಸ್‌ನ್ನು ಮಾತ್ರವೇ ಓದಿ ಎಂದು ನಾನು ಅವರಿಗೆ ಹೇಳಿಲ್ಲ. ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಹೀಗಾಗಿ ಅವರು ಮಾತನಾಡಿದ್ದಾರೆ. ಇದನ್ನು ನಾನು ಚರ್ಚೆಗೆ ಎಂದು ಪ್ರಾರಂಭಿಸಿದರೆ, ಚರ್ಚೆಯೂ ಎಲ್ಲಿಗಾದರೂ ಹೋಗುತ್ತದೆ. ಆದರೆ, ಸರ್ಕಾರ ಕಡೆಯಿಂದ ಯಾರು ಉತ್ತರವನ್ನು ಕೊಡುತ್ತಾರೆ? ಉತ್ತರವಿಲ್ಲದೇ ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಸರ್ಕಾರದ ನಿಲುವು ಏನು ಎಂದು ಕೇಳಿದರೆ, ಮುಂದೇನು ಮಾಡಬೇಕು ಎಂಬ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕೇಳಿ ನೋಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನನ್ನದು ಒಂದೇ ಒಂದು ಬೇಡಿಕೆ ಇದೆ. ನಾನು ಹೇಳುವುದು ಇಷ್ಟೆ. ಮೂರುವರೆ ಸಾವಿರ–ಏಳು ಸಾವಿರ ರೂಪಾಯಿಗಳು ; ಕೇವಲ ಮೂರುವರೆ ಸಾವಿರ ರೂಪಾಯಿಗಳಲ್ಲಿ ಯಾರಾದರೂ ಜೀವನವನ್ನು ಸಾಗಿಸಲಿಕ್ಕೆ ಆಗುತ್ತದೆಯೇ? ದಯವಿಟ್ಟು ಯೋಚನೆ ಮಾಡಿ. ಏಕೆಂದರೆ ಹೆಣ್ಣುಮಕ್ಕಳು ಬೆಳಿಗ್ಗೆಯಿಂದ ಸಂಜೆಯವರೆಗೂ ಕೂಡ ಅನೇಕ ಇಲಾಖೆಗಳಿಗೆ ಹೋಗಬೇಕು. ನಾನು ಹೇಳುವ ಎರಡು ವಿಚಾರಗಳ ಪೈಕಿ ಮೊದಲನೇಯ ವಿಚಾರವೇನೆಂದರೆ ಸಂಬಳ, ವೇತನಗಳನ್ನು ಜಾಸ್ತಿ ಮಾಡುವ ದಿಕ್ಕಿನಲ್ಲಿ . . . . .

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ,..

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆ ಎಂದು ಕೇಳಿದ ಮೇಲೆ ನಿಮಗೆ ಮಾತನಾಡಲು ಅವಕಾಶ ಕೊಡಬೇಕೋ ಅಥವಾ ಬೇಡವೋ ಎಂಬ ಬಗ್ಗೆ ತೀರ್ಮಾನವನ್ನು ಮಾಡುತ್ತೇನೆ. ಶೂನ್ಯ ವೇಳೆಯಲ್ಲಿ ಬಡ್ಜೆಟ್ ವಿಷಯದ ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ. ಬಡ್ಜೆಟ್ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಬಡ್ಜೆಟ್ ಮೇಲೆ ಚರ್ಚೆಯಾಗಬೇಕಾಗುತ್ತದೆ. ಸಂಬಳ, ಸಾರಿಗೆ, ಭತ್ಯೆ ಇವುಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾವು ಅವರ ಸಮಸ್ಯೆಗಳನ್ನು ಆಲಿಸಿ ಬಂದಿದ್ದೇವೆ.

**ಸಭಾಪತಿಯವರು:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದಾರೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ, ಅವರು ಸ್ಥಳಕ್ಕೆ ಹೋಗಿ ಬಂದಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಅವರ ಸಮಸ್ಯೆಗಳನ್ನು ಆಲಿಸಿ ಬಂದಿದ್ದೇವೆ. ಅವರಿಗೆ ಅವಕಾಶ ಮಾಡಿಕೊಟ್ಟಿರುವುದು ಏಕೆ?

**ಸಭಾಪತಿಯವರು:–** ಆಯಿತು. ನೋಟಿಸ್ ಕೊಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಆದರೆ ಅವರಿಗೆ ಅವಕಾಶ ಮಾಡಿಕೊಟ್ಟು ನಮಗೆ ಏಕೆ ಕೊಡುತ್ತಿಲ್ಲ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಅವರಿಗೂ ಸಹ ಮಾತನಾಡಲು ಅವಕಾಶ ಕೊಡುತ್ತಿಲ್ಲ. ಸಹಿ ಮಾಡಿರುವ ಸದಸ್ಯರಿಗೆ ಮಾತ್ರ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ವಿರೋಧ ಪಕ್ಷದ ನಾಯಕರಿಗೆ ಎಲ್ಲಾ ವಿಷಯದಲ್ಲೂ ಮಾತನಾಡುವುದಕ್ಕೆ ನಾನು ಅವಕಾಶ ಕೊಡಬೇಕಾಗುತ್ತದೆ.

**(321) 21.03.2017 1.20 MGN-VK**

**ಸಭಾಪತಿಯವರು (ಮುಂದು):**

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಲು ಎರಡು ನಿಮಿಷ ಕಾಲಾವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡರು, ಅವರಿಗೆ ಎರಡು ನಿಮಿಷ ಕಾಲಾವಕಾಶ ಕೊಟ್ಟಿದ್ದೇನೆ ಅಷ್ಟೆ. ಬೇರೆ ಯಾರಿಗೂ ನಾನು ಅವಕಾಶ ಕೊಡುತ್ತಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವ ಎಲ್ಲರಿಗೂ ಸಹ ನಿಯಮಾವಳಿಗಳು ಒಂದೇ. ಆದ್ದರಿಂದ ದಯಮಾಡಿ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆಯೋ ನೋಡೋಣ. ಅನಂತರ ಈ ವಿಚಾರದ ಬಗ್ಗೆ ತೀರ್ಮಾನ ಮಾಡೋಣ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೆ, ಕ್ಷಮಿಸಬೇಕು. ಶೂನ್ಯವೇಳೆಯಲ್ಲಿ ನಮಗೊಂದು ನಿಯಮ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇನ್ನೊಂದು ನಿಯಮ ಎನ್ನುವಂತೆ ಮಾಡುವುದು ಸರಿಯಲ್ಲ. ಬೇರೆ ಸಂದರ್ಭಗಳಲ್ಲಿ ಅವರು ಯಾವಾಗ ಏನು ಬೇಕಾದರೂ ಮಧ್ಯಪ್ರವೇಶ ಮಾಡಿ ಮಾತನಾಡಲಿ. ಆದರೆ ಶೂನ್ಯವೇಳೆಯ ನಿಯಮ ಎಲ್ಲರಿಗೂ ಒಂದೇ ಅಲ್ಲವೆ, ವಿಷಯವನ್ನು ಪ್ರಸ್ತಾಪ ಮಾಡಿದ ನಂತರ ಸ್ಪಷ್ಟೀಕರಣವನ್ನು ಕೇಳಬಾರದು ಎಂದ ಮೇಲೆ ಕೇಳಬಾರದು. ಇಲ್ಲವಾದರೆ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಟ್ಟ ಮೇಲೆ ನಮಗೂ ಸಹ ತಾವು ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ.

**ಸಭಾಪತಿಯವರು:–** ನಾನು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಮಾತ್ರ ಮಾತನಾಡಲು ಅವಕಾಶ ಕೊಟ್ಟಿದ್ದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರಿದ್ದಾರೆ, ಅವರೇ ಹೇಳಲಿ. ಹಿಂದೆ ನಾನು ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿದ್ದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿ ಮಾತನಾಡಿದಂತಹ ಸಂದರ್ಭದಲ್ಲಿ ಎಲ್ಲದಕ್ಕೂ ಮಧ್ಯದಲ್ಲಿ ಬಾಯಿ ಹಾಕಬೇಡಿ ಎಂದು ಅವರು ನನಗೆ ಹೇಳುತ್ತಿದ್ದರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೆ, ನಾನು ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ಆಯಿತು, ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ನಿಮಿಷ ಮಾತನಾಡುತ್ತಾರೆ ಬಿಡಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಆದರೂ ತಾವು ಆ ರೀತಿ ತಾರತಮ್ಯ ಮಾಡಬಾರದು ಎಂಬುದು ನಮ್ಮ ವಿನಂತಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೆ, ನಾನು ಹೇಳುವುದಿಷ್ಟೆ. ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 7,000/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ. 3,500/– ವೇತನವನ್ನು ಕೊಡಲಾಗುತ್ತಿದೆ. ಅಷ್ಟು ಕಡಿಮೆ ವೇತನವನ್ನು ಪಡೆದು ಹೆಣ್ಣುಮಗಳು ಸಂಸಾರ ನಡೆಸುವುದಕ್ಕೆ ಸಾಧ್ಯವೆ? ಆದ್ದರಿಂದ ಸರ್ಕಾರ ಈ ಬಗ್ಗೆ ದಯಮಾಡಿ ಮಾನವೀಯತೆಯ ದೃಷ್ಟಿಯಿಂದ ಯೋಚನೆ ಮಾಡಬೇಕೆಂಬುದು ನನ್ನ ಮೊದಲನೆಯ ವಿನಂತಿಯಾಗಿದೆ. ಎರಡನೆಯ ವಿಚಾರವೆಂದರೆ, ನಾನು ನೆನ್ನೆ ದಿವಸ ಅವರು ಧರಣಿ ನಡೆಸುತ್ತಿರುವ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ. ಅಲ್ಲಿನ ಪರಿಸ್ಥಿತಿ ಖಂಡಿತವಾಗಿಯೂ ಬಹಳ ಭೀಕರವಾಗಿದ್ದು, ಅದನ್ನು ವರ್ಣನೆ ಮಾಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಆ ಮಹಿಳೆಯರು ಎದುರಿಸುತ್ತಿರುವ ಪರಿಸ್ಥಿತಿ ನೋಡಿದರೆ ಎಂತಹವರಿಗೂ ಬಹಳ ನೋವಾಗುತ್ತದೆ. ಅದಕ್ಕಾಗಿ ಈ ವ್ಯವಸ್ಥೆಯ ದೃಷ್ಟಿಯಿಂದ ಏನು ಮಾಡಬೇಕೆಂಬುದು ಒಂದು ವಿಚಾರವಾದರೆ, ಬೇರೆ ಬೇರೆ ರಾಜ್ಯಗಳಲ್ಲಿ ಅವರಿಗೆ ಯಾವ ಪ್ರಮಾಣದ ವೇತನವನ್ನು ನೀಡಲಾಗುತ್ತಿದೆ ಎಂಬುದನ್ನು ಗಮನಿಸಿ ನಮ್ಮ ರಾಜ್ಯದಲ್ಲಿಯೂ ಅವರಿಗೆ ವೇತನವನ್ನು ಹೆಚ್ಚಿಸಬೇಕು. ಜೊತೆಗೆ ಈ ವಿಚಾರದ ಬಗ್ಗೆ ತಕ್ಷಣವೇ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇವತ್ತೇ ಒಂದು ಸಭೆಯನ್ನು ನಡೆಸುವುದು ಒಳ್ಳೆಯದು. ಎರಡೂ ಸದನಗಳ ವಿರೋಧ ಪಕ್ಷದ ನಾಯಕರು, ಸಂಬಂಧಪಟ್ಟ ಮಂತ್ರಿಗಳು, ಅಂಗನವಾಡಿ ಕಾರ್ಯಕರ್ತರ ಸಂಘದ ಪ್ರಮುಖರನ್ನು ಕರೆದು ಸಭೆ ನಡೆಸಬೇಕೆಂದು ವಿನಂತಿಸುತ್ತೇನೆ. ಇವತ್ತು ಏನು ಧರಣಿ ನಡೆಯುತ್ತಿದೆ, ಈ ಧರಣಿಯನ್ನು ಅವರು ನಿರಂತರವಾಗಿ ನಡೆಸುತ್ತಿದ್ದಾರೆ. ಅವರ ಬೇಡಿಕೆ ಈಡೇರುವವರೆಗೆ ಅವರು ಅಲ್ಲಿಂದ ಹೋಗುವುದಿಲ್ಲ ಎಂದು ಹಠ ಹಿಡಿದಿದ್ದಾರೆ. ಅದಕ್ಕೋಸ್ಕರವಾಗಿ ತಕ್ಷಣವೇ ಇವತ್ತೇ ಒಂದು ಸಭೆಯನ್ನು ಮಾಡಿ, ಅವರಿಗೆ ಬೇಕಾದಂತಹ ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನನಗೂ ಸಹ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಸಚಿವರು ಮಾತನಾಡಿದ ನಂತರ ನೋಡೋಣ. ಮೊದಲು ಸಚಿವರು ಈ ವಿಚಾರದ ಬಗ್ಗೆ ಏನು ಹೇಳುತ್ತಾರೆಯೋ ಕೇಳಿಬಿಡೋಣ.

**ಶ್ರೀ ಡಿ.ಕೆ.ಶಿವಕುಮಾರ್:–** ಸನ್ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ, ಅಂಗನವಾಡಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ ಚರಿತ್ರೆಗೆ ಸಂಬಂಧಿಸಿದಂತೆ ನಾನೀಗ ಹೋಗಲಿಚ್ಛಿಸುವುದಿಲ್ಲ. ಏಕೆಂದರೆ ನಾನು ಬಹಳ ವರ್ಷದಿಂದ ಈ setup ನಲ್ಲಿರುವುದರಿಂದ ನನಗೂ ಅವರ ಸ್ಥಿತಿಗತಿಗಳ ಬಗ್ಗೆ ತಿಳಿದಿದೆ. ಹಾಗಾಗಿ ನನಗೂ ಅವರ ನೋವು, ಅವರ ಪರಿಸ್ಥಿತಿ; ಕೇಂದ್ರ ಸರ್ಕಾರದ ಪಾಲು – ರಾಜ್ಯ ಸರ್ಕಾರದ ಪಾಲು; ನಾವು ಎಷ್ಟು ಸಹಾಯ ಮಾಡಬಹುದು; ಯಾವ ಸರ್ಕಾರ ಬಂದಾಗ ಅವರ ವಿಚಾರದಲ್ಲಿ ಎಷ್ಟೆಷ್ಟು ಸಹಾಯ ಮಾಡಿದೆ ಎಂಬುದನ್ನು, I don't want to go in detail. ಏಕೆಂದರೆ ಅದನ್ನೆಲ್ಲಾ ಹೇಳುವುದಕ್ಕೆ ಹೋದರೆ ಸುಮ್ಮನೆ ಕೆಣಕಿದಂತಾಗುತ್ತದೆ. ಈಗಲೂ ಸಹ ಅವರ ವಿಚಾರದಲ್ಲಿ ನಮಗೆ ಸಹಾನುಭೂತಿ ಇದೆ. ಇಡೀ ಸರ್ಕಾರ, ಸಂಬಂಧಪಟ್ಟ ನಮ್ಮ ಸಚಿವರು ಅವರ ಬೇಡಿಕೆಯನ್ನು ಆಲಿಸಬೇಕು, ಏನು ವಿಚಾರ ಎಂಬುದನ್ನು ತಿಳಿಯಬೇಕು ಎಂದು ಅನೇಕ ಮುಖಂಡರು ಈಗಾಗಲೇ ಅಲ್ಲಿಗೆ ಭೇಟಿ ಕೊಟ್ಟು ಬಂದಿದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು, ಬೇರೆ ಬೇರೆ ಶಾಸಕರು ಅಲ್ಲಿಗೆ ಭೇಟಿ ಕೊಟ್ಟು ಏನು ಪ್ರಸ್ತಾವನೆ ಮಾಡಿದ್ದಾರೆ, ಅದೇರೀತಿ ನಮ್ಮ ಸರ್ಕಾರದವರೂ ಈಗಾಗಲೇ ಅಲ್ಲಿಗೆ ಭೇಟಿ ಕೊಟ್ಟಿದ್ದು, ಅವರ ಜೊತೆಯಲ್ಲಿ ಮಾತುಕತೆ ನಡೆಸಿ ವಾಸ್ತವಾಂಶದ ಬಗ್ಗೆ ಅವರಿಗೆ ತಿಳುವಳಿಕೆ ಕೊಟ್ಟು ಬಂದಿದ್ದಾರೆ. ವಾಸ್ತವಾಂಶ ಏನಿದೆ, ಯಾರ್‍ಯಾರು ಎಷ್ಟೆಷ್ಟು ಅನುದಾನವನ್ನು ಹಂಚಿಕೆ ಮಾಡಬೇಕೆನ್ನುವ ವಿಚಾರ ಅವರಿಗೂ ಸಹ ಗೊತ್ತಿದೆ. ಈ ವಿಚಾರದ ಬಗ್ಗೆ ಈಗ ಮಾನ್ಯ ಸದಸ್ಯರು ಬಹಳ ವಿವರವಾಗಿ ಪ್ರಸ್ತಾಪಿಸಿ, ನಿಲುವಳಿ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಸೂಚನಾ ಪತ್ರವನ್ನು ಕೊಟ್ಟು, ಇದು ಬಹಳ ಗಂಭೀರವಾದ ವಿಚಾರವಾಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಗಂಭೀರ ವಿಷಯದ ಬಗ್ಗೆ ನಮ್ಮ ಸಂಬಂಧಪಟ್ಟ ಸಚಿವರಿಂದ ಈ ಬಗ್ಗೆ ವಿವರವಾದ ಉತ್ತರವನ್ನು ಕೊಡಿಸಲಾಗುತ್ತದೆ. I will get the detailed reply from the Hon'ble Minister.

**ಶ್ರೀ ಬಸವರಾಜ ಎಸ್. ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಯಾವಾಗ ಉತ್ತರ ಕೊಡಿಸಲಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಕೆಳಮನೆಯಲ್ಲಿದ್ದಾರೆ, ಅವರನ್ನು ಕರೆಸಿ ಅದಕ್ಕೆ ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈಗಾಗಲೇ ಧರಣಿ ನಡೆಸುತ್ತಿದ್ದಾರೆ, ಹೀಗಿರುವಾಗ ಇನ್ನು ಯಾವಾಗ ಸರ್ಕಾರದಿಂದ ಉತ್ತರ ಕೊಡಿಸುತ್ತೀರಿ; ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಸಾವಿರಾರು ಜನ ಮಹಿಳೆಯರು ಬೀದಿಯಲ್ಲಿ ಧರಣಿ ನಡೆಸುತ್ತಿರುವಂತಹ ಈ ಸಂದರ್ಭದಲ್ಲಿ, ಇದಕ್ಕೆ ಸರ್ಕಾರದಿಂದ ಉತ್ತರ ಕೊಡಿಸುತ್ತೇವೆ ಎನ್ನುವ ಮಾನ್ಯ ಇಂಧನ ಸಚಿವರ ಹೇಳಿಕೆ ಎಷ್ಟರಮಟ್ಟಿಗೆ ಸಮಾಧಾನ ತರುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರಿಂದ ಯಾವಾಗ ಉತ್ತರ ಕೊಡಿಸುತ್ತೀರಿ? ಇದಕ್ಕಾಗಿ ತುರ್ತಾಗಿ ಒಂದು ಸಭೆಯನ್ನು ಕರೆಯಲಾಗುತ್ತದೆಯೇ? ಈ ವಿಚಾರದಲ್ಲಿ ಏನು ಮಾಡುತ್ತೀರಿ ಎನ್ನುವುದನ್ನು ಸರ್ಕಾರದವರು ಈಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಅಲ್ಲಿ ಧರಣಿ ನಡೆಸುತ್ತಿರುವ ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಇಲ್ಲ, ಅವರು ರಸ್ತೆಯಲ್ಲಿ ಮಲಗಿದ್ದಾರೆ. It is a burning problem. ಕಳೆದ 24 ತಾಸುಗಳಿಂದಲೂ ಅವರು ಧರಣಿನಿರತರಾಗಿದ್ದರೂ ಸರ್ಕಾರ ಅದಕ್ಕೆ ಸ್ಪಂದಿಸಲು ಇಷ್ಟು ಸಮಯ ಬೇಕಾಗಿತ್ತೇ?

**(ಗೊಂದಲ)**

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ಏಕಾಏಕಿ ಉತ್ತರ ಕೊಟ್ಟುಬಿಡುವುದಕ್ಕಾಗುತ್ತದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಮಗೂ ಸಹ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಸರ್ಕಾರದ ಪರವಾಗಿ you cannot talk. You cannot talk on behalf of the Government. You are not the Government. ತಾವು ನನಗೆ ಮಾತನಾಡಲು ಅವಕಾಶ ಕೊಡಿ ಎಂದರೆ ಏನರ್ಥ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಧರಣಿ ನಡೆಸುತ್ತಿರುವ ಆ ಮಹಿಳೆಯರ ಬಗ್ಗೆ ಇವರಿಗೆ ಮಾತ್ರ sympathy ಇದೆ; ನಮಗೆ sympathy ಇಲ್ಲವೆ? ನಮಗೂ sympathy ಇದೆ. ಅದಕ್ಕಾಗಿ ಮಾನ್ಯ ಸಭಾಪತಿಯವರು ನಮಗೂ ಮಾತನಾಡಲು ಅವಕಾಶ ಕೊಟ್ಟರೆ ಅದನ್ನು ಹೇಳಬಹುದು. ನಾವು ಆ ಧರಣಿನಿರತ ಮಹಿಳೆಯರ ಬಳಿ request ಮಾಡಿಕೊಂಡು ಬಂದಿದ್ದೇವೆ.

**(ಗೊಂದಲ)**

**Mr. CHAIRMAN:-** You want to talk on behalf of the Government? You are not authorised to talk on behalf of the Government. ನೀವು commit ಮಾಡಿಕೊಂಡರೆ ಸರ್ಕಾರ ಅದನ್ನು ಅನುಸರಣೆ ಮಾಡಬೇಕೆಂದು ಕಾನೂನಿಲ್ಲ. ಆದ್ದರಿಂದ ಸರ್ಕಾರದ ಪರವಾಗಿ ಸರ್ಕಾರವೇ ಮಾತನಾಡಬೇಕು. ಆದರೆ ವಿರೋಧ ಪಕ್ಷದವರಿಗೆ ಪ್ರಶ್ನೆ ಕೇಳುವ ಹಕ್ಕಿದೆ. ಮಾನ್ಯ ಉಗ್ರಪ್ಪನವರೆ, ಸರ್ಕಾರದ ಪರವಾಗಿ, Ruling Party Members cannot talk.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ರೂಲಿಂಗ್ ಪಾರ್ಟಿ ಪರವಾಗಿ ಮಾತನಾಡುತ್ತಿಲ್ಲ; ಮಾನವೀಯತೆಯ ನೆಲೆಗಟ್ಟಿನ ಮೇಲೆ ಮಾತನಾಡಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನವೀಯತೆಯ ನೆಲೆಗಟ್ಟಿನಲ್ಲಿ ಮಾತನಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಆದರೆ ಅದಕ್ಕೆ ಒಂದು ನೋಟೀಸ್ ಕೊಡುವುದು ಬೇಡವೆ? ಬೇರೆಯವರು ಕೊಟ್ಟಿರುವ ನೋಟೀಸ್ ಮೇಲೆ ತಾವು ಮಾತನಾಡುತ್ತೀರೇನು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

**ಶ್ರೀ ವಿ.ಎಸ್.ಉಗ್ರಪ್ಪ:–** ಈಗ ತಾವು ಮಾತನಾಡಲು ಅವಕಾಶ ಕೊಟ್ಟಿರುವವರಲ್ಲಿ ಎಲ್ಲರೂ ಕೊಟ್ಟಿರುವವರಾಗಿದ್ದರೆ, ನೋಟೀಸ್ ಕೊಟ್ಟಿರುವವರಿಗೆ ಮಾತ್ರ ತಾವು ಮಾತನಾಡಲು ಅವಕಾಶ ಕೊಟ್ಟಿದ್ದರೆ ನಾನು ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ನಾನು ಮಾತನಾಡಲು ಅವಕಾಶ ಕೊಟ್ಟಿರುವ ಎಲ್ಲರೂ ನನಗೆ ನೋಟೀಸ್ ಕೊಟ್ಟಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಯಾರು ಕೊಟ್ಟಿದ್ದಾರೆ ಸ್ವಾಮಿ?

**ಸಭಾಪತಿಯವರು:–** 5 ಜನರು ನೋಟೀಸ್ ಕೊಟ್ಟಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಿಯಮಾವಳಿಗಳ ರೀತ್ಯಾ ಭಾಷಣ ಮಾಡುವುದಕ್ಕೆ ಅವಕಾಶ ಇದೆಯೆ? ಮಾನ್ಯ ಈಶ್ವರಪ್ಪನವರು ನೋಟೀಸ್ ಕೊಟ್ಟಿದ್ದಾರೆಯೆ?

**ಸಭಾಪತಿಯವರು:–** ಇಲ್ಲ, ನೋಟೀಸ್ ಕೊಟ್ಟಿರುವವರಿಗೆ ಮಾತ್ರ ನಾನು ಅವಕಾಶ ಕೊಟ್ಟಿದ್ದೇನೆ. ನೋಟೀಸ್ ಕೊಟ್ಟಿರುವವರ ಹೆಸರುಗಳನ್ನು ನಾನು ಮೊದಲು ಹೇಳಿಬಿಡುತ್ತೇನೆ. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ, ಶ್ರೀ ಬಸವರಾಜ ಎಸ್. ಹೊರಟ್ಟಿ, ಶ್ರೀಮತಿ ತಾರಾ ಅನೂರಾಧ ಇವರಲ್ಲಿ ಯಾರಾದರೂ ಒಬ್ಬರು ಮೊದಲು ಓದಿ ಎಂದು ಹೇಳಿದೆ. ಶ್ರೀಮತಿ ತಾರಾ ಅನೂರಾಧ ಅವರು ಮೊದಲು ಓದಿದರು, ನಂತರ ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ತಮ್ಮ ನೋಟೀಸನ್ನು ಓದಿದರು, ಅನಂತರ ಮಾನ್ಯ ಬಸವರಾಜ ಹೊರಟ್ಟಿಯವರು ಓದುವುದರ ಬದಲು ಅದೇ ವಿಷಯವನ್ನು ಪ್ರಸ್ತಾಪ ಮಾಡಿದರು. ಈಗ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮಧ್ಯ ಪ್ರವೇಶ ಮಾಡಿ ಮಾತನಾಡಿದ ಕಾರಣಕ್ಕೆ ಅವರಿಗೆ ಎರಡೇ ಎರಡು ನಿಮಿಷ ಮಾತ್ರ ಮಾತನಾಡಿ ಎಂದು ಹೇಳಿದೆ. ಬೇರೆ ಯಾರಿಗೂ ನಾನು ಅವಕಾಶ ಕೊಡುತ್ತಿಲ್ಲ. ಈ ವಿಷಯದ ಬಗ್ಗೆ ಚರ್ಚೆಯಾಗಬೇಕು ಎಂದು ತಾವು ಇಷ್ಟಪಟ್ಟರೆ, ಇಡೀ ಸದನದಲ್ಲಿರುವ ಎಲ್ಲ ಗೌರವಾನ್ವಿತ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕೆನ್ನುವುದಾದರೆ ಸರ್ಕಾರ ಒಪ್ಪಿಗೆ ಕೊಡಬೇಕಾಗುತ್ತದೆ. ಏಕೆಂದರೆ ವಿಷಯದ ಗಾಂಭೀರ್ಯತೆಯನ್ನು ಅರಿತು ಚರ್ಚೆಗೆ ಸರ್ಕಾರದ ಯಾವುದೋ ಸದಸ್ಯರು ಉತ್ತರ ಕೊಡುವುದಕ್ಕಾಗುವುದಿಲ್ಲ. ಆ ಇಲಾಖೆಯ ಸಚಿವರು ಅಥವಾ ಸರ್ಕಾರದಿಂದ ತೀರ್ಮಾನವಾದಂತಹ ಒಬ್ಬರು ಸಚಿವರು ಅದಕ್ಕೆ ಉತ್ತರ ಕೊಡಬೇಕು. ಆದರೆ ಯಾರು ಉತ್ತರ ಕೊಡುತ್ತಾರೆ ಎನ್ನುವುದೇ ಇಲ್ಲಿ ಗೊತ್ತಿಲ್ಲದೆ ಇರುವ ಕಾರಣಕ್ಕಾಗಿ ನಾನು ಚರ್ಚೆಗೆ ಹೇಗೆ ಅವಕಾಶ ಕೊಡಲಿ? ಅದಕ್ಕಾಗಿ ನಾನು ಸರ್ಕಾರವನ್ನು ಕರೆಯುತ್ತಿದ್ದೇನೆ. ಸರ್ಕಾರ 'ಇಲ್ಲ ಸ್ವಾಮಿ, ನೀವು ಚರ್ಚೆಗೆ ಅವಕಾಶ ಕೊಡಿ, ನಾನೇ ಉತ್ತರ ಕೊಡುತ್ತೇನೆ ಅಥವಾ ಇಂತಹವರು ಉತ್ತರ ಕೊಡುತ್ತಾರೆ' ಎಂದು ಹೇಳುವುದಾದರೆ ನಾನು ಅವಕಾಶ ಕೊಡುತ್ತೇನೆ. ಇಲ್ಲ, ಸದ್ಯಕ್ಕೆ ಬೇಡ, ಆ ಸಚಿವರಿದ್ದಾಗ ಅವಕಾಶ ಕೊಡಿ ಎಂದರೆ, ಅದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ನಾನು ಗಮನಿಸುತ್ತೇನೆ. ಮಾನ್ಯ ಸಚಿವರು ಏನು ಹೇಳುತ್ತಾರೆಯೋ ಅದನ್ನು ಕೇಳುತ್ತೇನೆಯೇ ಹೊರತಾಗಿ ಬೇರೆಯವರು ಹೇಳುವುದು ಬೇಡ.

**ಶ್ರೀ ಡಿ.ಕೆ.ಶಿವಕುಮಾರ:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. Detailed reply, ನಿಮಗೆ ವಾಸ್ತವಾಂಶ ಏನಿದೆ ಎನ್ನುವ ಬಗ್ಗೆ ವಿವರವಾದ ಉತ್ತರವನ್ನು ನಾವು ಸಂಬಂಧಪಟ್ಟ ಸಚಿವರಿಂದ ಕೊಡಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೆ, ಸುಮಾರು 15,000 ಜನ ರಸ್ತೆಯಲ್ಲಿದ್ದಾರೆ, ನೋಡುತ್ತಾ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ರಸ್ತೆಯಲ್ಲಿ ಹೆಣ್ಣುಮಕ್ಕಳನ್ನು ಬಿಟ್ಟು ನಾವು ಈ ಸದನದಲ್ಲಿ ನೋಡುತ್ತಾ ಕುಳಿತುಕೊಳ್ಳುವುದಕ್ಕಾಗುತ್ತದೆಯೆ? ಇದು ಆಗುವ ಕೆಲಸವಲ್ಲ.

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಸನ್ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದಂತಹ ವಿಚಾರವಾಗಿದ್ದು ಸುಮಾರು ಒಂದು ವಾರದಿಂದ ಧರಣಿ ನಡೆಯುತ್ತಿದೆ. ಇನ್ನೂ ಈಗ ಸರ್ಕಾರ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇವೆ ಎಂದರೆ ಹೇಗೆ?

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದಿರುವಂತಹ ಸುಮಾರು 12 ರಿಂದ 15 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ರಸ್ತೆಯಲ್ಲಿ ಧರಣಿ ನಡೆಸುತ್ತಿರುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಇನ್ನೂ ಕರುಣೆ ಇಲ್ಲವೆಂದರೆ ಹೇಗೆ? ಆದ್ದರಿಂದ ತಾವು ಸಂಬಂಧಪಟ್ಟ ಸಚಿವರನ್ನು ಕರೆಸಿ ಕೂಡಲೇ ಉತ್ತರ ಕೊಡಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರ ಯಾವಾಗಲಾದರೂ ಉತ್ತರ ಕೊಡಲಿ. ಆದರೆ ಅವರಿಗೆ ಕೊಟ್ಟ ಹಾಗೆಯೇ ನಮಗೂ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದ ವಿಷಯವಾಗಿದ್ದು, ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವವರೆಗೆ ನಾವು ಧರಣಿಯಲ್ಲಿರುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ನಮಗೂ ಸಹ ಮಾತನಾಡಲು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ. ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಇನ್ನೂ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಬಸವರಾಜ ಎಸ್.ಹೊರಟ್ಟಿಯವರನ್ನು ಹೊರತುಪಡಿಸಿ ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಸಭಾಪತಿಯವರು:-** ದಯಮಾಡಿ ಯಾರು ಈ ವಿಷಯದ ಬಗ್ಗೆ ಬಾವಿಗೆ ಬಂದು ಧರಣಿ ನಡೆಸುತ್ತಿದ್ದೀರಿ, ವಿಷಯದ ಗಾಂಭೀರ್ಯದ ಬಗ್ಗೆ ಸರ್ಕಾರ ಈಗಾಗಲೇ ತಿಳಿಸಿರುವುದರಿಂದ ಅದನ್ನು ಗಮನಿಸಿ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸಲು ಅನುವು ಮಾಡಿಕೊಡಬೇಕೆಂದು ಗೌರವಾನ್ವಿತ ಸದಸ್ಯರಲ್ಲಿ ನಾನು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಎಸ್.ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾವು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಶೂನ್ಯವೇಳೆಯಲ್ಲಿ ಅವಕಾಶ ಕೊಡಬೇಕೆಂದು ವಿನಂತಿಸುವುದರ ಜೊತೆಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಸಹ ಪ್ರಸ್ತಾಪಿಸಲು ಅವಕಾಶ ಕೋರಿ ಪತ್ರವನ್ನು ಕಳುಹಿಸಿಕೊಟ್ಟಿದ್ದೆವು. ಮಾನ್ಯ ಸಭಾಪತಿಯವರು ತಿಳಿಸಿದ ವಿಚಾರವನ್ನು ಒಪ್ಪಿಕೊಂಡು ನಾವು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ.

**ಸಭಾಪತಿಯವರು:-** ಹೌದು, ಅದು ಸರಿಯಿದೆ, I have allowed it.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-**ಸನ್ಮಾನ್ಯ ಸಭಾಪತಿಯವರೆ, ಸುಮಾರು 15 ಸಾವಿರ ಮಹಿಳೆಯರು ರಸ್ತೆಯಲ್ಲಿದ್ದಾರೆ. ಸರ್ಕಾರಕ್ಕೆ ಸ್ವಲ್ಪ ಕೂಡ ಹೃದಯ, ಕಣ್ಣು, ಕಿವಿ ಬೇಡವೆ? ಇವರಿಗೆ ಮಾನವೀಯತೆ ಬೇಡವೆ? ಹೆಣ್ಣು ಮಕ್ಕಳ ಬಗ್ಗೆ ಈ ರೀತಿ ನಡೆದುಕೊಳ್ಳುವುದು ಸರಿಯೆ?

**(ಗೊಂದಲ)**

**ಸಭಾಪತಿಯವರು:-** ಸದನ ನಡೆಸೋಣ, ದಯಮಾಡಿ ಧರಣಿ ನಡೆಸುತ್ತಿರುವ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿ, ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಹಳಷ್ಟು ವಿಷಯಗಳಿವೆ, ಇನ್ನೂ ಆಯವ್ಯಯದ ಮೇಲೆ ಚರ್ಚೆಯಾಗಬೇಕಾಗಿದೆ. ಬೇರೆ ಬೇರೆ ವಿಧೇಯಕಗಳೆಲ್ಲಾ ಬರುವುದಿದೆ. ಆದ್ದರಿಂದ ಸದನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸುವುದಕ್ಕೆ ದಯಮಾಡಿ ಅನುವು ಮಾಡಿಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಎಸ್.ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:–** ಸದನದ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಮಾನ್ಯ ಬಸವರಾಜ ಹೊರಟ್ಟಿಯವರ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ಆದರೂ ಅವರು ಪರಿಸ್ಥಿತಿಯ ಗಾಂಭೀರ್ಯತೆಯನ್ನು ಅರಿತು ತಡೆದುಕೊಳ್ಳಲಾರದೆ ಇವತ್ತು ಸದನಕ್ಕೆ ಬಂದಿದ್ದಾರೆ. ಅವರನ್ನು ನೋಡಿದ ಕೂಡಲೇ ಅವರ ಆರೋಗ್ಯ ಸರಿಯಿಲ್ಲ ಎನ್ನುವ ವಿಚಾರ ನನಗೆ ಗೊತ್ತಾಯಿತು. ಕಳೆದ 4 ದಿವಸಗಳ ಹಿಂದೆ ನನಗೆ ಅವರು ನನಗೆ ಫೋನ್ ಮಾಡಿದಂತಹ ಸಂದರ್ಭದಲ್ಲಿ 'ನನ್ನ ಆರೋಗ್ಯ ಸರಿಯಿಲ್ಲ, ಸದನಕ್ಕೆ ಹಾಜರಾಗುವುದು ಅನುಮಾನ, ಕಲಾಪಗಳಲ್ಲಿ ಭಾಗವಹಿಸುವುದು ನನಗೆ ಕಷ್ಟವಾಗುತ್ತದೆ' ಎಂದು ತಿಳಿಸಿದರು. ಹಾಗಾಗಿ ಅವರು ಮೆಲ್ಲನೆ ಮಾತನಾಡುತ್ತಾರೆ. ಅವರು ಮಾತನಾಡುವುದನ್ನು ಗಲಾಟೆ ಇಲ್ಲದೆ ಕೇಳೋಣ. ಏಕೆಂದರೆ ಅವರು ಬಹಳ ಕಳಕಳಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಬಸವರಾಜ ಎಸ್. ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಈ ವಿಚಾರವನ್ನು ಹಗುರವಾಗಿ ತೆಗೆದುಕೊಳ್ಳಬಾರದು. ಅಲ್ಲಿ ಧರಣಿ ನಡೆಸುತ್ತಿರುವ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಆ ಹೆಣ್ಣುಮಕ್ಕಳು ಬಟ್ಟೆ ಬದಲಾಯಿಸಲು ಸೂಕ್ತ ಸ್ಥಳಾವಕಾಶವಿಲ್ಲದ ಕಾರಣ ಹೆಣ್ಣುಮಕ್ಕಳು ಪರಸ್ಪರ ಸೀರೆಯನ್ನು ಅಡ್ಡ ಹಿಡಿದುಕೊಂಡು ಒಬ್ಬೊಬ್ಬರೇ ಹೋಗಿ ಬಟ್ಟೆ ಬದಲಾಯಿಸಿಕೊಳ್ಳುವಂತಹ ಪರಿಸ್ಥಿತಿಯಲ್ಲಿದ್ದಾರೆ. ಇದಕ್ಕಿಂತ ಕೆಟ್ಟ ಪರಿಸ್ಥಿತಿ ಯಾವುದಿದೆ ಹೇಳಿ ನೋಡೋಣ.

**(322) 21.03.2017 01.30 SV-VK**

**ಶ್ರೀ ಬಸವರಾಜ ಹೊರಟ್ಟಿ(ಮುಂದು):–** ಇದಕ್ಕಿಂತ ಕೆಟ್ಟದ್ದು ಇನ್ನೇನು ಇದೆ ಎಂದು ಹೇಳಿ. ತಕ್ಷಣ ಸರ್ಕಾರ ಒಂದು ನಿರ್ದಿಷ್ಟವಾದ ಸಮಯವನ್ನು ನಿಗದಿ ಪಡಿಸಲಿ. ಸರ್ಕಾರದಲ್ಲಿ ಹೆಣ್ಣುಮಕ್ಕಳ ಮರ್ಯಾದೆಗಿಂತ ದೊಡ್ಡದೇನಿದೆ. ಅವರ ಡಿಮ್ಯಾಂಡ್ ಅನ್ನು ಕೊಡಲಿ ಅಥವಾ ಬಿಡಲಿ. ಹೆಣ್ಣುಮಕ್ಕಳು ಬಹಿರ್ದೆಸೆಗೆ ರಸ್ತೆಯಲ್ಲಿ ಕೂರುವಂತಹ ಪರಿಸ್ಥಿತಿ ಇದೆ. ಇದು ಇಂದು ಬೆಳಿಗ್ಗೆ 05.30ರಲ್ಲಿ ನಾನು ಅಲ್ಲಿ ಹೋದಾಗ ಕಂಡು ಬಂದಂತಹ ದೃಶ್ಯ. ಸಣ್ಣ ಮಕ್ಕಳು ಬಟ್ಟೆಯಲ್ಲಿಯೇ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಕ್ಕೆ ಅಲ್ಲಿ ಹೋಗಿ ನೋಡಲು ಹೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಸರ್ಕಾರ ಒಪ್ಪುವುದಾದರೆ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ. ಸದನವನ್ನು ನಡೆಸುವುದಕ್ಕೆ ಅನುವಾಗುವಂತೆ ಧರಣಿ ನಿರತರು ತಮ್ಮ ಸ್ಥಾನಗಳಿಗೆ ಮರಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸದನವನ್ನು ಮುಂದೂಡಿ. ಇಡೀ ಸದನದ ಸದಸ್ಯರು ಅಲ್ಲಿಗೆ ಹೋಗೋಣ. ಆಗಲಾದರೂ ಸರ್ಕಾರಕ್ಕೆ ಅರ್ಥವಾಗುತ್ತದೆಯೇನೋ ನೋಡೋಣ. ಆ ಹೆಣ್ಣುಮಕ್ಕಳು ನಮ್ಮ ಮನೆಯ ಹೆಣ್ಣುಮಕ್ಕಳಾಗಿದ್ದರೆ ಎಂಬ ಭಾವನೆ ಮೂಡಬೇಕು. ನಮ್ಮ ಮನೆ ಹೆಣ್ಣುಮಕ್ಕಳು ಬೇರೆ, ಆ ಹೆಣ್ಣುಮಕ್ಕಳು ಬೇರೆ ಎಂಬ ಭಾವನೆ ಸರ್ಕಾರಕ್ಕಿದೆಯೇ? ಸರ್ಕಾರ ಆ ಬಗ್ಗೆ ಗಮನ ಹರಿಸಬೇಡವೇ? ಸದನವನ್ನು ಮುಂದೂಡಿ. ಸಭಾನಾಯಕರನ್ನು, ಮುಖ್ಯಮಂತ್ರಿಗಳನ್ನೂ ಕರೆದುಕೊಂಡು ಹೋಗೋಣ.

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸಂಘಟನೆಗಳವರು ಮಾನವೀಯ ದೃಷ್ಟಿಯಿಂದ ಎಳೆಯ ಮಕ್ಕಳಿರುವವರು ಮಕ್ಕಳನ್ನು ಕರೆದುಕೊಂಡು ದಯವಿಟ್ಟು ಬರಬೇಡಿ ಎನ್ನಬೇಕಲ್ಲವೆ?

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಹಾಗಾದರೆ ಎಳೆಯ ಮಕ್ಕಳಿರುವವರು ಏನು ಮಾಡಬೇಕು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಶ್ರೀಮತಿ ಮೋಟಮ್ಮನವರು ಹೇಳಿದಂತೆ ಎಳೆಯ ಮಕ್ಕಳನ್ನು ಗುಲ್ಬರ್ಗದಲ್ಲಿ ಬಿಟ್ಟು, ಆ ತಾಯಿ ಇಲ್ಲಿಗೆ ಬರಲಾಗುತ್ತದೆಯೇ?

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಬಿಜೆಪಿ ಹಾಗೂ ಜೆಡಿಎಸ್‌ನ ಸದಸ್ಯರು "ರಕ್ಷಣೆಗೆ ಬನ್ನಿ, ರಕ್ಷಣೆಗೆ ಬನ್ನಿ, ಮಹಿಳೆಯರ ಪರ ರಕ್ಷಣೆಗೆ ಬನ್ನಿ", "ಅಯ್ಯಯ್ಯೋ! ಅನ್ಯಾಯ", "ಬೇಕೇ ಬೇಕು ನ್ಯಾಯ ಬೇಕು" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಘೋಷಣೆಗಳನ್ನು ಕೂಗುವುದು ಸರಿಯಲ್ಲ, ಯಾರೂ ಘೋಷಣೆಗಳನ್ನು ಕೂಗಬೇಡಿ. ಈಗ ಸದನವನ್ನು ಮಧ್ಯಾಹ್ನ 03 ಗಂಟೆಯವರಿಗೆ ಮುಂದೂಡಲಾಗಿದೆ.

**(323) 3.20:21-03-2017:ಎಂವಿ:ಜಿಆರ್**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 03 ಗಂಟೆ 23 ನಿಮಿಷಕ್ಕೆ ಸಮಾವೇಶಗೊಂಡಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

**(ಉಪ ಸಭಾಪತಿಯವರಾದ ಮಾನ್ಯ ಮರಿತಿಬ್ಬೇಗೌಡರವರು ಪೀಠವನ್ನು ಅಲಂಕರಿಸಿದರು)**

**(ಸದನವು ಪ್ರಾರಂಭವಾದಾಗ ವಿರೋಧ ಪಕ್ಷದ ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಸುಮಾರು ಹದಿನಾರು ಸಾವಿರ ಜನ ಹೆಣ್ಣು ಮಕ್ಕಳು ಅಲ್ಲಿ ಉಪವಾಸ ಸಾಯುತ್ತಿದ್ದಾರೆ, ಧರಣಿಗೆ ಕುಳಿತಿದ್ದಾರೆ, ಫುಟ್‌ಪಾತ್‌ನಲ್ಲಿ ಮಲಗಿದ್ದಾರೆ, ಅವರೆಲ್ಲರೂ ಈ ಸರ್ಕಾರ ಬದುಕಿದೆಯೋ ಅಥವಾ ಸತ್ತಿದೆಯೋ ಎಂದು ಕೇಳುತ್ತಿದ್ದಾರೆ. ಸರ್ಕಾರ ಬದುಕಿದೆ ಎಂದು ತೋರಿಸುವುದಕ್ಕಾದರೂ ಕೂಡ, ಅವರನ್ನು ಕರೆದು ಮಾತುಕತೆ ಮಾಡಿ, ಏನು ಅವರ ನ್ಯಾಯಯುತವಾದ ಬೇಡಿಕೆಗಳು ಇವೆ, ಆ ಬೇಡಿಕೆಗಳನ್ನು ಖಂಡಿತ ಈಡೇರಿಸುತ್ತೇವೆ ಎನ್ನುವಂತಹ ಮಾತು ಬಂದರೆ, ನಾವುಗಳು ಈ ಧರಣಿಯನ್ನು withdraw ಮಾಡುತ್ತೇವೆ, ನಾವು ಈ ಧರಣಿಯನ್ನು ಅವರ ಪರವಾಗಿ ಮಾಡುತ್ತಿದ್ದೇವೆ, ಇಲ್ಲವಾದರೆ ಈ ಸದನ ನಡೆಯುವುದಕ್ಕೆ ಬಿಡುವುದಿಲ್ಲ. ಈ ಸಮಸ್ಯೆ ಪರಿಹಾರವಾಗಬೇಕು, ಇಲ್ಲವಾದರೆ ಇದು ಯಾವ ನ್ಯಾಯ.

**ಉಪ ಸಭಾಪತಿಯವರು:-** ನೋಡೋಣ, ಸಭಾನಾಯಕರು ಏನು ಹೇಳುತ್ತಾರೆ.

**ಡಾ||ಜಿ.ಪರಮೇಶ್ವರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಗೌರವಾನ್ವಿತ ಸದಸ್ಯರು, ಅವರಿಗೆ ಎಷ್ಟು ಕಾಳಜಿ ಇದೆಯೋ, ಅದಕ್ಕಿಂತ ನೂರರಷ್ಟು ಕಾಳಜಿ ನಮ್ಮ ಸರ್ಕಾರಕ್ಕಿದೆ. ಅದಕ್ಕೆ ತಾವು ದಯಮಾಡಿ..

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಬೆಳಿಗ್ಗೆ ಅಲ್ಲಿಗೆ ಹೋಗಿದ್ದರೆ ಕಾಳಜಿ ಗೊತ್ತಾಗುತ್ತಿತ್ತು. ನೀವು ಡಾಕ್ಟರ್ ಇದ್ದೀರಾ, ಇದನ್ನು ನಿಮ್ಮ ಹೃದಯದಿಂದ ಹೇಳಿ.

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅಲ್ಲಿಗೆ ಹೋಗಿ ಅವರ ಜೊತೆಯಲ್ಲಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರೆ ನನ್ನ ಹೃದಯದಿಂದ ಮತ್ತು ನನ್ನ ಅಂತರಾಳದಿಂದ ಹೇಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನೀವು ಬೇರೆನೂ ಮಾಡುವುದಿರಲಿ, ಅವರಿಗೆ ಒಂದು ಟಾಯ್ಲೆಟ್‌ನ ವ್ಯವಸ್ಥೆಯನ್ನು ಕೂಡ ಮಾಡುವುದಕ್ಕೆ ಆಗಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಅದನ್ನು ಮಾಡುತ್ತೇವೆ, ನಮ್ಮ ಪೊಲೀಸ್ ಇಲಾಖೆಯವರಿಗೆ ನಾನೇ ಖುದ್ದು ಸೂಚನೆ ಕೊಟ್ಟಿದ್ದೇನೆ. ಅವರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಿ, ಎಲ್ಲಾ ಪೊಲೀಸ್ ಠಾಣೆಗಳಲ್ಲಿರತಕ್ಕಂಥ ಎಲ್ಲಾ women ಪೊಲೀಸರನ್ನು ಕೂಡ ಅಲ್ಲಿಗೆ ನಿಯೋಜಿಸಿ, ಅವರನ್ನು ರಕ್ಷಣೆ ಮಾಡಿ, ಯಾವುದೇ ಕಾರಣಕ್ಕೂ ಅವರಿಗೆ ತೊಂದರೆಯಾಗಬಾರದು ಮತ್ತು ಅವರಿಗೆ ಕುಡಿಯುವುದಕ್ಕೆ ನೀರು ಕೊಡಿ ಎಂದು ಸಹ ಹೇಳಿದ್ದೇವೆ, ಅವರಿಗೆ ಯಾವುದೇ ತೊಂದರೆಯಾಗಬಾರದು ಎನ್ನುವ ದೃಷ್ಟಿಯಲ್ಲಿ ನಾವು ಕ್ರಮ ಕೈಗೊಂಡಿದ್ದೇವೆ. ಬೆಳಿಗ್ಗೆ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್. ಉಗ್ರಪ್ಪನವರು, ಶ್ರೀ ಹೆಚ್.ಎಂ.ರೇವಣ್ಣನವರು, ಶ್ರೀಮತಿ ಮೋಟಮ್ಮನವರು, ಶ್ರೀ ಶರಣಪ್ಪ ಮಟ್ಟೂರ ಮತ್ತು ಸಾಹಿತಿಗಳಾದ ಶ್ರೀ ಮರುಳಸಿದ್ದಪ್ಪನವರು ಇವರೆಲ್ಲರೂ ಕೂಡ ಅಲ್ಲಿಗೆ ಹೋಗಿದ್ದಾರೆ ಹಾಗೂ ಶ್ರೀ ಇಡುಮಾಮಿಡಿ ಸ್ವಾಮೀಜಿಗಳು ಕೂಡ ಅಲ್ಲಿಗೆ ಹೋಗಿದ್ದರು ಎಂದು ಕೇಳಿದ್ದೇನೆ. ಅವರೆಲ್ಲರೂ ಅಲ್ಲಿಗೆ ಹೋಗಿ ಅವರ ಕಷ್ಟಗಳನ್ನು ಕೇಳಿಕೊಂಡು ಬಂದಿದ್ದಾರೆ, ಇವತ್ತಿನ ದಿವಸ ಅವರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು ಎಂದು ಹೇಳಿ, ಸರ್ಕಾರ ಅವರ ಪರವಾಗಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ನಾವು ಈಗಾಗಲೇ ಬಜೆಟ್‌ನಲ್ಲಿ ಒಂದು ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡುವಂತಹ announcement ಕೂಡ ಮಾಡಿದ್ದೇವೆ. ಒಂದು ಸಾವಿರ ರೂಪಾಯಿ ಮತ್ತು ಐದು ನೂರು ರೂಪಾಯಿಗಳೆಂದು announce ಮಾಡಿದ್ದೇವೆ. ಕೆಳಗಿನ ಮನೆಯಲ್ಲಿ ಮತ್ತು ಇಲ್ಲಿ ಇದಕ್ಕೆ ಏನು ತಮ್ಮ ಒತ್ತಾಯವಿದೆ, ಇದನ್ನೆಲ್ಲಾ ಬಹಳವಾಗಿ ನಾವು ಮನಸ್ಸಿಗೆ ತೆಗೆದುಕೊಂಡಿದ್ದೇವೆ. ಇದನ್ನು ಮನಗಂಡು ಮಾನ್ಯ ಮುಖ್ಯಮಂತ್ರಿಗಳು ಏಪ್ರಿಲ್ 19ನೇ ತಾರೀಖಿಗೆ ಅವರನ್ನು ಸಭೆಗೆ ಕರೆದಿದ್ದಾರೆ, ಅವರ ಜೊತೆ ಮಾತನಾಡಿ, ಅವರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂತಹ ಪ್ರಯತ್ನ ಮಾಡುತ್ತೇವೆಂದು ಕೆಳಗಿನ ಮನೆಯಲ್ಲಿ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ ಮತ್ತು ಅದನ್ನು ಅವರಿಗೆ ಲಿಖಿತದ ಮೂಲಕ ಕೊಟ್ಟಿದ್ದೇವೆ. ಈಗಾಗಲೇ ಅವರಿಗೆ convince ಮಾಡಿ, ಅವರು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳು ಆಗುತ್ತಿವೆ. ದಯಮಾಡಿ ತಾವುಗಳು ಈಗ ಏನು ಸದನದ ಬಾವಿಗೆ ಬಂದಿದ್ದೀರಿ, ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು, ಖಂಡಿತವಾಗಿ ನಾವು ಅವರ ಪರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆಂದು, ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ನಾನು details ಗೆ ಹೋದರೆ.... ನಾನು detail ಗೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಅವರು ನಮಗೆ ಏನೆಂದು ಉತ್ತರ ಹೇಳುತ್ತಾರೆಂದು ನಮಗೆ ಹೇಳಲಿ.

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಬರುವ ತಿಂಗಳು ಏಪ್ರಿಲ್ 19ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆ ಸಭೆಯನ್ನು ಕರೆದಿದ್ದಾರೆ, ಆ ಸಭೆಗೆ ಅವರು ಬರುತ್ತೇವೆಂದು ಕೂಡ ಒಪ್ಪಿಕೊಂಡಿದ್ದಾರೆ, ಆ ಸಭೆಯಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡಿ, ಅವರಿಗೆ ಇರತಕ್ಕಂಥ ಬೇಡಿಕೆಗಳು ಏನಿವೆ, ಆ ಬೇಡಿಕೆಗಳನ್ನು ಬಗೆಹರಿಸುತ್ತೇವೆಂದು ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಾಗಿ ನಾವು ಎಷ್ಟು ಪರಿಣಾಮಕಾರಿಯಾಗಿ ಮಾಡಬೇಕೋ ಅದನ್ನು ಖಂಡಿತವಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ದಯಮಾಡಿ ಸದನ ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರ ಮಾತಿಗೆ ಬೆಲೆ ಇಲ್ಲವೆಂದು ಹೇಳುವುದಿಲ್ಲ, ಆದರೆ ಇವೊತ್ತು ಇನ್ನು 21ನೇ ತಾರೀಖು, ಇದಕ್ಕೆ ಇನ್ನೂ ಒಂದು ತಿಂಗಳು ಬೇಕೆ?

**ಡಾ||ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ತಾವು ಕೂಡ ನಮ್ಮ ಸಹಾಯಕ್ಕೆ ಬರಬೇಕು. ಈ ಮೊದಲು ಕೇಂದ್ರ ಸರ್ಕಾರ ಕೊಡುತ್ತಿದ್ದ 1,800/- ರೂಪಾಯಿಗಳನ್ನು ಕಡಿಮೆ ಮಾಡಿಬಿಟ್ಟಿದೆ. ಆದುದರಿಂದ ಅದನ್ನು ತಾವು ಅಲ್ಲಿ ಒತ್ತಾಯ ಮಾಡಿದರೆ, ಅವರ contribution ಕೂಡ ಆದರೆ ಇನ್ನೂ ಹೆಚ್ಚಾಗುತ್ತದೆ, ರಾಜ್ಯಕ್ಕೂ ಸ್ವಲ್ಪ ಹೊರೆ ಕಡಿಮೆಯಾಗುತ್ತದೆ. ತಮಗೆ ಗೊತ್ತಿದೆ ಈ ಮೊದಲು ಶೇಕಡ 90ರಷ್ಟು ಮತ್ತು ಶೇಕಡ 10ರಷ್ಟು ಎಂದು ಇತ್ತು. ಅಂದರೆ ಶೇಕಡ 90ರಷ್ಟು ಕೇಂದ್ರ ಸರ್ಕಾರದ್ದು ಮತ್ತು ಶೇಕಡ 10ರಷ್ಟು ರಾಜ್ಯ ಸರ್ಕಾರದ್ದು. ಆದರೆ ಈಗ ಅದು ಶೇಕಡ 60ರಷ್ಟು ಮತ್ತು ಶೇಕಡ 40ರಷ್ಟು ಆಗಿ ಬಿಟ್ಟಿದೆ. ಅಂದರೆ ಶೇಕಡ 60ರಷ್ಟು ಕೇಂದ್ರ ಸರ್ಕಾರದ್ದು ಮತ್ತು ಶೇಕಡ 40ರಷ್ಟು ರಾಜ್ಯ ಸರ್ಕಾರದ್ದು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಆಯಿತು ಅದನ್ನು ನಾನು ಒಪ್ಪುತ್ತೇನೆ. ಒಂದು ನಿಮಿಷ ಕೇಳುತ್ತೇನೆ, ಈಗ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ಅಲ್ಲಿಗೆಲ್ಲಾ ಹಣವನ್ನು ಕೊಡುವುದು ಕೇಂದ್ರ ಸರ್ಕಾರವೇ. ನಿಮಗೆ ಏನು ಕೊಡುತ್ತಾರೋ ಹಾಗೆಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಅಲ್ಲಿಗೆ ಅವರಿಗೂ ಕೊಡುತ್ತಾರೆ, ಹಾಗಾದರೆ ಅವರು ಏಕೆ ಹೆಚ್ಚಿಗೆ ಮಾಡಿದ್ದಾರೆ, ನೀವು ಏಕೆ ಕಡಿಮೆ ಮಾಡಿದ್ದೀರಿ. ಕೇಂದ್ರ ಸರ್ಕಾರದ ನಿಯಮಗಳು ಎಲ್ಲಾ ಕಡೆ ಒಂದು ರೀತಿ ಇರುತ್ತವೆ. ಕೇಂದ್ರ ಸರ್ಕಾರ ನೆರೆ ರಾಜ್ಯಗಳಿಗೆ ಕೊಟ್ಟಿರುವಷ್ಟನೇ ನಿಮಗೂ ಸಹ ಕೊಟ್ಟಿದೆ. ಹಾಗಾದರೆ ಅವರು ಏಕೆ ಹೆಚ್ಚು ಮಾಡಿದರೂ, ನೀವು ಏಕೆ ಮಾಡಲಿಲ್ಲ, ತಾವು ದಯಮಾಡಿ ಕೇಂದ್ರ ಸರ್ಕಾರ...

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಈಗ ಕೇಂದ್ರ ಸರ್ಕಾರದವರು 1,800/– ರೂಪಾಯಿಗಳನ್ನು ಕಟ್ ಮಾಡಿದ್ದಾರೆ.

**ಡಾ||ಜಿ.ಪರಮೇಶ್ವರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಬಸವರಾಜ ಹೊರಟ್ಟಿಯವರೆ, ಒಟ್ಟು ಆರು ಸಾವಿರ ರೂಪಾಯಿಗಳ ಗೌರವಧನವನ್ನು ರಾಜ್ಯ ಸರ್ಕಾರ ಕೊಡುತ್ತಿದೆ. ಈಗ ಬಜೆಟ್‌ನಲ್ಲಿ ಒಂದು ಸಾವಿರ ರೂಪಾಯಿಗಳನ್ನು ಹೆಚ್ಚಿಸಿದ್ದೇವೆ, ಹಾಗಾದರೆ ಒಟ್ಟು ಏಳು ಸಾವಿರ ರೂಪಾಯಿಗಳು ಆಗುತ್ತದೆ. ಈಗ ಚರ್ಚೆ ಆದ ನಂತರ ಅಂತಿಮವಾಗಿ ಏನು ತೀರ್ಮಾನವಾಗುತ್ತದೆಂದು ನೋಡೋಣ. ಆದರೆ, ಖಂಡಿತವಾಗಿ ನಾವು ಅವರುಗಳ ಪರವಾಗಿಯೇ ಇದ್ದೇವೆಂದು ಮತ್ತೇ ಮತ್ತೇ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮೊದಲು ಶೇಕಡ 90ರಷ್ಟು ಮತ್ತು ಶೇಕಡ 10ರಷ್ಟು ಕೊಡುವ ratio ಏನಿತ್ತು, ಅದನ್ನು reverse ಮಾಡಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಶೇಕಡ 90ರಷ್ಟನೇ ಕೊಡಿ ಎಂದು ಕೇಳುವುದಕ್ಕೂ ಹೋಗುವುದಿಲ್ಲ. ಆದರೆ, 1,800/– ಏನು ಕಡಿಮೆ ಮಾಡಿದ್ದಾರೆ, ಅದನ್ನು ಅವರು ಪುನರ್‌ಪರಿಶೀಲನೆ ಮಾಡಿ ಕೊಡುವುದಾದರೆ, ರಾಜ್ಯ ಸರ್ಕಾರ ಕೊಡುವುದಕ್ಕೆ ಇನ್ನೂ ಹೆಚ್ಚು contribute ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬೇರೆ ಬೇರೆ ರಾಜ್ಯಗಳು ಕೇಂದ್ರ ಸರ್ಕಾರ ಎಷ್ಟು ಕಡಿಮೆ ಮಾಡಿದೆ, ಎಷ್ಟು ಜಾಸ್ತಿ ಮಾಡಿದೆ ಎಂಬುದನ್ನೂ ಯಾವ ರಾಜ್ಯಗಳು ನೋಡಿಲ್ಲ. ಅವರೆಲ್ಲರೂ ಕೂಡ ಹನ್ನೆರಡು ಸಾವಿರ, ಹದಿಮೂರು ಸಾವಿರ ಮತ್ತು ಹದಿನಾಲ್ಕು ಸಾವಿರ ರೂಪಾಯಿಗಳ ತನಕ ಕೊಡುತ್ತಿದ್ದಾರೆ. ಆದರೆ, ಇಲ್ಲಿ ಸಹಾಯಕರಿಗೆ 3,500/– ರೂಪಾಯಿಗಳು. ಮಾನ್ಯ ಸಭಾನಾಯಕರೆ ಈ 3,500/– ರೂಪಾಯಿಗಳು ಏತಕ್ಕೆ ಬರುತ್ತದೆ. ಅದಕ್ಕೆ ನಾನು ಹೇಳುತ್ತಿರುವುದು, ಇದನ್ನು ತಾವು ದಯವಿಟ್ಟು ಸ್ವಲ್ಪ open mind ಆಗಿ. ಮನಸ್ಸಿನಲ್ಲಿ ಇಟ್ಟುಕೊಂಡು, ಆ ಹೆಣ್ಣು ಮಕ್ಕಳು ಏನು ಹೋರಾಟ ಮಾಡುತ್ತಿದ್ದಾರೆ, ಆ ಹೋರಾಟಕ್ಕೆ ಹೃದಯಾಂತರಾಳದಿಂದ ಯೋಚನೆ ಮಾಡಿ, ಒಂದು ಸಭೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆಯಿರಿ. ಏಪ್ರಿಲ್ 19ನೇ ತಾರೀಖಿನವರೆವಿಗೂ, ಏಕೆ ಅಷ್ಟು ಸಮಯ ಬೇಕು, ಅದಕ್ಕೆ ಒಂದು ತಿಂಗಳು ಬೇಕಾ?

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೆ, ಹಂತ–ಹಂತವಾಗಿ ಏರಿಕೆ ಮಾಡಿಕೊಂಡು ಹೋಗಬೇಕು ಮತ್ತು ಹಂತ–ಹಂತವಾಗಿ ಏರಿಕೆ ಮಾಡಿಕೊಂಡು ಬಂದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ನಾವು ಕೂಡ ಅವರ ಪರವಾಗಿದ್ದೇವೆ. 2008ರಿಂದ 2013ರವರೆಗೆ ಅವರಿಗೆ ಯಾವುದೇ ಗೌರವಧನ ಹೆಚ್ಚಿಗೆ ಆಗಿಲ್ಲ. ಜಾಸ್ತಿ ಆಗುತಿತ್ತು ಮತ್ತು ಅಲ್ಲಿ ಬೆಲೆ ಇನ್ನೂ ಏರಿಕೆ ಆಗುತಿತ್ತು.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದಂತಹ ಶ್ರೀ ಐವನ್ ಡಿ'ಸೋಜಾರವರೆ ಬೇಡ ತಾವು ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸಭಾನಾಯಕರಿದ್ದಾರೆ ಅವರು ಹೇಳುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಐವನ್ ಡಿ'ಸೋಜಾರವರನ್ನು ಸಭಾನಾಯಕರು ಮತ್ತು ಮಂತ್ರಿಗಳನ್ನಾಗಿ ಮಾಡಿ ಮತ್ತು ಮಾನ್ಯ ಸಚಿವರು ಹಾಗೂ ಸಭಾನಾಯಕರಾದಂತಹ ಡಾ॥ಜಿ.ಪರಮೇಶ್ವರವರನ್ನು ಸರ್ಕಾರಿ ಮುಖ್ಯಸಚೇತಕರನ್ನಾಗಿ ಮಾಡಿ.

**(324) 21.03.2017 03.30 LL-GR**

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):**

ನಮ್ಮ ಪ್ರಶ್ನೆಗೆ ಯಾರು ಉತ್ತರ ಕೊಡಬೇಕು? ಅದು ಕೂಡ ಮಾನ್ಯ ಸಭಾನಾಯಕರು ಸದನದಲ್ಲಿ ಹಾಜರಿದ್ದಾಗ್ಯೂ ಕೂಡ ಮಾನ್ಯ ಸಚೇತಕರು ಉತ್ತರ ನೀಡಬಹುದೇ?

**ಡಾ॥ ಜಿ. ಪರಮೇಶ್ವರ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಬಿ.ಜೆ.ಪಿ. ಸರ್ಕಾರ ಹೇಗೆ ಆಡಳಿತ ಮಾಡಿತ್ತು ಮತ್ತು ಕಾಂಗ್ರೆಸ್ ಪಕ್ಷ ಯಾವ ರೀತಿ ಆಡಳಿತ ಮಾಡುತ್ತಿದೆಯೆನ್ನುವ ಚರ್ಚೆ ಈಗ ಮಾಡುವುದು ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ. ಏಕೆಂದರೆ, ನಾವು 2013–14ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕರಿಗೆ 500ರೂಪಾಯಿ ಜಾಸ್ತಿ ಮಾಡಿದ್ದೇವೆ. 2014–15ರಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

500ರೂಪಾಯಿ ಜಾಸ್ತಿ ಮಾಡಿದ್ದೇವೆ. ಈಗಾಗಲೇ ಹೊಸದಾಗಿ ಬಜೆಟ್‌ನಲ್ಲಿ ತಾವು ನೋಡಿದ್ದೀರೆಂದು ಭಾವಿಸುತ್ತೇನೆ. ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರು ಸೇವೆಯಲ್ಲಿರುವಾಗ ಮರಣ ಹೊಂದಿದಲ್ಲಿ ಅವರ ವಾರಸುದಾರರಿಗೆ 50ಸಾವಿರ ರೂಪಾಯಿಗಳ ಮರಣ ಪರಿಹಾರವನ್ನು ನೀಡುಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರು ಸೇವೆಯಲ್ಲಿರುವಾಗ ಮರಣ ಹೊಂದಿದಾಗ ಅವರ ಅಂತ್ಯಕ್ರಿಯೆಗಾಗಿ 1ಸಾವಿರ ರೂಪಾಯಿಗಳು ನೀಡುತ್ತಿದ್ದು, ಅದನ್ನು 5ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರು ಸೇವೆಯಲ್ಲಿರುವಾಗ ತೀವ್ರತರವಾದ ಖಾಯಿಲೆಗಳಿಗೆ ದಿನಾಂಕ:14.03.2017ಕ್ಕಿಂತಲೂ ಮುಂಚೆ ಚಿಕಿತ್ಸೆಗೊಳಗಾದ ಅಂಗನವಾಡಿ ಕಾರ್ಯಕರ್ತೆಯರಿಗೆ 20ಸಾವಿರ ರೂಪಾಯಿಗಳು ಹಾಗೂ ಸಹಾಯಕರಿಗೆ 10ಸಾವಿರ ರೂಪಾಯಿಗಳನ್ನು ನೀಡಲಾಗುತ್ತಿತ್ತು. ದಿನಾಂಕ:14.03.2017ರ ಸರ್ಕಾರದ ಆದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಇಬ್ಬರಿಗೂ ವೈದ್ಯಕೀಯ ವೆಚ್ಚ ಮರುಪಾವತಿಯ ಮೊತ್ತವನ್ನು 50ಸಾವಿರ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ದಿನಾಂಕ:01.04.1955ಕ್ಕೆ ಮೊದಲು ಜನಿಸಿದ ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರು 60 ವರ್ಷ ಪೂರೈಸಿ ಗೌರವ ಸೇವೆಯಿಂದ ನಿವೃತ್ತಿ ಹೊಂದಿದಾಗ ಅವರಿಗೆ ಅನುಕ್ರಮವಾಗಿ 50ಸಾವಿರ ರೂಪಾಯಿಗಳು ಮತ್ತು 30ಸಾವಿರ ರೂಪಾಯಿಗಳ ಹಿಡಿಗಂಟನ್ನು ನೀಡಲಾಗುವುದು. ದಿನಾಂಕ:01.04.1955ರ ನಂತರ ಜನಿಸಿದ ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರಿಗೆ NPS-Lite ಯೋಜನೆಯನ್ನು ಅಳವಡಿಸಿದ್ದು, ನಿವೃತ್ತಿ ಸಮಯದಲ್ಲಿ ಪಿಂಚಣಿಯನ್ನು ನೀಡಲಾಗುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಹೇಳಿರುವುದನ್ನು ನಾವು ಒಪ್ಪುತ್ತೇವೆ.

**ಡಾ॥ ಜಿ. ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರಿಗೆ ನಮ್ಮ ಸರ್ಕಾರ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಿದೆ. ಏಕೆಂದರೆ...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರ ಮಾತಿಗೆ ನಾವು ಗೌರವವನ್ನು ನೀಡಿ ಧರಣಿಯನ್ನು ಹಿಂತೆಗೆದುಕೊಳ್ಳುತ್ತೇವೆ. ಆದರೆ, ಒಂದು ಷರತ್ತು ಇದೆ. ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಧರಣಿ ಮುಂದುವರೆಸಿ, ಹಗಲು-ರಾತ್ರಿ ಅಲ್ಲಿ ಒದ್ದಾಡಿಕೊಂಡು ಇದ್ದರೆ, ನಾವು ಇಲ್ಲಿ ಸದನ ನಡೆಸುವುದಕ್ಕೆ ಸಾಧ್ಯವಿಲ್ಲ. ಇವತ್ತು ಮಾನ್ಯ ಸಭಾನಾಯಕರು ಹೇಳುತ್ತಿರುವ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಧರಣಿಯನ್ನು ಹಿಂತೆಗೆದುಕೊಳ್ಳುತ್ತಿದ್ದಾರೆಂದರೆ, ತುಂಬಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂತೋಷ. ಅವರು ಧರಣಿಯನ್ನು ಮುಂದುವರೆಸಿದ್ದೆ ಆದರೆ, ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಾಳೆ ಯಾವುದೇ ಕಾರಣಕ್ಕೂ ಈ ಸದನದಲ್ಲಿ ಸದನ ನಡೆಯುವುದಕ್ಕೆ ನಾವು ಬಿಡುವುದಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಮುಖ್ಯವಾಗಿ 81 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಿದ್ದಾರೆ. ಅವರ ಬೇಡಿಕೆಗಳೆಲ್ಲವೂ ಬಹಳ ಮಹತ್ವದ ಬೇಡಿಕೆಗಳು.

**ಉಪ ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ದಯವಿಟ್ಟು ಮಧ್ಯೆ ಮಾತನಾಡಬೇಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇವತ್ತು ಕನಿಷ್ಟ ಆ 81 ಜನ ಅಂಗನವಾಡಿ ಕಾರ್ಯಕರ್ತೆಯರನ್ನು ವಾಪಸ್ಸು ತೆಗೆದುಕೊಳ್ಳುವಂತಹ ಮಾತನ್ನು ಹೇಳಬೇಕಲ್ಲವೇ? ಈಗ ಅವರಿಗೆ ಯಾವುದೇ ನಿಯಮಾವಳಿಗಳು ಇಲ್ಲ.

**ಉಪ ಸಭಾಪತಿಯವರು:-** ಮತ್ತೆ ಮತ್ತೆ ಅದೇ ಮಾತನ್ನೇ ಹೇಳುತ್ತಿದ್ದೀರಿ. ಈಗ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರ ಸಮಾಧಾನಕರವಾದಂತಹ ಉತ್ತರ ಕೊಟ್ಟು, ಕಾರ್ಯಕರ್ತೆಯರಿಗೆ ತೃಪ್ತಿಯಾದರೆ ಸರಿ. ಇಲ್ಲವಾದರೆ ಮುಂದೆ ಹೋರಾಟ ಮಾಡುತ್ತೇವೆ. ಹಾಗಾಗಿ, ಇವತ್ತಿನ ದಿವಸ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಧರಣಿಯನ್ನು ಹಿಂತೆಗೆದುಕೊಳ್ಳಬೇಕು.

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಧರಣಿಯಲ್ಲಿ ನಿರತ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.)**

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಇದರ ಜೊತೆಗೆ ಕೇಂದ್ರ ಸರ್ಕಾರದವರು ಅಂಗನವಾಡಿ ಕಾರ್ಯಕರ್ತೆಯರಿಗೆ ಕಡಿತಗೊಳಿಸಿರುವ 1800ರೂಪಾಯಿಗಳನ್ನು ಹೆಚ್ಚು ಮಾಡುವುದಕ್ಕೆ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಆ 1800 ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಏನು ಕಡಿತಗೊಳಿಸಿದ್ದಾರೆ? ದಯಮಾಡಿ ಮಾನ್ಯ ಈಶ್ವರಪ್ಪನವರು ಮತ್ತು ಭಾರತೀಯ ಜನತಾ ಪಾರ್ಟಿಯವರು ಕೇಂದ್ರ ಸರ್ಕಾರದ ಬಳಿ ಹೋಗಿ ಆ ಅವಹಾಲನ್ನು ಸಲ್ಲಿಸುವುದಕ್ಕೆ ಹೇಳಿ. ಆಗ ಅಂಗನವಾಡಿ ಕಾರ್ಯಕರ್ತೆಯರಿಗೆ 10ಸಾವಿರ ರೂಪಾಯಿ ವೇತನ ತನ್ನಷ್ಟಕ್ಕೆ ತಾನೇ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ವೇಳೆ ಕೇಂದ್ರ ಸರ್ಕಾರದವರು ಅಂಗನವಾಡಿ ಕಾರ್ಯಕರ್ತೆಯರಿಗೆ 1,800ರೂಪಾಯಿಗಳನ್ನು ಕಡಿತಗೊಳಿಸಿಲ್ಲವೆಂದು ಆದರೆ ನಾನು ನನ್ನ ರಾಜೀನಾಮೆಯನ್ನು ಬಿಸಾಕಿ ಹೊರ ಹೋಗುತ್ತೇನೆ. Are you ready to prove?

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅದಕ್ಕೆ ಸಿದ್ದರಿದ್ದಾರೆಯೇ? ಕೇಂದ್ರ ಸರ್ಕಾರದವರು ಹಣವನ್ನು ಕಡಿತಗೊಳಿಸಿಲ್ಲವೆಂದು ಸಮರ್ಥಿಸಲು ತಯಾರಿದ್ದಾರೆಯೇ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರ 1,800ರೂಪಾಯಿಗಳ ಹಣ...

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ...

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏತಕ್ಕೆ ಹೀಗೆ ಮಾತನಾಡುತ್ತಿದ್ದಾರೆ?

**ಉಪ ಸಭಾಪತಿಯವರು:–** ದಯಮಾಡಿ ಈಗ ಅದರ ಬಗ್ಗೆ ಚರ್ಚೆ ಬೇಡ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರನ್ನು ಮಂತ್ರಿಯನ್ನಾಗಿ ನೇಮಕ ಮಾಡಿ ಕೂರಿಸಲಿ.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಯಾರ ಹಣೆಬರೆಹದಲ್ಲಿ ಏನು ಇರುತ್ತದೆಯೋ ಅವರು ಅದು ಆಗುತ್ತಾರೆ. ಕೇವಲ ಮಂತ್ರಿಗಿರಿಗಷ್ಟೇ ರಾಜಕಾರಣವೇ?

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ...

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಬಹಳಷ್ಟು ಜನ ಆಗಿದ್ದಾರೆ. ಹೋಗಿದ್ದಾರೆ. ಆದರೆ, ರಾಜಕಾರಣ ಇರುವಂತಹದ್ದು, ಕೇವಲ ಮಂತ್ರಿಗಿರಿಯಲ್ಲ. ಜನಸೇವೆ ಮಾಡುತಕ್ಕಂತಹ ನಾವು ಕೂಡ...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ... ಈಗ ಶೂನ್ಯವೇಳೆಯಲ್ಲಿ ಬಂದಿರತಕ್ಕಂತಹ ಉತ್ತರಗಳು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ತನ್ವೀರ್ ಸೇಠ್, ಮಂತ್ರಿಗಳನ್ನು ದಯವಿಟ್ಟು ಸದನಕ್ಕೆ ಕರೆಯಿಸಿ. ನಿನ್ನೆಯ ದಿವಸದಿಂದಲೂ ಈ ಬಗ್ಗೆ ಹೇಳುತ್ತಿದ್ದೇವೆ. ಅವರು ಸದನಕ್ಕೆ ಹಾಜರಾಗುತ್ತಿಲ್ಲ. ಅವರಿಗೆ ಜವಾಬ್ದಾರಿಯಿಲ್ಲವೇ? ಏನು ಕಥೆ? ಅರ್ಧ ಗಂಟೆ ಚರ್ಚೆಯಲ್ಲಿ ನಿನ್ನೆ ದಿವಸವೂ ಕೂಡ ಅವರಿಗೆ ಸಂಬಂಧಪಟ್ಟ ವಿಷಯಗಳು ಬಂದಿವೆ. ಆದುದರಿಂದ, ದಯವಿಟ್ಟು ತಾವು ಅವರು ಸದನದಲ್ಲಿ ಹಾಜರಾಗಲು ಹೇಳಿ ಕಳುಹಿಸಿ.

**4. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ</u>**

**ಅ) ವಿಷಯ:- ಕೊಡಗು ಜಿಲ್ಲೆಯ ಮಡಿಕೇರಿ ಜಿಲ್ಲೆಯ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸದೇ ಹಣ ದುರ್ಬಳಕೆ ಮಾಡಿಕೊಂಡಿರುವ ಅಧಿಕಾರಿಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ**

- - -

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಿ. ಪರಮೇಶ್ವರ(ಸಭಾನಾಯಕರು)(ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ:- ಕೊಡಗು ಜಿಲ್ಲೆಯ ಕುಶಾಲ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ**

**- - -**

**ಡಾ॥ ಜಿ. ಪರಮೇಶ್ವರ(ಸಭಾನಾಯಕರು)(ಶ್ರೀ ಕಾಗೋಡು ತಿಮ್ಮಪ್ಪ, ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ:- ಅರಣ್ಯ ಪ್ರದೇಶದಲ್ಲಿ ಕಾಡಿನ ಬೆಂಕಿ ಹತ್ತಿಕೊಂಡಿರುವ ಬಗ್ಗೆ**

**- - -**

**ಡಾ॥ ಜಿ. ಪರಮೇಶ್ವರ(ಸಭಾನಾಯಕರು)(ಶ್ರೀ ಬಿ.ರಮಾನಾಥ ರೈ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ:- ವಿಜಯಪುರ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆ ಹಾನಿಯಾಗಿರುವ ಬಗ್ಗೆ**

**- - -**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ|| ಜಿ. ಪರಮೇಶ್ವರ(ಸಭಾನಾಯಕರು)(ಶ್ರೀ ಎಸ್.ಎಸ್.ಮಲ್ಲಿಕಾರ್ಜುನ, ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಅರುಣ್ ಶಹಾಪುರ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**5. ನಿಯಮ 330ರ ಮೇರೆಗೆ ಚರ್ಚೆ**

**ವಿಷಯ:- ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಸಮುದಾಯಗಳಿಗೆ ರುದ್ರಭೂಮಿಗಾಗಿ ಸರ್ಕಾರಿ ಜಮೀನು ಮಂಜೂರು ಮಾಡುವ ಬಗ್ಗೆ.**

- - -

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ರುದ್ರಭೂಮಿ(ಸ್ಮಶಾನ)ಗಳನ್ನು ಮಾಡುವುದಕ್ಕೆ ಸರ್ಕಾರಿ ಜಮೀನನ್ನು ಮಂಜೂರು ಮಾಡಿರತಕ್ಕಂತಹ ಮಾನದಂಡದ ಬಗ್ಗೆ ಹಾಗೂ ಜಾತೀವಾರು ಸ್ಮಶಾನ ಮಾಡುವುದಕ್ಕೆ ಸರ್ಕಾರದ ಆದೇಶದಂತೆ ವಿವಿಧ ಸಮುದಾಯಗಳು ಹಲವಾರು ವರ್ಷಗಳಿಂದ ಜಾಗ ನೀಡುವಂತೆ ಬೇಡಿಕೆಯಿಟ್ಟರೂ, ಅಧಿಕಾರಿಗಳು ನಿರ್ಲಕ್ಷತನ ಮಾಡಿರುವುದರಿಂದ ಹಾಗೂ ಯಾವ ಯಾವ ಜಿಲ್ಲೆಗಳ ವಿವಿಧ ಸಮುದಾಯಗಳಿಂದ ಬೇಡಿಕೆ ಮತ್ತು ಉಳಿದಿರುವ ಅರ್ಜಿಗಳ ಸಂಖ್ಯೆ ಗಮನದಲ್ಲಿಟ್ಟುಕೊಂಡು ಕೂಡಲೇ ಬೇಡಿಕೆ ತಕ್ಕಂತೆ ಸ್ಮಶಾನ ಮಾಡಲು ವಿವಿಧ ಸಮಯದಾಯಗಳಿಗೆ ಜಾಗ ಮಂಜೂರಾತಿಗೆ ಆಗ್ರಹಿಸಲು ಸದನದಲ್ಲಿ ಪ್ರಸ್ತಾಪಿಸುತ್ತೇನೆ.

**ಡಾ|| ಜಿ. ಪರಮೇಶ್ವರ(ಸಭಾನಾಯಕರು)(ಶ್ರೀ ಕಾಗೋಡು ತಿಮ್ಮಪ್ಪ, ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ಅಣ್ಣಯ್ಯ):-** ಮಾನ್ಯ ಸಭಾಪತಿಯವರೆ, ನಾನು ಈ ಪ್ರಶ್ನೆಯನ್ನು ಏತಕ್ಕೆ ಹಾಕಿದೆನೆಂದು ಹೇಳುವಂತಹ ಸಂದರ್ಭದಲ್ಲಿ, ನನ್ನ ಕ್ಷೇತ್ರದಲ್ಲಿ ಸುಮಾರು 3-4 ಗ್ರಾಮಗಳಿಗೆ ಕಳೆದ 2-3 ವರ್ಷಗಳ ಹಿಂದೆ ಸ್ಮಶಾನ ಮಾಡುವುದಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗಿದೆ. ಆದರೆ, ಎಲ್ಲೋ ಒಂದು ಕಡೆ ದಂಡಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಮತ್ತು ಉಪವಿಭಾಗಾಧಿಕಾರಿಗಳಿಗೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಜಾಗವನ್ನು ಮಂಜೂರು ಮಾಡತಕ್ಕಂತಹ ವ್ಯವಸ್ಥೆಯೊಳಗೆ ಒಂದು ರೀತಿಯ ಗೊಂದಲ ಸೃಷ್ಟಿಯಾಗಿದೆಯೆನ್ನುವುದು ನನ್ನ ಅಭಿಪ್ರಾಯವಾಗಿದೆ. ಈಗ ಅಲ್ಲಿ ಗೋಮಾಳ ಜಾಗವಿರಬಹುದು ಮತ್ತಿತರ ಜಾಗಗಳು ಇದ್ದರೂ ಕೂಡ ಅದಕ್ಕೆ ಸರ್ಕಾರ ಆದೇಶ ಮಾಡಿದೆ.

**(325)/21-3-2017/3-40/ಎಲ್‌ಎಂ/ಎಂಡಿ**

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ** (ಮುಂದು):- ನಿರ್ದಿಷ್ಟವಾಗಿ 20 ಗುಂಟೆ ಜಾಗವನ್ನು ಕಾಯ್ದಿರಸಬೇಕೆಂದು ಸರ್ಕಾರ ಆದೇಶ ಮಾಡಿದೆ. ಉದಾಹರಣೆಗೆ ನನ್ನ ಗ್ರಾಮಗಳಾದ ಸಂಪಿಗೆ ಗ್ರಾಮ, ಮುನಿಯೂರು, ಮಾಯಸಂಧ್ರ ಈ ಗ್ರಾಮಗಳಿಗೆ ಕಳೆದ ಎರಡು ವರ್ಷಗಳ ಹಿಂದೆ ತಲಾ 10ಲಕ್ಷ ರೂ.ಗಳು ಬಿಡುಗಡೆಯಾಗಿವೆ. ಜಾಗವನ್ನು ಕೊಡಲು ಏಕೆ ಅವರು ತಡೆ ಮಾಡುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಏನಾದರೂ ಸಮಸ್ಯೆಯಾಗಿದೆಯೇ ಎನ್ನುವ ವಿಚಾರವನ್ನು ಇಟ್ಟುಕೊಂಡು ನಾನು ನಿಯಮ 330ರಲ್ಲಿ ಈ ವಿಷಯವನ್ನು ಕಂದಾಯ ಸಚಿವರಿಗೆ ಕೇಳಿದ್ದೆನೆ. ಕಾನೂನಿನ ತೊಡಕು ಇದ್ದರೆ ಶೀಘ್ರವಾಗಿ ಅದನ್ನು ನಿವಾರಣೆ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಆಯ್ಕೆಯಾದವರು)**:- ಮಾನ್ಯ ಸಭಾಪತಿಗಳೆ, ರುದ್ರ ಭೂಮಿಗಾಗಿ ಹೋರಾಟ ಮಾಡುವವರಲ್ಲಿ ಪ್ರಮುಖರಾದವರು ದಲಿತ ಸಮುದಾಯಕ್ಕೆ ಸೇರಿದವರು. ಎಷ್ಟೋ ಕಡೆಗಳಲ್ಲಿ ಇವರಿಗೆ ರುದ್ರಭೂಮಿ ಇದ್ದರೂ ಅದು ಬೇರೆ ಕಡೆ ವರ್ಗಾವಣೆಯಾಗಿರುತ್ತದೆ. ಈಗಷ್ಟೆ ಚಿಕ್ಕಮಗಳೂರು ಜಿಲ್ಲೆ ಮೈಲಿಮನೆ ಪಂಚಾಯಿತಿಯ ಸದಸ್ಯರೊಬ್ಬರು ತೀರಿಕೊಂಡಾಗ ಅವರ ಶವ ಸಂಸ್ಕಾರ ಮಾಡಲು ಜಾಗವಿಲ್ಲದೆ ಆ ಹೆಣವನ್ನು ಇಟ್ಟುಕೊಂಡು ಬಹಳಷ್ಟು ಹೋರಾಟ ಮಾಡಲಾಯಿತು. ನಂತರ ಜಿಲ್ಲಾಧಿಕಾರಿಗಳು ಬಂದು ಬೇರೆ ಸಮುದಾಯದ ಜನರಿಗೆ ರುದ್ರಭೂಮಿಗೆ ಯಾವುದೆ ರೀತಿಯ ತಡೆ ಹಾಕಬಾರದು ಎಂದು ಜನರಿಗೆ ತಿಳಿವಳಿಕೆ ಕೊಟ್ಟು, ಸಮಾಧಾನ ಮಾಡಿ ನಂತರ ಶವನ್ನು ಸಂಸ್ಕಾರ ಮಾಡಲಾಗಿದೆ. ಈ ರೀತಿ ಈ ಕಡೆ ಮಾತ್ರವಲ್ಲ. ಆ ಜಿಲ್ಲೆಯ ಬೇರೆ-ಬೇರೆ ಕಡೆಗಳಲ್ಲಿ ಈ ರೀತಿಯಾಗುತ್ತಿದೆ. ವಿವಿಧ ಸಮುದಾಯಗಳ ಬೇಡಿಕೆ ಮಾಡಿ ಬಂದ ಅರ್ಜಿಗಳು ಎಂದು ಇದೆ, ಇವರು ಕೊಡುವ 20ಗುಂಟೆ ಜಮೀನು. ಸರ್ಕಾರ ಬೇರೆ-ಬೇರೆ ಸಮುದಾಯದವರು ಕೇಳಿದಾಗ ಬೇರೆ-ಬೇರೆಯಾಗಿ ಕೊಡುತ್ತದೆಯೇ, ಅಥವಾ ಆ ಇಡೀ ಊರಿಗೆ ಒಂದು ರುದ್ರಭೂಮಿ ಕೊಡುತ್ತಾರೆಯೇ ಎನ್ನುವುದು ಸ್ಪಷ್ಟವಾಗಬೇಕಾಗುತ್ತದೆ. ರುದ್ರಭೂಮಿಗಾಗಿ ಹೋರಾಟ ಮಾಡುವುದು ನಿಜವಾಗಿಯು ದೊಡ್ಡ ದುರಂತ. ಸರ್ಕಾರ ಭೂಮಿಯನ್ನು ಖರೀದಿ ಮಾಡಲು ಹೋದಾಗ ನಾವು ರುದ್ರಭೂಮಿಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಮೀನನ್ನು ಕೊಡುವುದಿಲ್ಲ ಎಂದಾಗ ಏನು ಮಾಡುವುದು? ಆಗ ಏನು ಮಾಡುತ್ತದೆ ಸರ್ಕಾರ? ಸರ್ಕಾರ ಭೂಮಿ, ಗೋಮಾಳ ಭೂಮಿ ಇದ್ದರೆ ಮಾಡಿಕೊಡಬಹುದು. ರುದ್ರಭೂಮಿ ಖರೀದಿಗಾಗಿ ಒಂಬತ್ತು ಕೋಟಿ ಚಿಲ್ಲರೆ ಹಣವನ್ನು ಇಟ್ಟಿದ್ದಾರೆ. ಇತ್ತೀಚೆಗೆ 30 ಜಿಲ್ಲೆಗಳಿಗೆ 5ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ರುದ್ರಭೂಮಿಗಾಗಿ ಜಮೀನನ್ನು ಯಾರು ಕೊಡುವುದಿಲ್ಲ ಎಂದಾಗ ಏನು ಮಾಡುವುದು ಎನ್ನುವುದರ ಬಗ್ಗೆ ಮಾನ್ಯ ಸಭಾನಾಯಕರು ಉತ್ತರ ಹೇಳಬೇಕು.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, "ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ" ಆದರೆ ಇವರೆಡರ ಮಧ್ಯೆ, ವ್ಯವಸಾಯ ಮಾಡಲು ಜಮೀನು ಇಲ್ಲ ಎಂದರೆ, ಜಮೀನು ಕೊಡುತ್ತೇವೆ. ವಾಸ ಮಾಡಲು ಮನೆ ಇಲ್ಲ ಎಂದರೆ ಮನೆ ಕೊಡುತ್ತೇವೆ. ಆದರೆ ಜೀವನದ ಕೊನೆಯಲ್ಲಿ ಶಾಶ್ವತವಾಗಿ ನೆಲೆಸುವಂತಹ ರುದ್ರಭೂಮಿ ಸ್ವಾತಂತ್ರ ಸಿಕ್ಕು 70 ವರ್ಷಗಳಾದರೂ ಎಲ್ಲರಿಗೂ ಸಿಗುತ್ತಿಲ್ಲ. ಇದು ನಿಜವಾಗಿಯು ನಮ್ಮಂತವರಿಗೆ ಬಹಳ ನೋವಿನ ಸಂಗತಿ ಎಂದು ನಾನು ಭಾವಿಸುತ್ತೇನೆ. ಎಲ್ಲ ಹಳ್ಳಿಗಳಲ್ಲಿ, ಎಲ್ಲ ಸಮುದಾಯದವರಿಗೆ ರುದ್ರಭೂಮಿಯನ್ನು ಒದಗಿಸಿಕೊಡಲು ಸರ್ಕಾರ ನಿರ್ಧಾರ ಮಾಡಿದೆ. ಸರ್ಕಾರಿ ಜಮೀನು ಇದ್ದರೆ 20 ಗುಂಟೆ, ಇಲ್ಲದಿದ್ದರೆ ಸಾರ್ವಜನಿಕರಿಂದ ಖರೀದಿ ಮಾಡಿ, ಸ್ವಾಧೀನ ಮಾಡಿಕೊಂಡು ಕೊಡಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಸ್ವಲ್ಪಮಟ್ಟಿಗೆ ಇದು ಸ್ವಾಗತಾರ್ಹವಾದ ವಿಚಾರ. ಸಾರಾಸಗಟಾಗಿ 20 ಗುಂಟೆ ರುದ್ರಭೂಮಿ ಎಂದು ಹೇಳಿದರೆ ದೊಡ್ಡ-ದೊಡ ಗ್ರಾಮಗಳಲ್ಲಿ... ರುದ್ರಭೂಮಿಗೆ registration ಮಾಡಿಸುವುದು ಪ್ರಾರಂಭವಾಗಿದೆ. ನಾನು ಸತ್ತಾಗ ಈ ಜಾಗ ನನಗೆ ಇರಲಿ ಎಂದು ಕೆಲವು ಕಡೆಗಳಲ್ಲಿ registration ಮಾಡಿಸುವುದು ಪ್ರಾರಂಭವಾಗಿದೆ. 2000 ಜನಸಂಖ್ಯೆ ಇದ್ದರೆ ಎಷ್ಟು ರುದ್ರಭೂಮಿ ಇರಬೇಕು, 5000 ಜನಸಂಖ್ಯೆ ಇದ್ದರೆ, 10,000 ಜನಸಂಖ್ಯೆ ಇದ್ದರೆ ಎಷ್ಟು ಇರಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇದೆ. ಇಲ್ಲಿ ಯಾವ ರೀತಿಯ ರುದ್ರಭೂಮಿ ಇರಬೇಕು. ಕೆಲವರು ಸುಡುತ್ತಾರೆ, ಕೆಲವರು ಹೂಳುತ್ತಾರೆ. ನಾನು ಎರಡು ವಿಚಾರಗಳ ಬಗ್ಗೆ ಬಹಳ ಮನ ನೊಂದು ಅನೇಕ ಸಾರಿ ಈ ಸದನದಲ್ಲಿ ಹೇಳಿದ್ದೇನೆ. ಬೆಂಗಳೂರಿನಲ್ಲಿ ಮಲ್ಲೇಶ್ವರಂ ಕಡೆಯಿಂದ ನವರಂಗ್ ಕಡೆಗೆ ಹೋಗುವ ಮಧ್ಯದಲ್ಲಿ ಹರಿಶ್ಚಂದ್ರ ಘಾಟ್ ಸಿಗುತ್ತದೆ. ಬಲಗಡೆ ವೀರಶೈವರ ರುದ್ರಭೂಮಿ, ಎಡಗಡೆಗೆ ಮುಸ್ಲಮಾರ ರುದ್ರಭೂಮಿ ಇದೆ, ಅದರ ಪಕ್ಕದಲ್ಲಿ ಹಿಂದೂಗಳ ರುದ್ರಭೂಮಿ ಇದೆ ಮತ್ತು ಇನ್ನೊಂದು ಭಾಗದಲ್ಲಿ ಯಾರು ಸುಡುತ್ತಾರೆ ಅವರಿಗೆ ಜಾಗವನ್ನು ನಿಶ್ಚಯ ಮಾಡಿದ್ದಾರೆ. ಆದರೆ ಕೊನೆಗೆ ಹೋಗುವಾಗ ಯಾರು ಆ ಜಾತಿ, ಈ ಜಾತಿ, ಆ ಧರ್ಮ, ಈ ಧರ್ಮ ಎಂದು ಹೋಗುವುದಿಲ್ಲ. ಅಂತಿಮವಾಗಿ ಸಾವಾದಾಗ ಸುಡುತ್ತಾರೆ ಅಥವಾ ಮಣ್ಣು ಮಾಡುತ್ತಾರೆ. ಸ್ವಾತಂತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಬಂದು 70 ವರ್ಷವಾದರೂ ಸಾವಿನಲ್ಲಿಯು ಸಮಾನತೆಯನ್ನು ತರಲು ಆಗಲಿಲ್ಲ. ಬದುಕಿನಲ್ಲಿ ಸಮಾನತೆ ಮರೀಚಿಕೆಯಾಗಿದೆ. ಜಾತಿ ಆಧಾರಿತ ಮತ್ತು ಧರ್ಮ ಆಧಾರಿತ ರುದ್ರಗಳನ್ನು ನಿರ್ಮಾಣ ಮಾಡುವುದನ್ನಾದರೂ ತಡೆಯಬೇಕೆಂದು ಹೇಳಬಯಸುತ್ತೇನೆ. ಎರಡನೆಯದಾಗಿ, ಸಂವಿಧಾನದ Article 17 ನಲ್ಲಿ ಯಾವುದೆ ರೀತಿಯ untouchability practice ಮಾಡುವುದು ಕಾನೂನು ಬಾಹಿರ ಮತ್ತು ಸಂವಿಧಾನ ಬಾಹಿರ ಎಂದು ಇದೆ. ಹೋದ ಸಾರಿ ಇದ್ದೆ ಸದನದಲ್ಲಿ Scheduled Castes and Scheduled Tribes ಗೆ ನವರ ರುದ್ರಭೂಮಿಗಾಗಿ 10 ಕೋಟಿ ರೂ.ಗಳನ್ನು ಇಡಲಾಗಿದೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ನಿನ್ನೆ-ಮೊನ್ನೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬಂದು 'ಸರ್ ಈ ಹಣ ಬಳಕೆಯಾಗುತ್ತಿಲ್ಲ, ಇದನ್ನು ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಉಪಯೋಗಿಸಲು ಅನುಮತಿಯನ್ನು ಕೊಡಿ' ಎಂದು ಕೇಳಿದ್ದಾರೆ. ದಲಿತರಿಗೆ ಒಂದು ರುದ್ರಭೂಮಿ, ಸವರ್ಣೀಯರಿಗೆ ಒಂದು ರುದ್ರಭೂಮಿ ಅಥವಾ ಸವರ್ಣೀಯರಲ್ಲಿಯೇ ವೀರಶೈವರಿಗೆ ಒಂದು ಇನ್ನೊಂದು ಧರ್ಮಕ್ಕೆ ಒಂದು ಎಂದು ಮಾಡುವುದನ್ನು ದಯಮಾಡಿ ಈಗಲಾದರೂ ನಿಲ್ಲಿಸುವಂತಹ ದಿಕ್ಕಿನಲ್ಲಿ ಸರ್ಕಾರ ಕ್ರಮ ಜರುಗಿಸಬೇಕು. ಅದರ ಮುಖಾಂತರ ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಬಯಸಿರುವಂತಹ ಸಮಾನ ಗೌರವ, ಸಮಾನ ಅವಕಾಶ ಕೊಡುವ ದಿಕ್ಕಿನಲ್ಲಿ ಜೀವನದ ಕೊನೆಯ ಹಂತದಲ್ಲಾದರೂ ಅದನ್ನು ಸಾಧಿಸುವಂತಹ ಕೆಲಸಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ರುದ್ರಭೂಮಿಗಳನ್ನು ಅತ್ಯಂತ ವ್ಯವಸ್ಥಿತವಾಗಿ, ಸುಸಜ್ಜಿತವಾಗಿ ನಿರ್ಮಾಣ ಮಾಡಬೇಕು. ರುದ್ರಭೂಮಿಯನ್ನು ಮಣ್ಣು ಮಾಡಿ ವಾಪಸ್ ಬರಬೇಕಾದರೆ ಮುಖ ತೊಳೆದುಕೊಂಡು ವೀಳ್ಯದೆಲೆ ಇತ್ಯಾದಿಗಳನ್ನು ಬದಲಾಯಿಸಿಕೊಂಡು, 11ನೇ ದಿನವೆ, ಅಥವಾ 9ನೇ ದಿನವೊ ಎನ್ನುವುದನ್ನು ಅಲ್ಲಿ ಕುಳಿತು ಮಾತುಕತೆ ನಡೆಸಿ ನಂತರ ತೀರ್ಮಾನ ಮಾಡುತ್ತಾರೆ. ಆದರೆ ಅನೇಕ ರುದ್ರಭೂಮಿಗಳಲ್ಲಿ ಮುಖ ತೊಳೆಯಲು, ಕಾಲು-ಕೈ ತೊಳೆಯಲು ನೀರು ಸಿಗುವುದಿಲ್ಲ. ಕುಳಿತುಕೊಳ್ಳಲು ಬೆಂಚ್ ಅಥವಾ ಗಿಡಗಳ ನೆರಳು ಇರುವುದಿಲ್ಲ. ಮೈಸೂರಿನ Municipal Commissioner ಆಗಿದ್ದವರು ಒಂದು ಹಂತದಲ್ಲಿ ರುದ್ರಭೂಮಿಯಲ್ಲಿ ಲೈಟ್‌ಗಳ ವ್ಯವಸ್ಥೆ, ಗಿಡಗಳನ್ನು ಬೆಳೆಸಿದರು, ನೀರು, ರಸ್ತೆ ಎಲ್ಲವನ್ನು ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿದರು ಎಂದು ಕೇಳಿದೆ. ಅದೇ ರೀತಿ ಎಲ್ಲ ರುದ್ರಭೂಮಿಗಳನ್ನು ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕು. ಸಾಧ್ಯವಾದಷ್ಟು ಸುಡಲು ಯಾವ ಧರ್ಮದವರು ಒಪ್ಪುತ್ತಾರೆ ಆ ದಿಕ್ಕಿನಲ್ಲಿ educate ಮಾಡುವ ಮುಖಾಂತರ... ಸಾವು ಇಂದಿಲ್ಲಾ ನಾಳೆ ಎಲ್ಲರಿಗೂ ಬರುವುದು ನಿಶ್ಚಿತ. ಆ ಸಾವಿನ ಹಿನ್ನೆಲೆಯಲ್ಲಿ ಅಂತ್ಯಕ್ರಿಯೆಗಳನ್ನು ಗೌರವಯುತವಾಗಿ, ಯಾವುದೆ ಭೇದಭಾವವಿಲ್ಲದೆ ನಡೆಸಲು ಸರ್ಕಾರ ಒಂದು ನೀತಿಯನ್ನು ರೂಪಿಸಬೇಕು. ಆ ನೀತಿಯ ಜೊತೆಗೆ ಮೂಲಭೂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೌಕರ್ಯಗಳನ್ನು ಕೊಡುವ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಆಶಿಸುತ್ತೇನೆ.

**(326) YL-MD 21.03.2017 3.50**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಮನುಷ್ಯನಿಗೆ ಬದುಕಿರುವವರೆಗೆ ಜಾತಿ. ಸತ್ತ ಮೇಲೆ ಯಾವುದೇ ಜಾತಿಯೂ ಬರುವುದಿಲ್ಲ. ಯಾರೇ ವ್ಯಕ್ತಿಯೂ ಸತ್ತರು ಅದನ್ನು ಶವ ಎಂದು ಕರೆಯುತ್ತಾರೆ. ಆ ಪರಿಸ್ಥಿತಿಯೊಳಗೆ ನನಗೆ ವಿವಿಧ ಸಮುದಾಯಗಳು ರುದ್ರಭೂಮಿಗಾಗಿ ಹಲವಾರು ವರ್ಷಗಳಿಂದ ಜಾಗ ನೀಡುವಂತೆ ಯಾರಾದರೂ ಬೇಡಿಕೆಯನ್ನು ಇಟ್ಟಿದ್ದಾರೆಯೇ? ಯಾವ್ಯಾವ ಸಮಾಜದಲ್ಲಿ ರುದ್ರಭೂಮಿಗಾಗಿ ಬೇಡಿಕೆಯನ್ನಿಟ್ಟಿದ್ದಾರೆ. ನಾವುಗಳು ಹೋಟೆಲ್‌ಗಳಿಗೆ ಹೋಗಬೇಕಾದರೆ ಯಾವುದೇ ಜಾತಿ ಬರುವುದಿಲ್ಲ. ಎಲ್ಲಾ ಜಾತಿಯ ಹೋಟೆಲ್‌ಗಳಿಗೂ ಹೋಗುತ್ತೇವೆ. ಹಾಗೆಯೇ ದೇವಸ್ಥಾನಗಳಿಗೆ ಹೋಗಬೇಕಾದರೆ ಯಾವುದೇ ಜಾತಿಯನ್ನು ನೋಡದೇ ಹೋಗುತ್ತೇವೆ. ಈ ಪರಿಸ್ಥಿತಿ ಬರಬೇಕೆನ್ನುವ ಉದ್ದೇಶದಿಂದಲೇ ಮಾನ್ಯ ವಿ.ಎಸ್.ಉಗ್ರಪ್ಪನವರು ಕೆಲವು ಸೆಕ್ಷನ್‌ಗಳನ್ನು ಹೇಳಿದ್ದಾರೆ. ಒಂದೊಂದು ಸಮುದಾಯಗಳಿಗೆ ಒಂದೊಂದು ರುದ್ರಭೂಮಿಯನ್ನು ಮಾಡುತ್ತಾ ಹೋದರೆ, ನಾವು ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದೇವೆಂಬುದು ನನಗೆ ಅರ್ಥವಾಗುತ್ತಿಲ್ಲ. ಕೆಲವು ಧರ್ಮಗಳು ಉದಾಹರಣೆಗೆ ಮುಸ್ಲಿಂಮರು, ಕ್ರಿಶ್ಚಿಯನ್‌ರವರಿಗಾದರೆ ಅವರದೇ ಆದಂತಹ ಒಂದು ಧರ್ಮ ಇರುತ್ತದೆ. ಹಾಗಾಗಿ ಅವರು ರುದ್ರಭೂಮಿಯನ್ನು ಕೇಳುತ್ತಾರೆ. ಅದರಲ್ಲಿಯೇನಾದರೂ ಉಪ ಜಾತಿಗಳನ್ನು ಕೇಳುವುದಕ್ಕೆ ಹೋದರೆ, ಸಮಂಜಸವಾಗಿ ಕಾಣುವುದಿಲ್ಲ. ಸತ್ಯವಾಗಿ ಮಾತನಾಡುವುದಾದರೆ, ಒಂದೊಂದು ಹಳ್ಳಿಗಳಲ್ಲಿಯೂ ಎಲ್ಲಾ ಧರ್ಮ, ಜಾತಿ ಬಿಟ್ಟು ಒಂದೇ ಒಂದು ರುದ್ರಭೂಮಿಯಾಗಬೇಕು. ಕೆಲವು ಸಮುದಾಯದವರಿಗೆ ಬೇಕಾದರೆ ಅವರ ಮನೆಯಲ್ಲಿಯೇ ಶವಸಂಸ್ಕಾರವನ್ನು ಮಾಡಿಕೊಳ್ಳಲಿ, Religion is there at their home. ನಮ್ಮ ಜಾತ್ಯಾತೀತ ರಾಷ್ಟ್ರವೆಂದರೆ, ನಾವು ನಡೆಸತಕ್ಕಂಥ ಧರ್ಮ, ಪೂಜೆ ಏನಿದೆ ಅದು ಮನೆಯಲ್ಲಿಯೇ ವಿನಹ: ವಿಧಾನಸೌಧದಲ್ಲಿಯೂ ಅಲ್ಲ ಅಥವಾ ರಸ್ತೆಯಲ್ಲಿ ಅಲ್ಲ. Religion or caste is only at home, not in the public. ಅದನ್ನು ನಮ್ಮ ಸಂವಿಧಾನದಲ್ಲಿ ವಿಶೇಷವಾಗಿ ಬರೆದಿದ್ದಾರೆ. ಸಂವಿಧಾನದಲ್ಲಿ ಬರೆದಿರತಕ್ಕಂಥ ಅನುಚ್ಛೇದಗಳು ಏನಿದೆಯೋ ನಮಗೆ ಗೊತ್ತಿಲ್ಲ. ಏಕೆಂದರೆ, I am not a Lawyer, I am only an Engineer. ನಾನು ಕೂಡ ಮುಂಚೆ Subject Committee ಅಧ್ಯಕ್ಷನಾಗಿದೆ. ಆಗ ನಾನು ಪ್ರತಿಯೊಂದು ಹಳ್ಳಿಗೂ ಕೂಡ, ಕನಿಷ್ಠ ಒಂದೊಂದು ಎಕರೆ ಜಮೀನನ್ನು ರುದ್ರಭೂಮಿಗಾಗಿ ಮೀಸಲಿಡಿ, ಅದನ್ನು ಎಲ್ಲಾ ಜಾತಿಯವರು ಕೂಡ ಉಪಯೋಗಿಸಿಕೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಅನುಕೂಲವಾಗಬೇಕೆನ್ನುವ ವಿಚಾರವನ್ನು 1994 ರಲ್ಲಿಯೋ ಅಥವಾ 1995 ರಲ್ಲಿಯೋ ಸ್ಪಷ್ಟಪಡಿಸಿದೆ. ನಾವು ಕೂಡ ಅನೇಕ ವಿಚಾರಗಳನ್ನು ಹೇಳುತ್ತೇವೆ. ಆದರೆ, ಅದ್ಯಾವುದು ಕೂಡ ಜಾರಿಗೆ ಬರುವುದಿಲ್ಲ. ಇವತ್ತು ಜಾತಿವಾರು ಮಾಡುವುದು ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳಿದ ಹಾಗೆ ಸರ್ಕಾರದ ಒಂದು ತೀರ್ಮಾನವಾಗಬೇಕು.  ಜಾತಿವಾರು ರುದ್ರಭೂಮಿಬೇಕೇ? ಧರ್ಮದವಾರು ಬೇಕೇ? ಯಾವ ರೀತಿ ರುದ್ರಭೂಮಿ ಬೇಕು? ಎಷ್ಟು ರುದ್ರಭೂಮಿ ಬೇಕು? ಇವತ್ತು ನಾವು ಜಾತಿವಾರು ಮಾಡುವುದಕ್ಕೆ ಹೋದರೆ, ಹರಿಜನರಿಗೊಂದು, ಗಿರಿಜನರಿಗೊಂದು, ಹಿಂದುಗಳಿಗೊಂದು, ಲಿಂಗಾಯಿತರಿಗೊಂದು, ಕುರುಬರಿಗೊಂದು, ಒಕ್ಕಲಿಗರಿಗೊಂದು ಎಂದು ರುದ್ರಭೂಮಿಗಳನ್ನು ಮಾಡುತ್ತಾ ಹೋದರೆ, ಏನು ಕಥೆ. ಜಾತ್ಯಾತೀತ ರಾಷ್ಟ್ರವೆಂದರೆ, ಜಾತಿ ಬಿಟ್ಟಂತಹ ರಾಷ್ಟ್ರ.  ನಾವು ಪಾಲಿಸತಕ್ಕಂಥ ಧರ್ಮವನ್ನು ಧರ್ಮದಲ್ಲಿಟ್ಟುಕೊಂಡಿದ್ದೇವೆಯೇ ವಿನಃ ಧರ್ಮದ ವ್ಯವಸ್ಥೆಯೆನಿದೆ ಅದು ಅದಲ್ಲ.  ಅದಕ್ಕೋಸ್ಕರವಾಗಿ ತಾವು ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತುಕೊಂಡು ಮಾತನಾಡಿ, ಕ್ಯಾಬಿನೆಟ್ ಮಂತ್ರಿಗಳು ಇಲ್ಲಿಯೇ ಇದ್ದಾರೆ.  ನಾಲ್ಕು ಜನ ಸಂಪುಟ ಸಚಿವರು ಇಲ್ಲಿಯೇ ಇದ್ದೀರಿ. ತಾವೆಲ್ಲರೂ ಕುಳಿತುಕೊಂಡು ವಿವಿಧ ಸಮುದಾಯಗಳಿಗೆ ರುದ್ರಭೂಮಿಯನ್ನು ಮಾಡಬಹುದೇ? ಬೇಡವೇ ಎಂದು ಒಂದು ತೀರ್ಮಾನ ಮಾಡಿ.  ಉತ್ತರವನ್ನು ಕೊಟ್ಟಿದ್ದಾರೆ ಅದಕ್ಕಾಗಿ ನಾನು ಹೇಳುವುದೇನೆಂದರೆ ಮಾನ್ಯ ಸಚಿವರು ಕೊಟ್ಟಂತಹ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಲಿ, ವಾಪಸ್ಸು ತೆಗೆದುಕೊಂಡು, ಇದಕ್ಕೆ ನಾವು ಒಂದು ತೀರ್ಮಾನ ಮಾಡಿ, ಸರ್ಕಾರದೊಂದಿಗೆ ವಿಚಾರ ಮಾಡಬೇಕೆಂದು ಇದ್ದೇವೆ. ವಿಚಾರ ಮಾಡಿದ ಮೇಲೆ ನಾವು ಬರುತ್ತೇವೆಂದು ಹೇಳಿದ್ದಾರೆ.  ಸದಸ್ಯರು ಕೇಳಿರುವಂತೆ ವಿವಿಧ "ಸಮುದಾಯಗಳು ಹಲವಾರು ವರ್ಷಗಳಿಂದ ಜಾಗ ನೀಡುವಂತೆ ಬೇಡಿಕೆ ಇದ್ದರೂ, ಅಧಿಕಾರಿಗಳ ನಿರ್ಲಕ್ಷ್ಯತನವನ್ನು ಮಾಡಿರುವುದರಿಂದ ಜಿಲ್ಲೆಗಳಲ್ಲಿ ವಿವಿಧ ಸಮುದಾಯಗಳಿಂದ ರುದ್ರಭೂಮಿಗೆ ಇಟ್ಟಿರುವ ಬೇಡಿಕೆ ಮತ್ತು ಬಂದಿರತಕ್ಕಂಥ ಅರ್ಜಿಗಳನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಜಾಗ ಮಂಜೂರಾತಿಗೆ ಆಗ್ರಹಿಸಿ ಪ್ರಸ್ತಾಪಿಸಿರುವ ಬಗ್ಗೆ" ಎಂದು ಹೇಳಿದ್ದಾರೆ.  I want to know, ಜಾಗವನ್ನು ಯಾರ್ಯಾರು ಕೇಳಿದ್ದಾರೆ ಹಾಗೂ ಯಾವ್ಯಾವ ಸಮುದಾಯದವರು ಕೇಳಿದ್ದಾರೆ, ಎಲ್ಲಿ ಕೇಳಿದ್ದಾರೆ ಎಂದು. ಅದು ಗೊತ್ತಾದರೆ ತಾನೇ ನಾವು ಮಾತನಾಡುವುದಕ್ಕಾಗುವುದು.  ಆದ್ದರಿಂದ ಈ ವಿಚಾರವನ್ನು ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿ ಆಧಾರದ ಮೇಲೆ ಕನಿಷ್ಠ ಸತ್ತ ಮೇಲಾದರೂ ಜಾತಿ ಎನ್ನುವ ಪ್ರವೃತ್ತಿಯನ್ನು ಬಿಡುವುದು ಒಳ್ಳೆಯದು ಎಂದು ನನ್ನಗನಿಸುತ್ತದೆ.  ಇದು ಸರ್ಕಾರಕ್ಕೆ ಬಿಟ್ಟಂತಹ ವಿಚಾರ. ಸರ್ಕಾರ ಏನು ತೀರ್ಮಾನ ಮಾಡುತ್ತದೆಯೋ ಆ ರೀತಿಯಾಗಲಿ.

**ಉಪ ಸಭಾಪತಿಯವರು:-** ಶ್ರೀ ಕೆ.ಟಿ.ಶ್ರೀಕಂಠೇಗೌಡರೆ, ಆದಷ್ಟು ಬೇಗ ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಎಂ.ಡಿ.ಲಕ್ಷ್ಮೀನಾರಾಯಣರವರು ಅತ್ಯಂತ ಮಹತ್ವದ ವಿಚಾರದ ಬಗ್ಗೆ ಇವತ್ತು ತಮ್ಮ ಹಾಗೂ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಮ್ಮ ಊರಿನಲ್ಲಿ ನಡೆದಂತಹ ಘಟನೆಯನ್ನು ನಿಮ್ಮೆಲ್ಲರ ಮುಂದೆ ನಿಜಕ್ಕೂ ಹೇಳಬೇಕೆಂದು ನನಗನ್ನಿಸಿದೆ. ನಮ್ಮ ಊರಿನಲ್ಲಿ ಸುಮಾರು ಏಳು ಸಾವಿರದಷ್ಟು ಜನರು ವಾಸಿಸುತ್ತಿದ್ದಾರೆ. ಆದರೆ, ಹಳ್ಳಿಯಲ್ಲಿರುವುದು ಎರಡು ರುದ್ರಭೂಮಿ, ಒಂದು ಕಬರುಸ್ಥಾನ ಮುಸ್ಲಿಂಮರಿಗೆ, ಇನ್ನೊಂದು ಬ್ರಾಹ್ಮಣರಿಗೆ ಮಾತ್ರ. ಆದರೆ, ಜಮೀನು ಇರತಕ್ಕಂಥ ರೈತರು ತಮ್ಮ ಜಮೀನಿನಲ್ಲಿಯೇ ಅವರ ಮನೆಯವರ ಶವಸಂಸ್ಕಾರವನ್ನು ಮಾಡಿಕೊಳ್ಳುತ್ತಾರೆ. ಇನ್ನುಳಿದಂತಹ ಎಲ್ಲಾ ವರ್ಗದ ಜನರು ನಮ್ಮ ಊರಿನಲ್ಲಿದ್ದಾರೆ. ಅವರ ಮನೆಯಲ್ಲಿ ಯಾರಾದರೂ ಸತ್ತರೆ, ಯಾರ ಹತ್ತಿರ ಜಮೀನಿದೆ ಅವರ ಮನೆಯ ಮುಂದೆ ತಿರುಗಬೇಕು. ನಮ್ಮ ತಂದೆಯವರು ಸತ್ತಿದ್ದಾರೆ. ಶವಸಂಸ್ಕಾರ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಯಾರ ಹತ್ತಿರ ಭೂಮಿ ಇರುತ್ತದೆ, ಅವರುಗಳ ಹತ್ತಿರ ಹೋಗಿ ಶವ ಸಂಸ್ಕಾರ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ತಿರುಗಾಡಬೇಕು. ಹಲವಾರು ಮಂದಿಗಳ ಹತ್ತಿರ ಹೋಗಿ ಜಾಗವನ್ನು ಕೇಳಿ, ಕೊನೆಗೆ ಯಾರಾದರೂ ಅವರ ಜಮೀನಿನ ಜಾಗದಲ್ಲಿ ಶವ ಸಂಸ್ಕಾರ ಮಾಡುವುದಕ್ಕೆ ಒಪ್ಪಿಕೊಂಡು, ಜಮೀನನ್ನು ಕೊಟ್ಟರೆ ಅಂತ್ಯಸಂಸ್ಕಾರ ಮಾಡಬೇಕಾಗುತ್ತದೆ. ಯಾರು ಅಂತ್ಯಸಂಸ್ಕಾರಕ್ಕೆ ಜಾಗವನ್ನು ಕೊಡಲಿಲ್ಲವೆಂದರೆ, ನಮ್ಮ ಊರಿನ ಕೆರೆಯ ಹತ್ತಿರ ಶವವನ್ನು ತೆಗೆದುಕೊಂಡು ಹೋಗಿ ಕಷ್ಟಪಟ್ಟು ಅಂತ್ಯಸಂಸ್ಕಾರವನ್ನು ಮಾಡಬೇಕಾಗುತ್ತದೆ. ಇದು ಅತ್ಯಂತ ದಾರುಣವಾದ ದುರಂತದ ವಿಚಾರ. ಹಾಗಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಿಸುವುದೇನೆಂದರೆ, ಈ ರುದ್ರಭೂಮಿಯ ವಿಚಾರದಲ್ಲಿ ತಡಮಾಡುವುದು ಬೇಡ. ಕಾಲಬದ್ಧ ಕಾರ್ಯಕ್ರಮಗಳನ್ನು ಹಾಕಿಕೊಂಡರೆ...

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೆ, ಕಂದಾಯ ಸಚಿವರಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕಂದಾಯ ಸಚಿವರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ರುದ್ರಭೂಮಿ ನಿರ್ಮಾಣದ ವಿಚಾರದಲ್ಲಿ ಪ್ರತಿ ಹಳ್ಳಿಗಳಲ್ಲಿಯೂ, ಹಳ್ಳಿಗಳನ್ನು ಯಾವ ರೀತಿ ಕಟ್ಟುತ್ತಿವೋ, ಅದರ ಜೊತೆಗೆ ಒಂದು ರುದ್ರಭೂಮಿಯನ್ನು ಸಹ ಕಟ್ಟಬೇಕು. ಸಾರ್ವಜನಿಕ ರುದ್ರಭೂಮಿಯೇ ಆಗಲಿ. ಮಾನ್ಯ ಉಗ್ರಪ್ಪನವರ ಅಭಿಪ್ರಾಯಕ್ಕೆ ನಾವು ಪೂರಕವಾಗಿ ನಿಲ್ಲುತ್ತೇವೆ. ಆದರೆ, ಮನುಷ್ಯ ಹುಟ್ಟಿದ ಮೇಲೆ ಸಾಯಲೇಬೇಕಲ್ಲವೇ? ಪ್ರತಿ ಹಳ್ಳಿಗಳಲ್ಲಿಯೂ ಸ್ಮಶಾನಬೇಕೇ, ಬೇಕಲ್ಲವೇ? ಹಾಗಾಗಿ ಮನುಷ್ಯ ತನ್ನ ಸಂಬಂಧಿಕರು ಸತ್ತ ನಂತರವಾದರೂ ಆ cremation ಮಾಡುವಾಗಲಾದರೂ ಸಮಾಧಾನವಾಗಿ ಅಂತ್ಯಸಂಸ್ಕಾರವನ್ನು ಮಾಡಲಿ. ಹಿಂದೆ ಹಿರಿಯರು ಬಾರಪ್ಪ ಅಂತ್ಯ ಸಂಸ್ಕಾರವನ್ನು ಮಾಡು ಎಂದು ಹೇಳಿ, ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಸುಲಭವಾಗಿ ಜಮೀನಿನಲ್ಲಿ ಜಾಗವನ್ನು ಬಿಟ್ಟು ಕೊಡುತ್ತಿದ್ದರು. ಆದರೆ, ಈಗಿನ ಜನರು ಜಾಗವನ್ನು ಕೊಡುವುದಕ್ಕೆ ತಯಾರಿಲ್ಲ. ಬದಲಾದ ಕಾಲಘಟದ ಸ್ಥಿತಿಯಲ್ಲಿ ಶವವನ್ನು ಹೂಳಲಿಕ್ಕೂ ಜನರು ಮನಸ್ಸು ಮಾಡದೇ ಇರುವುದು ಹೆಚ್ಚಾಗಿದೆ. ಹಾಗಾಗಿ, ಎಲ್ಲಿಯೋ ಕಾಲುವೆ ದಂಡೆ ಮೇಲೆ, ಕೆರೆ ದಂಡೆ ಮೇಲೆ ಅಂತ್ಯಸಂಸ್ಕಾರವನ್ನು ಮಾಡುವಂತಹ ದುರಂತದ ಸಂದರ್ಭ ನಮ್ಮ ಎದುರಿಗಿದೆ. ದಯಮಾಡಿ ಸರ್ಕಾರ ಇದಕ್ಕೊಂದು ಕಾಲಬದ್ಧ ಕಾರ್ಯಕ್ರಮವನ್ನು ಹಾಕಬೇಕು. ಯಾವ ಹಳ್ಳಿಗಳಲ್ಲಿ ಸ್ಮಶಾನ ಇದೆಯೇ ಇಲ್ಲವೋ ಎಂಬುದರ ಬಗ್ಗೆ ಒಂದು ಸರ್ವೆ ಮಾಡಿಸಿ. ಪ್ರತಿ ಹಳ್ಳಿಗಳಿಗೂ ಒಂದು ಸ್ಮಶಾನ ಬೇಕೇ ಬೇಕಲ್ಲವೇ? ಹಾಗಾಗಿ ಯಾವ ಹಳ್ಳಿಗಳಲ್ಲಿ ಇಲ್ಲ. ಅಂತಹ ಹಳ್ಳಿಗಳಿಗೆ ಇಂತಿಷ್ಟು ರುದ್ರಭೂಮಿಯನ್ನು ಇಂತಿಷ್ಟು ಕಾಲಮಿತಿಯಲ್ಲಿ ಮಾಡಲೇಬೇಕು. ರುದ್ರಭೂಮಿಯನ್ನು ಮಾಡುತ್ತೇವೆ ಎನ್ನುವ ಕಾರ್ಯಕ್ರಮವನ್ನು ರೂಪಿಸದೇ ಹೋದರೆ, ಬಹುಶಃ ಆ ಸಾವಿನ ಸಂದರ್ಭದಲ್ಲಿಯೂ cremation ಮಾಡುವುದಕ್ಕೆ, ಹೂಳಲಿಕ್ಕೆ ಪರದಾಡುವಂತಹ ಪರಿಸ್ಥಿತಿಯೆನಿದೆ ಅದನ್ನು ತಪ್ಪಿಸಿದಂತಹ ಪುಣ್ಯ ನಿಮಗೆ ಬರುತ್ತದೆ. ಹಾಗಾಗಿ ಕಂದಾಯ ಸಚಿವರಿಗೂ ಇದರ ಬಗ್ಗೆ ಇಚ್ಛಾಶಕ್ತಿ ಇದೆ. 20 ಗುಂಟೆಯಲ್ಲ ಎಷ್ಟು ಜಾಗವನ್ನಾದರೂ ಕೂಡಲೇ ಖರೀದಿ ಮಾಡಿ. ಖಾಸಗಿಯವರ ಹತ್ತಿರವೂ ಜಾಗವನ್ನು ಖರೀದಿ ಮಾಡಿ. ಪ್ರತಿ ಹಳ್ಳಿಗಳಿಗೂ ಒಂದು ಸಾರ್ವಜನಿಕ ರುದ್ರಭೂಮಿಯನ್ನು ತಾವು ಖರೀದಿ ಮಾಡಿದ್ದರೆ ಕಂದಾಯ ಸಚಿವರಿಗೆ ಎಲ್ಲಾ ರೀತಿಯಲ್ಲಿಯೂ ಒಳ್ಳೆಯದಾಗುತ್ತದೆಂದು ಭಾವಿಸುತ್ತೇನೆ.

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಮಾನ್ಯ ಎಂ.ಡಿ.ಲಕ್ಷ್ಮೀನಾರಾಯಣರವರು ಜೀವನದ ಕೊನೆಯ ಒಂದು ಜಾತ್ರೆ ಅಥವಾ ಯಾತ್ರೆ ಬಗ್ಗೆ ಹೇಳಿದ್ದಾರೆ. ನಮ್ಮಲ್ಲೆಲ್ಲಾ ಜಾತ್ರೆ ಎಂದು ಹೇಳುತ್ತೇವೆ. ಯಾತ್ರೆ ಎಂದು ಹೇಳುತ್ತೇವೆ. ನಮ್ಮ ಉತ್ತರ ಕರ್ನಾಟಕದಲ್ಲಿ 100 ವರ್ಷವಾದವರಿಗೆ ಜಾತ್ರೆ ಮಾಡುವಂತಹ ಪದ್ಧತಿಯಿದೆ. ನಾವೀಗ ಸಮಾನತೆಯ ಬಗ್ಗೆ ಬಹಳ ಮಾತನಾಡುತ್ತೇವೆ. ಆದರೆ, ಕೆಳಗಿನ ಹಂತದಿಂದ ಎಲ್ಲಿಯೂ ನಾವು ಸಮಾನತೆಯನ್ನು ತರುವುದಕ್ಕೆ ಯಾವ ಸರ್ಕಾರವೂ ಪ್ರಯತ್ನ ಮಾಡಿಲ್ಲ. ಏಕೆಂದರೆ, ಹುಟ್ಟಿದ ಮೇಲೆ ಸ್ವಲ್ಪ ವರ್ಷದ ತರುವಾಯ ನಾವು ಶಾಲೆಗೆ ಹೋದಂತ ಸಂದರ್ಭದಲ್ಲಿ ಜಾತಿ ಪ್ರಾರಂಭವಾಗುತ್ತದೆ. ಜಾತಿ ಆಧಾರದ ಮೇಲೆ ನಮ್ಮ ಹಾಸ್ಟೆಲ್‌ಗಳೆ ಬೇರೆಯಾಗಿರುತ್ತದೆ. ಅದೇ ರೀತಿ ಈ ದೇಶದಲ್ಲಿ ಶೌಚಾಲಯದಲ್ಲಿಯೂ ಸಹಿತ ಜಾತಿ ಆಧಾರದ ಮೇಲೆ ಸಹಾಯಧನವನ್ನು ಕೊಡುತ್ತೇವೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ರೂಪಾಯಿ 15,000 ಗಳು. ಸಾಮಾನ್ಯ ಜನರು ಶೌಚಾಲಯವನ್ನು ನಿರ್ಮಿಸಿದರೆ ರೂಪಾಯಿ 10,000 ಗಳನ್ನು ಕೊಡುತ್ತೇವೆ. ಆರ್ಥಿಕವಾಗಿ ನಾವು ಇದನ್ನು ನೋಡಬೇಕು. ಕನಿಷ್ಠ ascending order ನಲ್ಲಿ ನಾವು ಸಮಾನತೆ ತರದೇ ಇದ್ದರೆ, descending order ನಲ್ಲಿ ಸತ್ತಮೇಲಾದರೂ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಜಗತ್ತಿನಲ್ಲಿ ಮೂರು ರೀತಿಯ ಜನರು ಅಂತಿಮ ಸಂಸ್ಕಾರವನ್ನು ಮಾಡುತ್ತಾರೆ. ಒಂದು ಹೂಳಿ ಅಂತ್ಯಸಂಸ್ಕಾರವನ್ನು ಮಾಡುವಂತಹ ಪದ್ಧತಿ ಹಾಗೂ ಸುಡುವಂತಹ ಪದ್ಧತಿ. ಇನ್ನೊಂದು ಪಾರ್ಸಿಗಳು ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಗುಡ್ಡದ ಮೇಲೆ ಇಟ್ಟು ಬಿಡುತ್ತಾರೆ. ಅವರು ಇಟ್ಟಂತಹ ಶರೀರವನ್ನು ಹದ್ದುಗಳೆಲ್ಲವೂ ತಿಂದು ಹೋಗುತ್ತದೆ. ಇದನ್ನು ನೋಡಿದರೆ ಏನು ಸಮಾನತೆ ಎನ್ನುವುದು ಚರ್ಚೆಯಾಗುತ್ತಿದೆ. ಇವತ್ತು ಸರ್ಕಾರ ಏನು ಸಾರ್ವಜನಿಕ ರುದ್ರಭೂಮಿಯನ್ನು 20 ಗುಂಟೆಯಷ್ಟು ಪ್ರತಿ ಗ್ರಾಮೀಣ ಪ್ರದೇಶದಲ್ಲಿಯೂ ಜಾಗವನ್ನು ಕೊಡಬೇಕೆಂದು ಏನು ನಿರ್ಣಯ ಮಾಡಿದೇಯೋ ಅದಕ್ಕೆ ಸ್ವಾಗತಾರ್ಹ. ಸಾರ್ವಜನಿಕ ರುದ್ರಭೂಮಿಯೆಂದರೆ ಎಲ್ಲಾ ಸಮುದಾಯದವರಿಗೂ ಒಂದೇ ಕಡೆ ಅಂತ್ಯಸಂಸ್ಕಾರ ಮಾಡುವುದರ ಮೂಲಕ ಎಲ್ಲರಲ್ಲಿಯೂ ಸಮಾನತೆಯನ್ನು ತರುವಂತಹ ಪ್ರಾಮಾಣಿಕ ಪ್ರಯತ್ನ ಈ ರೀತಿಯಲ್ಲಾದರೂ ಆಗಬೇಕು. ಇಲ್ಲವೆಂದರೆ ಅಲ್ಲಿಯೂ ಸಹ ಎಲ್ಲಾ ಸಮುದಾಯವರಿಗೆ ಜಮೀನನ್ನು ಕೊಡುತ್ತಾ ಹೋದರೆ, ಇವತ್ತು ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಜಮೀನುಗಳು ಉಳಿದಿಲ್ಲ. ಎಲ್ಲಾ ಕಡೆಯೂ ಹೆಚ್ಚು ಕಡಿಮೆ ಇವತ್ತು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿರುವುದರಿಂದ ಸರ್ಕಾರದ ಜಾಗಗಳೆ ಇಲ್ಲದಂತಾಗಿದೆ. ಗೋಮಾಳ ಸಹಿತ ಇವತ್ತು ನಾವು ಯಾವುದೇ ಹಳ್ಳಿಗಳಿಗೆ ಹೋದರೂ ಸಹಿತ ಜಾಗಗಳೆ ಸಿಗುವುದಿಲ್ಲ. ಅದಕ್ಕೆ ಸರ್ಕಾರ ಏನಿವತ್ತು ಖಾಸಗಿಯಿಂದ ಜಮೀನನ್ನು ಖರೀದಿಸುವಂತಹ ಪ್ರಯತ್ನ ಮಾಡುತ್ತದೆ. ಸರ್ಕಾರದ ನೀತಿ ನಿಯಮದ ಪ್ರಕಾರ ಇವತ್ತು ಜಮೀನು ಗ್ರಾಮೀಣ ಪ್ರದೇಶಗಳಲ್ಲಿ ಸಿಗುವುದಿಲ್ಲ. ಹೆಚ್ಚೆಂದರೆ, ಉಪ ನೋಂದಣಾ ಕಛೇರಿಯಲ್ಲಿರುವಂತಹ ಜಾಗವನ್ನು ಖರೀದಿಸುವುದಕ್ಕೆ ಇರತಕ್ಕಂಥ ಬೆಲೆಗೆ 5 ಪಟ್ಟು ಹಣವನ್ನು ಕೊಡುತ್ತೇವೆ. ಉದಾಹರಣೆಗೆ ಉಪ ನೋಂದಣಾ ಕಛೇರಿಯಲ್ಲಿ ರೂಪಾಯಿ 50000/– ಗಳಿದ್ದರೆ, 5 ಪಟ್ಟಂತೆ ಲೆಕ್ಕ ಹಾಕಿದ್ದರೆ ರೂಪಾಯಿ 2,50,000 ಲಕ್ಷಗಳಷ್ಟು ಹಣವನ್ನು ಕೊಟ್ಟು ಖರೀದಿಸಬೇಕಾಗುತ್ತದೆ. ಕನಿಷ್ಠ ಪಕ್ಷ ಇವತ್ತು ಹಳ್ಳಿಗಳೊಳಗೆ ಸ್ಮಶಾನವನ್ನು ಕೊಡುವುದಾದರೆ, ಊರಿನ ಪಕ್ಕದಲ್ಲಿಯೇ ಇರುವಂತಹ ಜಾಗದಲ್ಲಿ ಕೊಡಬೇಕು. ದೂರದಲ್ಲಿರುವ ಜಾಗವನ್ನು ಕೊಡುವುದಕ್ಕಾಗುವುದಿಲ್ಲ. ಕನಿಷ್ಠ ರೂ.10.00 ಲಕ್ಷಗಳಾದರೂ ಯಾವ ಎಂತಹ ಕುಗ್ರಾಮ ಹಳ್ಳಿಗಳಿಗೆ ಹೋದರೂ ಸಹಿತ ಈ ದೇಶದಲ್ಲಿ ಜಮೀನು ಸಿಗುವುದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(327) 21-03-2017 (04-00)BSD-AK**

ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಮುಂದು)

ಈ ರೀತಿ ಇರುವಾಗ ಖಾಸಗಿಯವರು ಜಮೀನು ಕೊಡುವುದಿಲ್ಲ, ರುದ್ರಭೂಮಿ ಆಗುವುದಿಲ್ಲ, ಪ್ರತಿಯೊಂದು ಜಾತಿ-ಜನಾಂಗದವರಲ್ಲಿ ಸ್ಮಶಾನದ ಸಲುವಾಗಿ ಸಂಘರ್ಷ, ಒಂದು ರೀತಿ ಕೋಮು ಗಲಭೆಗಳು ಅನೇಕ ಸಂದರ್ಭದಲ್ಲಿ ನಡೆಯುತ್ತವೆ. ಅದಕ್ಕೆ ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, liberal ಭೂಸ್ವಾಧೀನದ ವ್ಯವಸ್ಥೆ ಮಾಡಿ, ವಾಸ್ತವಿಕ ನೆಲೆಗಟ್ಟಿನ ಆಧಾರದ ಮೇಲೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು, ಅವರ ಹಂತದಲ್ಲಿಯೇ ಭೂಮಿಯನ್ನು ಖರೀದಿ ಮಾಡಿ ಸಾರ್ವಜನ್ನಿಕ ರುದ್ರಭೂಮಿಯನ್ನಾಗಿ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಉಳಿದಂತೆ ಎಲ್ಲಾ ಸಮುದಾಯದವರು ಹೂಳುವುದನ್ನು ಮಾಡಬಹುದು. ಭೂಸ್ವಾಧೀನದ ಹಂತದಲ್ಲಿಯೇ ಬಹಳಷ್ಟು ಸಮಸ್ಯೆಗಳಿದ್ದು, ದಯವಿಟ್ಟು ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು, ನಿಯಮ 330ರಡಿಯ ಈ ವಿಚಾರವನ್ನು ಪರಿಗಣಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮೀನಾರಾಯಣರವರು ರಾಜ್ಯದಲ್ಲಿರುವ ಸ್ಮಶಾನದ ಬಗ್ಗೆ ಚರ್ಚೆಯನ್ನು ಮಂಡಿಸಿದ್ದು, ನಾನು ಹೇಳುವುದೇನೆಂದರೆ ಪ್ರಪಂಚದಲ್ಲಿ ಭೂಮಿಗೆ ಬರುವ ಸಂದರ್ಭದಲ್ಲಿ ಮಗುವಿಗೆ ಹೆಸರು ಇರುವುದಿಲ್ಲ, ಉಸಿರು ಇರುತ್ತದೆ, ಆದರೆ ಹೋಗುವಾಗ ಹೆಸರು ಇರುತ್ತದೆ, ಉಸಿರು ಇರುವುದಿಲ್ಲ. ಅದನ್ನು ಹೆಣ ಎನ್ನುತ್ತಾರೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಹೆಸರು ಇರುವುದಿಲ್ಲ, ಉಸಿರೂ ಇರುವುದಿಲ್ಲ, ಬರೀ ಛಬಜಥಿ ಎನ್ನುತ್ತಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಅದನ್ನು ಇಂತಹವರ body ಎಂದು ಹೇಳುತ್ತಾರಲ್ಲವೇ? ಇಂತಹ ಸಂದರ್ಭದಲ್ಲಿ ಎಲ್ಲರ ಅನಿಸಿಕೆ ಏನೆಂದರೆ ಇದಕ್ಕೆ ಏನಾದರೂ ತಾತ್ವಿಕ ಅಂತ್ಯವನ್ನು ಕಾಣಿಸಬೇಕು. ಏಕೆಂದರೆ ಮಾನ್ಯ ಬಸನಗೌಡ ಪಾಟೀಲರು ಹೇಳಿದಂತೆ ಮೂರು ವಿಧವಾದ ವ್ಯವಸ್ಥೆಯನ್ನು ನೋಡುತ್ತೇವೆ. ಅದರಲ್ಲಿಯೂ ಭೂಮಿಯಲ್ಲಿ ಹೂಳುವವರಲ್ಲಿ ಇತರ ಜನಾಂಗದವರೂ ಇದ್ದಾರೆ. ಕ್ರಿಶ್ಚಿಯನ್ನರ ರುದ್ರ ಭೂಮಿಯನ್ನು ಬಹಳ ಚೆನ್ನಾಗಿ maintain ಮಾಡಿರುತ್ತಾರೆ. ಎಲ್ಲೇ ಆದರೂ ಅದರದೇ ಆದ ಪಾವಿತ್ರ್ಯತೆಯನ್ನು ಕಾಪಾಡಿರುತ್ತಾರೆ. ಕೆಲವು ಕಡೆ ಮುಸ್ಲಿಂನವರ ರುದ್ರ ಭೂಮಿಯೂ ಇರುತ್ತದೆ. ಆದರೆ ಹಿಂದೂ ರುದ್ರ ಭೂಮಿಗಳಲ್ಲಿ ಮಣ್ಣಿಗೆ ಹೋದಾಗ ಒಳಗಡೆ ಹೋಗಲು ಆಗದಂತಹ ಪರಿಸ್ಥಿತಿ ಇರುತ್ತದೆ. ಇದನ್ನು ನಾನು ವಿಲ್ಸನ್ ಗಾರ್ಡನ್ ಮತ್ತಿತರ ಕಡೆ ನೋಡಿದ್ದೇನೆ. ಇದರ ಜೊತೆಗೆ ಇರುವ ಜಾಗದಲ್ಲಿ ಬಹಳ ಜನರು ಅವರವರ ಸತ್ತ ವ್ಯಕ್ತಿಯ ಹೆಸರಿನಲ್ಲಿ ಅಥವಾ ಸತ್ತ ತಂದೆ-ತಾಯಿಗಳ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಹೆಸರಿನಲ್ಲಿ ಘೋರಿ ಅಥವಾ ಸಮಾಧಿಗಳನ್ನು ಕಟ್ಟುತ್ತಾರೆ. ಅಲ್ಲಿ ಜಾಗವೇ ಉಳಿದಿರುವುದಿಲ್ಲ. ಇನ್ನು ಕೆಲವು ಕಡೆ ಹೂತಿರುವ ಸತ್ತ ವ್ಯಕ್ತಿಗಳನ್ನು ತೆಗೆದುಹಾಕಿ ಮತ್ತೆ ಇನ್ನೊಂದು ಹೆಣವನ್ನು ಹೂಳುವ ಪರಿಸ್ಥಿತಿ ಕಾಣುತ್ತದೆ. ಆದ್ದರಿಂದ ಸರ್ಕಾರ ಈ ದೃಷ್ಟಿಯಲ್ಲಿ ಹೆಚ್ಚಿನ ಜಾಗವನ್ನು ಕೊಡಲೇಬೇಕು. ಮಾನ್ಯ ರಾಮಚಂದ್ರಗೌಡರು ಹಾಗು ಮಾನ್ಯ ಉಗ್ರಪ್ಪನವರು ಹೇಳಿದಂತೆ ಸಮಾನತೆ ಇದ್ದರೆ ಬಹಳ ಒಳ್ಳೆಯದು. ಆ ದೃಷ್ಟಿಯಲ್ಲಿ ಕೊನೆಯಲ್ಲಾದರೂ ಯಾವುದೇ ತಾರತಮ್ಯವಿಲ್ಲದೇ ನಡೆಯಬೇಕು. ಒಂದು ಉದಾಹರಣೆಯಾಗಿ ಪಟ್ನಾಯಕನಹಳ್ಳಿಯಲ್ಲಿ ಒಂದು ಹೆಣ ತೆಗೆದುಕೊಂಡು ಹೋದಾಗ ಒಂದು ದಿವಸ ಜಗಳ ಆಗಿ ಹೆಣವನ್ನು ದಫನ್ ಮಾಡಲಿಲ್ಲ. ಊರೆಲ್ಲಾ ಸೇರಿ ಹೊಡೆದಾಟ ಆಗಿ ಪೊಲೀಸ್ ಬಂದು, ಕೊನೆಗೆ ನ್ಯಾಯಾಧೀಶರು ಬಂದು ದಫನ್ ಮಾಡಿಸುವಂತಹ ಪರಿಸ್ಥಿತಿಗಳು ನಡೆಯುತ್ತಿವೆ. ನನಗೆ ಸಂಬಂಧಪಟ್ಟ ವೈಯಕ್ತಿಕ ವಿಷಯ ಹೇಳಬೇಕೆಂದರೆ ನನ್ನ ಊರಿನಲ್ಲಿ ಸ್ಮಶಾನ ಇಲ್ಲದಿರುವಾಗ ನನ್ನ ತಂದೆ–ತಾಯಿ ಹೆಸರಿನಲ್ಲಿ ಒಂದು ಎಕರೆ ಜಮೀನು ಖರೀದಿ ಮಾಡಿ ಕೊಟ್ಟಿದ್ದೇನೆ. ಈ ರೀತಿ ಆಯಾ ಗ್ರಾಮಗಳಲ್ಲಿ ಜನರು ಮುಂದೆ ಬಂದು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಸರ್ಕಾರ 20 ಗುಂಟೆ ಎನ್ನುವುದನ್ನು ವ್ಯವಸ್ಥಿತವಾಗಿ ಜನಸಂಖ್ಯೆ ಆಧಾರದ ಮೇಲೆ ಕನಿಷ್ಟ ಒಂದು ಎಕರೆ ಎಂದು ಮಾಡಿದರೆ ಒಳ್ಳೆಯದು ಎಂದು ಹೇಳಿ, ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಿನಾರಾಯಣರವರು ತಂದಿರುವ ಪ್ರಸ್ತಾಪ ಬಹಳ ಗಂಭೀರವಾಗಿದ್ದೂ ಯಾರೂ ಇದರ ಬಗ್ಗೆ ಯೋಚನೆ ಮಾಡುವುದಿಲ್ಲ. ಆಯಾ ಸಂದರ್ಭಗಳಲ್ಲಿ ಮನೆಗಳಲ್ಲಿ ಕೆಟ್ಟದಾಗಿ ನಡೆದಾಗ ಅಂದರೆ ಮರಣ ಹೊಂದಿದ ಸಂದರ್ಭದಲ್ಲಿ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡುತ್ತೇವೆ. ನಾವು ಹಲವಾರು ವಿಚಾರಗಳನ್ನು ಸಂದರ್ಭಕ್ಕನುಸಾರವಾಗಿ ಮಾತನಾಡುತ್ತೇವೆ, ಆದರೆ ನೈತಿಕತೆಗಳನ್ನು ಇಟ್ಟುಕೊಳ್ಳುವುದಿಲ್ಲ. ಏಕೆಂದರೆ ಇವತ್ತು ರುದ್ರಭೂಮಿಯ ವಿಚಾರವಾಗಿ ಮಾನ್ಯ ಉಗ್ರಪ್ಪನವರು ಸೇರಿದಂತೆ ಹಲವಾರು ಜನ ಮಾತನಾಡಿದರು. ಇದರ ಬಗ್ಗೆ ಮಾತನಾಡಿ ಸಮಾನತೆಯನ್ನು ಕಾಪಾಡಬೇಕಾದರೆ ನಮ್ಮಲ್ಲಿ ನೈತಿಕತೆ ಇರಬೇಕು. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ನಮಗೆಲ್ಲರಿಗೂ ಮಹಾನ್ ವ್ಯಕ್ತಿಯಾದ ರಾಮಕೃಷ್ಣ ಪರಮಹಂಸರ ಬಗ್ಗೆ ತಿಳಿದಿದೆ. ಒಮ್ಮೆ ಒಬ್ಬ ತಾಯಿ ಮಗುವನ್ನು ರಾಮಕೃಷ್ಣ ಪರಮಹಂಸರ ಬಳಿ ಕರೆದುಕೊಂಡು ಹೋಗಿ, ' ಸ್ವಾಮಿ, ನೀವು ಹೇಳಿದರೆ ಈ ದೇಶದಲ್ಲಿರುವ ಎಲ್ಲಾ ಜನರು ನಿಮ್ಮ ಮಾತನ್ನು ಕೇಳುತ್ತಾರೆ, ಹಾಗಾಗಿ ನನ್ನ ಮಗು ಬೆಲ್ಲವನ್ನು ತಿನ್ನುತ್ತದೆ, ನನ್ನ ಮಗುವಿಗೆ ಬೆಲ್ಲ ತಿನ್ನುವುದನ್ನು ಬಿಡಬೇಕೆಂದು ಹೇಳಬೇಕು' ಎಂದು ಕೇಳುತ್ತಾಳೆ. ಆಗ ರಾಮಕೃಷ್ಣ ಪರಮಹಂಸರು ' ಇಲ್ಲ, ಇನ್ನು 15

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಿವಸ ಬಿಟ್ಟು ಮಗುವನ್ನು ಕರೆದುಕೊಂಡು ಬಾ!, ಆಗ ನಾನು ಹೇಳುತ್ತೇನೆ' ಎನ್ನುವ ಮಾತನ್ನು ಹೇಳುತ್ತಾರೆ. ಇಷ್ಟೊಂದು ಮಹಾನ್ ವ್ಯಕ್ತಿ ಒಂದು ಮಾತನ್ನು ಹೇಳಲಿಲ್ಲವಲ್ಲ ಎಂದು ಆಗ ಆಕೆಗೆ ಸಿಟ್ಟು ಬರುತ್ತದೆ. ಆದರೆ ಪರಮಹಂಸರ ವಿರುದ್ಧ ಆಕೆಗೆ ಮಾತನಾಡಲು ಧ್ವನಿ ಇರುವುದಿಲ್ಲ. ಆದರೂ ಆಕೆ ಮನೆಗೆ ಹೋಗಿ ಪುನಃ 15 ಕಳೆದ ನಂತರ ಮಗುವನ್ನು ಕರೆದುಕೊಂಡು ಬರುತ್ತಾಳೆ. ಆಗ ರಾಮಕೃಷ್ಣ ಪರಮಹಂಸರು ' ಮಗು ಬಾ ಇಲ್ಲಿ ' ಎಂದು ತಲೆ ನೇರವೇರಿಸಿ, ' ಮಗು ನೀನು ಇನ್ನು ಮುಂದೆ ಬೆಲ್ಲವನ್ನು ತಿನ್ನಬಾರದು, ನಿನ್ನ ಹಲ್ಲು ಪೂರ್ತಿ ಹಾಳಾಗುತ್ತದೆ, ಇನ್ನು ಬೆಲ್ಲವನ್ನು ತಿನ್ನುವುದನ್ನು ಬಿಡುತ್ತೀಯಾ?' ಎನ್ನುತ್ತಾರೆ. ಆಗ ಮಗು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತದೆ. ಆಗ ತಾಯಿಗೆ ಈ ಮಾತು ಹೇಳುವುದಕ್ಕೆ ಇಷ್ಟು ದಿವಸ ತೆಗೆದುಕೊಂಡರೆ ಎಂದು ತಾಯಿ ಪರಮಹಂಸರನ್ನು ' ಈ ಮಾತು ಹೇಳುವುದಕ್ಕೆ 15 ದಿವಸಗಳ ಕಾಲಾವಕಾಶ ಏಕೆ ತೆಗೆದುಕೊಂಡಿರಿ?' ಎಂದು ಕೇಳುತ್ತಾಳೆ. ಆಗ ಪರಮಹಂಸರು ' ಅಮ್ಮಾ, ನನಗೂ ಕೂಡ ಬೆಲ್ಲ ತಿನ್ನುವಂತಹ ಅಭ್ಯಾಸ ಇತ್ತು!, ಯಾವತ್ತೂ ಇನ್ನೊಬ್ಬರಿಗೆ ನಾನು ಏನನ್ನು ಹೇಳಿದರೂ ಆ ಸಂದರ್ಭದಲ್ಲಿ ನಾನು ಅದನ್ನು ಬಿಡಬೇಕಾಗುತ್ತದೆ. ಅದಕ್ಕಾಗಿ ನಾನು 15 ದಿವಸಗಳ ಪ್ರಯತ್ನ ಮಾಡಿ ಬೆಲ್ಲ ತಿನ್ನುವುದನ್ನು ಬಿಟ್ಟು, ಈ ಮಗುವಿಗೆ ಬೆಲ್ಲವನ್ನು ತಿನ್ನಬೇಡ ಎಂದು ಹೇಳುತ್ತಿದ್ದೇನೆ ' ಎಂದು ಹೇಳಿದರು. ಹಾಗಾಗಿ ನಾವೆಲ್ಲರೂ ಚುನಾಯಿತ ಪ್ರತಿನಿಧಿಗಳಾಗಿದ್ದು, ನಾವು ವೇದಿಕೆಯನ್ನು ಸೃಷ್ಟಿ ಮಾಡಬೇಕು. ನಾವು ಹೇಳಬೇಕು ಮತ್ತು ನೈತಿಕತೆಗಳನ್ನು ಇಟ್ಟುಕೊಳ್ಳಬೇಕು. ಆಗ ಒಂದೇ ರುದ್ರಭೂಮಿಯನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯ. ಇದನ್ನು ಏಕೆ ಉಲ್ಲೇಖ ಮಾಡಿದೆ ಎಂದರೆ ಹಿಂದೆ ಇರುವ ಜನಸಂಖ್ಯೆಗೂ ಹೀಗಿರುವ ಜನಸಂಖ್ಯೆ ಬಗ್ಗೆ ನಮಗೆಲ್ಲರಿಗೂ ತಿಳಿದಿದ್ದು, ಎಷ್ಟು ಪಟ್ಟು ಜಾಸ್ತಿಯಾಗಿದೆ ಎಂದು ಸಹ ತಿಳಿದಿದೆ. ಹಿಂದೆ ಎಲ್ಲಾ ಭಾಗಗಳಲ್ಲಿಯೂ ರುದ್ರಭೂಮಿ ಇತ್ತು. ಆದರೆ ಇವತ್ತು ಮನೆಗಳನ್ನು ಕೊಡಿಸಲು ಸರ್ಕಾರದ ಮೇಲೆ ಒತ್ತಾಯಗಳನ್ನು ತರುತ್ತೇವೆ, ಬಸವ ಮನೆಗಳು, ಅಂಬೇಡ್ಕರ್ ಮನೆಗಳು ಸೇರಿದಂತೆ ಇನ್ನಿತರ ಎಲ್ಲಾ ಮನೆಗಳನ್ನು ಮತ್ತು ನಿವೇಶನಗಳನ್ನು ಕೊಡಲು ಮಾಡುತ್ತೇವೆ. ಆದರೆ ರುದ್ರಭೂಮಿಗೆ ಎಲ್ಲಿಯೂ ಜಾಗವನ್ನು ಮೀಸಲಾಗಿಡುವುದಿಲ್ಲ. ಬಸವ ಮನೆಗಳಿಗೆ ಎಲ್ಲೋ ಒಂದು ಕಡೆ 2-3 ಎಕರೆ ಜಾಗವನ್ನು ಮೀಸಲಾಗಿಡುತ್ತೇವೆ. ಆ ಜಾಗದಲ್ಲಿ ಸಂಪೂರ್ಣವಾಗಿ ಮನೆಗಳನ್ನು ಕಟ್ಟಲು ಅವಕಾಶ ಮಾಡಿಕೊಡುತ್ತೇವೆ. ಆದರೆ ನಾವು ಬದುಕಿರುವವರ ಬಗ್ಗೆ ಮಾತ್ರ ಯೋಚನೆ ಮಾಡುತ್ತಿದ್ದೇವೆ. ತದನಂತರದ ಯೋಚನೆಗಳು ನಮ್ಮಲ್ಲಿ ಬರುತ್ತಿಲ್ಲ. ಆದ್ದರಿಂದ ಅಲ್ಲಿಯೂ ಕೂಡ ಒಂದು ಜಾಗವನ್ನು ಇಡುವ ವ್ಯವಸ್ಥೆ ಆಗಬೇಕು. ಪ್ರತಿಯೊಂದು ಜಾಗದಲ್ಲಿಯೂ ಯಾರೂ ಎಲ್ಲಿ ಬೇಕಾದರೂ ರುದ್ರಭೂಮಿಯನ್ನು ಮಾಡಿಕೊಂಡು ಮರಣ ಹೊಂದಿದವರನ್ನು ಅಲ್ಲಿ ದಫನ್ ಮಾಡುವ ವ್ಯವಸ್ಥೆ ಇತ್ತು. ಆದರೆ ಇವತ್ತು ಎಲ್ಲಿಯೂ ಒಂದು ಅಡಿ ಜಾಗವೂ ಇಲ್ಲ. ಬಹಳ ಒತ್ತುವರಿಗಳು ಆಗಿವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರುದ್ರಭೂಮಿಯನ್ನು ಸಾಕಷ್ಟು ಒತ್ತುವರಿ ಮಾಡಿದ್ದಾರೆ. ಆ ಒತ್ತುವರಿ ಭೂಮಿಯನ್ನು ಬಿಡಿಸುವ ಕೆಲಸಗಳು ಆಗಬೇಕು. ಆ ಕೆಲಸಗಳು ಆದನಂತರ ಸಮಾನತೆ ಬರಬೇಕಾದರೆ ನಾವೆಲ್ಲರೂ ಒಟ್ಟಾಗಬೇಕು. ಇವೆಲ್ಲದರ ನಿಟ್ಟಿನಲ್ಲಿ ಯೋಚನೆ ಮಾಡಿದರೆ ಮಾತ್ರ ಪರಿಹಾರ ಇದೆ ಎಂದು ಭಾವಿಸಿದ್ದೇನೆ. ನಮ್ಮ ಊರು ಸಾಮಾನ್ಯವಾಗಿ ಕಾಫಿ ತೋಟವಾಗಿದ್ದು, ಸುತ್ತಮುತ್ತ ಸಾಕಷ್ಟು ಜಾಗಗಳು ಇತ್ತು. ಅಲ್ಲಿಂದ ಕೆಲವು ಕೂಲಿ ಕಾರ್ಮಿಕರು ಕೆಲಸಕ್ಕೆ ಬರುತ್ತಿದ್ದರು. ಹಾಗೆ ಬಂದವರಿಗೆ ಸರ್ಕಾರದ ವತಿಯಿಂದ ಜಾಗ ಕೊಡುವ ವ್ಯವಸ್ಥೆ ಆಯಿತು. ನಮ್ಮಲ್ಲಿದ್ದ 50 ಜನಸಂಖ್ಯೆ ಹೊಂದಿದ್ದ ಊರು ಇವತ್ತು 5000 ಜನಸಂಖ್ಯೆಯ ಊರಾಗಿ ಪರಿವರ್ತನೆಯಾಗಿದೆ. ಅಂದರೆ ಬಂದಿರುವವರು ಅಲ್ಲಿಯೇ ಜಾಗವನ್ನು ಹುಡುಕಿಕೊಂಡು ಅಲ್ಲಿಯೇ ಇರುವ ವ್ಯವಸ್ಥೆಗಳಾಗಿವೆ. ಹೀಗಿರುವಾಗ ರುದ್ರಭೂಮಿಗಳು ಹೇಗೆ ಸಿಕ್ಕಲು ಸಾಧ್ಯ? ನಾವು ಅವರಿಗೆ ಜಾಗವನ್ನು ಬಿಟ್ಟುಕೊಟ್ಟಿದ್ದೇವೆ. ನಮ್ಮ ಕಾಫಿ ತೋಟದಲ್ಲಿ ಯಾರಾದರೂ ಮರಣ ಹೊಂದಿದರೆ ನಮ್ಮ ಜಾಗದಲ್ಲಿ ಅವರ ಅಂತ್ಯಕ್ರಿಯೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ಸಾರ್ವಜನಿಕವಾಗಿ ಮಾಡಲು ಸಾಧ್ಯವಿಲ್ಲ. ಹಾಗಾಗಿ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಮಾನ್ಯ ಲಕ್ಷ್ಮಿನಾರಾಯಣರವರು ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದು, ಇದು ಕೇವಲ ವಿಧಾನ ಪರಿಷತ್ತಿನಲ್ಲಿ ಚರ್ಚೆಯ ವಿಷಯವಾಗದೇ, ಇದಕ್ಕೊಂದು ಪರಿಹಾರವನ್ನು ಕಂಡುಕೊಡುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನ ಮಾಡಬೇಕೆಂದು ನನ್ನ ಅನಿಸಿಕೆ. ಧನ್ಯವಾದಗಳು.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸ್ಮಶಾನದ ಅಭಿವೃದ್ಧಿ ಮತ್ತು ಎಲ್ಲಾ ಜಾಗಗಳಲ್ಲಿಯೂ ರುದ್ರಭೂಮಿಯನ್ನು ನಿರ್ಮಾಣ ಮಾಡಬೇಕೆಂಬ ಒಳ್ಳೆಯ ವಿಚಾರವನ್ನು ಮಾನ್ಯ ಸದಸ್ಯರು ಚರ್ಚೆ ಮಾಡುವ ಮೂಲಕ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ..

**(328) 21-03-2017 SK-AK 4.10**

**ಶ್ರೀ ಐವನ್ ಡಿ' ಸೋಜಾ (ಮುಂದು):** ರುದ್ರಭೂಮಿಗಳ ಬಗ್ಗೆ ಮಾತನಾಡುವಾಗ ಈಗಾಗಲೇ ಮಾನ್ಯ ರೇವಣ್ಣನವರು ಕ್ರಿಸ್ತ ರುದ್ರಭೂಮಿಗಳ ಬಗ್ಗೆ ಹೇಳಿದ್ದಾರೆ. ನಮಗೆ ಸಂತೋಷ ಕೊಡುವಂತಹ ವಿಚಾರವೇನೆಂದರೆ, ಮೊನ್ನೆ ನಡೆದಂತಹ ಬಜೆಟ್‌ನಲ್ಲಿ ಮುಖ್ಯ ಮಂತ್ರಿಗಳು ಕ್ರಿಸ್ತ ಸ್ಮಶಾನಗಳ ಅಭಿವೃದ್ಧಿಗಾಗಿ ಪ್ರತಿಯೊಂದು ಚರ್ಚ್‌ಗಳಲ್ಲಿ ಎಲ್ಲಿ ರುದ್ರಭೂಮಿಗಳು ಇರುತ್ತವೆ. ಅದರ ಅಭಿವೃದ್ಧಿಗೆ ಅನುದಾನ ಕೊಡುವುದರ ಬಗ್ಗೆ ಬಜೆಟ್‌ನಲ್ಲಿ ಘೋಷಣೆಯನ್ನು ಮಾಡಿದ್ದಾರೆ. ಅದರಲ್ಲಿ ಬೋರ್‌ವೆಲ್, ನೀರಿನ ವ್ಯವಸ್ಥೆ, electricity ವ್ಯವಸ್ಥೆ ಮತ್ತು ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನಗೆ ನೆನಪಿದೆ. ನಾನು ಮೊದಲು ಎಂಎಲ್‌ಸಿಯಾದ ಕೂಡಲೇ ಮಂಗಳೂರಿನಲ್ಲಿರುವ ರುದ್ರಭೂಮಿಗೆ ನನ್ನ ಅನುದಾನದ ಸುಮಾರು 20 ಲಕ್ಷರೂಪಾಯಿಗಳನ್ನು ಕೊಟ್ಟಿದ್ದೇನೆ. ರುದ್ರಭೂಮಿಗೆ ಯಾರ್‍ಯಾರು ಬರುತ್ತಾರೋ, ಅವರಿಗೆ ನಿಂತುಕೊಳ್ಳುವುದಕ್ಕೆ ಜಾಗ, ಕುಡಿಯುವ ನೀರು ಮತ್ತು ಅಲ್ಲಿ ಆಗಿರುವ ಅವ್ಯವಸ್ಥೆಯಾಗಿರುವ ಬಗ್ಗೆ ನಾನು ಹಣ ಕೊಟ್ಟಿರುವುದು ನನಗೆ ನೆನಪು ಇದೆ. ಯಾವಾಗ ಮನೆ ಚೆಂದ ಇರಬೇಕು. ಬೇರೆ ಎಲ್ಲ ಚೆಂದ ಇರಬೇಕೆಂಬುದು ನಮಗೆ ಆಸೆ ಇರುತ್ತದೆ. ಕೊನೆಯದಾಗಿ ನಾವು ಹೋಗುವಂತಹ ಜಾಗವೂ ಕೂಡ ಚೆಂದ ಇರಬೇಕೆಂಬುದು ನಮ್ಮ ಮನಸ್ಸಿಗೆ ಬಂದರೆ ಖಂಡಿತವಾಗಿಯೂ ಇದರ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಸರ್ಕಾರ ರುದ್ರಭೂಮಿಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ಅದರ maintenance ಗೋಸ್ಕರ ಸ್ವಲ್ಪ ಹಣವನ್ನು ಮೀಸಲಿಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ :-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಡಿ ಲಕ್ಷ್ಮೀನಾರಾಯಣ್ಣರವರು ಪ್ರತಿಯೊಂದು ಗ್ರಾಮಗಳಲ್ಲಿ ರುದ್ರಭೂಮಿ ಆಗಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಸರ್ಕಾರವು ಕೂಡ 20 ಗುಂಟೆಗಳಷ್ಟು ಜಮೀನನ್ನು ಖರೀದಿಸಬೇಕಂಬುದು ಸ್ವಾಗತಾರ್ಹ ವಿಚಾರ. ಪ್ರತಿ ಗ್ರಾಮದಲ್ಲಿ ಸ್ಮಶಾನ ಭೂಮಿ ಅತ್ಯಂತ ಅವಶ್ಯಕವಾಗಿ ಬೇಕಾಗಿರುವಂತಹದು. ಮೂಲಭೂತ ಸೌಲಭ್ಯಗಳಲ್ಲಿಯೂ ಕೂಡ ರುದ್ರಭೂಮಿಯೊಂದು. ಇವತ್ತು ಬಹಳ ಕಡೆ ಸ್ಮಶಾನ ಭೂಮಿ ಇಲ್ಲದೇ ತೊಂದರೆಯನ್ನು ಅನುಭವಿಸುವಂತಹ ವಿಚಾರ ಸುದೀರ್ಘವಾಗಿ ಚರ್ಚೆಯಾಗಿದೆ. ಇವತ್ತು ಬಹಳ ಕಡೆ ರುದ್ರಭೂಮಿಯಲ್ಲಿ ಸ್ವಚ್ಛತೆ ಇರುವುದಿಲ್ಲ, ನೀರಿನ ವ್ಯವಸ್ಥೆ ಇರುವುದಿಲ್ಲ. ಆ ಸ್ಮಶಾನ ಭೂಮಿಯಲ್ಲಿ ಹೋಗುವುದಕ್ಕೆ ಕೂಡ ಹಿಂದೇಟು ಹಾಕುವ ಪ್ರಸಂಗದಲ್ಲಿ ಇರತಕ್ಕಂತಹ ಸ್ಮಶಾನ ಭೂಮಿಗಳಿವೆ. ಸ್ಮಶಾನ ಭೂಮಿಯಲ್ಲಿ ಸ್ವಚ್ಛತೆ ಮತ್ತು ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೆ ಆಗಬೇಕು. ಸ್ಮಶಾನ ಭೂಮಿಯಿಲ್ಲದೇ ಇರುವ ಕಡೆಗಳಲ್ಲಿ ಭೂಮಿಯನ್ನು ಖರೀದಿಸಿ ಸ್ಮಶಾನ ಮಾಡುವಂತಹ ಕೆಲಸದಲ್ಲಿ ಸರ್ಕಾರವು ಮುಂದಾಗಬೇಕೆಂಬ ವಿಚಾರವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ 'ನರೇಗಾ' ಯೋಜನೆಯಡಿಯಲ್ಲಿ ಹಣ ಖರ್ಚು ಮಾಡುವುದಕ್ಕೆ ಸಾಕಷ್ಟು ಅವಕಾಶವಿರುತ್ತದೆ. ಅಲ್ಲಿ ವಿಶೇಷವಾಗಿ ಗ್ರಾಮ ಪಂಚಾಯಿಗಳಿಗೆ ಆದೇಶವನ್ನು ಮಾಡುವುದರ ಮುಖಾಂತರ ಸ್ಮಶಾನ ಇರುವಂತಹ ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡುವುದಕ್ಕೆ ವ್ಯವಸ್ಥೆಯಾಗಬೇಕು. ನೀರಿನ ವ್ಯವಸ್ಥೆ ಮತ್ತು ಕುಳಿತುಕೊಳ್ಳುವುದಕ್ಕೆ ಬೆಂಚ್‌ಗಳ ವ್ಯವಸ್ಥೆ ಇದು ಕೂಡ ಅಲ್ಲಿ ಆಗಬೇಕೆಂಬುದು ಅವಶ್ಯಕವಾಗಿದೆ. ಇವತ್ತು ಸ್ಮಶಾನ ಭೂಮಿ ಪ್ರದೇಶದಲ್ಲಿ ಸಾಕಷ್ಟು ಕಡೆ ಖಾಲಿ ಇರುತ್ತದೆ. ಆ ಒಂದು ಸ್ಮಶಾನ ಜಾಗದಲ್ಲಿ ಸಸಿ-ಗಿಡಗಳನ್ನು ಬೆಳೆಸುವ ಮುಖಾಂತರ ಸ್ಮಶಾನ ಜಾಗಕ್ಕೂ ಕೂಡ ಬೆಲೆ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಮರಗಳನ್ನು ಬೆಳೆಸಿದಂತಾಗುತ್ತದೆ. ರಾಜ್ಯದಲ್ಲಿ ಅರಣ್ಯ ಸಂಪತ್ತು ಶೇಕಡ 30 ರಷ್ಟು ಇರತಕ್ಕಂಥಹದು. ಇವತ್ತು ಕೇವಲ 17 ರಿಂದ 18 ಶೇಕಡಕ್ಕೆ ಅರಣ್ಯ ಪ್ರದೇಶ ಬಂದಿರುವ ಹಿನ್ನಲೆಯಲ್ಲಿ, ಆ ಒಂದು ಗಿಡ-ಮರಗಳು ನಾಶವಾಗುವುದರಿಂದ ಬರಗಾಲ ಬಂದು ಮಳೆ ಕಡಿಮೆಯಾಗುತ್ತಿದೆ. ಇವತ್ತು ನಾವು ಮಳೆಗಾಲ ಕಡಿಮೆಯಾಗುತ್ತದೆಂಬ ವಿಚಾರಗಳನ್ನು ವೈಜ್ಞಾನಿಕವಾಗಿ ಕಂಡು ಕೊಂಡಿದ್ದೇನೆ. ಸ್ಮಶಾನದಲ್ಲಿ ಖಾಲಿ ಇರುವಂತಹ ಜಾಗಗಳನ್ನು ಗುರುತಿಸಿ, ಗಿಡ-ಮರಗಳನ್ನು ಬೆಳೆಸುವುದರ ಮುಖಾಂತರ ಅಲ್ಲಿ ಅರಣ್ಯವನ್ನು ಬೆಳೆಸಿದಂತಾಗುತ್ತದೆ. ಅಲ್ಲಿ ಕೂಡ ಸುಂದರವಾಗಿ ಆಗುವುದಕ್ಕಾಗುತ್ತದೆಂಬ ವಿಚಾರವನ್ನು ಗಮನಕ್ಕೆ ತಂದು ಕೇವಲ ಸಸಿ ನೆಡುವ ಕಾರ್ಯಕ್ರಮವನ್ನು ಬರೀ ಮಾತಿನಲ್ಲಿ ಹೇಳುವುದಿಲ್ಲ. ನಮ್ಮ ಬಾಗಲಕೋಟೆಯ ಹತ್ತಿರ Upper Krishna Project ನ ಪುನರ್ ವಸತಿ ಕೇಂದ್ರಗಳಲ್ಲಿರುವ ಸ್ಮಶಾನ ಜಾಗದಲ್ಲಿ ಬಹಳಷ್ಟು ಸಸಿಗಳನ್ನು ನೆಡುವಂತಹ ಕೆಲಸವನ್ನು ಮಾಡಿದ್ದಾರೆ. ಸ್ಮಶಾನ ಜಾಗಗಳನ್ನು ನೋಡಲು ಹೋಗುವುದಕ್ಕೆ ಇವತ್ತು ಅಷ್ಟು ವ್ಯವಸ್ಥಿತವಾಗಿ ಗಿಡ-ಮರಗಳನ್ನು ಬೆಳೆಸುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರತಿ ಪುನರ್ ವಸತಿ ಕೇಂದ್ರಗಳಲ್ಲಿ ಸ್ಮಶಾನ ಜಾಗವನ್ನು ಕಡ್ಡಾಯವಾಗಿ ಸ್ವಾಧೀನ ಮಾಡಿಕೊಂಡು ಸ್ಮಶಾನ ಜಾಗಕ್ಕೆ ಮೀಸಲಿಟ್ಟಿರುವುದರಿಂದ ಗಿಡ-ಮರಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗಿದೆ, ಜೊತೆಗೆ ಆ ರೀತಿಯಾಗಿ ಬೇರೆ ಬೇರೆ ಗ್ರಾಮಗಳಲ್ಲಿರುವ ಸ್ಮಶಾನ ಜಾಗದಲ್ಲಿ ಗಿಡ-ಮರಗಳನ್ನು ಬೆಳೆಸುವಂತಹ ಕಾರ್ಯವಾಗಬೇಕೆಂಬ ವಿಚಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಇನ್ನು Upper Krishna Project ನಲ್ಲಿಯೂ ಕೂಡ ಭೂ ಸ್ವಾಧೀನಪಡಿಸಿಕೊಂಡಿರುವ ಸುಮಾರು 16 ಗ್ರಾಮಗಳ ಪುನರ್ ವಸತಿ ಕೇಂದ್ರಗಳಲ್ಲಿ ಸ್ಮಶಾನ ಜಾಗವಿರುವುದಿಲ್ಲ. ಆ ಹದಿನಾರು ಗ್ರಾಮಗಳ ಪುನರ್ ವಸತಿ ಕೇಂದ್ರಗಳಲ್ಲಿ ಸ್ಮಶಾನ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ವಿಚಾರವನ್ನು ಇವತ್ತು ಸದನದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ಒಂದು clarification ಇದೆ.

**ಉಪ ಸಭಾಪತಿಯವರು:-**ಬೇಡಿ ಬೇಡಿ. ನೀವು ಆಮೇಲೆ clarification ಕೇಳಿ. ಮಾನ್ಯ ಎಂ.ಡಿ. ಲಕ್ಷ್ಮಿನಾರಾಯಣರವರೆ ನಿಮಗೆ ಅವಕಾಶವಿದೆ. ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸ್ಮಶಾನದ ವಿಚಾರದಲ್ಲಿ ಸಮಗ್ರವಾಗಿ ಮತ್ತು ಸಮಪರ್ಕವಾಗಿ ಚರ್ಚೆ ನಡೆದಿದೆ. ಮನುಷ್ಯನ ಬದುಕಿಗೆ ಇಷ್ಟೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮರ್ಪಕವಾದ ಚರ್ಚೆ ನಡೆಯುವುದು ಕಷ್ಟ. ಸದ್ಯ ಅವನು ಸತ್ತ ಮೇಲಾದರೂ ಅವನ ಬಗ್ಗೆ ಎಲ್ಲಾರಿಗೂ ಚಿಂತೆಯ ಅಲೋಚನೆ ಬಂದಿರುವುದೇ, ಸ್ವರ್ಗ ನೋಡಲಿಲ್ಲ ಸ್ವರ್ಗ ಸೇರುತ್ತಾನೆ ಎನ್ನುವ ಭ್ರಮೆಯನ್ನು ಕೂಡ ಇಟ್ಟುಕೊಳ್ಳಬಹುದು. ಆದಾಗ್ಯೂ ಕೂಡ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕೆಂಬುದು ಸರ್ಕಾರದ ಇಚ್ಛೆ. ನಾನು ಕೂಡ ಇಲ್ಲಿ ಪ್ರಯತ್ನವನ್ನು ಮಾಡುತ್ತೇನೆ. ಎಲ್ಲಾ ಜಿಲ್ಲೆಗೆ ಭೇಟಿ ಕೊಟ್ಟಿದ್ದೇನೆ. ಈ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ, ಈ ಕಾರ್ಯಕ್ರಮಗಳನ್ನು ವಿಶೇಷವಾಗಿ ತಹಶೀಲ್ದಾರುಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಸಮಯಬದ್ಧವಾಗಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂಬ ಮನವರಿಕೆಯನ್ನು ಮಾಡಿಕೊಟ್ಟು ಬಂದಿದ್ದೇನೆ. ನಾನು ಇನ್ನು ಕೂಡ ಮಾಡುತ್ತೇವೆ. ಇದರಲ್ಲಿ ಅನೇಕ ವಿಚಾರಗಳಿವೆ ನಾನು ಎಲ್ಲವನ್ನು ಈಗ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈಗ ನಮ್ಮ ಸಾಮಾಜಿಕ ವ್ಯವಸ್ಥೆಯೇ ಅಂತಹದು. ಇನ್ನು ರಾಜ್ಯಾಂಗ ಬಂದಿದೆ. ಮಾನ್ಯ ಉಗ್ರಪ್ಪನವರು ಅದನ್ನು ಓದಿದ್ದಾರೆ. ನಮಗೆ ರಾಜ್ಯಾಂಗವನ್ನು ಓದುವುದಕ್ಕೆ ಬರುವುದಿಲ್ಲ. ನಿಜ ನಮ್ಮ ಪ್ರಜಾತಂತ್ರ ವ್ಯವಸ್ಥೆಯ ಮೂಲ ಕಲ್ಪನೆ ಸಮಾನತೆ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ, ಇದನ್ನು ಹೇಳಿಕೊಂಡು ಬಿಟ್ಟಿದ್ದೇವೆ. ಇವತ್ತು ಸದ್ಯಕ್ಕೆ ಗ್ರಾಮಕ್ಕೆ ಒಂದು ಸ್ಮಶಾನವನ್ನು ಮಾಡುವಂಥದ್ದು ಆಗಬೇಕಾಗಿದೆ. ಇರುವಂತಹ ಸ್ಮಶಾನವನ್ನು ಭದ್ರತೆ ಮಾಡಿಕೊಳ್ಳುವುದು ಅಥವಾ ಅಲ್ಲಿ ಕುಡಿಯುವ ನೀರು ಮತ್ತು ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳಿದಂತೆ ಶವ ಸಂಸ್ಕಾರವನ್ನು ಮಾಡಿದ ಮೇಲೆ ಅವರುಗಳು ತಿಥಿಯನ್ನು ಯಾವಾಗ ಮಾಡಬೇಕೆಂದು ಮಾತನಾಡಿಕೊಂಡು ಹೋಗುವಾಗ ಕೈ ತೊಳೆಯುವುದಕ್ಕೆ ನೀರು ಇರುವುದಿಲ್ಲ, ಇದೆಲ್ಲದರ ಬಗ್ಗೆ ಹೇಳಿದ್ದಾರೆ. ನಮ್ಮ ಊರಿನಲ್ಲಿಯೂ ಕೂಡ ಇಲ್ಲ. ಮಾನ್ಯ ಸದಸ್ಯರುಗಳು ಹೇಳಿದ ಮೇಲೆ ಸ್ಮಶಾನದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಏನೇ ಆದರೂ ಕೂಡ ಗ್ರಾಮಕ್ಕೆ ಒಂದು ಸ್ಮಶಾನ ಇರಬೇಕು. ಅದು ಸಣ್ಣ ಗ್ರಾಮ ಇರಬಹುದು, ದೊಡ್ಡ ಗ್ರಾಮ ಇರಬಹುದು, ಏನೇ ಅದರೂ ಸ್ಮಶಾನವನ್ನು ಕಾಯ್ದಿರಿಸುವಂಥದ್ದನ್ನು ಮಾಡಬೇಕಾಗಿದೆ. ಆ ಗ್ರಾಮದಲ್ಲಿ ಸರ್ಕಾರಿ ಜಾಗ ಸಿಗದೇ ಇದ್ದರೆ, ನಾವು ಖರೀದಿ ಮಾಡುವುದಕ್ಕೆ ಈಗಾಗಲೇ ಹಣವನ್ನು ಕೊಟ್ಟಿದ್ದೇವೆ. ನಾವು ನಿಗದಿಪಡಿಸಿರುವ ದರದಲ್ಲಿ ಜಾಗ ಲಭ್ಯವಾಗದೇ ಹೋದರೆ, ಹೆಚ್ಚು ಹಣವನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳ ಮುಖಾಂತರ ಪ್ರಸ್ತಾವನೆಯನ್ನು ಕಳುಹಿಸಿದರೆ ಅದಕ್ಕೂ ಕೂಡ ಮಂಜೂರಾತಿಯನ್ನು ಕೊಡುತ್ತೇವೆ. ಮೊನ್ನೆ ತಾನೇ ಬೆಳಗಾವಿ ಜಿಲ್ಲೆಯಿಂದ ಪ್ರಸ್ತಾವನೆ ಬಂದಿತ್ತು. ಅದಕ್ಕೂ ಕೂಡ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಒಟ್ಟಿನಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಅದಷ್ಟು ಬೇಗ ಎಲ್ಲಾ ಗ್ರಾಮಗಳಿಗೂ ಸ್ಮಶಾನವನ್ನು ಒದಗಿಸಿಕೊಡುವುದರ ಜೊತೆಗೆ ಸ್ಮಶಾನದ ಭದ್ರತೆಯನ್ನು ನೀಡುವುದಕ್ಕೆ ಮಾನ್ಯ ಸದಸ್ಯರುಗಳ ಹೇಳಿದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ರೀತಿಯಲ್ಲಿ ನರೇಗಾ ಕಾರ್ಯಕ್ರಮದಡಿಯಲ್ಲಿ ಸ್ಮಶಾನದಲ್ಲಿ ಗಿಡಗಳನ್ನು ಹಾಕಬಹುದು ಮತ್ತು ಸುತ್ತ trench ಹಾಕಬಹುದು.

ಮಾನ್ಯ ಸಭಾಪತಿಯವರೆ, ಇಲ್ಲಿ ಏನಾಗಿದೆ ಎಂದರೆ ನಮ್ಮ ಪಂಚಾಯ್ತಿಗಳಿಗೆ ಇದರ ಬಗ್ಗೆ ಸ್ವಲ್ಪ ಆಸಕ್ತಿ ಹುಟ್ಟಿದರೆ ಇದನ್ನು ಮಾಡುವುದಕ್ಕೆ ಏನು ತೊಂದರೆಯಾಗುವುದಿಲ್ಲ. ಅಲ್ಲಿರುವವರಿಗೆ ಇದನ್ನೆಲ್ಲಾ ಮಾಡಬೇಕೆಂಬ ತಲೆಯೇ ಇಲ್ಲ ಇದು ನಮ್ಮ ಗ್ರಹಚಾರ ಅಗಿಬಿಟ್ಟಿದೆ. ಹಾಗಾಗಿ ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಎಲ್ಲಾ ಗ್ರಾಮಗಳಿಗೆ ಸ್ಮಶಾನವನ್ನು ಒದಗಿಸಿಕೊಡುವಂತಹ ಕೆಲಸ ಪ್ರಾಮಾಣಿಕವಾಗಿ ಸರ್ಕಾರ ಮಾಡುತ್ತದೆ ಎನ್ನುವ ಭರವಸೆಯ ಮಾತನ್ನು ಹೇಳುತ್ತೇನೆ. ನಮ್ಮ ಸಹೋದರಿ ಶ್ರೀಮತಿ ಮೋಟಮ್ಮನವರು ಸ್ಮಶಾನ ಮಾಡುವುದಕ್ಕೆ ಜಾಗವೇ ಸಿಗುವುದಿಲ್ಲ ಏನು ಮಾಡುತ್ತೀರಿ ಎಂದು ಕೇಳಿದರು. ಜಾಗ ಸಿಗದಿದ್ದರೆ Acquire ಮಾಡುತ್ತೇವೆ. ಇವತ್ತು ಹೊಸ ಕಾನೂನಿನ ಪ್ರಕಾರವನ್ನು ಭೂಮಿಯನ್ನು Acquire ಮಾಡುವುದೆಂದರೆ ನಾವು ನೀವು ಸತ್ತು ಬರಬೇಕು ಅಷ್ಟೇ. ಆದ್ದರಿಂದ, ಕಾನೂನನ್ನು ಮಾಡುವಾಗ, ಕಾನೂನು ಮಾಡುವವರಿಗೆ ಪ್ರಜ್ಞೆ ಇರಬೇಕಾಗುತ್ತದೆ. ಕುಳಿತುಕೊಂಡು ಮಾಡಿಬಿಟ್ಟರೆ ಅಗುವುದಿಲ್ಲ. ಅದನ್ನು ಅನುಸರಿಸುವುದು ಹೇಗೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ಈ ಲಿಂಗನಮಕ್ಕಿ ಡ್ಯಾಂ ಮಾಡುವಾಗ ಭೂಮಿಯನ್ನು ಸ್ವಾಧೀನ ಮಾಡಿದಾಗ ಹಣವನ್ನು ಪಡೆದುಕೊಳ್ಳುತ್ತಿದ್ದೇವೆ ಎಂದು ಜನರ ಅಭಿಪ್ರಾಯ ಇತ್ತು. ಆದರೆ ಆಗ ಈ ಕಾನೂನು ಇರಲಿಲ್ಲ. ಆಗ ಹಣವನ್ನು ಕೂಡ ಬಹಳ ಕಡಿಮೆ ಕೊಡುತ್ತಿದ್ದರು. ಮಾನ್ಯ ರಾಮಚಂದ್ರಗೌಡರೆ ಇವತ್ತು ಹೊಸ ಕಾನೂನು ಬಂದಿದೆ. ಮಾನ್ಯ ಈಶ್ವರಪ್ಪನವರಿಗೆ ಗೊತ್ತಿದೆ. ಆದ್ದರಿಂದ ಇವತ್ತು ಭೂಮಿಯನ್ನು acquire ಮಾಡುವುದು ಎಂದು ಬಹಳ ಕಷ್ಟ. ಅವರ consent ಮೇಲೆ ಕೊಡುತ್ತೇವೆ.

**(329)21.03.2017/4.20/hv.rn**

**ಶ್ರೀ ಕಾಗೋಡು ತಿಮ್ಮಪ್ಪ (ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಜಾಗ ಖರೀದಿಗೆ ಎಷ್ಟು ದುಡ್ಡು ಬೇಕಾದರು ಕೊಡುವುದಕ್ಕೆ ನಾವು ತಯಾರಿದ್ದೇವೆ. ಮಾನ್ಯ ಸದಸ್ಯರು ನೀಡಿರುವ ಸಲಹೆ, ಸೂಚನೆಗಳು ಮತ್ತು ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಗ್ರಾಮಗಳಿಗೂ, ಆ ಗ್ರಾಮ ಪಂಚಾಯಿತಿ ಗುರುತಿಸಿದಂತಹ ಜಾಗ ಸರ್ಕಾರಿ ಜಾಗವಾಗಿದ್ದರೆ 8 ದಿನಗಳಲ್ಲಿಯೇ ನಾನು ಆ ಕೆಲಸವನ್ನು ಮಾಡಿಸಿಕೊಡುತ್ತೇನೆ. ಸರ್ಕಾರಿ ಜಾಗ ಇಲ್ಲದಿದ್ದರೆ ಖಾಸಗಿ ಜಾಗವನ್ನು ಖರೀದಿ ಮಾಡುವುದಕ್ಕೆ ಆ ಗ್ರಾಮದವರು ತಹಸೀಲ್ದಾರ್‌ರವರಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನವಿಯನ್ನು ಕಳುಹಿಸಿಕೊಡಬೇಕಾಗುತ್ತದೆ. ಅದಕ್ಕೆ ಮೂಲಭೂತ ಸೌಲಭ್ಯವಾದ ಕುಡಿಯುವ ನೀರನ್ನು ಒದಗಿಸಿಕೊಡುವ ಪ್ರಯತ್ನವನ್ನು ಮಾಡಲಾಗುತ್ತದೆ. ಎರಡೂ ಸದನಗಳ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಈ ಬಗ್ಗೆ ಸಹಕಾರವನ್ನು ನೀಡಿ ಸರ್ಕಾರದ ಜೊತೆಗೆ ಕೈಜೋಡಿಸಿದರೆ ಖಂಡಿತವಾಗಿಯೂ ನಿರೀಕ್ಷೆಯ ಮಟ್ಟದಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ನಾವು ಪ್ರಯತ್ನಿಸುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಉತ್ತರವಾಗಿರುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅನೇಕ ಹಿರಿಯ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳಾದ ನಂತರ ಮನುಷ್ಯ ಮರಣ ಹೊಂದಿದ ನಂತರದ ಸ್ಥಿತಿಯ ಬಗ್ಗೆ ಚಿಂತನೆ ಮಾಡುವುದಕ್ಕೆ ಪ್ರಾರಂಭಿಸಿದ್ದೇವೆ. ಮನುಷ್ಯ ಬದುಕಿರುವಾಗ ಅಥವಾ ಸತ್ತ ಮೇಲೂ ಸಹ ಸಮಾನತೆ ಇರಬೇಕು ಎನ್ನುವ ನಿಟ್ಟಿನಲ್ಲಿ ಈ ಚರ್ಚೆ ಸಾಗಿದೆ. ಮಾನ್ಯ ಸಚಿವರು ಮಾತನಾಡುತ್ತಾ, 'ಮಾನ್ಯ ಲಕ್ಷ್ಮೀನಾರಾಯಣ್‌ರವರ ಚಿಂತನೆಗಳನ್ನು ದಂಡಾಧಿಕಾರಿಗಳಿಗೆ ಮತ್ತು ಉಪ ವಿಭಾಗಾಧಿಕಾರಿಗಳಿಗೆ ಮನವರಿಕೆ ಮಾಡಿ ಕೊಡಲಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ, ಬಗರ್ ಹುಕುಂ ಕಮಿಟಿಗೆ ಶಾಸಕರು  ಅಧ್ಯಕ್ಷರಾಗಿರುತ್ತಾರೆ. ಫಾರಂ ನಂಬರ್ 53 ಮತ್ತು 54ರಲ್ಲಿ ಹಿಂದಿನಿಂದಲೂ ಉಳುಮೆ ಮಾಡಿಕೊಂಡು ಬಂದಿರುವವರಿಗೆ ಆ ಭೂಮಿಯನ್ನು ಮಂಜೂರು ಮಾಡುವಂತಹ ಕಾನೂನು ಇದೆ. ಇತ್ತೀಚಿನ ಕಾನೂನಿನ ಪ್ರಕಾರ ಅತೀ ಹೆಚ್ಚು ಗೋವುಗಳು ಮತ್ತು ರಾಸುಗಳು ಇರುವಂತಹ ಕಡೆಗಳಲ್ಲಿ ಗೋಮಾಳವನ್ನು ಕಡಿತಗೊಳಿಸುವಂತಹ ಕೆಲಸ ಆಗುವುದಿಲ್ಲವೆಂದು ಮಾನ್ಯ ಕಂದಾಯ ಸಚಿವರು ತಿಳಿಸಿದ್ದಾರೆ. ಒಂದು ಗ್ರಾಮದಲ್ಲಿ ರುದ್ರಭೂಮಿಗಾಗಿ ಇಂತಿಷ್ಟು ಜಾಗವನ್ನು ಕಾಯ್ದಿರಿಸಬೇಕಾಗುತ್ತದೆ. ಮಾನ್ಯ ಸಚಿವರು ರುದ್ರಭೂಮಿಗಾಗಿ 20 ಗುಂಟೆ ಜಾಗವನ್ನು ಕಾಯ್ದಿರಿಸಲಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಮಾನ್ಯ ಉಗ್ರಪ್ಪನವರು, ಶ್ರೀಯುತ ರಾಮಚಂದ್ರಗೌಡರು ಮತ್ತು ಇನ್ನಿತರ ಸದಸ್ಯರು ಹೇಳಿದಂತೆ ಜನಸಂಖ್ಯೆಗೆ ಅನುಗುಣವಾಗಿ ಸ್ಮಶಾನ ಭೂಮಿ ಇರಬೇಕಾಗುತ್ತದೆ. ಕೆಲವು ಸಮುದಾಯದಲ್ಲಿ ಹೆಣವನ್ನು ಹೂಳುವಂತಹ ಪದ್ಧತಿಯಿದೆ. 20 ಗುಂಟೆ ಜಾಗದಲ್ಲಿ 20 ಮೃತ ದೇಹಗಳನ್ನು ಹೂತು ಬಿಟ್ಟರೆ ಉಳಿದ ಶವಗಳಿಗೆ ಜಾಗವಿಲ್ಲದಂತಾಗುತ್ತದೆ. ಆದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ ನಿರ್ದಿಷ್ಟ ಪ್ರಮಾಣದಲ್ಲಿ ಶ್ಮಶಾನಕ್ಕೆ ಜಾಗವನ್ನು ಮಂಜೂರು ಮಾಡುವುದಕ್ಕೆ ಸರ್ಕಾರದ ವತಿಯಿಂದ ಆದೇಶವಾಗಬೇಕಾಗಿದೆ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಇನ್ನು ಎರಡನೆಯದಾಗಿ, ಮಾನ್ಯ ಐವನ್ ಡಿ'ಸೋಜಾರವರು ಮಾತನಾಡುತ್ತಾ, ಕ್ರಿಶ್ಚಿಯನ್ ಸಮುದಾಯಕ್ಕೆ ಈ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು 10 ಲಕ್ಷ ರೂಪಾಯಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಘೋಷಣೆ ಮಾಡಿದ್ದಾರೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಿಯಮ 330ರಡಿಯಲ್ಲಿ ನಾನು ನೀಡಿರುವ ಸೂಚನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಸಮುದಾಯಗಳಿಗೆ ರುದ್ರಭೂಮಿಗಾಗಿ ಸರ್ಕಾರಿ ಜಮೀನು ಮಂಜೂರು ಮಾಡುವ ಬಗ್ಗೆ ಪ್ರಸ್ತಾಪಿಸಿದ್ದೇನೆ. ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಮುಖ್ಯ ಕಾರಣವೇನೆಂದರೆ, ನನ್ನ ಸ್ವಗ್ರಾಮವಾದ ತುರುವೇಕೆರೆ ತಾಲ್ಲೂಕು ಮುನಿಯೂರು ಗ್ರಾಮದಲ್ಲಿ ಅಲೆಮಾರಿಗಳು, ಹಕ್ಕಿಪಿಕ್ಕಿಗಳು ಮತ್ತು ಬುಡಬುಡಿಕೆಯವರು ವಾಸಿಸುತ್ತಾರೆ. ಇವರಿಗೆ ಆ ಗ್ರಾಮದಲ್ಲಿ ಒಂದು ಇಂಚು ಜಾಗವಿಲ್ಲ. ಇವರಲ್ಲಿ ಯಾರಾದರು ಮರಣ ಹೊಂದಿದ್ದರೆ ಅವರು ಆ ಶವವನ್ನು ಎಲ್ಲಿ ಹೂಳಬೇಕು? ಅವರಿಗೆ ಸ್ಮಶಾನವಿಲ್ಲ. ಗುಂಡು ತೋಪಿನಲ್ಲಿ ಹೂಳುವುದಕ್ಕೆ ಹೋದರೆ ಆ ಗ್ರಾಮಸ್ಥರು ಅವಕಾಶ ನೀಡುವುದಿಲ್ಲ. ರಸ್ತೆಯಲ್ಲಿ ಹೂಳುವುದಕ್ಕೆ ಹೋದರೆ ಇಲಾಖೆಯವರು ಗಲಾಟೆ ಮಾಡುತ್ತಾರೆ. ಈ ರೀತಿಯ ಸನ್ನಿವೇಶನವನ್ನು ನೋಡಿದಾಗ, ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಒಂದು ಸಮಗ್ರವಾದ ರೀತಿಯಲ್ಲಿ ಚಿಂತನೆ ಮಾಡಬೇಕೆಂದು ನನಗನ್ನಿಸಿತು. ಎಲ್ಲರಿಗೂ ಒಂದೇ ಸ್ಮಶಾನ ಎನ್ನುವ ಕಾನೂನುನನ್ನು ತಂದರೆ ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ನಾನು ತುಮಕೂರು ಜಿಲ್ಲೆಯಲ್ಲಿ ಕೆ.ಡಿ.ಪಿ. ಮೀಟಿಂಗ್‌ಗೆ ಹೋದಾಗ ನಮ್ಮ ಜಿಲ್ಲಾಧಿಕಾರಿಗಳು, "ವಿವಿಧ ಸಮುದಾಯಗಳಿಗೆ ಸ್ಮಶಾನ ಅಭಿವೃದ್ಧಿ ಎನ್ನುವ ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ನೀಡಲಾಗಿದೆ. ಅದರಡಿಯಲ್ಲಿ ಅನುದಾನವನ್ನು ತೆಗೆದುಕೊಳ್ಳಿ" ಎಂದು ಹೇಳಿದರು. ನಾನು ಒಂದು ಪತ್ರವನ್ನು ಕೊಟ್ಟೆ. ಆಗ ಅವರು ಮುನಿಯೂರು, ಮಾಯಸಂದ್ರ, ಸಂಪಿಗೆ ಹೀಗೆ ವಿವಿಧ ಗ್ರಾಮಗಳಲ್ಲಿರುವ ವಿವಿಧ ಸಮಾಜಗಳ ಶ್ಮಶಾನಗಳಿಗಾಗಿ 5 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿದರು. ಆ ಅನುದಾನವನ್ನು ನೀಡಿ ಈಗಾಗಲೇ ಸುಮಾರು 3 ವರ್ಷಗಳಾಗಿವೆ. ನಾನು ತಹಸೀಲ್ದಾರ್ ಅವರೊಂದಿಗೆ ಈ ಬಗ್ಗೆ ಚರ್ಚೆ ಮಾಡಿ 'ವಿವಿಧ ಸಮುದಾಯದ ಸ್ಮಶಾನ ಅಭಿವೃದ್ಧಿಗಾಗಿ 5 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ. ತಾವು ಜಾಗವನ್ನು ಕೊಡಿ' ಎಂದು ಕೇಳಿದಾಗ, ಅವರು 'ಅದಕ್ಕೆ ಅವಕಾಶವಿಲ್ಲ' ಎಂದು ಹೇಳಿದರು. ನಾನು ಏತಕ್ಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇಲಾಖೆಗಳ ನಡುವೆ ಇರುವಂತಹ ವ್ಯತ್ಯಾಸಗಳನ್ನು ಸರಿಪಡಿಸದೇ ಹೋದರೆ, ನಾಳೆ ಗ್ರಾಮೀಣ ಪ್ರದೇಶದ ಜನರು ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ನಮ್ಮ ಸದನದಲ್ಲಿರುವ ಎಲ್ಲ ಸದಸ್ಯರು ಸಭಾನಾಯಕರು ಮತ್ತು ಸಚಿವರಾದಿಯಾಗಿ ಇದರ ಬಗ್ಗೆ ಚಿಂತನೆ ಮಾಡಿ ಇದಕ್ಕೆ ಏಕರೂಪವಾಗಿರುವ ಕಾನೂನನ್ನು ತರುವಂತಹ ಚಿಂತನೆ ಮಾಡಿದರೆ ಖಂಡಿತವಾಗಿಯೂ ಜನರಿಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಮೇಲು-ಕೀಳು ಎನ್ನುವ ಭಾವನೆ ಮುಂದುವರೆಯುತ್ತದೆ ಎನ್ನುವುದು ನನ್ನ ಚಿಂತನೆಯಾಗಿದೆ. ಮಾನ್ಯ ಉಗ್ರಪ್ಪನವರು ಉಲ್ಲೇಖ ಮಾಡಿದಂತೆ, ಶವ ಸಂಸ್ಕಾರ ಮಾಡಿದ ನಂತರ ಜನರು ಮನೆಗೆ ಹೋಗುವುದಕ್ಕೂ ಮುಂಚೆ ಮುಖ ಕೈ-ಕಾಲು ತೊಳೆಯುವುದಕ್ಕೆ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ. ಕೆಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಜದವರಿಗೆ ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಆ ಹಿನ್ನೆಲೆಯಲ್ಲಿ ಇದಕ್ಕೊಂದು ಸಮಗ್ರವಾಗಿರುವ ಕಾನೂನು ತಂದು, ಎಲ್ಲ ಜನಾಂಗದವರಿಗೂ ಶ್ಮಶಾನದ ಅನುಕೂಲ ಮಾಡಿಕೊಡಬೇಕೆನ್ನುವುದು ನಮ್ಮ ಮನವಿಯಾಗಿದೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಮಶಾನಕ್ಕಾಗಿ ಜಾಗ ಕೊಂಡುಕೊಳ್ಳುವುದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ತುಮಕೂರಿನ ಜಿಲ್ಲಾಧಿಕಾರಿಗಳು ಹಣವನ್ನು ಮಂಜೂರು ಮಾಡಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಕೆ.ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ಮರಣ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದು ಈಗ ಕಡ್ಡಾಯವಾಗಿದೆ. ಅದಕ್ಕಾಗಿ ಸೀನಿಯಾರಿಟಿ ಇದೆ. ಆ ಸೀನಿಯಾರಿಟಿ ಮುಗಿದು, ನಮ್ಮ ಸರದಿ ಬಂದು, ಮರಣ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದಕ್ಕೆ 5–6 ತಿಂಗಳುಗಳು ಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ತಮ್ಮ ಸಲಹೆಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇದೊಂದು ರೀತಿ ಕಷ್ಟದ ಕೆಲಸ. ನಾವೆಲ್ಲರೂ ಈ ಭೂಮಿಗೆ ಬರಬೇಕಾದರೆ, ನಮ್ಮನ್ನು ಹೆರುವುದಕ್ಕೆ ನಮ್ಮ ತಾಯಂದಿರು ಎಷ್ಟು ಕಷ್ಟಪಟ್ಟಿರಬಹುದು; ಆ ಕಷ್ಟ ಅವಳಿಗೆ ಮಾತ್ರ ಗೊತ್ತು. ಆದ್ದರಿಂದ ಈ ಜಗತ್ತಿನಲ್ಲಿ ಒಂದು ವ್ಯವಸ್ಥೆಯಲ್ಲಿ ನಾವೆಲ್ಲರೂ ಜೀವಿಸುತ್ತೇವೆ.

**ಶ್ರೀ ಕೆ.ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ಮರಣ ಪ್ರಮಾಣಪತ್ರ ಪಡೆದುಕೊಳ್ಳುವುದರಲ್ಲಿ ಇರುವ ಸಮಸ್ಯೆಯ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ಡೈರಿಯಲ್ಲಿ ಬರೆದುಕೊಳ್ಳಲಿ.

**(ಸದನದಲ್ಲಿ ನಗುವಿನ ಅಲೆ)**

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಡೈರಿಯಲ್ಲಿ ಬರೆದುಕೊಂಡರೆ ಆ ಡೈರಿ ನನ್ನದಲ್ಲ ಎಂದು ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾನು ಸ್ಮಶಾನದ ವಿಚಾರ ಮಾತನಾಡುತ್ತಿದ್ದೇನೆ. ಮಾನ್ಯ ಸಂದೇಶ್ ನಾಗರಾಜ್‌ರವರು ಬೇರೆ ಯಾವುದೋ ವಿಚಾರಕ್ಕೆ ಹೋದರು.

ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಪ್ರತ್ಯೇಕವಾಗಿರುವ ಕಾನೂನಿನ ಅವಶ್ಯಕತೆ ಇಲ್ಲ. ಇರುವಂತಹ ವ್ಯವಸ್ಥೆಯಲ್ಲೇ ಊರಿಗೊಂದು ಸ್ಮಶಾನವನ್ನು ನೀಡುವ ವ್ಯವಸ್ಥೆಯನ್ನು ಮೊದಲು ಮಾಡೋಣ. ನಾವು ಅವರು ಸತ್ತರೂ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಊರಿನಲ್ಲಿಯೇ

ಇಂತಹ ಸಮಸ್ಯೆ ಇದೆ. ಅದರ ಬಗ್ಗೆ ಕಥೆ ಹೇಳುತ್ತಾ ಕೂರುವುದಕ್ಕೆ ಸಾಧ್ಯವಾಗುತ್ತದೆಯೇ? ಊರಿಗೊಂದು ಸ್ಮಶಾನ ಮಾಡಿ, ಅದನ್ನು ಅಳತೆ ಮಾಡಿ, ಸರಿಯಾಗಿ ಗುರುತಿಸಿ, ಭದ್ರಪಡಿಸಬೇಕಾಗುತ್ತದೆ. ಸ್ಮಶಾನವನ್ನು ಅತಿಕ್ರಮಿಸುವಂತಹ ಪ್ರಕರಣಗಳು ಬಹಳ ಕಡಿಮೆ. ಸ್ವಾಭಾವಿಕವಾಗಿ ಯಾರು ಆ ಕೆಲಸವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಲು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಬೇಗನೇ ಎಲ್ಲ ಊರಿಗೆ ಒಂದು ಸ್ಮಶಾನವನ್ನು ನೀಡುವಂತಹ ವ್ಯವಸ್ಥೆ ಮಾಡಲಾಗುವುದು. ಹೆಚ್ಚಿನ ಪ್ರಮಾಣದಲ್ಲಿ ಸ್ಥಳ ದೊರೆತರೆ ಹೆಚ್ಚಿನ ಜಾಗವನ್ನು ನೀಡಲಾಗುವುದು. ಅಂದರೆ, 5 ಎಕರೆಯವರೆಗೆ ಜಾಗ ಸಿಕ್ಕಿದರೆ 5 ಎಕರೆಯನ್ನು ನೀಡಲಾಗುವುದು, ಆ ಪ್ರಮಾಣದಲ್ಲಿ ಜಾಗ ಸಿಗದಿದ್ದರೆ ಅರ್ಧ ಎಕರೆಯಲ್ಲಿ ಶ್ಮಶಾನವನ್ನು ಮಾಡುವುದಕ್ಕೆ ಮತ್ತು ಸರ್ಕಾರಿ ಜಾಗ ಇಲ್ಲದಿದ್ದರೆ ಖಾಸಗಿ ಜಾಗವನ್ನು ಖರೀದಿ ಮಾಡುವುದಕ್ಕೆ ನಾವು ತಯಾರಿದ್ದೇವೆ. ಪ್ರತಿ ಗ್ರಾಮದಲ್ಲಿ ಶಾಶ್ವತವಾಗಿ ಒಂದು ಶ್ಮಶಾನವನ್ನು ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ.

**ಉಪ ಸಭಾಪತಿಯವರು:–** ಈಗ ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಮೇಲಿನ ಚರ್ಚೆ ಇಲ್ಲಿಗೆ ಮುಕ್ತಾಯಗೊಂಡಿದೆ. ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆ.

**ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯಡಿ ಮಾನ್ಯ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನರವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೇಳಬೇಕಾಗಿದೆ.

**ಶ್ರೀ ಐವನ್ ಡಿ'ಸೋಜಾ(ಆಡಳಿತ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಮಂಡಿಸಿ ಬಿಡಲಿ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಆ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿರುವ ಸದಸ್ಯರು ಸಭೆಯಲ್ಲಿ ಹಾಜರಿಲ್ಲದೇ ಇರುವುದರಿಂದ ಉತ್ತರವನ್ನು ಮಂಡಿಸುವುದು ಬೇಡ. ಮುಂದೆ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ನೀಡಲಾಗುತ್ತದೆ.

## 6. ಅರ್ಧ ಗಂಟೆ ಕಾಲಾವಧಿ ಚರ್ಚೆ

**ವಿಷಯ: ಪಠ್ಯಪುಸ್ತಕ ಪರಿಷ್ಕರಣೆ ಕುರಿತು**

– – –

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚೆ ಪ್ರಾರಂಭವಾಗುವುದಕ್ಕೂ ಮೊದಲು ಒಂದು ಸ್ಪಷ್ಟನೆಯನ್ನು ನೀಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಬಯಸುತ್ತಿದ್ದೇನೆ. ಈ ಪ್ರಶ್ನೆಯ ಮೇಲೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ನಾನು ಪೂರಕ ಟಿಪ್ಪಣಿಯ ಬಗ್ಗೆ ಮಾತನಾಡಿದ್ದೆ. ನಾವು ಕೊಟ್ಟಿರುವ ಉತ್ತರ ಮತ್ತು ಅದರ ಜೊತೆಗೆ ಸಚಿವರಿಗೆ ಬರುವಂತಹ ಪೂರಕ ಟಿಪ್ಪಣಿ. . . . .

**(330) 21.03.2017 ಟಿ.ಸಿ.ಹೆಚ್/ಆರ್.ಎನ್4.30**

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಈಗ ಮಾನ್ಯ ಸದಸ್ಯರಾದ (ಶ್ರೀ ಅರುಣ ಶಹಾಪುರ) ಅವರು ಪ್ರಾರಂಭ ಮಾಡಿ ಮಾತನಾಡಲಿ. ಆನಂತರ ನೀವು ಮಾತನಾಡಿ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡಲು ಏತಕ್ಕೆ ಆತುರ ಪಡುತ್ತಿದ್ದಾರೆ. ನಾನು ಹೇಳಿದ ನಂತರ ಉತ್ತರ ಕೊಡಲಿ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಶ್ರೀ ಅರುಣ ಶಹಾಪುರರವರೇ, ಒಂದು ನಿಮಿಷ. ಆ ಪೂರಕ ಟಿಪ್ಪಣಿ ವಿಚಾರದಲ್ಲಿ ನಾನು ಈ ಸದನದ ಸ್ವತ್ತು ಅಲ್ಲವೆಂದು ಹೇಳಿದ್ದು ನಿಜ. ಮಾನ್ಯ ಸಭಾಪತಿಯವರು ಶಿಕ್ಷಣ ಇಲಾಖೆಯಿಂದಲೇ ಎಲ್ಲರಿಗೂ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ನನ್ನ ಇಲಾಖೆಯಿಂದ ಯಾರಿಗೂ ಕೊಟ್ಟಿಲ್ಲ. ಪ್ರತ್ಯೇಕವಾಗಿ ಅವರ ಹತ್ತಿರ ಇರುವುದರಿಂದ, ಅದರ ಬಗ್ಗೆ ಈಗಾಗಲೇ ನನ್ನ ಇಲಾಖೆಯಲ್ಲಿ ಒಂದು ತನಿಖೆ ರೀತಿಯಲ್ಲಿ ಮಾಡಿರುವಂತಹ ಸಂದರ್ಭದಲ್ಲಿ ಯಾರು ಅದನ್ನು ಮಾಡಿದ್ದಾರೆ ಅವರನ್ನು ನನ್ನ ಇಲಾಖೆಯಿಂದ ಬಿಡುಗಡೆಗೊಳಿಸಿ, ಅವರ ಮೇಲೆ ಒಂದು ತನಿಖೆಗೆ ಆದೇಶ ಮಾಡಿದ್ದೇನೆ. ಆದ್ದರಿಂದ ಆ ವಿಚಾರವೂ ಕೂಡ ಬರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾಡಿದವರು ಬಲಿಯಾಗಿಲ್ಲ. ಅದನ್ನು ಮಾಡಿಸಿದವರಿಗೆ ನೀವು ಬಲಿ ಹಾಕಿದ್ದೀರಿ ಅಷ್ಟೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಅದನ್ನು ಮಾಡಿಸಿದವರು ಯಾರು ಎಂದು ಮಾನ್ಯ ಸದಸ್ಯರಾದರು ಹೇಳಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಸಚಿವರು ಸತ್ಯ ಕಂಡುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ಆ ಕಾರಣದಿಂದ ಇದರ ಬಗ್ಗೆ ತನಿಖೆ ಮಾಡಿಸುತ್ತಿದ್ದೇನೆ. ನಮ್ಮ ಇಲಾಖೆಯಲ್ಲಿ ಯಾರು ಈ ರೀತಿಯಾಗಿ ಮಾಡುತ್ತಿದ್ದಾರೆ ಅವರ ಬಗ್ಗೆ ಕಡಿವಾಣವನ್ನು ಕೂಡ ಹಾಕಬೇಕಾಗುತ್ತದೆ.

**ಉಪ ಸಭಾಪತಿಯವರು:-** ಶ್ರೀ ಅರುಣ ಶಹಾಪುರರವರೆ, ತಾವು ಮುಂದುವರೆಸಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಸಚಿವರು ಒಂದನ್ನು ಸ್ಪಷ್ಟಪಡಿಸಲಿ, ಆ ದಾಖಲೆ ಇಲಾಖೆಯದ್ದು ಹೌದೋ, ಅಲ್ಲವೋ, ಆ ದಾಖಲೆ ಬಗ್ಗೆ ಅವರು ಅಲ್ಲಗಳೆಯುತ್ತಾರೆಯೇ? ಹಾಗಾದರೆ ಆ ದಾಖಲೆಯೇ ಅವರದ್ದು ಆಗಿಲ್ಲವೆಂದರೆ, ಅವರ ಮೇಲೆ ಕ್ರಮ ಏತಕ್ಕೆ ಕೈಗೊಂಡರು. ಏತಕ್ಕೆ ಅವರನ್ನು ಬಿಡುಗಡೆ ಮಾಡಿದರು. ಈ ರೀತಿಯ ನೂರು ಪ್ರಶ್ನೆಗಳು ಹೋಗುತ್ತದೆ. ಹಾಗಾಗಿ, ಅದಕ್ಕೆ ಹೋಗುವ ಬದಲು ನೇರವಾಗಿ ಪಠ್ಯಪುಸ್ತಕಕ್ಕೆ ಬರಲಿ ಎಂದು ನಾನು ಇಚ್ಛೆಪಡುತ್ತೇನೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾನು ಇಲಾಖೆಯ ದಾಖಲೆ ಅಲ್ಲವೆಂದು ಹೇಳುತ್ತಿಲ್ಲ. ಸದನಕ್ಕೆ ನಾನು ಉತ್ತರವನ್ನು ಮಂಡಿಸುವಂತಹ ಸಂದರ್ಭದಲ್ಲಿ ಏನೆಲ್ಲಾ ಕೊಟ್ಟಿದ್ದೆನು. ಅದು ನಿಮ್ಮ ಬಳಿ ಇರುವಂತಹ ದಾಖಲೆಯು ಈ ಸದನಕ್ಕೆ ಉತ್ತರದ ರೂಪದಲ್ಲಿ ಕೊಡದೇ ಇರುವಂತಹ ವಿಚಾರವಾಗಿದೆ. ನನ್ನ ಕಡತದಲ್ಲಿ ಇದ್ದಂತಹ ಪೂರಕ ಟಿಪ್ಪಣಿಯು ನಿಮ್ಮ ಬಳಿ ಬಂದಿರುವುದು ಹೇಗೆ ಎನ್ನುವುದರ ಬಗ್ಗೆ ನೀವಾದರೂ ಸಮಜಾಯಿಷಿ ಕೊಡಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಸಮಜಾಯಿಸಿಯನ್ನು ಮಾನ್ಯ ಸಚಿವರು ಕೊಡಬೇಕು. ನಿಮ್ಮ ಮೂಲಕ ಬಂದಿರುವಂತಹ ದಾಖಲೆಯಾಗಿರುವುದು.

**ಉಪ ಸಭಾಪತಿಯವರು:-** ಶ್ರೀ ಅರುಣ ಶಹಾಪುರವರೆ, ನೀವು ಈಗ ಚರ್ಚೆ ಪ್ರಾರಂಭ ಮಾಡಿ.

**ಶ್ರೀ.ಕೆ.ಎಸ್.ಈಶ್ವರಪ್ಪ(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಮಂತ್ರಿಗಳು ಇದನ್ನು raise ಮಾಡಿದ ಮೇಲೆ, ಅದು confirm ಆಯಿತೋ ಇಲ್ಲವೋ? ಅವರು ಹೇಳಿದ್ದನ್ನು ಈ ಸದನ ಒಪ್ಪಿಕೊಳ್ಳಬಾರದಿತ್ತು. ನಿನ್ನೆಯ ದಿವಸ ಮಾನ್ಯ ಸಭಾಪತಿಯವರು ಇದು ಸದನದ ಆಸ್ತಿ ಎಂದು ಹೇಳಿದರು. ಈಗ ಅವರು ಅದು ನಮ್ಮದು ಅಲ್ಲವೆಂದು ಹೇಳುತ್ತಿದ್ದಾರೆ. ಈಗ ಅದನ್ನು ಒಪ್ಪಿಕೊಳ್ಳಬೇಕೋ, ಬೇಡವೋ ಎನ್ನುವುದರ ಬಗ್ಗೆ ಮೊದಲು ತೀರ್ಮಾನವಾಗಲಿ, ಆಮೇಲೆ ಮಾತನಾಡುವುದು ಇದ್ದಿದ್ದೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಸದಸ್ಯರ ಮೇಲೆ ಮಾನ್ಯ ಸಚಿವರು ನೇರವಾಗಿ ಆಪಾದನೆಯನ್ನು ಮಾಡಿದ್ದಾರೆ. ಮಾನ್ಯ ಸಚಿವರು ಮೊನ್ನೆ ದಿವಸ ತಮ್ಮ ಕಛೇರಿ ಮೂಲಕ ಈ ದಾಖಲೆಗಳು ಲಭ್ಯವಾಗಿದೆ ಎಂದು ಹೇಳಿಕೊಂಡರು. ಅದಾದ ನಂತರ, ಇದು ಸದನದ ಆಸ್ತಿ ಎಂದು ಮಾನ್ಯ ಸಭಾಪತಿಯವರು ಆ ಪೀಠದಿಂದ ರೂಲಿಂಗ್ ಕೊಟ್ಟಿದ್ದಾರೆ. ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಇವರು ಹೇಗೋ ಅದನ್ನು ಪಡೆದುಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ವಿಷಯದ ಬಗ್ಗೆ ನಿರ್ಣಯ ಆಗಬೇಕಲ್ಲವೇ? ಇಲ್ಲವೆಂದರೆ ನಮ್ಮ ಸದನದ ಸದಸ್ಯರ ಮೇಲೆ ಆಪಾದನೆ ಮಾಡಿದಂತಾಗುತ್ತದೆ. ಮಾನ್ಯ ಸಭಾಪತಿಯವರು ಪೀಠದಿಂದ ರೂಲಿಂಗ್ ಕೊಟ್ಟಿದ್ದಾರೆ. ನನ್ನ ಕಛೇರಿಯಿಂದ ಬಂದರೆ ಅದು ಸದನದ ಆಸ್ತಿ ಎಂದು ಹೇಳಿದ್ದಾರೆ. ಇವತ್ತಿನ ದಿವಸ ಈ ಚರ್ಚೆಯಲ್ಲಿ ಭಾಗವಹಿಸಿದ ಪ್ರಾರಂಭದಲ್ಲಿ ಮಾನ್ಯ ಮಂತ್ರಿಗಳು ಎದ್ದು ನಿಂತು ಇದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ, ನಾನು ಕೊಟ್ಟಿಲ್ಲವೆಂದರೆ ಇದರ ಬಗ್ಗೆ ಏನೊಂದು ನಿರ್ಣಯವಾಗಬೇಕಲ್ಲವೇ? ಅದಕ್ಕಾಗಿ ಸ್ಪಷ್ಟೀಕರಣ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಇಲ್ಲಿ ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಉತ್ತರವನ್ನು ನಾನು ಏನು ಮಂಡನೆ ಮಾಡಿದ್ದೇನೆ ಅದು ಈ ಸದನದ ಆಸ್ತಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ನೀವು ಇದನ್ನು ಒಪ್ಪಿಕೊಳ್ಳುತ್ತೀರಾ? ಮಂತ್ರಿಗಳು ತೆಗೆದುಕೊಂಡಿರುವ ಈ ವಿಷಯದ ಬಗ್ಗೆ ತಾವು ರೂಲಿಂಗ್ ಕೊಡಿ. ಸದನದಲ್ಲಿ ಕೊಟ್ಟಿರುವ ಆ ಮಾಹಿತಿ ನನ್ನದು ಅಲ್ಲವೆಂದು ಸಚಿವರು ಹೇಳುತ್ತಾರೆ ಎಂದರೆ, ಮಾನ್ಯ ಸಭಾಪತಿಯವರ ಮೂಲಕ ಬಂದಿರುವ ದಾಖಲೆಯನ್ನು ನಾನು ಒಪ್ಪುವುದಿಲ್ಲ. ನಾನು ಸಹಿ ಹಾಕಿದರೆ ಮಾತ್ರ ನನ್ನದು ಎಂದು ಹೇಳುತ್ತಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಇಷ್ಟು fair submission ಅನ್ನು ಮಾಡುತ್ತಿದ್ದಾರೆ. ನಾನು ಕೊಟ್ಟಿರತಕ್ಕಂತಹ ಕೆಲವು ದಾಖಲೆಗಳನ್ನು ಬಿಟ್ಟು, ಬೇರೆ ದಾಖಲೆಗಳು ಅದರಲ್ಲಿ ಸೇರಿರತಕ್ಕಂತದ್ದು ನನ್ನ ಗಮನದಲ್ಲಿ ಇಲ್ಲ. ನಾನು ಅದನ್ನು ಕೊಟ್ಟಿಲ್ಲವೆಂದಾಗ, ಇದು ಬಹಳ clear statement. ಇದರಲ್ಲಿ ಏನಿದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಸಚಿವರು ಏನನ್ನು ಮಾತನಾಡುತ್ತಿದ್ದಾರೆ ಸದನದಲ್ಲಿ ಬಂದು ದಾಖಲೆಗಳನ್ನು ಕೊಟ್ಟ ನಂತರ, ಅದರ ಬಗ್ಗೆ ನನಗೆ ಸಂಬಂಧವಿಲ್ಲವೆಂದರೆ ಹೇಗೆ? (ಗೊಂದಲ) ಮಾನ್ಯ ಸಭಾಪತಿಯವರೆ, ಈಗ ಅದು ಸದನದ ಆಸ್ತಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ನಾವು ಉತ್ತರದ ರೂಪದಲ್ಲಿ ಕೊಟ್ಟಿರುವುದು ಏನಿದೆ ಅದು ಸದನದ ಆಸ್ತಿ ನಿಜ. ಆದರೆ ನಾನು ಸದನಕ್ಕೆ ಕೊಡದೇ ಇರುವಂಥದ್ದರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅದನ್ನು ಉಲ್ಲೇಖ ಮಾಡಿದರೂ ಚಿಂತೆ ಇಲ್ಲ. ಆದರೆ, ಅದು ಸದನದ ಆಸ್ತಿಯಾಗುವುದಿಲ್ಲ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಅದನ್ನು ಸಚಿವರು ಆ ರೀತಿ ಹೇಳುವುದಕ್ಕಾಗುವುದಿಲ್ಲ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ನೀವು ಮಾತನಾಡುವುದು ದಾಖಲೆಗೆ ಹೋಗುತ್ತದೆ. ಆದರೆ, ಅದು ಮಂಡನೆ ಆಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುವಂತದ್ದು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಅದು ಬೇರೆ. ಅದು ಈಗಾಗಲೇ ಮಂಡನೆ ಆಗಿ ಹೋಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಸದಸ್ಯರು ಹೇಳಿದ ಮಾತು ಹಾಗೂ ಮಂತ್ರಿಗಳು ಹೇಳಿದ ಮಾತು ಎರಡನ್ನೂ ಕೇಳಿದ್ದೀರಿ. ನಿನ್ನೆ ರೂಲಿಂಗ್ ಸಹ ಕೊಟ್ಟಿದ್ದೀರಿ. ಈಗ ಈಗ ಮತ್ತೆ ಇದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಿದ್ದಾರೆ ಆದುದರಿಂದ ತಾವು ಸಮಯ ತೆಗೆದುಕೊಳ್ಳಿ ನನ್ನ ಅಭ್ಯಂತರವಿಲ್ಲ. ತಾವು ಸಮಯ ತೆಗೆದುಕೊಂಡು ಆ ರೂಲಿಂಗ್ ಅನ್ನು ಮರುಪರಿಶೀಲನೆ ಮಾಡುತ್ತೀರೋ ಅಥವಾ ಅವರು ಹೇಳಿದ ಮಾತು ಸರಿಯೋ, ತಪ್ಪೋ? ಏಕೆಂದರೆ, ಅವರು ಥಟ್ ಅಂತ ಹೇಳಿದ ತಕ್ಷಣ ನೀವೇನು ಮಾಡಬೇಕು. ತಾವು ಮಧ್ಯದಲ್ಲಿ ಯಾವ ಸ್ಥಿತಿಯಲ್ಲಿ ಬರಬೇಕೋ ನನಗಂತೂ ಗೊತ್ತಿಲ್ಲ. ನಾನಂತು ತಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಲು ಇಷ್ಟಪಡುವುದಿಲ್ಲ. ತಾವು ಸಮಯ ತೆಗೆದುಕೊಂಡು ಆಮೇಲೆ ಅದಕ್ಕೆ ರೂಲಿಂಗ್ ಕೊಟ್ಟರೆ ಅದಕ್ಕೆ ನಮ್ಮದು ಅಭ್ಯಂತರವಿಲ್ಲ.

**ಶ್ರೀ ರಮೇಶ ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಿನ್ನೆ ಮಾನ್ಯ ಸಭಾಪತಿಯವರು ಈ ಸಂಬಂಧ ರೂಲಿಂಗ್ ಕೊಟ್ಟು, ಅದು ಸದನದ ಆಸ್ತಿ ಎಂದು ಈಗಾಗಲೇ ಒಂದು ಆದೇಶವನ್ನು ಮಾಡಿದ್ದಾರೆ.

**ಶ್ರೀ ತನ್ವೀರ್‌ಸೇಠ್:–** ಮಾನ್ಯ ಸಭಾಪತಿಯವರೆ, ಅಲ್ಲ, ಅಲ್ಲ ಮಾನ್ಯ ಸಭಾಪತಿಯವರು ಹೇಳಿರುವಂತದ್ದೇನು ಎಂದರೆ, ನಿಮ್ಮ ಇಲಾಖೆಯೆ ಕೊಟ್ಟಿದೆ ಎಂದು ಹೇಳಿದ ಮೇಲೆ, ನಾನು ಆ ರೀತಿ ಆಗಿದ್ದರೆ ನಾನು ಒಪ್ಪುತ್ತೇನೆ ಎಂದು ಹೇಳಿದ್ದು ನಿಜ. ನಂತರ ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏಕೆ ಈ ಮಾತನ್ನು ಎತ್ತಬೇಕಾಗಿತ್ತು ಎಂದರೆ, ಮಾನ್ಯ ಪ್ರತಿಪಕ್ಷದ ನಾಯಕರು, ಮಾನ್ಯ ರಾಮಚಂದ್ರೇಗೌಡರು ಮತ್ತು ಮಾನ್ಯ ಬಸವರಾಜ ಹೊರಟ್ಟಿಯವರು ಕೂಡ ಸಚಿವರ ಕೆಲಸ ಮಾಡಿದ್ದಾರೆ. ಸಚಿವರಿಗೆ ಬರುವಂತಹ ಟಿಪ್ಪಣಿಗಳು, ಪೂರಕ ಟಿಪ್ಪಣಿಗಳು ನಾನಾ ರೂಪದಲ್ಲಿ ಇರುತ್ತದೆ. ತಿದ್ದುಪಡಿಯಾಗಿರುವಂಥದ್ದು ಇರುತ್ತದೆ. ನಮಗೆ ಬಂದಮೇಲೆ ನಾವು ಮತ್ತೆ ಅದನ್ನು ತಿದ್ದುಪಡಿ ಮಾಡುತ್ತೇವೆ. ಇದೆಲ್ಲಾ ಇರುವಂಥದ್ದು. ಇಲ್ಲಿ ಸದನದ ಗಮನಕ್ಕೆ ತರುವಂಥದ್ದು ಏನೆಂದರೆ, ನಾವು ಏನು ಸದನದಲ್ಲಿ ಉತ್ತರ ಮಂಡನೆ ಮಾಡುತ್ತೇವೆ. ಅದರ ಮೇಲೆ ಮಾನ್ಯ ಸದಸ್ಯರು ಪ್ರಶ್ನೆ ಕೇಳುವಂಥದ್ದಕ್ಕೆ ನಾವು ಉತ್ತರ ಕೊಡುವುದಕ್ಕೆ ಸಾಧ್ಯವಿದೆ. ಆದರೆ, ಸಚಿವರಿಗೆ ಕೊಡುವಂತಹ ಪೂರಕ ಟಿಪ್ಪಣಿ ಯಾವುದೋ ಬೇರೆ ರೂಪದಲ್ಲಿ ಮಾನ್ಯ ಸದಸ್ಯರು ಪಡೆದುಕೊಳ್ಳುವಂತಹ ಪ್ರಯತ್ನ ಮಾಡುವಂಥದ್ದು ಏನು ಇದೆ ಇದು ನಾವು ಸದನದ ಸದಸ್ಯರಾಗಿ ಈ ರೀತಿ ವರ್ತನೆ ಇರುವಂಥದ್ದು ಸರಿಯಲ್ಲ. ಮಾನ್ಯ ಸದಸ್ಯರ ಹತ್ತಿರ ಏನೇ ದಾಖಲೆ ಇದ್ದರೂ ಅವರು ಮಾತನಾಡಲಿ. ಏನು ದಾಖಲಾತಿ ಇದೆ ಅದು ಸದನದಲ್ಲಿ ಮಂಡನೆ ಆದರೆ, ಅದು ಸದನದ ಆಸ್ತಿ ಆಗುತ್ತದೆ. ಇಲ್ಲವೆಂದರೆ, ಮಾನ್ಯ ಸದಸ್ಯರು ಅದನ್ನು ಉಲ್ಲೇಖ ಮಾಡಿದರೂ ಕೂಡ ಅದು ಸದನದ ಆಸ್ತಿಯಾಗುವುದಿಲ್ಲ ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರು ಹೇಳಿದ ತಕ್ಷಣ ಅದು ತೀರ್ಮಾನ ಆಗುವುದಿಲ್ಲ. ಸದನದ ಆಸ್ತಿ ಹೌದೋ, ಅಲ್ಲವೋ ಎಂದು ತೀರ್ಮಾನ ಮಾಡುವುದು ಸಚಿವರಲ್ಲ. ಇದರ ಬಗ್ಗೆ ರೂಲಿಂಗ್ ಕೊಡಬೇಕಾಗಿರುವುದು ಸಭಾಪತಿಯವರಾಗಿರುತ್ತಾರೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ನಾನು ತೀರ್ಪನ್ನು ಕೊಟ್ಟಿಲ್ಲ. ಸರ್ಕಾರದ ಪರವಾಗಿ ನಾನು ವಾದ ಮಂಡನೆ ಮಾಡಿದ್ದೇನೆ ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಅದನ್ನೇ ಹೇಳುತ್ತಿರುವುದು. ಮಾನ್ಯ ಸಚಿವರಿಗೆ ಅದು ಸದನದ ಆಸ್ತಿಯಾಗುವುದಿಲ್ಲವೆಂದು ಹೇಳುವ ಅಧಿಕಾರವಿಲ್ಲ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ನಾನು ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಅಧಿಕಾರವಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಚಿವರು ಅಭಿಪ್ರಾಯವನ್ನು ಹೇಳಲಿ. ಹೇಳುವುದಕ್ಕೆ ಅಧಿಕಾರವಿದೆ. ಇಲ್ಲಿ ನಾನು ಹೇಳುತ್ತಿರುವುದೇನೆಂದರೆ, ಮಾನ್ಯ ಸಭಾಪತಿಯವರು ಕೊಟ್ಟಿರುವಂತಹ ರೂಲಿಂಗ್ ಅನ್ನು ಮರುಪರಿಶೀಲನೆ ಮಾಡುವುದಕ್ಕೆ ನಿಮಗೆ ಅವಕಾಶವಿದೆ. ನೀವು ಸಮಯವನ್ನು ತೆಗೆದುಕೊಳ್ಳಿ. ನಾನು ಬೇಡವೆಂದು ಹೇಳುವುದಿಲ್ಲ. ಮಾನ್ಯ ಸಚಿವರು ಅಭಿಪ್ರಾಯವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಹೇಳಿದ್ದಾರೆ. ನಮ್ಮ ಅಭಿಪ್ರಾಯವನ್ನು ನಾವು ಹೇಳಿದ್ದೇವೆ. ಈಗಾಗಲೇ ಒಂದು ರೂಲಿಂಗ್ ಕೊಟ್ಟಿದ್ದೀರಿ. ಇದರ ಬಗ್ಗೆ ಏನು ಎನ್ನುವುದನ್ನು ನೀವು ಮತ್ತೆ ತಿಳಿಸಿದರೆ ನಮ್ಮದೇನು ಅಭ್ಯಂತರವಿಲ್ಲ.

**ಶ್ರೀ.ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಇದು ಪ್ರಶ್ನೆ ರೂಪದಲ್ಲಿ ಬಂದಂತಹ ಇಶ್ಯೂ ಆಗಿದೆ. ಆ ಪ್ರಶ್ನೆಗೆ ಏನೆಲ್ಲಾ ಉತ್ತರಗಳು ಮತ್ತು ಅದರ ಜೊತೆಯಲ್ಲಿ ಇರತಕ್ಕಂತಹ ಅನುಬಂಧಗಳೆಲ್ಲಾ ಇವೆ, ಅದು ಸರ್ಕಾರದಿಂದ ಅಧಿಕೃತವಾಗಿ ಸದನದ ಮುಂದೆ ಮಂಡಿಸಿರುವಂಥದ್ದು ಇದೆ. ಆದ್ದರಿಂದ ಉತ್ತರ ಮತ್ತು annexure ಸದನದ ಕಡತಕ್ಕೆ ಹೋಗಿರುವುದರಿಂದ, ಅದು ಸದನದ ಆಸ್ತಿ. ಅದನ್ನು ಬಿಟ್ಟು ಆ ಉತ್ತರ ತಯಾರು ಮಾಡುವುದಕ್ಕೆ, ಆ ಉತ್ತರಕ್ಕೆ ಲಗತ್ತಿಸದೇ ಇರತಕ್ಕಂಥ ಯಾವುದೇ ಮಾಹಿತಿಗಳು, ಮಂತ್ರಿ ಮತ್ತು ಸರ್ಕಾರ ಸದನದ ಮುಂದೆ ತರದೇ ಇದ್ದರೆ, ಅದು ಸದನದ ಆಸ್ತಿ ಆಗುವುದಕ್ಕೆ ಸಾಧ್ಯತೆ ಇಲ್ಲ. ನಿಯಮಾವಳಿಗಳಲ್ಲಿ ಸ್ಪಷ್ಟತೆ ಇದೆ. ಈಗ ನನಗೆ ಕೆಲವು ಮಾಹಿತಿಗಳು ಯಾವುದೋ ರೀತಿಯಲ್ಲಿ ಲಭ್ಯವಾಗುತ್ತವೆಂದು ಅಂದುಕೊಳ್ಳಿ. ಆ ಮಾಹಿತಿಗಳನ್ನು ನಾನು ಬಳಸಿಕೊಂಡು ಸದನದ ಗಮನಕ್ಕೆ ತರುವುದಕ್ಕೆ ನನಗೆ ಹಕ್ಕಿದೆ. Ultimately, ಈ ದಾಖಲಾತಿ ಸರಿಯಲ್ಲ ಅಥವಾ ದಾಖಲಾತಿ ಸರಿ ಇದೆ ಎಂದು ಸರ್ಕಾರ ಹೇಳಬೇಕಾಗುತ್ತದೆ. ಆದರೆ ಸರಿ ಇದೆ ಎಂದು ನಮ್ಮ ಅಭಿಪ್ರಾಯ. ಹಾಗಾಗಿ, ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ನಿಯಮಾವಳಿಗಳು ಮತ್ತು Practice and Procedure of Parliament by Author Kaul & Shakdar ರವರು ತಿಳಿಸಿರುವ ರೀತಿಯಲ್ಲಿ ತೆಗೆದುಕೊಂಡಾಗ, ಸರ್ಕಾರ ಕೊಡುವ ಉತ್ತರ ಮತ್ತು ಅದರ ಜೊತೆಯಲ್ಲಿ ಇರತಕ್ಕಂತಹ ಯಾವ annexure ಸದನದ ಸ್ವತ್ತು ಆಗುತ್ತದೆ. ಇದನ್ನು ಬಿಟ್ಟು ಬೇರೆ ಯಾವುದೇ ಇದ್ದರೂ ಸಹಾ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಹಕ್ಕಿದೆ. ಬಹುಶಃ ಅದರ ಮೇಲೆ ತಾವು ಆದೇಶವನ್ನು ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಮಾಹಿತಿ ಅಲ್ಲ. ಮಾನ್ಯ ಸಚಿವರು ಉತ್ತರ ರೂಪದಲ್ಲಿ ಕಳುಹಿಸಿದ್ದೀರಿ. ಮಾನ್ಯ ಸಭಾಪತಿಯವರಿಗೆ ಹೇಳಿದ್ದೇವೆ. ನಿಮ್ಮ ವಾದವನ್ನು ನೀವು ಮಾಡಿದ್ದೀರಿ. ನಮ್ಮ ವಾದವನ್ನು ನಾವು ಮಾಡಿದ್ದೇವೆ.

**ಶ್ರೀ ತನ್ವೀರ್‌ಸೇಠ್:-** ಮಾನ್ಯ ಸಭಾಪತಿಯವರೆ, ನನ್ನಲ್ಲಿ ಲಭ್ಯವಿರುವ ಮಾಹಿತಿ ಎಂದು ಹೇಳಿಕೊಳ್ಳಲಿ. ಆದರೆ ಪೂರಕ ಟಿಪ್ಪಣಿ ಎನ್ನುವ ಪದವನ್ನು ಮಾನ್ಯ ಸಚಿವರು ಬಳಕೆ ಮಾಡುವಾಗ ಅದು ಸದನದ ಆಸ್ತಿ ಅಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ನನಗೆ ಪೂರಕ ಟಿಪ್ಪಣಿ ಎಂದು ಲಗತ್ತಿಸಿ ಕಳುಹಿಸಿಕೊಟ್ಟಿದ್ದೀರಿ. ನಾನೇನು ಮಾಡಲಿ?

**ಶ್ರೀ ತನ್ವೀರ್‌ಸೇಠ್:-** ಮಾನ್ಯ ಸಭಾಪತಿಯವರೆ, it becomes breach of secrecy. ಅದನ್ನು ಯಾರು ಮಾಡಿದ್ದಾರೋ ಅವರನ್ನು ನಾನು ಇಲಾಖೆಯಿಂದ ಬಿಡುಗಡೆಗೊಳಿಸಿದ್ದೇನೆ. ಒಂದು ತನಿಖೆಗೂ ಸಹ ಆದೇಶವನ್ನು ಮಾಡಿದ್ದೇನೆ.

**(331)21.03.2017 ಪಿಕೆ/ವಿಕೆ 4.40**

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಅರುಣ ಶಹಾಪುರರವರೇ ದಯವಿಟ್ಟು ಕುಳಿತುಕೊಳ್ಳಿ . . .

**(ಗೊಂದಲ)**

**ಶ್ರೀ ಅರುಣ ಶಹಾಪುರ:-** ಈ ರೀತಿ ಬೆದರಿಕೆ ಒಡ್ಡುವಂತಹ ಕೆಲಸ ಸದನದಲ್ಲಿ ನಡೆಯುವುದಿಲ್ಲ . . .

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:-** ಅದು contempt ಆಗಿದೆ . . .

**(ಗೊಂದಲ)**

**ಶ್ರೀ ಅರುಣ ಶಹಾಪುರ:-** ಸದಸ್ಯರು ಪ್ರಸ್ತಾಪ ಮಾಡುವ . . .(ಗೊಂದಲ) ಈ ರೀತಿಯಾದ ಬೆದರಿಕೆ ಹೂಡುವ ತಂತ್ರ ಸರಿಯಾದುದಲ್ಲ . . . ಮಾನ್ಯ ಸಭಾಪತಿಗಳೆ, ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ . . . (ಗೊಂದಲ) ನಿಮ್ಮ ಮೂಲಕ ಬಂದಿರುವಂತಹ ದಾಖಲೆಗಳ ಬಗ್ಗೆ ಚರ್ಚೆ ಮಾಡುತ್ತಿರಬೇಕಾದರೆ . . .

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನಿನ್ನೆ ರೂಲಿಂಗ್ ಕೊಟ್ಟಾಗಿತ್ತು . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ತನ್ವೀರ್‌ಸೇಠ್:-** ನಿಮ್ಮನ್ನು ಹೆದರಿಸುವುದು ನಮಗೆ ಬೇಕಿಲ್ಲ . . .

**ಶ್ರೀ ಭಾನುಪ್ರಕಾಶ್:-** ಆ ರೂಲಿಂಗ್ ಏನು . . .

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಯಾರಿಗೆ ಬೆದರಿಕೆ ಹಾಕಿದರು? ಸದನ ನೋಡುತ್ತಿಲ್ಲವೇ? ಬೆದರಿಕೆ ಎನ್ನುವ ಪದಕ್ಕೆ ಅರ್ಥ ಇಲ್ಲವೇ? . . . **(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ ದಯವಿಟ್ಟು ಕುಳಿತುಕೊಳ್ಳಿ . . .

**ಶ್ರೀ ಕೃಷ್ಣಭೈರೇಗೌಡ:**-ಕಾನೂನು ಪಾಲನೆ ಮಾಡಿದರೆ ಅದು ಬೆದರಿಕೆ ಆಗುತ್ತದೆಯೇ . . .ಬಣ್ಣ ಕಟ್ಟುವುದಕ್ಕೂ ಒಂದು ಇತಿಮಿತಿ ಇರಬೇಕು . . .

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ ದಯವಿಟ್ಟು ಕುಳಿತುಕೊಳ್ಳಿ. ಈ ವಿಷಯದ ಸಂಬಂಧ ವಿರೋಧ ಪಕ್ಷದ ನಾಯಕರು, ಮಾನ್ಯ ಅರುಣಶಹಾಪುರರವರು, ಮಾನ್ಯ ಸಚಿವರು ಹಾಗೂ ಮಾನ್ಯ ಉಗ್ರಪ್ಪನವರು ಹೇಳಿದ ಎಲ್ಲಾ ಸಂಗತಿಗಳನ್ನು ಗಮನಿಸಿದ್ದೇನೆ, ತಮ್ಮೆಲ್ಲರ ವಾದವನ್ನೂ ಆಲಿಸಿದ್ದೇನೆ. ಈಗಾಗಲೇ ಸದನದಲ್ಲಿ ಈ ಪೀಠದಿಂದ ಈ ಸಂಬಂಧವಾಗಿ ಒಂದು ರೂಲಿಂಗ್ ಬಂದಿದೆ ಎನ್ನುವುದನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ಪುನರ್‌ಪರಿಶೀಲನೆ ಮಾಡುತ್ತೇನೆ, ಈಗ ರೂಲಿಂಗನ್ನು ಕಾಯ್ದಿರಿಸುತ್ತೇನೆ. ಇದರ ಬಗ್ಗೆ ಮತ್ತೆ ದಯವಿಟ್ಟು ಚರ್ಚೆ ಮಾಡಬೇಡಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಕೊಟ್ಟ ಉತ್ತರ ಸಮಂಜಸವಾಗಿಲ್ಲ, ಇದರ ಮೇಲೆ ನಾವು ಚರ್ಚೆ ಮಾಡಬೇಕೆಂದು ಕೇಳಿಕೊಂಡಾಗ ತಾವು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಕೊಟ್ಟ ಉತ್ತರ ಸದನದ ಆಸ್ತಿ ಎಂದೇನೇ ಹೇಳಿದರೂ ಕೂಡ ಆ ಉತ್ತರವನ್ನು ನಾವು ಒಪ್ಪದ ಕಾರಣ ತಾವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ತರಾತುರಿಯಲ್ಲಿ ಪುಸ್ತಕಗಳನ್ನು ಪ್ರಿಂಟ್ ಮಾಡಿಸುವ ಅವಶ್ಯಕತೆ ಏನಿತ್ತು? ದಿನಾಂಕ 14.12.2016ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಸಿದ್ದೀರಿ. ಇದು ನಮಗಿರುವ ಮಾಹಿತಿ. ಈ ನಡವಳಿ ಕ್ರಮ ಸಂಖ್ಯೆ 6(3) ಮತ್ತು 6 (12)ರಂತೆ ಸಿದ್ಧಪಡಿಸಿದ ಕರಡು ಪ್ರತಿಗಳನ್ನು ಸರ್ಕಾರಕ್ಕೆ ಒಪ್ಪಿಸುವ, ಪರಿಶೀಲಿಸುವ ಅಗತ್ಯವಿರುವುದಿಲ್ಲ. ಅವುಗಳನ್ನು ನೇರವಾಗಿ ಅಳವಡಿಸಿಕೊಳ್ಳಲು ಸಲ್ಲಿಸಬೇಕಿರುತ್ತದೆ ಎಂಬುದಾಗಿ ಮಾನ್ಯ ಸರ್ವಾಧ್ಯಕ್ಷರು ಎಂದು ಇದೆ. ಈ . ಸರ್ವಾಧ್ಯಕ್ಷರು ಯಾರು ಎನ್ನುವುದು ನನಗೆ ಗೊತ್ತಿಲ್ಲ. ಬೇರೆ ಬೇರೆ ಸಮಿತಿಗಳಿಗೆ ಯಾರ್ಯಾರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧ್ಯಕ್ಷರಾಗಿದ್ದಾರೆ ಎನ್ನುವ ವಿವರಗಳನ್ನು ಕೊಟ್ಟಿದ್ದೀರಿ. ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡುವುದಕ್ಕೆ, ಯಾವ ಯಾವ ವಿಷಯಕ್ಕೆ ಯಾರ್ಯಾರು ಸದಸ್ಯರಿದ್ದಾರೆ ಎನ್ನುವ ವಿವರ ಕೊಟ್ಟಿದ್ದೀರಿ. ಆದರೆ ಇವರುಗಳ ಮೇಲೆ ಒಬ್ಬರು ಸರ್ವಾಧ್ಯಕ್ಷರು ಇದ್ದಾರೆ ಎಂದು ಹೇಳಿದ್ದೀರಿ. ಪಠ್ಯಪುಸ್ತಕಗಳ ಕರಡನ್ನು ಸರ್ಕಾರದ ಮುಂದೆ ಇಡುವ ಅವಶ್ಯಕತೆ ಇಲ್ಲ ಎಂದು ಹೇಳುವುದಾದರೆ ಅದು ಯಾವ ಕಾನೂನಿನ ಅಡಿಯಲ್ಲಿ ಹೇಳುತ್ತಿದ್ದಾರೆ ಎನ್ನುವುದನ್ನು ತಿಳಿಸಬೇಕು. ಪಠ್ಯಪುಸ್ತಕದ ಸಮಿತಿ ಇಂಥಿಂಥದ್ದು ಬೇಕು ಎಂದು ತೀರ್ಮಾನಕ್ಕೆ ಬಂದಮೇಲೆ ಅದು ಸರ್ಕಾರದ ಮುಂದೆ ಬರದೇ, ಸರ್ಕಾರದ ಒಪ್ಪಿಗೆ ಪಡೆಯದೇ, ಇವತ್ತು ಚರ್ಚೆ ಮಾಡಿ ನಾಳೆ ಅದನ್ನು ಪ್ರಿಂಟಿಂಗ್ ಕೊಟ್ಟರೆ ಇದರಲ್ಲಿ ಏನೋ ನಿಗೂಢವಾದ ಅರ್ಥ ಇದೆ ಎನ್ನುವ ಭಾವನೆ ಬರುತ್ತದೆ. ಆದರೆ ನಿಮ್ಮ ವ್ಯಕ್ತಿತ್ವ, ನಿಮ್ಮ ಕಾರ್ಯಶೀಲತೆಯನ್ನು ನೋಡಿ ನಾನು ನಿಮ್ಮ ಮೇಲೆ ಯಾವುದೇ ಆಪಾದನೆ ಹೊರಿಸುವುದಕ್ಕೆ ಇಷ್ಟಪಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಇಲ್ಲಿ ಯಾವುದೋ ಕಾಣದ ಕೈ ಯಾವುದೋ ವಿಚಾರವನ್ನು ಇಟ್ಟುಕೊಂಡು, ಆ ವಿಚಾರಕ್ಕೆ ಅನುಗುಣವಾಗಿ ಕೆಲಸ ಮಾಡುವ ಒಂದು ಪ್ರಯತ್ನ ಏನು ಮಾಡುತ್ತಿದೆಯೋ ಆ ಪ್ರಯತ್ನಕ್ಕೆ ನಾವು ವಿರೋಧವಾಗಿದ್ದೇವೆ, ನೀವೂ ಕೂಡ ಅದಕ್ಕೆ ಬಲಿಯಾಗಿದ್ದೀರಿ ಎಂದು ವಿಶೇಷವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಯಾವ ಸಮಿತಿಯಲ್ಲಿ ಯಾರ್ಯಾರಿದ್ದಾರೆ, ಏನಾಗಿದೆ ಎನ್ನುವುದನ್ನು ನೋಡಿದೆ. ಯಾವ ಯಾವ ಸಮಿತಿಗಳು ಎಷ್ಟು ಸಭೆಯನ್ನು ಸೇರಿವೆ, ಆ ಸಭೆಗಳಿಗೆ ಎಲ್ಲಾ ಸದಸ್ಯರು ಉಪಸ್ಥಿತರಿದ್ದರೇ? ಸರ್ವಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇದ್ದ ಯಾವುದಾದರೂ ಒಂದು ಸಭೆಯಲ್ಲಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಯೇ? ಹಾಗೆ ವ್ಯಕ್ತಪಡಿಸುವಂತಹ ಸಂದರ್ಭದಲ್ಲಿ ಯಾವ ಅಂಶ ಇತ್ತು ಎನ್ನುವುದು ನಮಗೆ ಗೊತ್ತಾಗಬೇಕು ಅಲ್ಲವೇ? ಅದು ಗೊತ್ತಾದರೆ ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರ ರಾಷ್ಟ್ರಮಟ್ಟದಲ್ಲಿ ಒಂದೇ ರೀತಿಯಾದ ವಿದ್ಯಾಭ್ಯಾಸದ ಪದ್ಧತಿ ತರಬೇಕೆಂದು ಚಿಂತನೆ ಮಾಡುತ್ತಿದೆ. ಇಂತಹ ಸ್ಥಿತಿಯಲ್ಲಿ ನಮ್ಮ ರಾಜ್ಯಕ್ಕೆ ವಿಶೇಷವಾದಂತಹ ಪಠ್ಯಪುಸ್ತಕಗಳನ್ನು ಮುದ್ರಣ ಮಾಡುವುದು ಸಮಂಜಸವಾಗಿ ಕಾಣುತ್ತಿಲ್ಲ ಎನ್ನುವ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ಇವತ್ತು ನೀವು ಪ್ರಿಂಟ್ ಮಾಡಿಸುತ್ತೀರಿ, ಆದರೆ ಮುಂದಿನ ವರ್ಷ ಅದು ಬದಲಾವಣೆ ಆಗುತ್ತದೆ. ಕೇಂದ್ರ ಸರ್ಕಾರದಿಂದ ಮುಂದಿನ ವರ್ಷ ವ್ಯವಸ್ಥಿತವಾದ ಪದ್ಧತಿ ಬರುವ ವಿಚಾರ ನನಗೆ ಗೊತ್ತಿದೆ. ಈ ವರ್ಷ ನೀವೇನು ಪ್ರಿಂಟ್ ಮಾಡುತ್ತೀರೋ ಇವೆಲ್ಲ ಪುಸ್ತಕಗಳನ್ನು ತೆಗೆದುಕೊಂಡು ವೇಸ್ಟ್ ಪೇಪರ್ ಬ್ಯಾಸ್ಕೆಟ್‌ಗೆ ಹಾಕಬೇಕಾಗುತ್ತದೆ. ಇದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕೇ? ಇದಕ್ಕೆ ತಾವು ಸಮಂಜಸವಾದ ಉತ್ತರ ಕೊಟ್ಟರೆ ನಾನು ಮುಂದೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಒಂದು ವರ್ಷದ ಬಳಕೆಗಾಗಿ ಪುಸ್ತಕಗಳ ವಿತರಣೆಗೆ ತಗಲುವ ವೆಚ್ಚ, ಉಪಯೋಗಿಸುವ ಕಾಗದ, ಕಾಗದದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ತಯಾರಿಕೆಗೆ ಕತ್ತರಿಸುವ ಮರಗಳಿಗೆ ಆಗುವ ವೆಚ್ಚ ಎಲ್ಲವೂ ವ್ಯರ್ಥವಾಗುತ್ತದೆ. ಮರಗಳನ್ನು ಕತ್ತರಿಸುವುದರಿಂದ ಕಾಡುಗಳೂ ಹೋಗುತ್ತಿವೆ. ಅನಾವಶ್ಯಕವಾಗಿ ಹೊಸ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿದರೆ . . .

**ಶ್ರೀ ಕೃಷ್ಣಭೈರೇಗೌಡ:–** ಪಠ್ಯಪುಸ್ತಕ ಹಳೆಯದಾಗಲಿ ಅಥವಾ ಹೊಸದಾಗಿ ಆಗಲಿ, ವಿಷಯ ಹಳೆಯದಾಗಿದ್ದರೂ ಹೊಸ ಪುಸ್ತಕಗಳನ್ನು ಪ್ರಿಂಟ್ ಮಾಡಲೇಬೇಕಾಗುತ್ತದೆ. ಪಠ್ಯಪುಸ್ತಕ ಕೊಡಲೇ ಬೇಕು ಅಲ್ಲವೇ? ವಿಷಯ ಬದಲಾವಣೆ ಆಗಬಹುದು, ಆದರೆ ನಿರ್ದಿಷ್ಟ ಪ್ರಮಾಣದ ಕಾಗದದ ಉಪಯೋಗ ಆಗಿಯೇ ಆಗುತ್ತದೆ, ಮರಗಳ ಉಪಯೋಗವಾಗುತ್ತದೆ.

**ಶ್ರೀ ರಾಮಚಂದ್ರಗೌಡ:–** ಆ ಪುಸ್ತಕಗಳು ಉಪಯೋಗ ಆಗದೇ ಇದ್ದರೆ, ಅಂಥದ್ದನ್ನು ವೇಸ್ಟ್ ಬ್ಯಾಸ್ಕೆಟ್‌ಗೆ ಹಾಕಬೇಕಾಗುತ್ತದೆ ಎಂದು ಹೇಳಿದೆ. ಮುಂದಿನ ವರ್ಷ ಪುಸ್ತಕಗಳು ಬದಲಾವಣೆಯಾಗಿ ಈ ಪುಸ್ತಕಗಳು ಉಪಯೋಗಕ್ಕೆ ಬರದೇ ಹೋದರೆ, ಆ ರೀತಿಯಾದ ನಷ್ಟ ಆಗುತ್ತದೆ ಎನ್ನುವ ವಿಚಾರ ಹೇಳಿದೆ ಅಷ್ಟೆ. ಮಾನ್ಯ ಸಚಿವರು ಸಮಂಜಸವಾದ ಉತ್ತರ ಕೊಟ್ಟರೆ ಅದನ್ನು ನಾವು ಸ್ವೀಕರಿಸುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**ಮಾನ್ಯ ಸಭಾಪತಿಗಳೆ, ಪಠ್ಯಪುಸ್ತಕದ ಪರಿಷ್ಕರಣೆ ನಡೆಯುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ನಾನು ಮಾನ್ಯ ಶಿಕ್ಷಣ ಸಚಿವರಿಂದ ಒಂದು ಸ್ಪಷ್ಟತೆ ಬಯಸುತ್ತೇನೆ. ರಾಜ್ಯದಲ್ಲಿ ಪ್ರಸಕ್ತ ಪಠ್ಯಪುಸ್ತಕದ ಪರಿಷ್ಕರಣೆ ಮಾಡುತ್ತಿದ್ದೀರೋ, ಲೋಪದೋಷಗಳನ್ನು ತಿದ್ದುವಂತಹ ಕೆಲಸ ಮಾಡುತ್ತಿದ್ದೀರೋ ಅಥವಾ ಪಠ್ಯಪುಸ್ತಕದ ಪುನರ್‌ರಚನೆ ಮಾಡುತ್ತಿದ್ದೀರೋ? ಒಂದೊಂದು ಸಂದರ್ಭದಲ್ಲಿ ಒಂದೊಂದು ಹೇಳಿಕೆಯಲ್ಲಿ ಒಂದೊಂದು ಅಂಶಗಳು ಬಂದಿವೆ. ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಸ್ಪಷ್ಟನೆ ಕೊಡಬೇಕು. ಈ ಪರಿಷ್ಕರಣೆ ಕಾರ್ಯಕ್ಕೆ ಯಾವಾಗ ಕೈ ಹಾಕಿದಿರಿ ಎಂಬ ಬಗ್ಗೆ ನಾನು ಪ್ರಶ್ನೆ ಕೇಳಿದಾಗ ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಟ್ಟಿದ್ದರು. ದಿನಾಂಕ 10.11.2016ರಂದು ಪ್ರಶ್ನೆ ಹಾಕಿದ್ದೆ ಎಂದು ದಿನಾಂಕ 25.11.2016ರಲ್ಲಿ ಮಾನ್ಯ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಡುವ ಸಂದರ್ಭದಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳನ್ನು ನೀವು ಯಾವಾಗ ಜಾರಿಗೆ ತರುತ್ತೀರಿ ಎಂದು ಕೇಳಿದ್ದೆವು. ಅದಕ್ಕೆ, 2018–19ನೇ ಸಾಲಿನಿಂದ ಜಾರಿಗೆ ತರುತ್ತೇವೆ ಎಂದು ಹೇಳಿ, ಅದನ್ನು ಏಕೆ ಜಾರಿಗೆ ತರುತ್ತಿದ್ದೇವೆ ಎಂದು ಹೇಳುವಾಗ, ಮಾನ್ಯ ಶಿಕ್ಷಣ ಸಚಿವರು, new National Education Policy ಬರುತ್ತಿದೆ ಎಂಬ ಮಾತನ್ನು ಹೇಳಿದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(332)21.03.2017 MM-VK-4.50**

**ಶ್ರೀ ಅರುಣ ಶಹಾಪುರ (ಮುಂದು):-**

ರಾಜ್ಯದಲ್ಲಿ ಈಗಾಗಲೇ ಸಿಬಿಎಸ್‌ಸಿ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಕುರಿತು ಜ್ಞಾನ ಆಯೋಗದ ಶಿಫಾರಸ್ಸು ಇದೆ. ಎಲ್ಲವನ್ನೂ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಮೊನ್ನೆ ತಾನೇ Executive Council Meeting ಮಾಡಿದ್ದೇವೆ. ತರಾತುರಿಯಲ್ಲಿ 2017-18ರಲ್ಲಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅದಕ್ಕೆ 2018-19ರಲ್ಲಿ ಜಾರಿಗೆ ತರುವ ಯೋಚನೆ ಮಾಡಿದ್ದೇವೆಂದು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದರು. ಅವರ ನಿಲುವನ್ನು ನಾವು ಸ್ವಾಗತಿಸುತ್ತೇವೆ. ಬಹಳ ಒಳ್ಳೆಯ ನಿಲುವನ್ನು ತೆಗೆದುಕೊಂಡಿದ್ದೀರಿ. ತರಾತುರಿಯಲ್ಲಿ ಮಾಡದೇ ನೀವು ಮಾಡಿ ಎಂದು ಹೇಳಿದ್ದರು ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದೆವು. ಆದರೆ ಶಿಕ್ಷಣ ಸಚಿವರು ಹೇಳಿಕೆ ಕೊಟ್ಟ ಮರುದಿನವೇ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಮಾಧ್ಯಮದ ಮುಂದೆ ಹೋಗಿ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಅಧಿಕಾರಿಗಳು ಮತ್ತು ಸಚಿವರ ಹಸ್ತಕ್ಷೇಪವನ್ನು ಅವರು ಬಹಿರಂಗವಾಗಿ ಖಂಡಿಸಿದರು. ಒಂದು ಹೆಜ್ಜೆ ಮುಂದು ಹೋಗಿ ಅವರೇನು ಹೇಳಿದರೆಂದರೆ, ಸರ್ಕಾರದ ಮೇಲೆ ಒತ್ತಡವನ್ನು ನಿರ್ಮಾಣ ಮಾಡಿದರು. ರಾಯಚೂರಿನಲ್ಲಿ ನಡೆಯುವ 82ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆಗಳ ವಿಚಾರ ಚರ್ಚೆಗೆ ಬರಲಿದೆ. ಕರ್ನಾಟಕ ಸರ್ಕಾರದ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಮಾಧ್ಯಮದ ಬಳಿ ಹೋಗಿ ಈ ರೀತಿ ಹೇಳಿದರು. ಇಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಸರ್ಕಾರಕ್ಕೆ ಮುಜುಗರ ಆಗಬಾರದು ಎಂದು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಅಧಿಕಾರಿಗಳ ಕೈವಾಡ ಇದೆ. ತರಾತುರಿಯಿಂದ ತರಬಾರದು ಅದನ್ನು ಮುಂದಿನ ವರ್ಷ ತರಬೇಕೆಂದು ಮಾನ್ಯ ಶಿಕ್ಷಣ ಸಚಿವರು ಹೇಳಿರುವುದರ ಬಗ್ಗೆ ಅವರು ಆರೋಪ ಮಾಡಿದ್ದಾರೆ. ಮಾನ್ಯ ಶಿಕ್ಷಣ ಸಚಿವರೇ, ತಾವು ನೇಮಕ ಮಾಡಿರುವ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ತಮ್ಮ ಮೇಲೆ ಈ ರೀತಿ ಆರೋಪ ಮಾಡಿದ್ದಾರೆ. ಆ ಆರೋಪವೇನೆಂದರೆ, "ಪಠ್ಯಪುಸ್ತಕ ಪರಿಷ್ಕರಣೆ ಕಾರ್ಯ ಪೂರ್ಣಗೊಂಡಿದೆ. ಪರಿಷ್ಕೃತ ಪ್ರತಿಗಳನ್ನು ಡಿಸೆಂಬರ್, 8 ರಂದು ಸರ್ಕಾರಕ್ಕೆ ಸಲ್ಲಿಸುವುದಾಗಿ ಶಿಕ್ಷಣ ಸಚಿವರಿಗೆ ಪತ್ರ ಬರೆದು ತಿಳಿಸಲಾಗಿದೆ. ಹೀಗಿದ್ದರೂ ಅವರು ಪರಿಷ್ಕೃತ ಪಠ್ಯಪುಸ್ತಕವನ್ನು ಒಂದು ವರ್ಷ ಮುಂದೂಡುವುದಾಗಿ ಹೇಳಿರುವುದರ ಹಿಂದೆ ಗುಪ್ತ ಕಾರ್ಯಸೂಚಿ ಇದ್ದಂತಿದೆ" ಎಂದು ತಿಳಿಸಿದ್ದಾರೆ. ಮಾನ್ಯ ಶಿಕ್ಷಣ ಸಚಿವರೆ, ಇದು ನನ್ನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರೋಪವಲ್ಲ, ವಿರೋಧಪಕ್ಷದವರದ್ದೂ ಅಲ್ಲ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹ ಈ ಹೇಳಿಕೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 2017-18ಕ್ಕೆ ಜಾರಿಗೆ ತರುವುದಿಲ್ಲ, 2018-19ಕ್ಕೆ ಜಾರಿಗೆ ತರುತ್ತೀರಿ ಎಂದರೆ ಅದರ ಹಿಂದೆ ನಿಮ್ಮದೇ ಏನೋ hidden agenda ಇರಬಹುದು ಅದನ್ನು ಸ್ವಲ್ಪ ಸದನಕ್ಕೆ ತಿಳಿಸಿದರೆ ಒಳ್ಳೆಯದೆಂದು ವಿನಂತಿ ಮಾಡಿಕೊಳ್ಳಲಿಚ್ಛಿಸುತ್ತೇನೆ ಇದು ಎರಡನೆಯದು. ಮೂರನೇ ಸಂಗತಿಯೆಂದರೆ, ಮಾನ್ಯ ಶಿಕ್ಷಣ ಸಚಿವರೆ, ಇದೇಕೋ ಸರಿ ಹೋಗುತ್ತಿಲ್ಲ, ಇಷ್ಟೆಲ್ಲಾ ಬಹಿರಂಗವಾಗಿ ಮಾಧ್ಯಮಗಳ ಮೂಲಕವೇ ತಮ್ಮ ಪರಿಷ್ಕರಣಾ ಸಮಿತಿಯ ಸದಸ್ಯರು ಮಾತನಾಡುವ ಪರಿಸ್ಥಿತಿ ಏಕೆ ಬಂದಿತು ಎಂದು ಇದರ ಹಿಂದೆ ಹೋಗುವುದಕ್ಕೆ ನಿಜವಾಗಲೂ ಪ್ರಚೋದನೆಯಾಗಿದೆ. ದಿನಾಂಕ 03-09-2016 ರಂದು ಈ ವಿಷಯ ಮಾಧ್ಯಮದಲ್ಲಿ ಬಂದಿತು. "ಶಾಲೆ- ಸೆಮಿಸ್ಟರ್ ಪದ್ಧತಿಯನ್ನು ಕೈ ಬಿಡಲು ಸಲಹೆ. ಶಿಕ್ಷಣ ಸಚಿವರೊಂದಿಗೆ ರಾಜ್ಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಸಭೆ" ಎಂದು ಬಂದಿತ್ತು. ತಾವು ಸೆಪ್ಟೆಂಬರ್‌ನಲ್ಲೇ ಒಂದು ಸಭೆಯನ್ನು ನಡೆಸಿದ್ದೀರಿ. ಪರಿಷ್ಕರಣಾ ಸಮಿತಿ ಏನೇನು ಮಾಡಿದೆ ಎಂಬುದಕ್ಕೆ ತಮಗೆ ಅಭಿನಂದಿಸುತ್ತೇನೆ. ಒಬ್ಬ ಶಿಕ್ಷಣಾ ಸಚಿವರಾಗಿ ಪರಿಷ್ಕರಣಾ ಸಮಿತಿಯ ಜೊತೆಗೆ ಕುಳಿತುಕೊಂಡು ಈ ಸಮಿತಿಯು ಕಳೆದ ಎರಡು ವರ್ಷಗಳಿಂದ ಏನು ಮಾಡುತ್ತಿದೆ ಎಂದು ನೋಡುವುದಕ್ಕಾದರೂ ಪ್ರಯತ್ನ ಮಾಡಿರುವುದಕ್ಕೆ ಅಭಿನಂದಿಸುತ್ತೇನೆ. ಒಬ್ಬ ಶಿಕ್ಷಣ ಸಚಿವರಾಗಿ ತಾವು ಒಳ್ಳೆಯ ಕೆಲಸ ಮಾಡುವುದಕ್ಕೆ ಕೈ ಹಾಕಿದ್ದೀರಿ. ಆದರೆ ಆ ಪರಿಷ್ಕರಣಾ ಸಮಿತಿ ಎಂತಹ ಕೆಲಸ ಮಾಡಿದೆ ಎಂದರೆ ಅವರಿಗೆ ಯಾವುದೂ terms of reference ಇಲ್ಲ. ಪರಿಷ್ಕರಣಾ ಸಮಿತಿಯನ್ನೇನೋ ಸರ್ಕಾರ ರಚನೆ ಮಾಡಿತು. 27 ಸಮಿತಿಗಳನ್ನೂ ಮಾಡಿತು. ಆದರೆ ಯಾವುದೇ terms of references ಕೊಡುವುದಿಲ್ಲ. ಆ ಪರಿಷ್ಕರಣಾ ಸಮಿತಿಗೆ ಏನು ಮಾಡಬೇಕೆಂದು ಗೊತ್ತಿಲ್ಲ. ಆ ಪರಿಷ್ಕರಣಾ ಸಮಿತಿ ಏನು ಮಾಡುತ್ತದೆಂದರೆ ಪಠ್ಯಪುಸ್ತಕದ ಲೋಪದೋಷಗಳನ್ನು ತಿದ್ದುವುದೋ, ಪರಿಷ್ಕರಣೆ ಮಾಡುವುದೋ ಅಥವಾ ಅದನ್ನು ಪುನರ್‌ರಚಿಸುವುದೋ ಎನ್ನುವ ಗೊಂದಲದ ಮಧ್ಯದಲ್ಲಿ ಅವರು ಕೈ ಹಾಕಿರುವುದು ಯಾವುದೆಂದರೆ, ಈ ರಾಜ್ಯದ ಶಿಕ್ಷಣ ವ್ಯವಸ್ಥೆ ಏನಾಗಬೇಕು ಎನ್ನುವುದರ ಬಗ್ಗೆ ಶಾಲೆಗಳಲ್ಲಿ ಸೆಮಿಸ್ಟರ್ ಪದ್ಧತಿ, ಆನ್ಯುವಲ್ ಪದ್ಧತಿ ಇರಬೇಕೆಂದು ಮಾನ್ಯ ಶಿಕ್ಷಣ ಸಚಿವರ ಪಾತ್ರವನ್ನು ತೆಗೆದುಕೊಂಡು ಬಿಟ್ಟಿದ್ದಾರೆ ಇದಕ್ಕೆ ತಾವು ಹೇಗೆ ಅವಕಾಶ ಕೊಟ್ಟಿರಿ? ಮಾನ್ಯ ಶಿಕ್ಷಣ ಸಚಿವರೆ, ತಮಗೆ ಮತ್ತೊಂದು ಪ್ರಶ್ನೆಯನ್ನು ನೇರವಾಗಿ ಕೇಳುತ್ತೇನೆ. ಇದೊಂದು ಭಾರಿ ಆಶ್ಚರ್ಯದ ಸಂಗತಿಯಾಗಿದೆ. ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಮಾಡಿರುವ ಕಾರ್ಯ ಸೆಪ್ಟೆಂಬರ್ ತಿಂಗಳಿನಲ್ಲಿ ಕೇಂದ್ರೀಯ ಪಠ್ಯಕ್ರಮ ಪುಸ್ತಕಗಳು 1/4 ಡೆಮಿ ಅಳತೆಯಲ್ಲಿದೆ. ಅಂದರೆ ಪುಸ್ತಕ ಹೇಗಿರಬೇಕೆಂಬ ಬಗ್ಗೆ ಆಸಕ್ತಿ ಇದೆಯೆ ಹೊರತು ಪುಸ್ತಕದಲ್ಲಿ ಏನಿರಬೇಕೆಂಬ ಬಗ್ಗೆ ಅವರಿಗೆ ಆಸಕ್ತಿ ಇಲ್ಲ. 1/4 ಡೆಮಿ ಅಳತೆಯಲ್ಲಿದೆ. ಆಂಧ್ರಪ್ರದೇಶ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದಲ್ಲು ಅದೇ ಅಳತೆಯಲ್ಲಿ ಬಂದಿದೆ. ನಾಲ್ಕು ರಾಜ್ಯಗಳಲ್ಲಿ ತಿರುಗಾಡಿ ಪುಸ್ತಕದ ಆಕಾರ ಹೇಗಿರಬೇಕು ಎಂದು ನೋಡಿ ಪತ್ತೆ ಹಚ್ಚು ಎಂದು ಹೇಳಿದಿರಲ್ಲ ಅದು ಭಾರಿ ಆಶ್ಚರ್ಯದ ಸಂಗತಿಯಾಗಿದೆ. ಆದರೆ ಕಂಟೆಂಟ್? ಇಲ್ಲಿ 60ಜಿಎಸ್‌ಎಂ ಗುಣಮಟ್ಟದ ಕಾಗದವನ್ನು ಬಳಕೆ ಮಾಡಲಾಗುತ್ತಿದೆ. 70 ಜಿಎಸ್‌ಎಂ ಮಾಡಬೇಕೆಂದು ಮಾನ್ಯ ಶಿಕ್ಷಣ ಸಚಿವರು ಶಿಫಾರಸು ಮಾಡಿರುವುದು ಮಾಧ್ಯಮಗಳ ಮೂಲಕ ಬಂದಿರುವುದನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ರೀತಿ ಒಂದು ಪರಿಷ್ಕರಣಾ ಸಮಿತಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಯಾವಾಗ ಶಿಕ್ಷಣ ಸಚಿವರು ಸದನದಲ್ಲಿ 2017-18 ಕ್ಕೆ ಜಾರಿಯಾಗುವುದಿಲ್ಲ ಎಂದು ಉತ್ತರ ಕೊಟ್ಟರು ಅದಾದ ನಂತರ ಅವರು ನೇರವಾಗಿ ಇದು ಸಮ್ಮೇಳನದ ವಿಷಯವಾಗುತ್ತದೆ ಎಚ್ಚರ ಎಂದು ಹೇಳಿದರು. ಶಿಕ್ಷಣ ಸಚಿವರು Executive Council ನ ಅಧ್ಯಕ್ಷತೆಯನ್ನು ವಹಿಸುತ್ತಿದ್ದರು. ನಮ್ಮ ರಾಜ್ಯದಲ್ಲಿ ಒಂದು ವ್ಯವಸ್ಥೆ ಇದೆ. ಅದೇನೆಂದರೆ, ಪಠ್ಯಪುಸ್ತಕಗಳಿಗಾಗಿ Karnataka Text Book Society ಇದೆ. ಅದಕ್ಕೆ ಪದನಿಮಿತ್ತವಾಗಿ ಶಿಕ್ಷಣ ಸಚಿವರೇ ಅಧ್ಯಕ್ಷರಾಗಿರುತ್ತಾರೆ. ಶಿಕ್ಷಣ ಸಚಿವರೇ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದು, ಅದೊಂದು ಸ್ವಾಯತ್ತ ಶಿಕ್ಷಣ ಸಂಸ್ಥೆಯಾಗಿದೆ. ಆ ಸ್ವಾಯತ್ತತೆಗೆ ಭಂಗ ಬರಬಾರದ ರೀತಿಯಲ್ಲಿ ಪಠ್ಯಪುಸ್ತಕಗಳು ಬರಬೇಕೆಂಬ ಮಹದಾಶಯದೊಂದಿಗೆ ಈ ರಾಜ್ಯದಲ್ಲಿ ಒಂದು ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಅದಕ್ಕೆ ಶಿಕ್ಷಣ ಸಚಿವರು ಅಧ್ಯಕ್ಷರಾಗಿದ್ದಾರೆ. ಆದರೆ ಭಾರಿ ದೌರ್ಭಾಗ್ಯದ ಸಂಗತಿಯೇನೆಂದರೆ, ಯಾವಾಗ ಒತ್ತಡ ನಿರ್ಮಾಣವಾಯಿತು ಶಿಕ್ಷಣ ಸಚಿವರು ಆ ಅಧ್ಯಕ್ಷತೆಯನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಸುವ ಮೂಲಕ ಈ ರಾಜ್ಯದಲ್ಲಿ ಒಂದು ಕೆಟ್ಟ ಪರಂಪರೆಗೆ ನಾಂದಿ ಹಾಡಿದರು ಎಂಬ ಆರೋಪ ಬಂದಿತು. ನಂತರ ಬೇಕಾದರೆ ಅದಕ್ಕೆ ಉತ್ತರ ಕೊಡಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಪರಿಷ್ಕರಣಾ ಸಮಿತಿಯ ಅಧ್ಯಕ್ಷರನ್ನು ಪಕ್ಕದಲ್ಲಿ ಕೂರಿಸಿಕೊಂಡು ಒಂದು ಸಭೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಾರೆ. ಆ ಒಂದು ನಡವಳಿ ನನಗೆ ಲಭ್ಯವಾಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಈ ಸಮಿತಿಯನ್ನು ರಚಿಸಬೇಕಾದರೆ, ಏನೇನು terms of references ಕೊಟ್ಟರು? ಈ ಸಮಿತಿಯನ್ನು ರಚಿಸಬೇಕಾದರೆ ಏನು ಕಾರ್ಯ ಮಾಡಬೇಕೆಂದು ಸರ್ಕಾರ ಹೇಳಿತು ಎಂದರೆ, ಮೊದಲನೇ ಹೆಜ್ಜೆಯಲ್ಲಿ ಸರ್ಕಾರ ಎಡವಿದ್ದೆಲ್ಲಿ ಎಂದರೆ ಈ ಸಮಿತಿಯನ್ನು ರಚನೆ ಮಾಡಬೇಕಾದರೆ ಎಡವಿದೆ. ಈ ಸಮಿತಿಯನ್ನು ಮಾಡಿದಾಗ ಹೇಳಿರುವ ಷರತ್ತುಗಳೆಂದರೆ, ಮೊದಲನೆಯದಾಗಿ ಪಠ್ಯಪುಸ್ತಕದ ಪರಿಷ್ಕರಣೆಗೆ ಮೊದಲು ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಇದೇ ಸಮಿತಿಯಿಂದ ಪರಿಷ್ಕರಿಸಿ ನಂತರ ಪಠ್ಯಪುಸ್ತಕವನ್ನು ಪರಿಷ್ಕರಿಸುವುದು. ಎರಡನೆಯದಾಗಿ ಪರಿಷ್ಕೃತ ಪಠ್ಯಪುಸ್ತಕಗಳನ್ನು 2016-17ನೇ ಶೈಕ್ಷಣಿಕ ಸಾಲಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾರಿಗೊಳಿಸಲು ಅನುಕೂಲವಾಗುವಂತೆ ಪರಿಷ್ಕರಣಾ ಕಾರ್ಯವನ್ನು ಪೂರ್ಣಗೊಳಿಸುವುದು, ಮೂರನೆಯದಾಗಿ, ಪಠ್ಯಪುಸ್ತಕದ ಪರಿಷ್ಕರಣೆ ಕಾರ್ಯ, ಡಿಟಿಪಿ ಕಾರ್ಯ, ಪೂರಕವಾದ ಇತರೆ ಕಾರ್ಯಗಳಿಗೆ ತಗಲಬಹುದಾದ ವೆಚ್ಚವನ್ನು ಕರ್ನಾಟಕ ಪಠ್ಯಪುಸ್ತಕಗಳ ಸಂಘಕ್ಕೆ ನೀಡುತ್ತಿರುವ ಅನುದಾನದಲ್ಲಿಯೇ ಭರಿಸಬೇಕು. ನಾಲ್ಕನೆಯದಾಗಿ ಪರಿಷ್ಕರಣಾ ಕಾರ್ಯಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳಿಗೆ ಭಾಗವಹಿಸುವ ತಜ್ಞರುಗಳಿಗೆ ಉಪಸ್ಥಿತಿ ಭತ್ಯೆ, ದಿನಭತ್ಯೆ, ಪ್ರಯಾಣ ಭತ್ಯೆ, ಸಂಭಾವನೆ ಇತ್ಯಾದಿ ಭತ್ಯೆಗಳನ್ನು ಈಗಾಗಲೇ ಚಾಲ್ತಿಯಲ್ಲಿರುವ ಪಠ್ಯಪುಸ್ತಕ ಸಂಘದ ಆಡಳಿತ ಮಂಡಳಿಯ ನಿರ್ಣಯದಂತೆ ನೀಡುವುದು. ಪರಿಷ್ಕರಣಾ ಸಮಿತಿಯ ಎಲ್ಲಾ ಸದಸ್ಯರಿಗೆ ಒಂದು ದಿನದ ಪೂರ್ವಭಾವಿ ತರಬೇತಿಯನ್ನು ಆಯೋಜಿಸುವುದು. ಪರಿಷ್ಕರಣಾ ಕಾರ್ಯದ ಅಂತಿಮ ಹಂತದಲ್ಲಿ ಅವಶ್ಯಕವಿದ್ದಲ್ಲಿ ಪಠ್ಯಪುಸ್ತಕ ರಚನಾ ಸಮಿತಿ ಮತ್ತು ಪರಿಷ್ಕರಣಾ ಸಮಿತಿ ಒಟ್ಟಿಗೆ ಸಭೆ ಸೇರಿ ಚರ್ಚಿಸಿ ಪರಿಷ್ಕರಣೆ ನಡೆಸುವುದು. ಈ references ಗಳಲ್ಲಿ ಒಂದು ಸಂಗತಿಯನ್ನು ಎರಡು ವರ್ಷಗಳ ಕಾಲ ನಿರ್ಲಕ್ಷಿಸಿರುವುದೇನೆಂದರೆ, ಈಗಿನ ಪಠ್ಯಪುಸ್ತಕವನ್ನು ಹೇಗೆ ತಯಾರು ಮಾಡಲಾಯಿತು ಎನ್ನುವುದಾಗಿದೆ. ಈಗ ರಾಜ್ಯದಲ್ಲಿ ಪ್ರಸ್ತುತ ಅಳವಡಿಸಿಕೊಳ್ಳಲಾಗಿರುವ ಪಠ್ಯಪುಸ್ತಕಗಳನ್ನು National Curriculum Framework 2005, Karnataka Curriculum Framework 2007. NCF and KCF ಈ ಎರಡರ ಆಧಾರಿತವಾಗಿ ಅಳವಡಿಸಿಕೊಳ್ಳಲಾಯಿತು. ಆದರೆ ಪರಿಷ್ಕರಣೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಿಯೂ ಕೂಡ ಎನ್‌ಸಿಎಫ್ ಮತ್ತು ಕೆಸಿಎಫ್ ಆಧಾರಿತವಾಗಿ ಪರಿಷ್ಕರಣೆ ಮಾಡಿ ಎಂದು ಸರ್ಕಾರ ಸೂಚಿಸಲಿಲ್ಲ. ಹೀಗಾಗಿ ಎರಡು ವರ್ಷಗಳ ಕಾಲ ಪರಿಷ್ಕರಣಾ ಸಮಿತಿಯು ಏನು ಕೆಲಸ ಮಾಡಿದೆ ಎನ್ನುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ. ಮಾನ್ಯ ಸಚಿವರಾದ ಶ್ರೀ ತನ್ವೀರ್ ಸೇಠ್‌ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಇವರು ಸಚಿವರಾದ ನಂತರ ಒಂದು ಸಭೆಯನ್ನು ನಡೆಸಿ, ಅದರ ಬಗ್ಗೆ ರಿವ್ಯೂ ಮಾಡುವಂತಹ ಕೆಲಸವನ್ನು ಮಾಡಿದರು. ಮಾನ್ಯ ಮುಖ್ಯಮಂತ್ರಿಯವರ ಉಪಸ್ಥಿತಿಯಲ್ಲಿ ಪರಿಷ್ಕರಣಾ ಕಾರ್ಯದ ಬಗ್ಗೆ ಈ ಸಂಗತಿಯನ್ನು ಸರ್ಕಾರ ಒಪ್ಪಿಕೊಂಡಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು 1–10ನೇ ತರಗತಿಗಳ ಪಠ್ಯಪುಸ್ತಕಗಳ ಪರಿಷ್ಕರಣೆ ಪ್ರಸ್ತುತ ಹಂತದ ಕುರಿತು ಸಂಕ್ಷಿಪ್ತ ವರದಿಯನ್ನು ಸಲ್ಲಿಸಿದರು. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ14–12–2016ರಂದು ನಡೆದ ಸಭೆಯ ನಡವಳಿ. ಅದರಲ್ಲಿ ಅವರು ಹೇಳುವುದೇನೆಂದರೆ, 1–10ನೇ ತರಗತಿಗಳ 161 ಪಠ್ಯಪುಸ್ತಕಗಳನ್ನು ಪರಿಷ್ಕರಿಸಲು ನವೆಂಬರ್ 2014ರಲ್ಲಿ ಸರ್ಕಾರವು 27 ಸಮಿತಿಗಳನ್ನು ರಚಿಸಿತು. ಪರಿಷ್ಕೃತ ಪಠ್ಯಪುಸ್ತಕಗಳನ್ನು 2016–17ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಬೇಕಿತ್ತು. ಸಮಿತಿಗಳಿಗೆ ನಿರ್ದಿಷ್ಟ ಪರಾಮರ್ಶನ ಷರತ್ತುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(terms of references) ನೀಡಲಾಗಿರಲಿಲ್ಲ. ಒಂದೇ ಸಂಗತಿ ಎಂದರೆ 2014ನೇ ನವೆಂಬರ್‌ನಲ್ಲಿ ರಚನೆಯಾಗಿರುವ ಸಮಿತಿಗೆ ಡಿಸೆಂಬರ್ 2014ನೇ ಸಭೆಯಲ್ಲಿ ಒಪ್ಪಿಕೊಳ್ಳಲಾಗಿರುವುದೇನೆಂದರೆ, ಯಾವುದೇ terms of references ಕೊಟ್ಟಿರಲಿಲ್ಲ. ಅದೇ ಸಮಿತಿಯ ನಡವಳಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಹಿ ಹಾಕಿದ್ದಾರೆ ಈ ನಡವಳಿಯಲ್ಲಿ ಪರಾಮರ್ಶನ ಷರತ್ತುಗಳನ್ನು ದಿನಾಂಕ 05-11-2016ರಂದು ಸಮಿತಿಗೆ ನೀಡಲಾಯಿತು. ಹಾಗಾದರೆ ನಿಜವಾಗಲೂ ಸಮಿತಿಯ ಕಾರ್ಯ ಆರಂಭವಾಗಿರುವುದು ತಾವು ಕೊಟ್ಟಿರುವ terms of references ಪ್ರಕಾರ ದಿನಾಂಕ 05-11-2016ರಂದು. ಹಾಗಾದರೆ ನನ್ನ ಪ್ರಶ್ನೆಗೆ ತಾವು ದಿನಾಂಕ 25-11-2016 ಉತ್ತರ ಕೊಟ್ಟಿದ್ದೀರಿ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಈ ಸಾಲಿಗೆ ಜಾರಿಗೊಳಿಸಲು ಆಗುವುದಿಲ್ಲ ಎಂದು ಸರಿಯಾಗಿ ಉತ್ತರ ನೀಡಿದ್ದೀರಿ. ಆದರೆ ಮಾನ್ಯ ಸಚಿವರೆ, ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಒತ್ತಡ ತಂದರು ಎಂದು ಸರಿಯಾಗಿ ಪರಿಷ್ಕರಣೆಯಾಗದಿರುವ ಅರೆಬೆಂದ ಪಠ್ಯಪುಸ್ತಕವನ್ನು ಇವತ್ತಿನ ದಿವಸ ಮಕ್ಕಳಿಗೆ ಉಣಬಡಿಸಿದರೆ ನಾಳೆ ಆಗುವಂತಹ ಅನಾಹುತಗಳಿಗೆ ಯಾರು ಕಾರಣರಾಗುತ್ತಾರೆ ಎನ್ನುವ ಬಗ್ಗೆ ನಾವೆಲ್ಲರು ಎಚ್ಚರಿಕೆ ತೆಗೆದುಕೊಳ್ಳಬೇಕಾಗುತ್ತದೆ. ಮನೆಯಲ್ಲಿರುವ ದೀಪ ನನ್ನದು ಎಂದು ಅದನ್ನು ಮುದ್ದಿಸುವುದಕ್ಕಾಗುವುದಿಲ್ಲ ಅದು ಸುಡುತ್ತದೆ. ಆ ಕಾರಣಕ್ಕಾಗಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದೇವೆ. ಅದೇನೇ ಇದ್ದರೂ ನಿಜವಾಗಿಯೂ ಪರಿಷ್ಕರಣಾ ಕಾರ್ಯ ಆರಂಭವಾಗಿರುವುದು ಯಾವಾಗ ಎಂದರೆ ದಿನಾಂಕ 05-11-2016 ರಂದು. ಆಗ terms of references ಕೊಟ್ಟಿದ್ದೀರಿ. ಆಗಲಾದರೂ ಕೊಟ್ಟಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(333)21-3-2017/5.00/ಡಿಎಸ್/ಬಿಎನ್‌ಎಸ್**

**ಶ್ರೀ ಅರುಣ ಶಹಾಪುರ(ಮುಂದು):-**

ಅದಕ್ಕೆ ಮೊದಲು ಕೊಟ್ಟಿರುವುದರ ಬಗ್ಗೆ ಎರಡು ವರ್ಷಗಳ ಕಾಲ ಈ ಸಮಿತಿ ಏನು ಕೆಲಸ ಮಾಡಿತು? ನಾನು ಹೇಳುವುದು ಅಕಸ್ಮಾತ್ ಸರಿ ಇಲ್ಲದಿದ್ದರೆ ಮಾನ್ಯ ಸಚಿವರು ಸರಿ ಮಾಡಲಿ. ನನ್ನ ಮಾಹಿತಿ ಪ್ರಕಾರ ಎರಡು ವರ್ಷದಲ್ಲಿ 45 ಲಕ್ಷ ರೂಪಾಯಿ ಖರ್ಚಾಗಿದೆ. ಈ ರಾಜ್ಯದ ಬಡ ತೆರಿಗೆದಾರರ ಹಣ 45 ಲಕ್ಷ ರೂಪಾಯಿ ಪರಿಷ್ಕರಣೆಗೆ ಖರ್ಚಾಗಿದೆ. ಯಾವುದೇ Terms of Reference ಇರದೆ ಪರಿಷ್ಕರಣೆಯಾಗಿದೆ ಎಂಬುದನ್ನು ನಂಬಬೇಕೆ? ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದ ಸಭೆಯಲ್ಲಿ ಬಹಳ ಸ್ಪಷ್ಟವಾಗಿ ನವೆಂಬರ್ 2016 ಕ್ಕೆ Terms of Reference ಕೊಟ್ಟು ಜನವರಿ 15

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೊಳಗೆ ಎರಡು ತಿಂಗಳಿನಲ್ಲಿ ಪರಿಷ್ಕರಣೆ ಕಾರ್ಯ ಮುಗಿಸಿ ಅವರು Compact Disc (C.D.) ಕೊಡುತ್ತಾರೆಂದರೆ, ಯಾರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ಮಾನ್ಯ ಸಚಿವರು ಆತ್ಮಾವಲೋಕನ ಮಾಡಿಕೊಳ್ಳಲಿ. ಇದನ್ನು ನನಗಾಗಿ ಕೇಳುತ್ತಿಲ್ಲ. ಈ ರಾಜ್ಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಖಂಡಿತ ಇದರಲ್ಲಿ ರಾಜಕಾರಣ ಮಾಡಬೇಕೆನ್ನುವ ವಿಚಾರ ಇಲ್ಲ. ಸರ್ಕಾರ ಕೇಸರೀಕರಣ, ಅಹಿಂದೀಕರಣ, ಕಾಂಗ್ರೆಸ್ಸೀಕರಣ ಮಾಡುತ್ತಿದೆ ಎನ್ನುವ ಆರೋಪ ನಾನು ಮಾಡುತ್ತಿಲ್ಲ. ಕೆಂಪೀಕರಣ ಮಾಡುತ್ತಿದ್ದಾರೆ ಎಂದು ಹೇಳಿಕೆ ಕೊಡುವುದಕ್ಕೂ ನಾನು ಸಿದ್ಧನಿಲ್ಲ. ಆದರೆ ಈ process ನಲ್ಲಿ ಲೋಪದೋಷಗಳು, ತಪ್ಪುಗಳಿವೆ. ಎರಡು ತಿಂಗಳಿನಲ್ಲಿ ಪರಿಷ್ಕರಣೆ ಕಾರ್ಯ ಮುಗಿಸಿದ್ದಾರೆ. ನಾನು ಹಲವಾರು ಸಂಗತಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಮೆಚ್ಚಿಕೊಳ್ಳುತ್ತೇನೆ. ನಾವು ವಿರೋಧ ಪಕ್ಷದವರು ವಿರೋಧ ಮಾಡುತ್ತೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಒಪ್ಪಿಕೊಳ್ಳುವ ಒಳ್ಳೆಯ ಗುಣಗಳಿವೆ. ಅದು ಯಾವುದು ಎಂದರೆ, ಅವರು ಹಿಡಿದಿರುವ ವಿಷಯವನ್ನು ಪಟ್ಟಾಗಿ ಹಿಡಿಯುತ್ತಾರೆ. ಅವರು ನಂಬಿರುವ ತತ್ವ, ಸಿದ್ಧಾಂತಕ್ಕಾಗಿಯೇ ಬೆನ್ನು ಬಿದ್ದು ಅದು ಸರಿಯೋ ತಪ್ಪೋ ಕೆಟ್ಟದ್ದೋ ಮಾಡಿಯೇ ಮಾಡುತ್ತಾರೆ. ಅದರಲ್ಲಿ ಎರಡು ಮಾತಿಲ್ಲ. ಆದರೆ ಅವರು ನಂಬಿರುವವರಿಂದ ಎರಡು ತಿಂಗಳಿನಲ್ಲಿ ಪರಿಷ್ಕರಣೆಯಾಗುತ್ತದೆ ಎನ್ನುವುದನ್ನು ನಂಬಿದ್ದಾರೆ. ಮಾನ್ಯ ಸಚಿವರು ಅದನ್ನು implement ಮಾಡುವುದಕ್ಕೆ ಹೊರಟಿದ್ದಾರೆ. ಈ ರಾಜ್ಯದಲ್ಲಿ ಮಕ್ಕಳ ಸಂಖ್ಯೆ ಎಷ್ಟಿದೆ ಎಂಬುದು ಗೊತ್ತಿದೆಯೇ? ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೂ ಒಂದು ಕೋಟಿ ಒಂದು ಲಕ್ಷ ಜನರು ಇದ್ದಾರೆಂದು ಆರ್ಥಿಕ ಸಮೀಕ್ಷೆ ಹೇಳುತ್ತದೆ. ಆ ಒಂದು ಕೋಟಿ ಒಂದು ಲಕ್ಷ ವಿದ್ಯಾರ್ಥಿಗಳ ಜೊತೆಯಲ್ಲಿ ಇಬ್ಬರು ಪಾಲಕರು ಎಂದರೂ ಕೂಡ ಮೂರು ಕೋಟಿ ಜನರು ಈ ರಾಜ್ಯದಲ್ಲಿ ಆತಂಕದಲ್ಲಿದ್ದಾರೆ. ಈಗಾಗಲೇ ಕರ್ನಾಟಕದ ಶಿಕ್ಷಣ ಗುಣಮಟ್ಟದ ಬಗ್ಗೆ ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಶಿಕ್ಷಣ ಗುಣಮಟ್ಟವನ್ನು ಏರಿಸಬೇಕೆಂದು Central Board for Secondary Education (CBSE) syllabus ತರುತ್ತೇನೆ ಎಂದು ಹೇಳಿದ್ದಾರೆ. ಆದರೆ ಇವತ್ತು ಏನಾಗುತ್ತಿದೆ? ಒಂದು ಕೋಟಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಪಟ್ಟಂತೆ ಎರಡು ತಿಂಗಳಿನಲ್ಲಿ ಕಾಟಾಚಾರದ ಪರಿಷ್ಕರಣೆ ಮಾಡಿದ್ದೇವೆ ಎಂದು ಹೇಳುತ್ತಿರುವುದನ್ನು ಒಪ್ಪಿಕೊಂಡು ಯಾವುದೇ ವರದಿ ಸರ್ಕಾರಕ್ಕೆ ಕೊಡಬೇಕಾಗಿಲ್ಲ, ಪಠ್ಯ ಪುಸ್ತಕ ಕೊಡಬೇಕಾಗಿಲ್ಲ ಎಂದು ಹೇಳಿ ಅದನ್ನೇ ನೇರವಾಗಿ Compact Disc (C.D.) ಗಳನ್ನು ಪ್ರಿಂಟ್ ಹಾಕಿಸಿದರೆ ನಾಳೆ ಅದರಲ್ಲಿ ನುಸುಳುಬಹುದಾಗಿರುವಂತಹ ಲೋಪದೋಷಗಳಿಗೆ, ತಪ್ಪುಗಳಿಗೆ ಯಾರು ಹೊಣೆ ಹೊರುತ್ತಾರೆ? ಆ ಮಕ್ಕಳ ಭವಿಷ್ಯದ ಜೊತೆಗೆ ಈ ಚೆಲ್ಲಾಟ ಸರ್ಕಾರಕ್ಕೆ ಯೋಗ್ಯವೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕಾಗುತ್ತದೆ. ಅವೊತ್ತು ಕೊಟ್ಟಿರುವ ಉತ್ತರದಲ್ಲಿ ಪಠ್ಯ ಪುಸ್ತಕಗಳು ಈ ಕೆಳಗಿನ ಅನುಸಾರ ಇರಬೇಕು. 2005 ರ ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟು, 2007 ರ ಕರ್ನಾಟಕ ಪಠ್ಯ ಕ್ರಮ ಚೌಕಟ್ಟು, the National Council for Educational Research and Training (NCERT) 2014 ರಲ್ಲಿ ಶಿಫಾರಸ್ಸು ಮಾಡಿದ ಪ್ರಾಥಮಿಕ ಶಿಕ್ಷಣದ ಹಂತದವರೆಗಿನ ಕಲಿಕಾ ಸೂಚ್ಯಂಕಗಳು, ಈ ರೀತಿ ಸುಮಾರು ಸಂಗತಿಗಳನ್ನು ಈಗ ಮಾಡಿರುವುದರಲ್ಲಿ ಅಳವಡಿಸಿಕೊಂಡಿಲ್ಲ. ನಾನು ಮಾನ್ಯ ಸಚಿವರಿಗೆ ಒಂದೇ ಒಂದು ಸಂಗತಿಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಸೆಪ್ಟೆಂಬರ್‌ನಲ್ಲಿ ಮೀಟಿಂಗ್ ಮಾಡಿದ ನಂತರ ನೀವು ಮೂರು ಜನ ಅಧಿಕಾರಿಗಳ ಸಮಿತಿಯನ್ನು ಮಾಡಿದ್ದೀರಿ. ಮೂರು ಜನ ಅಧಿಕಾರಿಗಳಲ್ಲಿ ಶ್ರೀ ಜಯಕುಮಾರ್‌ರವರು, ಹಿಂದೆ DSERT ನಿರ್ದೇಶಕರಾಗಿದ್ದರು. ಈಗ ಪಿ.ಯು. ಬೋರ್ಡ್‌ನಲ್ಲಿದ್ದಾರೆ. ಅವರು ಶಿಕ್ಷಣ ತಜ್ಞರು. ಶ್ರೀ ಬೆಳ್ಳಾಶೆಟ್ಟಿ, ಈಗಿನ DSERT ನಿರ್ದೇಶಕರು. ಶ್ರೀ ಜೋರಾಜ್ ಅಬಿನ್ ಅವರು ಶಿಕ್ಷಣ ಅಧಿಕಾರಿಯಾಗಿ ಸಾಕಷ್ಟು ಅನುಭವ ಪಡೆದಿರುವವರು. ಈ ಮೂರು ಜನ ಕೆ.ಎ.ಎಸ್. ಅಧಿಕಾರಿಗಳು. ಇವರು ಮೂಲಭೂತವಾಗಿ ಶಿಕ್ಷಕರು. ಈ ಮೂರು ಜನರ ಕಮಿಟಿಯನ್ನು ಶಿಕ್ಷಣ ಇಲಾಖೆಯೇ ಮಾಡಿದೆ. ಯಾವುದಕ್ಕಾಗಿ? ಈ ಪಠ್ಯ ಪುಸ್ತಕಗಳ ಬಗ್ಗೆ ನಾವು review ಮಾಡಬೇಕಾಗಿರುವ ಕಾರಣಕ್ಕಾಗಿ ಇದನ್ನು ಮಾಡಲಾಗಿದೆ. ರಾಜ್ಯ ಪಠ್ಯ ಪುಸ್ತಕ ಸಂಘದಿಂದ ಪರಿಷ್ಕೃತ ಪಠ್ಯ ಪುಸ್ತಕಗಳ ವಿಶ್ಲೇಷಣೆ ಆಗಬೇಕು. ಹಲವಾರು ಷರತ್ತುಗಳನ್ನು ಮಾಡಿರುವುದಕ್ಕೆ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಮಾಧ್ಯಮಕ್ಕೆ ಹೋಗಿ ಏನು ಹೇಳಿದರು? ಈ ಮೂರು ಜನ ಶಿಕ್ಷಣ ಅಧಿಕಾರಿಗಳಿಂದ ನೀವೇನಾದರೂ ಪರಿಷ್ಕರಣೆ ಮಾಡಿಸಿದರೆ ನಾವು 170 ಜನ ಏನು ಪರಿಷ್ಕರಣಾ ಕಾರ್ಯ ಮಾಡಿದ್ದೇವೆ ನಮಗೆ ಅಪಮಾನ ಆಗುತ್ತದೆ ಎನ್ನುವ ಮಾತನ್ನು ಹೇಳಿ ಈ ಮೂರು ಜನರ ಸಮಿತಿ ಮೂಲಕ ಪರಿಷ್ಕರಣಾ ಕಾರ್ಯದ ಪರಿಶೀಲನೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಅಂತಹ ನಿಗೂಢವಾಗಿ ತರುವ ಪಠ್ಯ ಪುಸ್ತಕಗಳಲ್ಲಿ ಏನಿದೆ ಎನ್ನುವ ಆಸಕ್ತಿ ಸಹಜವಾಗಿ ಇವತ್ತು ರಾಜ್ಯದಲ್ಲಿ ನಿರ್ಮಾಣವಾಗಿದೆ. ಮಾನ್ಯ ಸಚಿವರೆ, ನಾನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ. ನಿಮ್ಮದೇ ಆಗಿರುವಂತಹ ಕೆಲವೊಂದು ವಿಚಾರಗಳನ್ನು ನೀವೇನು ಮುಖ್ಯಮಂತ್ರಿಗಳಿಗೆ ಹೇಳಿದ್ದೀರಿ ಅದು ನನಗೆ ಸಂತೋಷವಾಗುತ್ತದೆ. ನೀವು ಮುಖ್ಯಮಂತ್ರಿಗಳಿಗೆ ಹೇಳಿರುವುದನ್ನು ಸದನದಲ್ಲೂ ಕೂಡ ಹೇಳಬೇಕೆನ್ನುವ ಅಪೇಕ್ಷೆ ನನ್ನದು. ಮಾನ್ಯ ಶಿಕ್ಷಣ ಸಚಿವರು ಎಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆಂದರೆ ಏಕೋ ಅವರು ಮುಖ್ಯಮಂತ್ರಿಗಳು ಒಬ್ಬರೆ ಇದ್ದಾರೆಂದು ಹೇಳಿದ್ದಾರೆಯೋ ಗೊತ್ತಿಲ್ಲ, ಅದು ರೆಕಾರ್ಡ್‌ಗೆ ಹೋಗಿದೆ. ಆ ಸಂಗತಿಯನ್ನು ಗಟ್ಟಿಯಾಗಿ ತರುವುದಕ್ಕೆ ಮುಂದಾಗುತ್ತಿಲ್ಲ. ನೀವು ಮುಖ್ಯಮಂತ್ರಿಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಲಾಜಿಗೆ ಒಳಗಾಗಿದ್ದೀರಾ? ಮುಖ್ಯಮಂತ್ರಿಗಳು ಅವರು ಒಪ್ಪಿಕೊಂಡಿರುವಂತಹ ಬುದ್ಧಿ ಜೀವಿಗಳ ಮುಲಾಜಿಗೆ ಒಳಗಾಗಿದ್ದಾರೆಯೇ? ಈ ರೀತಿ ಮುಲಾಜಿಗೆ ಬಿದ್ದು ಒಂದು ಕೋಟಿ ಜನರ ಜೊತೆ ಚೆಲ್ಲಾಟ ಆಡುತ್ತಿದ್ದೀರಾ? ಇದು ಬಹಳ ದೊಡ್ಡ ಪ್ರಶ್ನೆ ಆಗಿದೆ. 2017–18ನೇ ಶೈಕ್ಷಣಿಕ ಸಾಲಿನಿಂದ ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿ ಮುದ್ರಣ ಪೂರ್ವ ಸಾಮಾಗ್ರಿಗಳನ್ನು ಯಾವುದೇ ವಿಳಂಬವಿಲ್ಲದೆ ಸಕಾಲದಲ್ಲಿ ನೀಡುವುದಾಗಿ ಅಧ್ಯಕ್ಷರು ಪತ್ರ ಕೊಟ್ಟಿರುವುದನ್ನು ತಿಳಿಸಿದರು. ಪಠ್ಯ ವಸ್ತುವನ್ನು ಪರೀಕ್ಷಿಸಲು ಮತ್ತು ಪಠ್ಯ ವಸ್ತುಗಳು NCERT ನಿಗದಿಪಡಿಸಿರುವ ಕಲಿಕಾ ಸಾಮರ್ಥ್ಯಗಳನ್ನು ಸಾಧಿಸಲು ಕನಿಷ್ಠ ಮಟ್ಟ ಹೊಂದಿರುತ್ತದೆ ಎಂದು ಪರಾಮರ್ಶಿಸಲು DSERT ಮತ್ತು ಕರ್ನಾಟಕ ಪಠ್ಯ ಪುಸ್ತಕ ಸಂಘಗಳಿಗೆ ಸಾಮರ್ಥ್ಯ ಇರುವುದಿಲ್ಲ ಎಂಬ ಅಂಶವನ್ನು ಸನ್ಮಾನ್ಯ ಶಿಕ್ಷಣ ಸಚಿವರು ತಿಳಿಸಿದರು. ಆದ್ದರಿಂದ ಸರ್ಕಾರವೂ ಈ ವಿಷಯವನ್ನು ಪರಿಷ್ಕರಣಾ ಸಮಿತಿಯಲ್ಲಿ ಇರದ ಶಿಕ್ಷಣ ತಜ್ಞರ ತಂಡದ ಅಭಿಪ್ರಾಯವನ್ನು ಪಡೆದು ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ. ಎರಡನೆಯದು, ಪರಿಷ್ಕರಣೆಯು ಒಂದು ಬೃಹತ್ ಕಾರ್ಯ ಆಗಿದ್ದು, ಅದನ್ನು ಆಗಾಗ್ಗೆ ನಡೆಸಲಾಗುವುದಿಲ್ಲ ಎಂಬ ಅಂಶವನ್ನು ಒತ್ತಿ ಹೇಳಿದರು. ಆದ್ದರಿಂದ ಹೊಸ ಪುಸ್ತಕಗಳನ್ನು ಅಳವಡಿಸಿಕೊಳ್ಳುವ ಮುನ್ನಾ ಸಾಕಷ್ಟು ಎಚ್ಚರಿಕೆ ವಹಿಸಬೇಕಾಗುತ್ತದೆ. ಹೊಸ ಪುಸ್ತಕಗಳ ಅಳವಡಿಕೆಗಳನ್ನು ಭಾಗಶಃವಾಗಿ ಮತ್ತು ಆತುರದ ರೀತಿಯಲ್ಲಿ ಮಾಡತಕ್ಕದ್ದಲ್ಲ ಎಂದು ಮಾನ್ಯ ಸಚಿವರೇ ಹೇಳಿರುವುದು, ನಾನಲ್ಲ. ಮಾನ್ಯ ಸಚಿವರು ಬಹಳ ಒಳ್ಳೆಯ ನಿಲುವನ್ನು ತೆಗೆದುಕೊಂಡಿದ್ದಾರೆ. ಪಠ್ಯ ಪುಸ್ತಕಗಳ ಪರಿಷ್ಕರಣೆಯೂ ಪರಿಷ್ಕೃತ ಪಠ್ಯ ಕ್ರಮ ಪಠ್ಯ ವಸ್ತುಗಳನ್ನು ಅಳವಡಿಸಿಕೊಳ್ಳಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದನ್ನೂ ಸಹ ಒಳಗೊಂಡಿರುತ್ತವೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಆದ್ದರಿಂದ NCERT ರೂಪಿಸಿರುವ ಕನಿಷ್ಠ ಕಲಿಕಾ ಸಾಧನ ಹಂತಗಳನ್ನು ತರಗತಿಗನುಗುಣವಾಗಿ ಪಠ್ಯ ಪುಸ್ತಕಗಳಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ನಿರಂತರತೆಯನ್ನು ಕಾಯ್ದುಕೊಳ್ಳಬೇಕು. ಹೀಗೆ ಪರಿಷ್ಕರಿಸಿದ ಪಠ್ಯ ಪುಸ್ತಕಗಳನ್ನು ಮಾತ್ರ ಪ್ರಕಟಿಸಬೇಕು. ಮಾನ್ಯ ಶಿಕ್ಷಣ ಸಚಿವರೇ, ಇದೆಲ್ಲಾ ಹೇಳುವಾಗ ಇರುವಂತಹ ಧೈರ್ಯ, ಆದರೆ ಕೊನೆಗೆ ಮುಖ್ಯಮಂತ್ರಿಗಳು ಅದೇನೇ ಇರಲಿ ಪ್ರಿಂಟ್ ಮಾಡಿ ಎಂದು ನಿರ್ಣಯ ಮಾಡಿ ಸಹಿ ಹಾಕಬೇಕಾದರೆ ನೀವು ಏಕೆ ಪ್ರತಿಭಟಿಸಲಿಲ್ಲ ಎನ್ನುವ ಪ್ರಶ್ನೆ ನಮ್ಮದು. ಇವತ್ತು ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವ ಇದೆ. ಅವರಿಗೆ ಯಾವುದೋ ಒಂದು ಹಂತದಲ್ಲಿ ಹೋಗಿ ಒಟ್ಟು ಪ್ರಕ್ರಿಯೆ ಬಗ್ಗೆ ದಾರಿ ತಪ್ಪಿಸುವಂತಹ ಕೆಲಸ ಆಗಿರಬಹುದು. ಆದರೆ ನನಗೆ ಏನು ಅಪೇಕ್ಷೆ ಇತ್ತು ಎಂದರೆ ನೀವು ಮೈಸೂರಿನವರೆ, ನೀವು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಸರ್, ಇದನ್ನು ಮಾಡುವುದರಿಂದ ಈ ರಾಜ್ಯದ ಶಿಕ್ಷಣ ವ್ಯವಸ್ಥೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಸಿದು ಹೋಗುತ್ತದೆ, ಯಾರೋ ನಾಲ್ಕು ಜನರನ್ನು ನಾವು please ಮಾಡುವುದಕ್ಕೆ ಈ ಕೆಲಸ ಮಾಡಿದರೆ ಸರಿಯಾಗುವುದಿಲ್ಲವೆಂದು ಹೇಳಬೇಕಾಗಿತ್ತು. ಅವರಾದರೂ ಎಂತಹ ಕೆಲಸ ಮಾಡಿದ್ದಾರೆಂದರೆ ಎರಡು ವರ್ಷಗಳ ಕಾಲ ಯಾವುದೇ ಕೆಲಸವನ್ನು ಮಾಡದೆ ನವೆಂಬರ್ 5ನೇ ತಾರೀಖು Terms of Reference ಕೊಟ್ಟ ನಂತರ ಜನವರಿ 15 ರೊಳಗಡೆ ಈ ಕೆಲಸ ಮಾಡಿ ಮುಗಿಸುತ್ತಾರೆ. ಮಾನ್ಯ ಶಿಕ್ಷಣ ಸಚಿವರೇ ಎರಡು ತಿಂಗಳಲ್ಲಿ 511 ಪಠ್ಯ ಪುಸ್ತಕಗಳ ಪರಿಷ್ಕರಣೆಯಾಗಿ ಅದರ ಪರಿಶೀಲನೆಯಾಗಿದೆ.

ಮಾನ್ಯ ಸಭಾಪತಿಯವರೆ, ಕೊನೆಯದಾಗಿ ಒಂದು ಸಂಗತಿಯನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಎಲ್ಲಾ ಮಾಧ್ಯಮ ಮಿತ್ರರನ್ನು ಅಭಿನಂದಿಸುತ್ತೇನೆ. ಮಾಧ್ಯಮಗಳು ಕೂಡ ಇದು ಸರಿ ಹೋಗುತ್ತಿಲ್ಲ ಎನ್ನುವ ಮಾತನ್ನು ಬಹಳ ಘಂಟಾಘೋಷವಾಗಿ ಹೇಳಿದರು. 'ಪಠ್ಯ ಪುಸ್ತಕದ ಪ್ರಮಾದ' ಎಂದು ಮಾಧ್ಯಮಗಳು ಬಿಂಬಿಸಿದವು. ಇಷ್ಟೆಲ್ಲಾ ಆದಾಗಲೂ ಕೂಡ ಯಾವುದೇ ಪರಿಷ್ಕರಣೆ ಬೇಡ ಎಂದು ಮಾನ್ಯ ಸಚಿವರು ಹೇಳಬೇಕಾಗಿತ್ತು. ಹಠಮಾರಿ ಧೋರಣೆ ಮಾಡಿ ಪರಿಷ್ಕರಣೆ ಆಗಿರುವುದರ ಬಗ್ಗೆ ಪರಿಶೀಲನೆ ಮಾಡದೆ ಪ್ರಿಂಟ್‌ಗೆ ಕಳುಹಿಸಿದ್ದಾರಲ್ಲಾ? ಕೊನೆಗೆ NCERT ಇವತ್ತು ಈ ದೇಶದಲ್ಲಿ ಏಕರೂಪದ ಶಿಕ್ಷಣ ವ್ಯವಸ್ಥೆ ಬರಬೇಕು ಎನ್ನುವುದರ ಬಗ್ಗೆ National Curriculum Framework ಮಾಡಿರುವಂತಹ NCERT ಸರ್ಕಾರಕ್ಕೆ ಪತ್ರ ಬರೆದು ನೀವು ಪರಿಷ್ಕರಣೆ ಮಾಡಿರುವ ಪಠ್ಯ ಪುಸ್ತಕಗಳ ಕಾಪಿಯನ್ನು ಕಳುಹಿಸಿಕೊಡಿ ಎಂದು ಹೇಳಿ ಎಲ್ಲಾ ಸಂಗತಿಗಳನ್ನು ತರಿಸಿಕೊಂಡಿದೆ. ಮಾನ್ಯ ಶಿಕ್ಷಣ ಸಚಿವರೇ, ತಾವು ಕೂಡ ಉತ್ತರ ಕೊಟ್ಟಿದ್ದೀರಿ. ಇವತ್ತು NCERT ನಿಮಗೆ ಪತ್ರ ಬರೆದು ಪರಿಷ್ಕರಣೆ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿರುವುದು ನಿಜವೆ? ಹೌದು, ದಿನಾಂಕ:6-2-2017 ರಂದು ಪತ್ರ ಬಂದಿದೆ ಎಂದು ಹೇಳಿದ್ದೀರಿ. ನೀವು ಎಲ್ಲಾ ಪಠ್ಯ ಪುಸ್ತಕಗಳನ್ನು ಯಾವಾಗ NCERT ಗೆ ಒಪ್ಪಿಸಿದ್ದೀರಿ? ನೀವೇ ಹೇಳಿರುವ ಪ್ರಕಾರ ದಿನಾಂಕ:9-2-2017 ರಿಂದ 13-2-2017 ರವರೆಗೆ courier ಮೂಲಕ hard copy ಕಳುಹಿಸಿದ್ದೀರಿ. 10-2-2017 ರಂದು hard disc ನಲ್ಲಿ ಪಠ್ಯ ಪುಸ್ತಕಗಳನ್ನು ಒದಗಿಸಿದ್ದೀರಿ. ಒಂದು ಸಲ ನೀವು NCERT ಗೆ ಒಪ್ಪಿಸಿದ ನಂತರ ಇದು NCERT ಪ್ರಕಾರ ಇದೆಯೋ ಇಲ್ಲವೋ? KCERT ಪ್ರಕಾರ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಪರಿಶೀಲನೆ ಆಗುವುದಕ್ಕಿಂತ ಮೊದಲೇ ಮುದ್ರಣಕ್ಕೆ ಹೇಗೆ ಹೋಗುತ್ತೀರಿ? ಪಠ್ಯ ಪುಸ್ತಕಗಳ ಮುದ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಪಠ್ಯ ಪುಸ್ತಕಗಳ ಮುದ್ರಣಕ್ಕೆ ದಿನಾಂಕ:15-2-2017 ರಿಂದ 25-2-2017 ರವರೆಗಿನ ಅವಧಿಯಲ್ಲಿ ಕಾರ್ಯಾದೇಶವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ನೀಡಲಾಗಿರುತ್ತದೆ. ಯಾವ ದಿನಾಂಕಕ್ಕೆ ಕೊನೆಯದಾಗಿ ಕೊಟ್ಟಿದ್ದಾರೆಂದರೆ ಮೊನ್ನೆ 13–3–2017, ಇದರ ನಂತರ ಮತ್ತೊಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಪ್ರಾರಂಭದಲ್ಲಿದೆ. "ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಠ್ಯ ಪುಸ್ತಕಗಳ ಪರಿಷ್ಕರಣಾ ಕಾರ್ಯ ಪ್ರಗತಿಯಲ್ಲಿದೆ. ಪರಿಷ್ಕರಣಾ ಕಾರ್ಯ ಪೂರ್ಣಗೊಂಡಿರುವ 294 ಶೀರ್ಷಿಕೆಗಳ C.D. ಗಳನ್ನು ಮುದ್ರಣ ಕಾರ್ಯಕ್ಕಾಗಿ ಮುದ್ರಕರಿಗೆ ನೀಡಲಾಗಿದೆ. 103 ಶೀರ್ಷಿಕೆಗಳ ಪರಿಷ್ಕರಣಾ ಕಾರ್ಯ ಪ್ರಗತಿಯ ಹಂತದಲ್ಲಿದೆ" ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇನ್ನೂ 103 ಶೀರ್ಷಿಕೆಗಳ ಪರಿಷ್ಕರಣಾ ಕಾರ್ಯ ಪ್ರಗತಿ ಹಂತದಲ್ಲಿದೆ, ಅದನ್ನು ಇನ್ನು ಕೊಟ್ಟಿಲ್ಲ. ಅಂದರೆ ಪರಿಷ್ಕರಣೆ ಕಾರ್ಯವೂ ಮುಗಿದಿಲ್ಲ. ಅದರ ಮಧ್ಯೆದಲ್ಲಿ ಮುದ್ರಣ ಮಾಡಬೇಕೆಂದು ಹೇಳುತ್ತಿದ್ದಾರೆ. ಇದೆಲ್ಲಾ ಏನು ಗೊಂದಲ? ಈ ರಾಜ್ಯದಲ್ಲಿ ಒಂದು ಕೋಟಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಇದೆ. ಯಾರ ಮೇಲೆ ಭವಿಷ್ಯ ನಿರ್ಮಾಣ ಆಗಬೇಕಾಗಿದೆ ಅವರ ವಿಷಯದಲ್ಲೇ ಸರ್ಕಾರ ಇಷ್ಟೊಂದು ಲಘುವಾಗಿ ನಡೆದುಕೊಂಡರೆ ಹೇಗೆ? ನಾನು ಎಲ್ಲೂ content ನಲ್ಲಿ ಅದನ್ನು ಮಾಡಿದ್ದಾರೆ, ಇದನ್ನು ಮಾಡಿದ್ದಾರೆಂದು ಹೇಳುತ್ತಿಲ್ಲ. ಅವರ ದಾಖಲೆಗಳ ಪ್ರಕಾರವೇ ಇಡೀ ಪರಿಷ್ಕರಣೆ ಗೊಂದಲವಾಗಿ ಯಾರನ್ನೋ please ಮಾಡುವ ರೀತಿಯಲ್ಲಿ ನಡೆದಿದೆ. ನನ್ನ ಒಂದೇ ಒಂದು ಆಗ್ರಹವೇನೆಂದರೆ, ಇದಕ್ಕೆ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಎರಡು ವರ್ಷಗಳ ಕಾಲ ಈ ಸಮಿತಿ ಏನು ಮಾಡಿದೆ ಎಂಬುದು ನಿಗೂಢವಾಗಿದೆ. ಇದಕ್ಕೆ ಸದನ ಸಮಿತಿ ಮಾಡಿ ಎಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**(334) 21.03.2017/ 5-10/ ಕೆಹೆಚ್/ಬಿಎನ್ಎಸ್**

**ಶ್ರೀ ಅರುಣ್ ಶಹಾಪುರ (ಮುಂದು):-** ಪರಿಷ್ಕರಣಾ ಕಾರ್ಯದಲ್ಲಿ ಈ ಪ್ರಮಾದ ನಡೆದಿರುವ ಬಗ್ಗೆ ಒಂದು ತನಿಖೆಯಾಗಲಿ ಎನ್ನುವ ಆಗ್ರಹವನ್ನು ಮಾಡುತ್ತಾ, ತಕ್ಷಣಕ್ಕೆ ನೀವು ಜೂನ್‌ನಲ್ಲಿ ಕೊಡಬೇಕೆಂದು ಹೇಳಿದರೆ ನಿಮ್ಮದೇ ನಡವಳಿಯಲ್ಲಿದೆ. ಇನ್ನು ಜಾಸ್ತಿಯಾಗುತ್ತದೆ. ಇನ್ನು ಸಾಕಷ್ಟು ಜನ ಮಾನ್ಯ ಸದಸ್ಯರು ಮಾತನಾಡುವರು. 30 ದಿನಗಳು ತಲುಪಿಸುವುದಕ್ಕೆ ಬೇಕು. ಇದಕ್ಕೆ 120 ದಿನಗಳು ಬೇಕು. ಈ ಹಿನ್ನೆಲೆಯಲ್ಲಿ ನೀವೆ ಎಲ್ಲವನ್ನು ಮಾತನಾಡಿದ್ದೀರಿ. ಆ ಹಿನ್ನಲೆಯಲ್ಲಿ ಜೂನ್‌ನಲ್ಲಾದರೂ ಮಕ್ಕಳಿಗೆ ಪಠ್ಯಪುಸ್ತಕಗಳು ತಲುಪುತ್ತದೆಯೇ? ಎಂದು ನಾನು ಕೇಳುತ್ತಿರುವುದು. ಲೋಪದೋಷಗಳೊಂದಿಗೆ ಈ ಮುಂದಿನ ಒಂದು ವರ್ಷ ಮಕ್ಕಳು ಓದಬೇಕು. ಪ್ರಜಾವಾಣಿಯ ಮಿತ್ರರೊಬ್ಬರು ನನ್ನ ಜೊತೆ ಮತ್ತು ಪರಿಷ್ಕರಣಾ ಸಮಿತಿಯ ಅಧ್ಯಕ್ಷರೊಡನೆ ಒಂದು ಸಂದರ್ಶನವನ್ನು ಮಾಡಿದರು. ಪತ್ರಕರ್ತರು ಹೇಳಿರುವಂತಹ ಸಂದರ್ಭದಲ್ಲಿ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಾರೆ. ನಾನು ಯಾವುದೇ ರೀತಿಯ ಹಸ್ತಕ್ಷೇಪ ಮಾಡಿಲ್ಲ. ಯಾವುದೇ ನನ್ನ ವಿಚಾರವನ್ನು ಇದರಲ್ಲಿ ನುಸಳಂತೆ ನೋಡಿಕೊಂಡಿದ್ದೇನೆಂದು ಹೇಳುತ್ತಾರೆ. ಅದೇ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು 5ನೇಯ ಪ್ರಶ್ನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಜನಸಂಘಕ್ಕೆ ಒಬ್ಬರು ಸಾಹಿತಿಗಳು ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಅವರ ಕವನ ಬಂದಿರಲಿಲ್ಲ. ಅವರ ಕವನ ಬರುವ ಹಾಗೆ ಮಾಡಿದ್ದೇನೆಂದು ಹೇಳಿದರು. ಹಸ್ತಕ್ಷೇಪ ಮಾಡದೇ ಇರುವುದು ನಿಜನೋ ಅಥವಾ ಯಾರದೋ ಕವನ ಬರುವ ಹಾಗೆ ಮಾಡಿರುವುದು ನಿಜನೋ? ಇದರಲ್ಲಿ ಯಾವುದು ಸತ್ಯ ಎಂಬುದು ದ್ವಂದ್ವವಾಗಿದೆ. ಎರಡನೆಯ ಸಂಗತಿ ಅವರು ಕೇಳುತ್ತಾರೆ. ಹಾಗಾದರೆ ಪರಿಷ್ಕರಣೆ ಎಷ್ಟು ಪ್ರಮಾಣದಲ್ಲಿ ಆಗಿದೆಯೆಂದು ಕೇಳುತ್ತಾರೆ. ಪರಿಷ್ಕರಣೆ ಶೇಕಡಾ 15 ರಷ್ಟು ಆಗಿರಬಹುದು. ಅದಕ್ಕಿಂತ ಆಚೆಗೆ ಹಾಗಿಲ್ಲವೆಂದು ಹೇಳುತ್ತಾರೆ. ಪಠ್ಯಪುಸ್ತಕದ review ನಲ್ಲಿ ಈ ರೀತಿಯಲ್ಲಿ value ಮಾಡುವುದು. ಶಿಕ್ಷಣ ತಜ್ಞತೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಅವರು ಮಾತನಾಡುವುದರ ಮೇಲೆ ಅರ್ಥವಾಗುತ್ತದೆ. ಅವರು ಅದರ ಜೊತೆಗೆ ಕೊನೆಗೆ ಪರಿಷ್ಕರಣೆ ಮಾಡಿರುವುದರಲ್ಲಿ ಯಾವುದೇ ಲೋಪದೋಷಗಳು ಇಲ್ಲವೇ? ಎಂದು ಪ್ರಶ್ನೆಯನ್ನು ಕೇಳುತ್ತಾರೆ. ಆ ಸಂಧರ್ಭದಲ್ಲಿ ನಾನು ಮಾಡಿರುವ ಕಾರ್ಯ perfect ಆಗಿದೆಯೆಂದು ಹೇಳುತ್ತಿದ್ದೆ. ತಪ್ಪು ಆಗದೇ ಇರುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಅವರು ಬಹಳ ಆತ್ಮವಿಶ್ವಾಸದಿಂದ ಹೇಳುತ್ತಾರೆ. ಶೇಕಡಾ 5 ರಷ್ಟು ಲೋಪದೋಷಗಳು ಸಹಜ. ಹಾಗಾದರೆ ಏನು ಮಾಡಬೇಕೆಂದು ಅವರು ಕೇಳುತ್ತಾರೆ. ಅದಕ್ಕೆ ಅವರು ಮುಂದುವರೆದು ಅದನ್ನು ಮತ್ತೆ ಪರಿಷ್ಕರಣೆ ಮಾಡಿದರೆ ಆಯಿತೆಂದು ಹೇಳುತ್ತಾರೆ. ಸನ್ಮಾನ್ಯ ಶಿಕ್ಷಣ ಸಚಿವರಿಗೆ ನೀವೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೀರಿ. ಪರಿಷ್ಕರಣಾ ಕಾರ್ಯ ಸಣ್ಣ ಕಾರ್ಯವಲ್ಲ. ಅದು ಬಹಳ ದೊಡ್ಡ ಕಾರ್ಯ. ಅದನ್ನು ಮಾಡಬೇಕಾದರೆ ಬಹಳಷ್ಟು procedures ಇದೆ. ಆದರೆ ನಿಮ್ಮ ಪರಿಷ್ಕರಣಾ ಸಮಿತಿಯ ಅಧ್ಯಕ್ಷರಿಗೆ ಏನು ಅನಿಸಿದೆ. ಪರಿಷ್ಕರಣೆಯಲ್ಲಿ ಶೇಕಡಾ 5 ರಷ್ಟು ಲೋಪದೋಷಗಳು ಸಹಜ. ಇನ್ನೊಂದು ಪರಿಷ್ಕರಣಾ ಸಮಿತಿಯನ್ನು ಮಾಡಿ ಅದರಲ್ಲಿ ಲೋಪದೋಷಗಳನ್ನು ತಿದ್ದಿಸಬೇಕೆಂದು ಹೇಳಿದರೆ, ಈಗ ಈ ಪರಿಷ್ಕರಣಾ ಸಮಿತಿಯನ್ನು ಮಾಡಿರುವುದು ಏನು? ಈ ರಾಜ್ಯದ ನಲವತ್ತೈದು ಲಕ್ಷ ರೂಪಾಯಿಗಳಷ್ಟು ಹಣ ಈ ಪರಿಷ್ಕರಣಾ ಸಮಿತಿಗೆ ವ್ಯಯ ಮಾಡಿದೆಯೆಂದು ಹೇಳಿದರೆ, ಸನ್ಮಾನ್ಯ ಶಿಕ್ಷಣ ಸಚಿವರೆ, ಸದನ ಸಮಿತಿಯನ್ನು ಮಾಡಿ, ಏನೇನು ನಡೆದಿದೆ ಎಂಬುದರ ಬಗ್ಗೆ ತನಿಖೆ ಮಾಡಿ, ಇವತ್ತೇನು ಪ್ರಮಾದ ಮತ್ತು ಲೋಪದೋಷಗಳಾಗಿದೆ. ಅದಕ್ಕೆ responsibility fix ಮಾಡುವಂತಹ ಕೆಲಸವಾಗಬೇಕು. ಈ ರಾಜ್ಯದ ಒಂದು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ಮುಂದಿನ ಒಂದು ವರ್ಷದ ಕಾಲ ಶೈಕ್ಷಣಿಕವಾಗಿ ಲೋಪದೋಷಗಳಾಗಬಾರದು. ಕೊನೆಯದಾಗಿ ಒಂದು ಅಂಶದ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ತಾವು ಸಹ ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸಿದ್ದೀರಿ. ಈ ಹಿಂದೆ ಇದ್ದ ಶಿಕ್ಷಣ ಸಚಿವರು 2012ರಲ್ಲಿ ಪಿ.ಯು. ಹಂತದಲ್ಲಿ Central Board of Secondary Education (CBSE) syllabus ಅನ್ನು ಯಥಾವತ್ತಾಗಿ ಅಳವಡಿಕೆ ಬಗ್ಗೆ ಚರ್ಚೆಯಾಯಿತು. ಇಡೀ ಶಿಕ್ಷಕರು ಹೇಳಿದರು. ಒಂದೇ ಸಲಕ್ಕೆ ನೀವು CBSE syllabus introduce ಮಾಡಿದರೆ ಬಹಳ ತೊಂದರೆಯಾಗುತ್ತದೆ. ಮೊದಲು blow up syllabus ಮಾಡಿ. ಆದಾದನಂತರ ಎರಡನೇ ಹಂತದಲ್ಲಿ ಯಥಾವತ್ತಾಗಿ ಜಾರಿಗೆ ಕ್ರಮ ಕೈಗೊಳ್ಳಬೇಕು. ಪಿ.ಯು. ಹಂತದ ಶಿಕ್ಷಕರ ಬಗ್ಗೆ ನಿರ್ಣಯ ಮಾಡಬೇಕಾದರೆ blow up syllabus ಮಾಡಿ ಮಾಡಿದರು. ಆದರೆ 9ನೇ ತರಗತಿಗೆ ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ನೇರವಾಗಿ CBSE ಯನ್ನು ಅನುವಾದ ಮಾಡಿ ಅಳವಡಿಸುವಂತಹ ಕೆಲಸ ಮಾಡುತ್ತಿದ್ದೀರಿ. ಇವತ್ತು ಈ ರಾಜ್ಯದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಎರಡು ಲಕ್ಷದ ತೊಂಭತ್ತೊಂಬತ್ತು ಸಾವಿರ ಜನ ಶಿಕ್ಷಕರು ಇದ್ದಾರೆ. ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆ ಒಂದೇ ಬಾರಿಗೆ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಿದರೆ ಶಿಕ್ಷಕರಿಗೆ ತರಬೇತಿ ಆಗಬೇಕಾಗಿಲ್ಲವೇ? ಸನ್ಮಾನ್ಯ ಶಿಕ್ಷಣ ಸಚಿವರೆ ಅದರ ಬಗ್ಗೆ ನಿಮಗೆ ಅರಿವಿತ್ತು. ಅದಕ್ಕೆ ನೀವು ಅದನ್ನು ಒಪ್ಪಲಿಲ್ಲ. ಆದರೆ ಪಠ್ಯಪುಸ್ತಕಗಳ ಬದಲಾವಣೆ ಮಾಡಿ ನೀವು ಆ ಶಿಕ್ಷಕರಿಗೆ ತರಬೇತಿಯನ್ನು ಕೊಡುತ್ತಿದ್ದೀರಿ. ಈಗಾಗಲೇ ಎಸ್.ಎಸ್.ಎಲ್.ಸಿ.ಗೆ ರಚನಾ ತರಬೇತಿಯೆಂದು ಕೊಡುತ್ತಿದ್ದಾರೆ. ಎಸ್.ಎಸ್.ಎಲ್.ಸಿ. ಪಠ್ಯಪುಸ್ತಕಗಳು ಬದಲಾವಣೆಯಾಗಿ ಸುಮಾರು ಮೂರು ವರ್ಷಗಳಾಯಿತು. ರಚನಾ ತರಬೇತಿಯೆಂದು ಕೊಡುತ್ತೀರಿ ಅದೇ ಇನ್ನು ಮುಗಿದಿಲ್ಲ. ಮೊನ್ನೆಯ ದಿವಸ ಜನವರಿ ತಿಂಗಳಿನಲ್ಲಿ ಹೋಗಿದ್ದಾಗ ಶಿಕ್ಷಕರು ತರಬೇತಿ ನಡೆಯುತ್ತಿದೆಂದು ಹೇಳಿದರು. ಆ ತರಬೇತಿ ಇನ್ನೂ ಪೂರ್ಣಗೊಂಡಿಲ್ಲ. ಆದರೆ ಮತ್ತೊಂದು ತರಬೇತಿಗೆ ತಯಾರಾಗಬೇಕಾದ ದುಃಸ್ಥಿತಿ ಬಂದಿದೆ. ಈ ಹಿನ್ನಲೆಯಲ್ಲಿ ಸರ್ಕಾರದ ಒಟ್ಟು ಈ ಪಠ್ಯಪುಸ್ತಕದ ಪರಿಷ್ಕರಣೆಯ ಬಗ್ಗೆ ಏನು ಗೊಂದಲವಾಗಿದೆ. ಈ ಗೊಂದಲಕ್ಕೆ ಕಾರಣಭೂತಿರಾದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ವಿದ್ಯಾರ್ಥಿಗಳು suffer ಆಗುವ ಸ್ಥಿತಿ ನಿರ್ಮಾಣವಾಗಿದೆ. ಅವರಿಗೆ responsibility fix ಮಾಡಬೇಕು. ಒಂದು ಸದನ ಸಮಿತಿಯ ಮೂಲಕ ಇವೆಲ್ಲವನ್ನೂ ತನಿಖೆ ಮಾಡಿಯೆಂದು ಆಗ್ರಹ ಮಾಡುತ್ತಾ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಸವಿಸ್ತಾರವಾಗಿ ಹಿರಿಯರಾದ ಶ್ರೀ ರಾಮಚಂದ್ರಗೌಡರು ಮತ್ತು ಶ್ರೀ ಅರುಣ ಶಹಾಪುರ ರವರು ಮಾತನಾಡಿದ್ದಾರೆ. ನಾನು ಎರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಿನ ಕಾಲದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಕ್ಕಳಿಗೆ ಪರೀಕ್ಷೆಯೆಂದರೆ ತಂದೆ-ತಾಯಿಗಳಿಗೆ ಮತ್ತೆ ಶಾಲೆಗೆ ಹೋಗಿ ಬಂದ ಅನುಭವವಾಗುತ್ತದೆ. ಏಕೆಂದರೆ ನಾವೆಲ್ಲ ಓದಬೇಕಾದರೆ ಮತ್ತು ಪರೀಕ್ಷೆ ಬರೆಯಬೇಕಾದರೆ ನನ್ನ ತಂದೆ-ತಾಯಿ ಹೇಳಿಕೊಟ್ಟಿರುವ ನೆನಪೇ ಇಲ್ಲ. ನಾವೆಲ್ಲ school ಮತ್ತು tuition ಬಿಟ್ಟರೆ ಅದನ್ನೆ ಪರೀಕ್ಷೆಗಳಲ್ಲಿ ಬರೆಯುತ್ತಿದ್ದೀವಿ. ಆದರೆ ಈಗಿನ ಕಾಲದಲ್ಲಿ ಮಕ್ಕಳಿಗೆ ಪರೀಕ್ಷೆಗಳೆಂದರೆ ತಂದೆ-ತಾಯಿಗಳಿಗೆ ಪರೀಕ್ಷೆಗಳು ಇದ್ದಂತಹ ಅನುಭವವಾಗುತ್ತದೆ. ಈಗ ನಮ್ಮ ಮನೆಯಲ್ಲೆ ನನ್ನ ಅಣ್ಣನ ಮಕ್ಕಳಿಗೆ ಪರೀಕ್ಷೆಗಳು ನಡೆಯುತ್ತಿವೆ. ಆದರೆ ನಮ್ಮ ಅತ್ತಿಗೆ ಆ ಮಕ್ಕಳು ಬಂದ ತಕ್ಷಣ ಪಾಠ ಹೇಳಿಕೊಡುವುದಕ್ಕೆ ಶುರು ಮಾಡುತ್ತಾರೆ. ನನ್ನ ಅಣ್ಣ ಕೆಲಸದಿಂದ ಬಂದ ತಕ್ಷಣ ಮತ್ತೆ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ಶುರು ಮಾಡುತ್ತಾರೆ. ಈಗಿನ ಕಾಲದಲ್ಲಿ ಮಕ್ಕಳಿಗೆ ಪರೀಕ್ಷೆಗಳು ಏನು ನಡೆಯುತ್ತಿದೆ. ಇದರಿಂದ ತಂದೆ-ತಾಯಿಗಳು ಮತ್ತೆ students ಗಳಾಗುತ್ತಿದ್ದಾರೆ. ಈ ವಿಷಯವೆಲ್ಲ ನಮ್ಮ ಅರಿವಿಗೆ ಬಂದಿದೆ. ಈಗ ಪಠ್ಯಪುಸ್ತಕಗಳಲ್ಲಿ ಸಣ್ಣ-ಪುಣ್ಣ ಬದಲಾವಣೆಗಳಾದರೂ ಕೂಡ, ಅದು ಪಾಲಕರ ಅನುಭವಕ್ಕೆ ಮತ್ತು ಅವರ ಗಮನಕ್ಕೆ ಬರುತ್ತದೆ. ಅಷ್ಟೊಂದು ಜಾಗೃತಿ ನಮ್ಮ ಮಕ್ಕಳ ತಂದೆ-ತಾಯಿಗಳಿಗೆ ಇದೆ. ಪತ್ರಿಕೆಯಲ್ಲಿ ಬಂದಿರುವ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಪಠ್ಯಪುಸ್ತಕಗಳ ಉದಾಹರಣೆಗಳನ್ನು ಯಾವ ಕಾರಣಕ್ಕೆ ಕೊಡುತ್ತಾರೆ. ಇದನ್ನು ಓದಿ ಪ್ರಯೋಗ ಮಾಡಿ ಮಕ್ಕಳು ಕಲಿಯಲಿ ಎಂದು ಕೊಟ್ಟಿದ್ದಾರೆ. ಆದರೆ ನವದೆಹಲಿಯ ಶಾಲೆಯ 4ನೇ ತರಗತಿಯ ಪರಿಸರ ಅಧ್ಯಯನ ಪುಸ್ತಕದಲ್ಲಿ ಕೊಟ್ಟಿರುವ ಉದಾಹರಣೆ ಗಮನಿಸಿದರೆ ಹೌಹಾರುತ್ತೀರಿ. ಅದು ಈ ರೀತಿಯಲ್ಲಿದೆ. ಎರಡು ಮರದ ಪೆಟ್ಟಿಗೆಗಳನ್ನು ತೆಗೆದುಕೊಂಡು ಅದರಲ್ಲಿ ಒಂದಕ್ಕೆ ಚಿಕ್ಕ ರಂಧ್ರವನ್ನು ಕೊರೆಯಿರಿ. ಮತ್ತೊಂದಕ್ಕೆ ಯಾವುದೇ ರಂಧ್ರವನ್ನು ಕೊರೆಯದೆ ಹಾಗೆಯೇ ಬಿಡಿ. ಬಳಿಕ ಎರಡು ಪೆಟ್ಟಿಗೆಗಳಲ್ಲಿ ಒಂದೊಂದು ಬೆಕ್ಕಿನ ಮರಿಯನ್ನು ಇರಿಸಿ. ಅವುಗಳ ಮುಚ್ಚಳವನ್ನು ಮುಚ್ಚಿ. ಕೆಳಗಂಟೆಗಳ ಬಳಿಕ ಪೆಟ್ಟಿಗೆಯ ಮುಚ್ಚಳವನ್ನು ತೆಗೆಯಿರಿ. ಆ ರಂಧ್ರ ಕೊರೆದಿರುವ ಪೆಟ್ಟಿಗೆಯಲ್ಲಿನ ಬೆಕ್ಕಿನ ಮರಿ ಜೀವಂತವಾಗಿರುತ್ತದೆ. ಮತ್ತೊಂದು ಪೆಟ್ಟಿಗೆಯಲ್ಲಿನ ಬೆಕ್ಕಿನ ಮರಿ ಸತ್ತು ಹೋಗಿರುತ್ತದೆ. ಇದು ಗಾಳಿಯ ಅವಶ್ಯಕತೆಯನ್ನು ಈ ರೀತಿಯಲ್ಲಿ ಉದಾಹರಣೆ ಸಹಿತ ವಿವರಿಸಿದ್ದಾರೆ. ಸದ್ಯ ಈ ಉದಾಹರಣೆ ವಿವಾದಕ್ಕೆ ಕಾರಣವಾಗಿದ್ದು, ಮಕ್ಕಳ ಪೋಷಕರೊಬ್ಬರು ಕೆಲವು ತಿಂಗಳ ಹಿಂದೆ ದೂರು ನೀಡಿ, ಈ ಪುಸ್ತಕದಲ್ಲಿನ ಈ ಸಾಲುಗಳನ್ನು ತೆಗೆಯಿರಿ ಎಂದು ತೀವ್ರ ಹೋರಾಟ ಮಾಡಿದ್ದಕ್ಕೆ, ಈ ಸಾಲುಗಳು ಟೀಕೆಯಾದ ಕಾರಣಕ್ಕೆ ಈ ಪಠ್ಯವನ್ನು ಈ ಪುಸ್ತಕದಿಂದ ತೆಗೆದು ಹಾಕಲಾಗಿದೆಂಬ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ನಾನು ಹೇಳುವುದು ಇಂತಹ ಅರ್ಥ ಮತ್ತು ಅನರ್ಥಗಳನ್ನು ಹುಡುಕಿ ಸರಿ-ತಪ್ಪು ಯಾವುದೆಂದು ಹೇಳಿ ಈಗ ಪಾಲಕರು ಹೇಳುವ ಸ್ಥಾನಕ್ಕೆ ಬಂದಿದ್ದಾರೆ. ಪಾಲಕರು ಅಷ್ಟು ಜಾಗೃತರಾಗಿದ್ದಾರೆ. ಆದ್ದರಿಂದ ಒಂದನೇ ತರಗತಿಯಿಂದ ಹತ್ತನೇ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಗತಿಯವರೆ ಅಷ್ಟು ಮಕ್ಕಳ ಪಾಠವನ್ನು ಪರಿಷ್ಕರಣೆ ಅಥವಾ ಪುನರ್‌ರಚನೆ ಮಾಡಿದ್ದೀರಲ್ಲವೇ? ನಿಜವಾಗಿಯೂ ಇದು ಮಕ್ಕಳಿಗೆ ಅವರ ಭವಿಷ್ಯದ ಜೊತೆ ಆಟವಾಡುತ್ತಿರುವುದು ಅಷ್ಟೇ ಅಲ್ಲ. ಅವರ ತಂದೆ–ತಾಯಂದಿರಿಗೂ ಕೂಡ free ಆಗಿ Blood Pressure ಮತ್ತು Diabetes ಅನ್ನು ತಂದುಕೊಡುತ್ತೀರಿ ಮತ್ತು ಅವರನ್ನು ಕಾಯಿಲೆಯವರನ್ನಾಗಿ ಮಾಡುತ್ತೀರಿ. ಶ್ರೀ ರಮೇಶ್‌ಕುಮಾರ್‌ರವರು ಮತ್ತೆ ಮಾತನಾಡುವ ಹಾಗೆ ನೀವು ಮಾಡುತ್ತೀರೆಂಬುದು ನನ್ನ ಅನಿಸಿಕೆ. ನಮಗೆ ಗೊತ್ತಿರುವ ಹ್ಹಾಗೆ ಮತ್ತು ಪತ್ರಿಕೆಗಳಲ್ಲಿ ಓದಿರುವ ಹಾಗೆ ಹತ್ತನೇ ತರಗತಿಯಲ್ಲಿ ಭೂಗೋಳ ಪುಸ್ತಕದಲ್ಲಿ ನಮ್ಮ ದೇಶ ಭಾರತ, ಮಾತೃ ಭೂಮಿ ಭಾರತ ಎನ್ನುವ ಪಾಠದಲ್ಲಿ ಮಾತೃ ಭೂಮಿ ಎಂದು ತೆಗೆದುಹಾಕಿ ಬರೀ ಭೂಮಿ ಎನ್ನುವುದನ್ನು ಸೇರಿಸಿದ್ದೀರಿ. ಈ ಮಾತೃ ಎಂಬ ಪದ ನಿಮಗೆ ಏನು ಕಷ್ಟ ಕೊಟ್ಟಿದೆಂದು ನನಗೆ ಅರ್ಥವಾಗುತ್ತಿಲ್ಲ. ಮಾತೃ ಎಂದರೆ ತಾಯಿ, ಮಾತಾ ಎಂದರೆ ತಾಯಿ, ಭಾರತ ಮಾತಾ ಎಂದು ಹೇಳುತ್ತೇವೆ. ಭಾರತ ಮಾತೆಗೆ ಜೈ ಎಂದು ಹೇಳುತ್ತೇವೆ. ಮಾತಾವನ್ನು ತೆಗೆದುಹಾಕಿ ಇನ್ನು ಮುಂದೆ ಭಾರತ ಜೈ ಎಂದು ಹೇಳುವುದೇ? ಮಾತೆ ನಮ್ಮನ್ನೆಲ್ಲರನ್ನು ಹೆತ್ತವಳು ತಾಯಿ, ಮಾತೃ ಎಂಬ ಪದದಲ್ಲಿ ನಿಮಗೆ ಏನು ಸಂಶಯ ಬಂದಿದೆಂಬ ಬಗ್ಗೆ ನನಗೆ ಇನ್ನು ಅರ್ಥವಾಗದೆ ಇರುವಂತಹ ವಿಷಯವಾಗಿದೆ. ಇನ್ನು ಮುಂದೆ ಹೋಗಿ ಸಿಂಧು ಕೊಳ್ಳದ ನಾಗರೀಕತೆ ಭರತ ಸಾಮ್ರಾಟನಿಂದ ಭಾರತ ದೇಶವಾಯಿತು ಎನ್ನುವುದನ್ನು ತೆಗೆದು ಹಾಕಿ ರಾಷ್ಟ್ರೀಯ ಭಾವನೆಗಳನ್ನು ಅರಳದಂತೆ ಮಾಡುವುದು. ಇದರಲ್ಲಿ ಕೇಸರಿಕರಣ ಎನ್ನುವ ಬಣ್ಣ ಕಟ್ಟುವುದು. ಮಾನ್ಯ ಸಭಾಪತಿಯವರೆ, ಕೇಸರಿಕರಣ ಎಂದರೆ ಏನು? ಇದು ಭಾರತ ದೇಶವೆಂದು ಹೇಗೆ ಆಯಿತು? ಹೇಗೆ ಆ ಹೆಸರು ಬಂದಿತು. ಮಾತೃ ಭೂಮಿ ಎಂದರೆ ಕೇಸರಿಕರಣ ಹೇಗೆ ಆಯಿತು. ನಾಳೆ ಕೇಸರಿಬಾತ್‌ಗೂ ಕೇಸರಿಯನ್ನು ತೆಗೆದುಹಾಕಿ ಬರೀ ಬಾತ್ ಎಂದು ಇಡಿ. ಮಾನ್ಯ ಸಭಾಪತಿಯವರೆ, ಕೇಸರಿ ಎಂದು ಇದೆ ಎಲ್ಲರೂ ಆ ರೀತಿ ಹೇಳುತ್ತಾರೆ ಏನೋ?

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಶ್ರೀ ಉಗ್ರಪ್ಪನವರು ಕೇಸರಿ ಬಣ್ಣವನ್ನು ಹಾಕಿಕೊಂಡಿದ್ದಾರೆ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರು ಅವರ ಮನಸ್ಸಿನಲ್ಲಿ ಏನಿದೆ ಆ ಬಣ್ಣ ಹಾಕುತ್ತಾರೆ. ಅವರು ಮನಸ್ಸಿನಲ್ಲಿ ಇರುವುದನ್ನು ತೋರಿಸುತ್ತಾರೆ. ಆದ್ದರಿಂದ ಶ್ರೀ ಉಗ್ರಪ್ಪನವರ ಬಗ್ಗೆ ನನಗೆ ಮೆಚ್ಚಿಗೆಯಿದೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಟ್ಟೆಯ ವಿಚಾರದಲ್ಲಿ ಏನು ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನನಗೆ VIBGYOR ಎಂದು ಏನು ಬಣ್ಣಗಳಿವೆ. ಅದರಲ್ಲಿ ಯಾರಿಗಾದರೂ ಒಬ್ಬೊಬ್ಬರಿಗೆ ಬಣ್ಣಗಳನ್ನು ಹಂಚಿಕೆ ಮಾಡಿದ್ದಾರಾ? ಯಾರಾದರೂ ಸ್ವತ್ತಾ? Patent rights ಏನಾದರೂ ಇದೆಯೇ? ಅವರವರಿಗೆ ಯಾವಾವುದೇ . . .

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರೆ ಎರಡು ನಿಮಿಷ ನಾನು ಮುಗಿಸಿಬಿಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಹೆಸರನ್ನು ಹೇಳಿದ ಮೇಲೆ ನಾನು ಉತ್ತರವನ್ನು ಕೊಡದೆ ಇದ್ದರೆ ಹೇಗೆ?

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರ ಹೆಸರನ್ನು ತೆಗೆದುಕೊಂಡಿದ್ದೆ ನನ್ನ ತಪ್ಪು. ದಯವಿಟ್ಟು ನನ್ನನ್ನು ಕ್ಷಮಿಸಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದು ಮೊದಲು ಇರಬೇಕಾಗಿತ್ತು. ದೀರ್ಘದಂಡ ನಮಸ್ಕಾರ ಮಾಡಬೇಕು. ದೀರ್ಘದಂಡ ನಮಸ್ಕಾರ ಮಾಡಿದರೆ ಏನಾದರೂ ಮಾಡಬಹುದು.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೆ, ಶ್ರೀ ಉಗ್ರಪ್ಪನವರ ಬಟ್ಟೆಯ ಬಣ್ಣವನ್ನು ಹೇಳಿದೆ ಅಷ್ಟೆ. ನಾನು ನಿಮ್ಮ ಬಗ್ಗೆ ಹೇಳಿಲ್ಲ. ನಾನು ಯಾರ ವೈಯಕ್ತಿಕ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ನನಗಿರುವ ಕೆಲವು ಸಂದೇಹಗಳನ್ನು ಹೇಳಿಬಿಡುತ್ತೇನೆ.

**ಉಪ ಸಭಾಪತಿಯವರು:–** ಬಣ್ಣದ ಬಗ್ಗೆ ಶ್ರೀ ರಾಮಚಂದ್ರಗೌಡರು ಹೇಳಿದ್ದು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಬಹಳ ತಪ್ಪು ಗ್ರಹಿಕೆಯಿದೆ. ಯಾವ ಬಣ್ಣ ಯಾರ ಸ್ವತ್ತು ಅಲ್ಲ.

**ಉಪ ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ ಕುಳಿತುಕೊಳ್ಳಿ.

**ಶ್ರೀಮತಿ ತಾರಾಅನೂರಾಧ:–** ಮಾನ್ಯ ಸಭಾಪತಿಯವರೆ, ನನಗಿರುವ ಎರಡು ಸಂದೇಹಗಳನ್ನು ಹೇಳಿಬಿಡುತ್ತೇನೆ. ಆಗಲೇ ಇದರ ಬಗ್ಗೆ ಕೇಳಿದ್ದೆ. ಹಿಂದೆ Karnataka Textbook Society (KTBS) ತೆಗೆದುಕೊಂಡ ತೀರ್ಮಾನವನ್ನು ರದ್ದುಪಡಿಸಿದ್ದು ಯಾರು? ಯಾವಾಗ? ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭೆಯಲ್ಲಿ? ಸನ್ಮಾನ್ಯ ಮುಖ್ಯಮಂತ್ರಿಗಳು Karnataka Textbook Society ಯ ಅಧ್ಯಕ್ಷತೆಯನ್ನು ಆಕಸ್ಮಾತಾಗಿ ವಹಿಸಿದ್ದರೆ, ಆ ರೀತಿಯಲ್ಲಿ ಅಧ್ಯಕ್ಷತೆಯನ್ನು ವಹಿಸಬಹುದೇ? ಇದು ನನ್ನ ಸಂದೇಹ.

**335/21-03-2017/5-20/bkp-gr**

**ಶ್ರೀಮತಿ ತಾರಾಅನೂರಾಧ(ಮುಂದು)**

ಪರಿಷ್ಕರಣಾ ಸಮಿತಿಯ ಅಧ್ಯಕ್ಷರು, KTBS (Karnataka Text Book Society) ಸಭೆಗೆ ಸದಸ್ಯರೆ? ಇದು ನನ್ನ ಸಂದೇಹ. ಪಠ್ಯಪುಸ್ತಕ ವಿಚಾರದಲ್ಲಿ ಯಾರ ತೀರ್ಮಾನ ಅಂತಿಮ ಎನ್ನುವುದು ಮತ್ತೊಂದು ಸಂದೇಹ. ಮತ್ತೆ, ಅಂದು ಕೇಳಿದ ಹಾಗೆ ಆರ್‌ಟಿಇ ಕಾನೂನು ಪ್ರಕಾರ ಹಾಗೂ ಕರ್ನಾಟಕ ಶಿಕ್ಷಣ ಕಾಯಿದೆಯ ಪ್ರಕಾರ ಕರ್ನಾಟಕದಲ್ಲಿ ಇದರ ಕುರಿತು ಇರುವ ವ್ಯವಸ್ಥೆಗಳು ಏನು? ಈ ರೀತಿಯಲ್ಲಿ ಕೇಂದ್ರದ ಹೊಸ ನೀತಿ ಬಂದಾಗ ನೀವು ಮತ್ತೆ ಪಠ್ಯಪುಸ್ತಕಗಳನ್ನು reprint ಮಾಡುತ್ತೀರಾ ಎಂದು ಮಾನ್ಯ ಶ್ರೀ ರಾಮಚಂದ್ರಗೌಡರವರು ಚೆನ್ನಾಗಿ ಕೇಳಿದ್ದಾರೆ. ಇಷ್ಟು ಸಂದೇಹಗಳ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆಂದು ನಂಬಿದ್ದೇನೆ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಸಹ ಮಿತ್ರರು ಬಹಳ ಸುಧೀರ್ಘವಾಗಿ ಪಠ್ಯಪುಸ್ತಕ ಪರಿಷ್ಕರಣೆಯ ಬಗ್ಗೆ ಮಾತನಾಡಿದ್ದಾರೆ. ಗೆಳೆಯರಾದ ಶ್ರೀಯುತ ಅರುಣ ಶಹಾಪುರ್ ರವರು ಮಾತನಾಡುತ್ತಾ, ಒಂದು ವಿಚಾರವನ್ನು ಹೇಳಿದರು. ಈ ವಿಚಾರದಲ್ಲಿ ನಾನು ರಾಜಕಾರಣವನ್ನು ಬೆರೆಸಲಿಕ್ಕೆ ಹೋಗುವುದಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ಖಂಡಿತವಾಗಿಯೂ ಸಹ ನಮ್ಮ ಆತ್ಮ ಸಾಕ್ಷಿಗೆ ಅನುಗುಣವಾಗಿ ಪಠ್ಯಪುಸ್ತಕದಂತಹ ವಿಚಾರದಲ್ಲಿ ರಾಜಕಾರಣ ಮಾಡಬಾರದು. ಬಹುಶ: ಅದನ್ನು ನಾನು ಸ್ವಾಗತ ಮಾಡುತ್ತೇನೆ. **"ಕುಂಬಾರನಿಗೆ ಒಂದು ವರ್ಷ, ದೊಣ್ಣೆ ಹೊಡೆಯುವವನಿಗೆ ಒಂದು ನಿಮಿಷ"** ಎಂದು ಹೇಳಿ ಕನ್ನಡದಲ್ಲಿ ಒಂದು ಗಾಧೆ ಇದೆ. ಎರಡು ವರ್ಷಗಳ ಕಾಲ ಕಷ್ಟಪಟ್ಟು ಅವರು ಪಠ್ಯಪುಸ್ತಕ ಪರಿಷ್ಕರಣೆ ಮಾಡಿದರೆ, ಇಲ್ಲಿ ನಾವು ಕುಳಿತುಕೊಂಡು ಮಾತನಾಡಿ, ಒಂದು ನಿಮಿಷದಲ್ಲಿ ಅದನ್ನು ಹೊಡೆದು ಹಾಕಿದರೆ ಈ ದೇಶಕ್ಕೆ, ಈ ರಾಜ್ಯಕ್ಕೆ ಉತ್ತರ ಕೊಡುವವರು ಯಾರು? ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಎರಡು ವರ್ಷಗಳ ನಿರಂತರ ಪ್ರಯತ್ನದ ಮೂಲಕ ಇದು ನಡೆಯುತ್ತಿದೆ. ಬಹುತೇಕ ಅವರ ಹೆಸರನ್ನು ಕೋಟ್ ಮಾಡದೇ ಬಹಳ ಬುದ್ದಿವಂತಿಕೆಯಿಂದ ನನ್ನ ಸ್ನೇಹಿತರು ಮಾತನಾಡಿದರು. ಬರಗೂರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಮಚಂದ್ರಪ್ಪನವರು ಈ ಸಮಿತಿಯ ಅಧ್ಯಕ್ಷರು. 2013-14 ರಲ್ಲಿ ಬಜೆಟ್ ಮಂಡನೆಯಾದಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪುಸ್ತಕ ಪರಿಷ್ಕರಣೆಯ ಬಗ್ಗೆ ಇಲ್ಲಿ ಒಂದು ಘೋಷಣೆಯನ್ನು ಕೊಟ್ಟಿದ್ದಾರೆ. ಈ ಸದನದಲ್ಲಿಯೂ ಸಹ ಈ ವಿಚಾರವಾಗಿ ಚರ್ಚೆಯಾಗಿದೆ. ಅದಕ್ಕೆ ಮುಂಚೆ 2012 ರಲ್ಲಿ ಏನು ಕರ್ನಾಟಕ ರಾಜ್ಯದಲ್ಲಿ ಪಠ್ಯಪುಸ್ತಕಗಳ ದೋಷಗಳ ಬಗ್ಗೆ ಏನು ಗುರುತರವಾದ ಆರೋಪಗಳು ಬಂದವು, ಅವುಗಳು ಬಹುತೇಕವಾಗಿ ಸಾರ್ವಜನಿಕವಾಗಿ ಚರ್ಚೆಯಾಯಿತು. ಏನು 2012 ರ ಪರಿಷ್ಕರಣೆ ಇದೆ, ಪರಿಷ್ಕರಣೆಯ ಸಮಯದಲ್ಲಿ ಕೆಲವು ಅನಾವಶ್ಯಕವಾದಂತಹ ವಿಚಾರಗಳು ಸೇರಿವೆ. ಮತ್ತೆ, ಒಬ್ಬರೇ ಲೇಖಕರ ಆರ್ಟಿಕಲ್ಸ್ ಮತ್ತು ಪುಸ್ತಕಕ್ಕೆ ಸಂಬಂಧಪಟ್ಟಂತಹ 12-13 ಲೇಖನಗಳಿವೆ, ಮತ್ತೆ, ಕೆಲವು ಪ್ರಾದೇಶಿಕವಾಗಿ ಅದು ಹೈದ್ರಾಬಾದ್-ಕರ್ನಾಟಕ ವಿಭಾಗ ಇರಬಹುದು, ಮತ್ತೆ, ಉತ್ತರ ಕರ್ನಾಟಕದ ವಿಭಾಗ ಇರಬಹುದು, ಅಲ್ಲಿನ ಲೇಖಕರಿಗೆ ಅವಕಾಶ ಸಿಕ್ಕಿರುವುದಿಲ್ಲ, ಮತ್ತೆ, ಭಾಷಾವಾರು ಪುಸ್ತಕಗಳಲ್ಲಿ ದೋಷವಿದೆ, ಇವೆಲ್ಲವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಪುಸ್ತಕ ಪರಿಷ್ಕರಣೆ ಆಗಬೇಕೆನ್ನುವ ಒಂದು ಒತ್ತಡ ಸಾರ್ವಜನಿಕ ವಲಯದಲ್ಲಿ ಚರ್ಚೆಯ ಮೂಲಕ ಬಂದಿರುವಂತಹದ್ದಾಗಿದೆ. ಈ ಸಮಯದಲ್ಲಿ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡು ಬಹುತೇಕ ದಿನಾಂಕ 24-11-2014 ರಲ್ಲಿ ಒಂದು ಆದೇಶದ ಮೂಲಕ 27 ಸಮಿತಿಗಳನ್ನು ರಚನೆ ಮಾಡಿದೆ. ಇದು ಒಂದು ಸಮಿತಿಯ ಮೂಲಕ ಆಗಿರುವಂತಹದ್ದಲ್ಲ. ಈ 27 ಸಮಿತಿಯಲ್ಲಿ ಅಧ್ಯಾಪಕ ವರ್ಗದವರು, ಶಿಕ್ಷಕ ವರ್ಗದವರು, ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರದಲ್ಲಿ ದುಡಿದಂತಹ ಬಹುತೇಕ ಗಣ್ಯರನ್ನು ಸೇರಿಸಿಕೊಂಡು ಈ 27 ಸಮಿತಿಗಳನ್ನು ರಚನೆ ಮಾಡಿದರು. ಆದಾದಮೇಲೆ. ಅವೆಲ್ಲವುಗಳನ್ನು ಏಕೀಕೃತ ಮಾಡಿ ಸನ್ಮಾನ್ಯ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ರಚನೆ ಮಾಡಿದರು. ಇದರಲ್ಲಿ ನಾನು ಒಂದೆರಡು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಬಹುತೇಕವಾಗಿ ನಮ್ಮ ಸ್ನೇಹಿತರು ಏನು ಚರ್ಚೆ ಮಾಡಿದರು, ಏನು ಪ್ರಾದೇಶಿಕ ಅಸಮತೋಲನವಿತ್ತು. .

ಮಾನ್ಯ ಸಭಾಪತಿಯವರೆ, ಇದು ಪುಸ್ತಕ ಪರಿಷ್ಕರಣೆ ಆಗಿರುವುದಾಗಿದೆ. ಇದು ಪುನರ್ ರಚನೆಯಲ್ಲ. ಆದರೆ, ಇದು ಪುನರ್ ರಚನೆ ಎಂದು ಬಹಳ ಚರ್ಚೆಯಾಗಿರುವಂತಹದ್ದಾಗಿದೆ. ಶೇಕಡ 20 ರಷ್ಟು, ಪರಿಷ್ಕರಣೆ ಮಾಡಿರುವುದಾಗಿದೆ.

**ಶ್ರೀ ಅರುಣ್ ಶಹಾಪುರ:-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ನಮಗೆ ಮಾತ್ರ ಗೊಂದಲವಿಲ್ಲ. ಸರ್ಕಾರಕ್ಕೂ ಗೊಂದಲವಿದೆ.ಇದೆ. ಇದು ಪುನರ್‌ರಚನೆಯೋ, ಪರಿಷ್ಕರಣೆಯೋ, ಲೋಪದೋಷಗಳನ್ನು ತೆಗೆದು ಹಾಕುವುದೋ ಈ ಮೂರು ಕರಗಳು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡನೆಯದಾಗಿ, ಪಠ್ಯಪುಸ್ತಕಕ್ಕೆ ಬೇಸ್ ಯಾವುದು ಆಗಬೇಕೆಂದರೆ, National Curriculum Framework and Karnataka Curriculum Framework. ಪ್ರಾದೇಶಿಕ ಅಸಮಾನತೆ ಎಂದು ಹೇಳಿ ನಿಮಗೆ ಅದರಲ್ಲಿ ಪ್ರಾತಿನಿಧ್ಯೆ ಸಿಗಬೇಕು, ನಮಗೆ ಪ್ರಾತಿನಿಧ್ಯೆ ಸಿಗಬೇಕೆಂದಲ್ಲ. ಇದೆಲ್ಲಾ ವಿಚಾರಗಳನ್ನು ಹೇಳುವುದನ್ನು ಸಮಯ ಜಾಸ್ತಿ ಆಗುತ್ತದೆ ಎಂದು ಹೇಳಿ ಬಿಟ್ಟೆ. ಸುಮಾರು 92 ಸಾಮರ್ಥ್ಯಗಳನ್ನು ಎನ್‌ಸಿಎಫ್ ಇವತ್ತು ಗುರುತಿಸಿದೆ. 1ನೇ ತರಗತಿಯಿಂದ 10 ತರಗತಿಯವರೆಗೂ ಆ 92 ಸಾಮರ್ಥ್ಯಗಳನ್ನು ಪದ್ಯದ ರೂಪದಲ್ಲಿ, ಪಠ್ಯದ ರೂಪದಲ್ಲಿ ಆ ಮಗುವಿನಲ್ಲಿ ಅಳವಡಿಸುವಂತಹ ಕೆಲಸ. ಯಾರು ಬರೆದಿದ್ದಾರೆನ್ನುವುದು ಪ್ರಮುಖವಲ್ಲ. ಏನು ಬರೆದಿದ್ದಾರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

**ಶ್ರೀ ರಮೇಶ್ ಬಾಬು:-** ನನ್ನ ಸ್ನೇಹಿತರ ಅಭಿಪ್ರಾಯ ಅವರ ಮಟ್ಟಕ್ಕೆ ಸರಿ ಇದೆ. ಆದರೆ, ಇಲ್ಲಿ ಇರತಕ್ಕಂತಹ ವಾಸ್ತವಗಳು ಬೇರೆ. ಆ ಸಮಯದಲ್ಲಿಯೂ ಸಹ ಈ ಸದನದ ಸದಸ್ಯರಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀಯುತ ಅರುಣ ಶಹಾಪುರ್ ರವರು 2012 ರಲ್ಲಿ ಏತಕ್ಕಾಗಿ ದೋಷಗಳು, ಆರೋಪಗಳು ಬಂತು ಎಂದು ಹೇಳಬೇಕಾಗುತ್ತದೆ. ಬಹಳ ಪ್ರಮುಖವಾಗಿ ನನಗಿಂತ ಅವರು ಬುದ್ಧಿವಂತಿಕೆಯುಳ್ಳವರು. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದಂತಹವರು, ಶಿಕ್ಷಕರುಗಳನ್ನು ಪ್ರತಿನಿಧಿಸುವಂತಹವರು, ವಿದ್ಯಾರ್ಥಿಗಳನ್ನು ಪ್ರತಿನಿಧಿಸುವಂತಹವರು ಈ ಸಮಿತಿಗಳಲ್ಲಿ ಇರುವಂತಹವರಾಗಿದ್ದಾರೆ. 27 ವಿಷಯ ಸಮಿತಿಗಳಲ್ಲಿ ಇರುವವರನ್ನು ನಾವು ನಿರಾಕರಣೆ ಮಾಡಲಿಕ್ಕೆ ಆಗುವುದಿಲ್ಲ. 27 ವಿಷಯ ಸಮಿತಿಗಳಲ್ಲಿ ಯಾರ್‍ಯಾರು ಇದ್ದರು, ಎಲ್ಲವೂ ವಿಷಯವಾರು ಆಗಿದೆ. ಚಾಲುವಾರು ಆಗಿದೆ. ಇಲ್ಲಿ ಆಗಿರುವಂತಹ ಪರಿಷ್ಕರಣೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಮಾತ್ರ. 1ನೇ ತರಗತಿಯಿಂದ 10 ತರಗತಿಯವರೆಗೆ ಪಠ್ಯಪುಸ್ತಕವನ್ನು ಪರಿಷ್ಕರಣೆ ಮಾಡಲಿಕ್ಕೆ ಸಭೆಗಳನ್ನು ಮಾಡಿದ್ದಾರೆ. ನಾವು ಒಂದು ನಿಮಿಷದಲ್ಲಿ ಏನೋ ಆಗಿ ಹೋಗಿದೆ, ಇಡೀ ಒಂದು ಕೋಟಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿ, ಇದನ್ನು ತಿರಸ್ಕಾರ ಮಾಡಿದರೆ ಹೇಗೆ? ಈಗ ಶ್ರೀಮತಿ ತಾರಅನುರಾಧರವರು ಇದರಲ್ಲಿ 'ಮಾತೃ' ಎನ್ನುವ ಪದವನ್ನು ಬಿಟ್ಟಿದ್ದಾರೆಂದು ಪ್ರಸ್ತಾಪ ಮಾಡಿದರು. ಒಂದು ಪಠ್ಯಪುಸ್ತಕದಲ್ಲಿ "ಮಾತೃ' ಎನ್ನುವ ಪದ ಬಿಟ್ಟಿದ್ದರೆ, ಅದನ್ನು ಸೇರಿಸಲಿಕ್ಕೆ ಸಲಹೆಯನ್ನು ಕೊಡಿ. ಸ್ವೀಕಾರ ಮಾಡೋಣ. ಅದು ತಪ್ಪಲ್ಲ. ಒಟ್ಟಾರೆ ಪರಿಷ್ಕರಣೆ ಸರಿಯಿಲ್ಲವೆನ್ನುವುದು ತಪ್ಪಾಗುತ್ತದೆ. ತಪ್ಪಾಗಿದ್ದರೆ ಮುಂದಕ್ಕೆ ಸರಿಪಡಿಸಿಕೊಳ್ಳೋಣ. ಪ್ರಶ್ನೆ ಅದಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರತಿ ನಾಲ್ಕು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ ಪಠ್ಯ ಪುಸ್ತಕ ಪರಿಷ್ಕರಣೆಯಾಗುವಂತಹದ್ದು ಸ್ವಾಭಾವಿಕ. ಇದು ರಾಜ್ಯದಲ್ಲಿಯೂ ಆಗುತ್ತದೆ, ಕೇಂದ್ರದಲ್ಲಿಯೂ ಆಗುತ್ತದೆ. ಬಹುಶ: ಶ್ರೀಯುತ ಅರುಣ ಶಹಾಪುರ್ ರವರಿಗೆ ಈ ವಿಚಾರ ಗೊತ್ತಿದೆ. ಒಬ್ಬ ಲೇಖಕರದ್ದೇ 15–16 ಪದ್ಯಗಳನ್ನು ಸೇರಿಸಿದ್ದಾರೆ, ಕುವೆಂಪುರವರ ಪದ್ಯಗಳನ್ನು ಸೇರಿಸಿಲ್ಲ. ಬಸವಣ್ಣನವರ ಸಾಹಿತ್ಯ ಪಠ್ಯಪುಸ್ತಕದಲ್ಲಿ ಇರುವುದಿಲ್ಲ. ಅಕ್ಕಮಹಾದೇವಿಯವರ ಸಾಹಿತ್ಯ ಪಠ್ಯಪುಸ್ತಕದಲ್ಲಿ ಇರುವುದಿಲ್ಲ. ಇದು ಪರಿಷ್ಕರಣೆ, ಆಗುವುದು ಬೇಡವೇ? ನಾವು ಇದಕ್ಕೆ ಯಾರನ್ನು ಪ್ರಶ್ನೆ ಮಾಡಬೇಕು. ಈಗ ಕನ್ನಡೇತರ ಭಾಷೆಯ ಪುಸ್ತಕಗಳು ಏನಿವೆ, ಅವುಗಳು ಅದು ತುಳು ಇರಬಹುದು, ತಮಿಳು ಇರಬಹುದು, ತೆಲುಗು ಇರಬಹುದು, ಅಲ್ಲಿ ಕನ್ನಡ ಪಠ್ಯಪುಸ್ತಕ ಅಥವಾ ಕನ್ನಡ ಲೇಖಕರ ವಿಚಾರವನ್ನು ಕೊಡುವುದು ಬೇಡವೇ? ಕುವೆಂಪು ವಿಚಾರವನ್ನು ಕೊಡುವುದು ಬೇಡವೇ? ಈ ಪ್ರಶ್ನೆಯನ್ನು ನಾವೇ ಹಾಕಿಕೊಳ್ಳಬೇಕಾಗಿದೆ. ಇವತ್ತು ಪ್ರಶ್ನೆ ಇರುವುದೇನೆಂದರೆ ಎಲ್ಲಿ ದೋಷವಿದೆ, ಆ ದೋಷವನ್ನು ಸರಿಪಡಿಸುವುದಕ್ಕೆ ಈ ಒಂದು ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ ಸಣ್ಣ–ಪುಟ್ಟ ಲೋಪ ಆಗಿದ್ದರೆ ಸರಿಪಡಿಸಬೇಕಾಗುತ್ತದೆ. ಒಟ್ಟಾರೆ, ಎಲ್ಲವೂ ಪರಿಷ್ಕರಣೆ. ತಪ್ಪು ಎಂದರೆ ನಾವು ಈ ಸಮಾಜಕ್ಕೆ ಸಂದೇಹವನ್ನು ಕೊಡಲಿಕ್ಕೆ ಹೊರಟಿದ್ದೇವೆ?

ಮಾನ್ಯ ಸಭಾಪತಿಯವರೆ, ಬಹಳ ಪ್ರಮುಖವಾಗಿ ಇದರಲ್ಲಿ ಏನೇನು ಆಗಿದೆ ಎಂದು ಹೇಳಿ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈ ಪಠ್ಯಪುಸ್ತಕ ಪರಿಷ್ಕರಣೆ, ರಾಷ್ಟ್ರೀಯ ಮತ್ತು ರಾಜ್ಯ ಪಠ್ಯ ನೀತಿಗೆ ಅನುಗುಣವಾಗಿ ನಡೆದಿದೆ ಎಂದು ನಾನು ಮತ್ತೊಮ್ಮೆ ಹೇಳುತ್ತಾ. . .

**ಶ್ರೀ ಅರುಣ ಶಹಾಪುರ:–** ಅದಕ್ಕೆ ದಾಖಲೆಗಳನ್ನು ಕೊಡಿ.

**ಶ್ರೀ ರಮೇಶ್ ಬಾಬು:–** ಅದಕ್ಕೆ ದಾಖಲೆಗಳನ್ನು ಸರ್ಕಾರ ಕೊಡುತ್ತದೆ. ದಾಖಲೆ ಕೊಡುವುದಕ್ಕೆ ನಾನು ಸರ್ಕಾರವಲ್ಲ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಶ್ರೀಯುತ ಅರುಣ ಶಹಾಪುರ ರವರೆ ಕುಳಿತುಕೊಳ್ಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಶ್ರೀಯುತ ರಮೇಶ್ ಬಾಬುರವರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿರುವಾಗ ಅವರನ್ನೇ ಪ್ರಶ್ನೆ ಕೇಳುತ್ತಾ ಹೋದರೆ ಹೇಗೆ? ಅದಕ್ಕೆ ಸರ್ಕಾರವಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಮೇಶ್ ಬಾಬು:-** ಹೈದ್ರಾಬಾದ್-ಕರ್ನಾಟಕಕ್ಕೆ ಸೂಕ್ತ ಪ್ರಾತಿನಿಧ್ಯವಿರಲಿಲ್ಲ. ಅದಕ್ಕೆ ಸೇರ್ಪಡೆ ಮಾಡಿದ್ದಾರೆ. ಲಿಂಗತ್ವದ ಅಸಮಾನತೆಯನ್ನು ತಪ್ಪಿಸುವಂತಹ ಕೆಲವು ಲೇಖಕರ ಸೂಕ್ತ ಬರಹಗಳನ್ನು ಇದರಲ್ಲಿ ಸೇರ್ಪಡೆ ಮಾಡಿದ್ದಾರೆ. ಒಬ್ಬರೇ ಬರಹಗಾರರ ಒಂದಕ್ಕಿಂತ ಹೆಚ್ಚು ಪಾಠಗಳಿದ್ದವು. ಇಂತಹ ಸಂದರ್ಭದಲ್ಲಿ ಹಿರಿಯ, ಹೆಸರಾಂತ ಲೇಖಕರ ಲೇಖನಗಳನ್ನು ಇದರಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಹೊಸಬರಿಗೆ ಅವಕಾಶ ಕಲ್ಪಿಸಲಾಗಿದೆ. ತರಗತಿಯಲ್ಲಿ ಪರಿಷ್ಕರಿಸಿ, ಕೆಲವು ಪಾಠಗಳನ್ನು ಬೇರೆ ತರಗತಿಗಳಿಗೆ ಸ್ಥಳಾಂತರಿಸಲಾಗಿದೆ. ಉದಾಹರಣೆಗೆ ಕುವೆಂಪು ರವರ **'ಭಾರತ ಭೂಮಿ'** ನಮ್ಮ ತಾಯಿ ಎನ್ನುವ ಪದ್ಯವನ್ನು ಪ್ರೌಢಶಾಲೆಯಿಂದ 7ನೇ ತರಗತಿಗೆ ಬದಲಾಯಿಸಲಾಗಿದೆ. ಇದರಲ್ಲಿ ಏನು ತಪ್ಪಿದೆ? ಹೈಸ್ಕೂಲ್‌ನಲ್ಲಿ ಕಲಿಯುವಂತಹ ಪಠ್ಯವನ್ನು 7ನೇ ತರಗತಿಗೆ ಅಂದರೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಯಲಿ ಎಂದು ಹೇಳಿ ಅದನ್ನು ಬದಲಾವಣೆ ಮಾಡಿದರೆ ಅದು ದೋಷವಾಗುತ್ತದೆಯೇ? ನನಗಂತೂ ಅರ್ಥವಾಗುತ್ತಿಲ್ಲ. ಕನ್ನಡೇತರ ಭಾಷಾ ಪಠ್ಯಗಳಲ್ಲಿ ಒಂದೆರಡಾದರೂ ಕನ್ನಡ ಸಾಹಿತಿಗಳ ಪಾಠಗಳು ಇರಬೇಕೆನ್ನುವ ಅಭಿಪ್ರಾಯಕ್ಕೆ ಬರಲಾಗಿದ್ದು, ಆ ಹಿನ್ನೆಲೆಯಲ್ಲಿ ವಿ.ಕೃ.ಗೋಕಾಕ್ ರವರ 'The Song of India' ಪದ್ಯವನ್ನು ಇಂಗ್ಲೀಷ್ ಪಠ್ಯಕ್ಕೆ ಸೇರಿಸಲಾಗಿದೆ. ಯಾರು ವಿ.ಕೃ.ಗೋಕಾಕ್? ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಂತಹವರ ಒಂದು ಸಾಂಗ್ ಅನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿದರೆ ಅದು ತಪ್ಪು ಎಂದು ಯಾವ ಆಧಾರದ ಮೇಲೆ ನಾವು ಹೇಳಲಿಕ್ಕೆ ಬರುತ್ತದೆ?

**(ಗೊಂದಲ)**

ಸಂಸ್ಕೃತ ಪಠ್ಯದ 8ನೇ ತರಗತಿಯಲ್ಲಿ ಅಕ್ಕಮಹಾದೇವಿ ಮತ್ತು 7ನೇ ತರಗತಿಯಲ್ಲಿ ಬಸವೇಶ್ವರರ ಪಾಠಗಳನ್ನು ಹೊಸದಾಗಿ ಸೇರ್ಪಡೆ ಮಾಡಿದ್ದಾರೆ. ತಮಿಳಿನ ಭಾಷಾ ಪುಸ್ತಕದಲ್ಲಿ 10ನೇ ಪಠ್ಯ ಪುಸ್ತಕದಲ್ಲಿ ಕನ್ನಡದ ಆದಿಕವಿ ಪಂಪನ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಮರಾಠಿ ಪಠ್ಯ ಪುಸ್ತಕದಲ್ಲಿ ಭಾಷಾ ಬಾಂಧವ್ಯವನ್ನು ಕುರಿತು ಒಂದು ಪಾಠವನ್ನು ಸೇರ್ಪಡೆ ಮಾಡಿದ್ದಾರೆ. ತುಳು ಭಾಷೆಯಲ್ಲಿ 7ನೇ ತರಗತಿಯಲ್ಲಿ ಆದಿ ಗುರು ನಾರಾಯಣಗುರು ರವರ ಜೀವನ ಚರಿತ್ರೆಯನ್ನು ಸೇರಿಸಿದ್ದಾರೆ. 8ನೇ ತರಗತಿಯ ಪಠ್ಯಪುಸ್ತಕಕ್ಕೆ ಹಣ್ಣು ಮಾರಿ ಶಾಲೆ-ಕಾಲೇಜು ಕಟ್ಟಿಸಿದ ಒಬ್ಬ ಸಾಧಕನ ಜನ್ಮ ಪರಿಚಯವನ್ನು ಸೇರ್ಪಡೆ ಮಾಡಿದ್ದಾರೆ. ಉರ್ದು ಪಠ್ಯದಲ್ಲಿ ರಾಷ್ಟ್ರೀಯತೆ, ಭಾವೈಕ್ಯತೆ ಕುರಿತು ಪಾಠವನ್ನು ಹೊಸದಾಗಿ ಸೇರಿಸಲಾಗಿದೆ. ಈ ರೀತಿಯಲ್ಲಿ ಅನೇಕ ಭಾಷಾ ಪುಸ್ತಕದಲ್ಲಿ ಪಾಠಗಳನ್ನು ಸೇರ್ಪಡೆ ಮಾಡಿದ್ದಾರೆ. ಇಷ್ಟೆಲ್ಲಾ ಅವರು ಪರಿಶ್ರಮ ಪಟ್ಟು, 27 ವಿಷಯ ಸಮಿತಿಗಳ ಅಭಿಪ್ರಾಯಗಳನ್ನು ಸಂಗ್ರಹ ಮಾಡಿ, ಎಲ್ಲವನ್ನೂ ಕ್ರೋಢೀಕರಣ ಮಾಡಿ, ಸರ್ಕಾರಕ್ಕೆ ಕೊಟ್ಟು, ಒಟ್ಟಾರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಠ್ಯಪುಸ್ತಕದಲ್ಲಿ ಶೇಕಡ 20 ರಷ್ಟು ಬದಲಾವಣೆಯನ್ನು ತಂದು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಈ ಪರಿಷ್ಕರಣೆ, ಕಾರ್ಯವನ್ನು ಮಾಡಿ, ಅವರ ಸೇವೆಗೆ, ಅವರ ಕಾರ್ಯಕ್ಕೆ ನಾವು ಈ ಸದನದ ಮೂಲಕ ಶ್ಲಾಘನೆಯನ್ನು ಕೊಡಬೇಕು. ಈ ಪಠ್ಯ ಪುಸ್ತಕದ ಪರಿಷ್ಕರಣೆ, ಆಗಿದ್ದೇ, 2012 ರಲ್ಲಿ ಪಠ್ಯಪುಸ್ತಕದಲ್ಲಿ ದೋಷದ ಆರೋಪವನ್ನು ತಂದಂತಹ ಸಮಯದಲ್ಲಿ, ಸಾರ್ವಜನಿಕ ವಲಯದಲ್ಲಿ ದೂರುಗಳು ಬಂದಂತಹ ಸಮಯದಲ್ಲಿ ಸರ್ಕಾರ ಒಂದು ತೀರ್ಮಾನಕ್ಕೆ ಬಂದು 2014 ರಲ್ಲಿ ಒಂದು ಆದೇಶವನ್ನು ಮಾಡುತ್ತಾರೆ. ಆ ಆದೇಶಕ್ಕೆ ಅನುಗುಣವಾಗಿ ಸಭೆಗಳನ್ನು ಮಾಡಿ, ಮತ್ತೆ ಸಮಿತಿಗಳನ್ನೆಲ್ಲಾ ಕ್ರೋಡೀಕರಣ ಮಾಡಿ, ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ಮಾಡಿ, ಒಳ್ಳೆಯ ತೀರ್ಮಾನಕ್ಕೆ ಸರ್ಕಾರ ಬಂದು, ಇವತ್ತು ಈ ಪಠ್ಯ ಪುಸ್ತಕ ಪರಿಷ್ಕರಣೆಯಾಗಿದೆ. ನಾನು ಮುಕ್ತ ಮನಸ್ಸಿನಿಂದ ಸರ್ಕಾರದ ಕಾರ್ಯವನ್ನು ಶ್ಲಾಘನೆ ಮಾಡುತ್ತೇನೆ. ಇದರಲ್ಲಿ ರಾಜಕಾರಣವನ್ನು ಮಾಡುವುದು ಬೇಡ. ದಯಮಾಡಿ, ಉಳಿದಂತಹ ಸದಸ್ಯರು ಇದಕ್ಕೆ ಸಹಕಾರವನ್ನು ಕೊಡಬೇಕೆಂದು ಹೇಳಿ, ಈ ಪಠ್ಯ ಪುಸ್ತಕದಲ್ಲಿ ಯಾವುದೇ ದೋಷವಿಲ್ಲವೆನ್ನುವ ವಿಚಾರವನ್ನು ಮತ್ತೊಮ್ಮೆ ಸದನದ ಗಮನಕ್ಕೆ ತರುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**(336) 21.03.17 SPR GR 5.30**

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಬಹಳ ಒಳ್ಳೆಯ ವಿಚಾರ ಸದನದಲ್ಲಿ ಪ್ರಸ್ತಾಪವಾಗುತ್ತಿದೆ. ಈ ವಿಚಾರವನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಈ ಸದನದ ಸದಸ್ಯರುಗಳು ಆಗಿರುವಂತಹ ನಾವೆಲ್ಲರೂ ಸಹ ನಮ್ಮಿಂದ ಒಂದು ಪ್ರಮಾಣ ವಚನವನ್ನು ಸ್ವೀಕಾರ ಮಾಡುತ್ತೇವೆ. ಅದೇನೆಂದರೆ, ಈ ಸದನದ ಸದಸ್ಯರಾಗಿ ಸಂವಿಧಾನದ ರೀತ್ಯ ನಾವು ನಡೆದುಕೊಳ್ಳುತ್ತೇವೆ ಎನ್ನುವಂತಹ ರೀತಿಯಲ್ಲಿ, ನಾನು ಅನೇಕ ನಮ್ಮ ಸನ್ಮಿತ್ರರ ವಾದವನ್ನು ಕೇಳುತ್ತಿದ್ದೆ. ಸಂವಿಧಾನದ ಆಶಯದ ರೀತ್ಯ ರಾಜ್ಯ ಸರ್ಕಾರದ ಅಧಿಕಾರವೇನು? ಕೇಂದ್ರ ಸರ್ಕಾರದ ಅಧಿಕಾರವೇನು? ಎನ್ನುವಂತಹದ್ದು. ರಾಜ್ಯ ಸರ್ಕಾರಕ್ಕೆ ಒಟ್ಟಾರೆ ಇರುವಂತಹ ಯಾವ ಯಾವ ಇಲಾಖೆಗಳು, ಕೇಂದ್ರ ಸರ್ಕಾರಕ್ಕೆ ಒಟ್ಟಾರೆ ಇರುವಂತಹ ಯಾವ ಯಾವ ಇಲಾಖೆಗಳು ಎಂದು ಹೇಳಿ ಸಂವಿಧಾನದ 'State List' 'Central List' and 'Concurrent List' ಗಳಲ್ಲಿ ನಮೂದಾಗಿವೆ. 'State List' ನಲ್ಲಿ ಶಿಕ್ಷಣ ಇಲಾಖೆಯಿದೆ. ಅದೇ ರೀತಿಯಲ್ಲಿ 'Central List' ನಲ್ಲಿಯೂ ಸಹ ಶಿಕ್ಷಣ ಇಲಾಖೆಯಿದೆ. 'State List' ನಲ್ಲಿ ಯಾವ ವಿಷಯಗಳಿವೆ ಇದರ ಆಧಾರದ ಮೇಲೆ ರಾಜ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಠ್ಯಕ್ರಮಗಳನ್ನು ಮಾಡುವಂತಹ ಅಧಿಕಾರ, ಹಕ್ಕು ರಾಜ್ಯ ಸರ್ಕಾರಗಳಿಗಿವೆ. ಅದೇ ರೀತಿಯಲ್ಲಿಯೂ ಸಹ ಸಿ.ಬಿ.ಎಸ್.ಇ., ಅಥವಾ ಐ.ಸಿ.ಎಸ್.ಇ., ಹಾಗೂ ಇನ್ನಿತರೆ ಕೇಂದ್ರದ ಪಠ್ಯಕ್ರಮಗಳನ್ನು ಮಾಡತಕ್ಕಂತಹ ಅಧಿಕಾರ ಕೇಂದ್ರದ ಪರಿಮಿತಿಯಲ್ಲಿ ಬರತಕ್ಕಂತಹ ಸಮಿತಿಗಳಿಗೆ ಮತ್ತು ಅವರಿಗೆ ಪ್ರದತ್ತವಾಗಿರುವಂತಹ ಅಧಿಕಾರವಾಗಿದೆ. ಪ್ರಸ್ತುತ ನಾವು 21 ನೇ ಶತಮಾನದಲ್ಲಿದ್ದೇವೆ. 21ನೇ ಶತಮಾನದಲ್ಲಿರುವಂತಹ ಸಂದರ್ಭದಲ್ಲಿ ಮಕ್ಕಳಿಗೆ ಅಪ್‌ಡೇಟ್ ಆಗತಕ್ಕಂತಹ ಮಾಹಿತಿಗಳನ್ನು ಕೊಡುವ ದೃಷ್ಟಿಯಿಂದ ಹಾಗೂ ಈ ರೀತಿಯ ಪಠ್ಯಪುಸ್ತಕಗಳ ರಚನೆ ಅಥವಾ ಪರಿಷ್ಕರಣೆಯ ಅವಶ್ಯಕತೆಯಿದೆ. 2012 ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ತನಗೆ ಪ್ರದತ್ತವಾದ ಅಧಿಕಾರವನ್ನು ಬಳಸಿ, ರಾಜ್ಯ ಪಠ್ಯಕ್ರಮವಿರುವಂತಹ ಭಾಷೆ, ವಿಜ್ಞಾನ, ಸಮಾಜ ವಿಜ್ಞಾನ, ಗಣಿತಶಾಸ್ತ್ರ ಹಾಗೂ ಇನ್ನಿತರೆ ವಿಷಯಗಳಿರಬಹುದು, ಪಠ್ಯಪುಸ್ತಕಗಳನ್ನು ರಚಿಸಿರುವಂತಹದ್ದು ಇದೆ. ನಮ್ಮ ಸನ್ಮಿತ್ರರು ವಾದ ಮಾಡಿದ ರೀತಿಯಲ್ಲಿ ಈ ಹಿಂದೆ ಎನ್.ಸಿ.ಇ.ಆರ್.ಟಿ., ರವರ ಅನುಮತಿಯನ್ನು, ಶಿಕ್ಷಣ ತಜ್ಞರ ಅಥವಾ ವಿವಿಧ ಸಂಘಟನೆಗಳ ಅಭಿಪ್ರಾಯಗಳನ್ನಾಗಲೀ ಪಡೆದಿರಲಿಲ್ಲ. ನನಗೆ ಲಭ್ಯವಾಗಿರುವಂತಹ ಮಾಹಿತಿಯ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಭಿಪ್ರಾಯಗಳನ್ನು ಸಾರ್ವಜನಿಕವಾಗಿಯೂ ಸಹ ಪಡೆದಿರಲಿಲ್ಲ. ರಾಜ್ಯ ಸರ್ಕಾರಕ್ಕೆ ಸಾರ್ವಜನಿಕವಾಗಿ, ಸಾರ್ವಜನಿಕರಿಂದ ಹಾಗೂ ವಿವಿಧ ಸಂಘಟನೆಗಳಿಂದ ಬಂದಂತಹ ಅನೇಕ ಆಕ್ಷೇಪಣೆಗಳ, ದೂರುಗಳ ಹಿನ್ನೆಲೆಗಳಲ್ಲಿ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ರವರು ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯಾತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುಗುಣವಾಗುವಂತೆ ಈ ಪಠ್ಯಪುಸ್ತಕಗಳಲ್ಲಿರುವಂತಹ ನ್ಯೂನ್ಯತೆಗಳನ್ನು ಸರಿಪಡಿಸುವದಕ್ಕೆ ಪರಿಷ್ಕರಣೆ ಮಾಡಲಿಕ್ಕೆ ನಾನು ಕ್ರಮ ಜರುಗಿಸುತ್ತೇನೆಂದು ಸ್ಪಷ್ಟವಾಗಿ ಘೋಷಣೆ ಮಾಡಿದರು. ಇದಕ್ಕೆ ಸಂಬಂಧಪಟ್ಟಂತೆ ದಿನಾಂಕ 24/11/2014 ರಂದು ಹೊರಡಿಸಿದ ಆದೇಶದನ್ವಯ ಸುಮಾರು 27 ವಿಷಯ ಸಮಿತಿಗಳನ್ನು ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡಂತೆ ರಚಿಸಲಾಯಿತು. ಅಗತ್ಯವಿದ್ದಲ್ಲಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ ಹಾಗೂ ನಂತರದಲ್ಲಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಸ್ವಾತಂತ್ರ್ಯವನ್ನು ಆ ಸಮಿತಿಗಳಿಗೆ ನೀಡಲಾಗಿತ್ತು. ಇದರ ಹಾಗೂ ಅನೇಕ ವಿಚಾರಗಳ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಹಲವಾರು ಪುಸ್ತಕಗಳನ್ನು ಪರಿಷ್ಕರಣೆ ಮಾಡಿದ್ದಾರೆ. ಈ ಪರಿಷ್ಕರಣೆಯನ್ನು ಮಾಡಿರುವಂತಹ ಕೆಲವು ವಿಚಾರಗಳನ್ನು ಈಗಾಗಲೇ ನನ್ನ ಸನ್ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕನ್ನಡ, ಆಂಗ್ಲ ಹಾಗೂ ಇನ್ನೂ ಮುಂತಾದ ಎಲ್ಲಾ ಭಾಷಾ ಪಠ್ಯಪುಸ್ತಕಗಳಲ್ಲಿ ಆಯಾ ಭಾಷೆಯ ಸಾಹಿತ್ಯದ ಹಿರಿಯ ಸಾಧಕರುಗಳ ಪರಿಚಯ ಮಾಡಿಸಿಕೊಡಬೇಕೆಂಬ ಆಶಯವನ್ನು ಆದ್ಯತೆಯ ಮೇಲೆ ಪರಿಗಣಿಸಿ ಪರಿಶೀಲಿಸಲಾಗಿದೆ. ಹೀಗಾಗಿ 'ಕನ್ನಡದ ಆಸ್ತಿ' ಎಂದೇ ಪ್ರಖ್ಯಾತರಾಗಿರುವ ಶ್ರೀ ಮಾಸ್ತಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೆಂಕಟೇಶ್ ಅಯ್ಯಂಗಾರ್‌ರವರ ಪ್ರಸ್ತಾಪವಿರಲಿಲ್ಲ. ಆದ್ದರಿಂದ ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರು ರಚಿಸಿರುವ "ಯಶೋಧರ" ಎಂಬ ನಾಟಕವನ್ನು ಇವತ್ತಿನ ದಿವಸ ಪಠ್ಯಪುಸ್ತಕದ ಒಂದು ಭಾಗವನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಏನು ತಪ್ಪು? ಅದೇ ರೀತಿಯಾಗಿ ನಮ್ಮ ನವ್ಯ ಕಾವ್ಯದ ಪ್ರವರ್ತಕರೆಂದೇ ಪ್ರಸಿದ್ಧರಾದಂತಹ ಶ್ರೀ ಗೋಪಾಲಕೃಷ್ಣ ಅಡಿಗರವರ ಯಾವ ರಚನೆಯೂ ಯಾವ ತರಗತಿಯ ಪಠ್ಯಪುಸ್ತಕಗಳಲ್ಲಿ ಪ್ರಸ್ತಾಪವಾಗಿರಲಿಲ್ಲ. ಅವರ ರಚಿಸಿರುವಂತಹ 'ಕಟ್ಟುವೆವು ನಾವು ನಾಡೊಂದನು : ರಸದ ಬೀಡೊಂದನು' ಎಂಬ ಸಾಲುಗಳಿಂದ ಪ್ರಾರಂಭವಾಗುವ ಪದ್ಯವನ್ನು ಇವತ್ತಿನ ದಿವಸ ಪಠ್ಯಪುಸ್ತಕಗಳಲ್ಲಿ ಸೇರ್ಪಡಿಗೊಳಿಸಲಾಗಿದೆ. 'ಕಟ್ಟುವೆವು ನಾವು ನಾಡೊಂದನು : ರಸದ ಬೀಡೊಂದನು' ಈ ಪದ್ಯವು ಬಹುಶಃ ನಮ್ಮ ಹೊಸ ಪೀಳಿಗೆಯಾದ ಇವತ್ತಿನ ಮಕ್ಕಳಿಗೆ ದಾರಿ ದೀಪವಾಗಿದೆ. ಇಂದಿನ ಮಕ್ಕಳೇ ಮುಂದಿನ ನಮ್ಮ ದೇಶದ ಸ್ವತ್ತು, ಸಂಪತ್ತುಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಈ ರೀತಿಯ ಬದಲಾವಣೆಗಳನ್ನು ತರುವಂತಹ ಪ್ರಯತ್ನವನ್ನು ಮಾಡಿರುವಂತಹದ್ದಾಗಿದೆ.

ಅದೇ ರೀತಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವಂತಹ ದೃಷ್ಟಿಯಿಂದ, ಇವತ್ತಿನ ದಿವಸ ಹೈದ್ರಾಬಾದ್-ಕರ್ನಾಟಕ ಭಾಗದ ಪಠ್ಯಪುಸ್ತಕಗಳಲ್ಲಿ ಮಾತ್ರವೇ ಬಸವಣ್ಣರವರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿಯಾಗಿ ಮೈಸೂರು ಭಾಗದ ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟ ಹಾಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. ಇವುಗಳ ಜೊತೆಗೆ ಆ ಭಾಗದ ಯಾರೆಲ್ಲಾ ಕವಿಗಳಿದ್ದಾರೆ ಅವರಿಗೆ ಆದ್ಯತೆ ಸಿಕ್ಕಿರಲಿಲ್ಲ. ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೂಕ್ತ ಪ್ರಾತಿನಿಧ್ಯ ಇಲ್ಲದೇ ಇರುವಂತಹ ಕಾರಣದಿಂದ ಆ ಭಾಗದ ಕವಿಗಳಾದ ಶ್ರೀ ಸಿದ್ಧಯ್ಯ ಪುರಾಣಿಕ್, ಶ್ರೀ ಶಾಂತ ಅರಸ, ಶ್ರೀ ಸಿಂಪಿ ಲಿಂಗಣ್ಣ, ಶ್ರೀ ಚೆನ್ನಣ್ಣ ವಾಲೀಕರ್, ಶ್ರೀ ಚೆಂಬಣ್ಣ ಅಮರಚಿಂತಾ ಮುಂತಾದವರುಗಳ ಹೆಸರುಗಳನ್ನು ಮತ್ತು ಅವರುಗಳು ಬರೆದಿರುವಂತಹ ರಚನೆಗಳನ್ನು ಪಠ್ಯಪುಸ್ತಕಗಳಲ್ಲಿ ಸೇರ್ಪಡೆ ಮಾಡಲಾಗಿದೆ. ಇದರಿಂದಾಗಿ ಏನು ತಪ್ಪಾಗಿದೆ? ಆ ಭಾಗದ ಪ್ರಾದೇಶಿಕ, ಸಾಮಾಜಿಕ ಅಸಮತೋಲನಗಳ ಹಿನ್ನೆಲೆಯಲ್ಲಿ ಮತ್ತು ಯಾರೆಲ್ಲಾ ಈ ರಾಜ್ಯದ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ, ಅಂತಹ ಮಾಹಿತಿಗಳನ್ನು ಇವತ್ತಿನ ಹೊಸ ಪೀಳಿಗೆಗೆ, ಯುವ ಪೀಳಿಗೆಗೆ, ಮಕ್ಕಳಿಗೆ ತಿಳಿಸುವಂತಹ ಹಿನ್ನೆಲೆಗಳಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(337) 21.03.2017 5.40 MGN-MD**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಬಸವರಾಜ ಎಸ್. ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಹೇಳುವುದನ್ನು ನಾವು ಒಪ್ಪಿಕೊಳ್ಳುತೇವೆ. ಇದನ್ನು ನಮಗೆಲ್ಲರಿಗೂ ತಿಳಿಸುವಂತಹ ಕೆಲಸವನ್ನು ಮಾಡಲಿಲ್ಲ ಎನ್ನುವುದಷ್ಟೇ ನಮ್ಮ ತಕರಾರು. ಹಿಂದಿನ ಪದ್ಧತಿ ಏನಿತ್ತು, ಪಠ್ಯ ಪುಸ್ತಕದಲ್ಲಿ ಇಂಥಿಂತಹ ಪಠ್ಯಗಳಿರಬೇಕು ಎಂಬುದನ್ನು ನಿಗದಿಪಡಿಸಿದ ನಂತರ ಅದರ ಬಗ್ಗೆ ಸಂಬಂಧಪಟ್ಟವರಿಗೆ, ತಿಳುವಳಿಕೆ ಇರುವಂತಹವರಿಗೆ, ಸಾರ್ವಜನಿಕರಿಗೆ, ಶಿಕ್ಷಕರಿಗೆ ಮುಂತಾದವರಿಗೆ ಅದನ್ನು ಕಳುಹಿಸಿಕೊಟ್ಟು, ಆ ಬಗ್ಗೆ ಅವರ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳುವಂತಹ ಪದ್ಧತಿ ಇತ್ತು. ಸರ್ಕಾರ ಆ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂಬುದು ನಮ್ಮ ಒತ್ತಾಯವಾಗಿದೆ. ಮಾನ್ಯ ಉಗ್ರಪ್ಪನವರು ಹೇಳುತ್ತಿರುವ ವಿಚಾರವನ್ನು ನಾವು ಸಹ ಒಪ್ಪುತ್ತೇವೆ. ಪ್ರದೇಶದಿಂದ ಪ್ರದೇಶಕ್ಕೆ ಅಗತ್ಯ ಮಾರ್ಪಾಡುಗಳಾಗಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇದನ್ನೆಲ್ಲಾ ನೋಡುವುದಕ್ಕೆ, ಚರ್ಚೆ ಮಾಡುವುದಕ್ಕೆ, ನಮ್ಮಿಂದ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರುತ್ತದೆ. ಇದಕ್ಕೆ ನೀವು ಆಸ್ಪದ ಕೊಟ್ಟಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಇರಲಿ, ಅದೇ ರೀತಿಯಲ್ಲಿ ರಾಷ್ಟ್ರಕವಿ ಕುವೆಂಪು ಅವರ 'ಭರತಭೂಮಿ ನಮ್ಮ ತಾಯಿ', ಯಾರೋ ಆಗಲೇ 'ಮಾತೃ ಭೂಮಿ, ಭಾರತ ಮಾತಾ' ಎಂದು ಹೇಳುತ್ತಿದ್ದರು. ಬಹುಶಃ ನಮ್ಮ ಸನ್ಮಿತ್ರರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. "ಭಾರತ ಮಾತಾ ಕೀ ಜೈ" ಎನ್ನುವ ಘೋಷವಾಕ್ಯ ಈ ದೇಶದ ಸ್ವಾತಂತ್ರ್ಯ ಚಳುವಳಿಯ ಪ್ರತೀಕವಾಗಿತ್ತು. ಅದು ಯಾರೋ ಒಬ್ಬರ ಸ್ವತ್ತಲ್ಲ. ಆದರೆ ನಮ್ಮ ದೇಶಕ್ಕೆ 'ಭಾರತ' ಅಥವಾ 'ಭರತವರ್ಷ' ಎನ್ನುವ ಹೆಸರು ಹೇಗೆ ಬಂತು ಎಂದರೆ, ಈ ರಾಷ್ಟ್ರವನ್ನು ಆಳಿದ ಭರತ ಚಕ್ರವರ್ತಿಯ ಹೆಸರಿನಿಂದಾಗಿ ನಮ್ಮ ದೇಶಕ್ಕೆ 'ಭಾರತ ದೇಶ' ಎನ್ನುವಂತಹ ಹೆಸರು ಬಂದಿದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರದವರು 'ಪುಣ್ಯಕೋಟಿ' ಎನ್ನುವ ಪದ್ಯವನ್ನು 8ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಸೇರಿಸಿದ್ದರು. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿರುವುದಕ್ಕೆ ಕಾರಣವೆಂದರೆ, ಈಗ 'ಭಾರತ ಮಾತೆ' ಎನ್ನುವುದು, 'ಭಾರತ' ಎನ್ನುವುದರ ಬಗ್ಗೆ ನೀವು ಸರಿಯಾಗಿ ಹೇಳಿಲ್ಲ ಎನ್ನುವುದರ ಬಗ್ಗೆ, 'ಮಾತೃ ಭೂಮಿ' ಎನ್ನುವುದರ ಬಗ್ಗೆ ಪ್ರಸ್ತಾಪಿಸಲಾಯಿತು. ಆ ಸಂದರ್ಭದಲ್ಲಿ ಪುಣ್ಯಕೋಟಿಯ ಕತೆ ಯಾವ ರೀತಿ ಮಕ್ಕಳಿಗೆ mislead

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಿತ್ತು ಎಂದರೆ, ಪುಣ್ಯಕೋಟಿಯನ್ನು ನೋಡಿ ಗೋಹತ್ಯೆಯನ್ನು ಮಾಡಬಾರದೆಂದು ಹುಲಿರಾಯ ತನ್ನ ಜೀವವನ್ನೇ ಬಿಟ್ಟ ಎನ್ನುವ ಉಲ್ಲೇಖ ಆ ಕತೆಯಲ್ಲಿದೆ. 'ಸತ್ಯವೇ ನಮ್ಮ ತಾಯಿ–ತಂದೆ, ಸತ್ಯವೇ ನಮ್ಮ ಬಂಧು–ಬಳಗ, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಜಗದೀಶನು' ಎನ್ನುವಂತಹ ಸಾಲುಗಳು ಆ ಪದ್ಯದಲ್ಲಿವೆ. ಆ ಮಾತು ಅಲ್ಲಿ ಬಹಳ ಮುಖ್ಯವಾಗುತ್ತದೆ. ಹಿಂದಿನ ಪರಿಷ್ಕರಣೆಯ ಸಂದರ್ಭದಲ್ಲಿ ಅದನ್ನು ತಿರುಚಿದ್ದರು, ನಾನೇ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ಆ ಬಗ್ಗೆ ಸದನದಲ್ಲಿ ಮಾತನಾಡಿದ್ದೇನೆ. 'ಏಕೆ ನೀವು ಈ ರೀತಿ ಮಕ್ಕಳಿಗೆ ತಪ್ಪು ದಾರಿಯಲ್ಲಿ ತಿಳುವಳಿಕೆ ನೀಡುತ್ತಿದ್ದೀರಿ, ಇದು ಸರಿಯಲ್ಲ' ಎಂದು ನಾನು ಆ ಸಂದರ್ಭದಲ್ಲಿ ಪ್ರಶ್ನಿಸಿದ್ದೆ. 'ಪುಣ್ಯಕೋಟಿ' ಎನ್ನುವ ಹಸು ಕೊಟ್ಟಿಗೆಯಲ್ಲಿದ್ದ ತನ್ನ ಕರುವಿಗೆ ಹಾಲನ್ನು ಕೊಟ್ಟು ವಾಪಸ್ ಬಂದು ಹುಲಿ ಕಾಯುತ್ತಿದ್ದ ಗವಿಯ ಬಾಗಿಲಲ್ಲಿ ನಿಂತು 'ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿ ರಕ್ತವಿದೆಕೋ, ಚಂಡವ್ಯಾಘ್ರನೆ ನೀನಿದೆಲ್ಲವನುಂಡು ಸಂತಸದಿಂದಿರು' ಎಂದು ಹೇಳುತ್ತದೆ. ಆ ಸಂದರ್ಭದಲ್ಲಿ ಹಸಿದ ಹೆಬ್ಬುಲಿಗೂ ಸಹ ಗೋವಿನ ಪ್ರಾಮಾಣಿಕತೆ ಮತ್ತು ನಿಷ್ಠೆ ಅರ್ಥವಾಗುತ್ತದೆ. ಅದನ್ನು ಮೆಚ್ಚಿದ ಹುಲಿರಾಯ ಗೋವನ್ನು ಕುರಿತು 'ನೀನು ನನ್ನ ಒಡಹುಟ್ಟಿದ ಅಕ್ಕ–ತಂಗಿಯಂತೆ, ನಿನ್ನನ್ನು ಕೊಂದು ನಾನು ಯಾವ ನರಕಕ್ಕೆ ಹೋಗಲಿ' ಎಂದು ಹೇಳಿ ಬೆಟ್ಟದ ಮೇಲಿಂದ ಹಾರಿ ನೆಗೆದು ತನ್ನ ಪ್ರಾಣವನ್ನು ಬಿಡುತ್ತದೆ. ಅಲ್ಲಿ mislead ಆಗಿತ್ತು. ಆ ಸಂದರ್ಭದಲ್ಲಿ ಯಾರೂ ಅದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿರಲಿಲ್ಲ. ಈಗಿನ ಪಠ್ಯದಲ್ಲಿ ಸಣ್ಣದೊಂದು ವಾಕ್ಯದಲ್ಲಿ ತಪ್ಪಿರುವುದಕ್ಕೆ ನೀವು 'ಭಾರತ ಮಾತೆ, ಮಾತೃ ಭೂಮಿ' ಎಂದು ಹೇಳಲಿಲ್ಲ ಎನ್ನುತ್ತಿದ್ದೀರಿ.

**ಶ್ರೀ ತನ್ವೀರ್ ಸೇಠ್:–** ಸನ್ಮಾನ್ಯ ಸಭಾಪತಿಯವರೆ, 'ಗೋವಿನ ಹಾಡು' ಪದ್ಯ ಏನಿದೆ ಅದರ ಇಡೀ ಕತೆ ಮಮತೆಯ ಪ್ರತೀಕವಾಗಿದೆ. ಅದಕ್ಕೆ ಇವರು ಬೇರೆ ರೀತಿಯ ಅರ್ಥ ಬರುವಂತೆ ಮಾಡಿದರು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಸಮಯದಲ್ಲಿ ಉದ್ಭವವಾದ ಒಂದು ಚರ್ಚೆಯಿಂದ ಈ ವಿಷಯದಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆ ಪ್ರಾರಂಭವಾಗಿದೆ. ಆ ಪ್ರಶ್ನೆ ಇದ್ದದ್ದು, content ಬಗ್ಗೆ ಅಲ್ಲವೇ ಅಲ್ಲ. ಇಡೀ ಸದನದಲ್ಲಿ ಚರ್ಚೆಯಾಗಿರುವಂಥದ್ದು, ಆ procedure ಬಗ್ಗೆ. ಸನ್ಮಾನ್ಯ ಅರುಣ ಶಹಾಪುರ ಅವರು ಮಾತನಾಡುವಂತಹ ಸಂದರ್ಭದಲ್ಲಿ ಅದರ content ಬಗ್ಗೆ ಮಾತನಾಡಿಲ್ಲ. ಒಟ್ಟು ಪಠ್ಯಪುಸ್ತಕದ ಪರಿಷ್ಕರಣೆಯಾಗಬೇಕಾದರೆ ಆಗಿರುವಂತಹ procedural lapses ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ. ಹಾಗಾಗಿ ನನ್ನ ವಿನಂತಿ ಏನೆಂದರೆ, ಅರ್ಧ ಗಂಟೆ ಕಾಲಾವಧಿ ಚರ್ಚೆ ಏನಿದೆ, ಆ ಚರ್ಚೆಯನ್ನು ಪಠ್ಯಪುಸ್ತಕ ಪರಿಷ್ಕರಣೆಯ procedural lapses ಏನಿದೆ, ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೀಮಿತಗೊಳಿಸಬೇಕು; ಅವರು content ಬಗ್ಗೆ ಪ್ರಸ್ತಾಪ ಮಾಡಿಲ್ಲ. ತಾವು ಅದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ content ಬಗ್ಗೆ ಮಾತನಾಡುತ್ತಾ ಹೋದರೆ, ಚರ್ಚೆ ಎಲ್ಲೆಲ್ಲಿಗೋ ಹೋಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಶ್ರೀಮತಿ ತಾರಾಅನೂರಾಧ ಅವರು ಹೇಳಲಿಲ್ಲವೆ? 'ಮಾತೃಭೂಮಿ' ಎಂದು ಅವರೇ ಹೇಳಿದ್ದು; ಮಾನ್ಯ ಅರುಣ ಶಹಾಪುರ ಮತ್ತು ತಾರಾ ಅನೂರಾಧ ಅವರಿಬ್ಬರೂ ಆ ವಿಚಾರದ ಬಗ್ಗೆ ಮಾತನಾಡಿದ್ದಾರೆ.

**ಶ್ರೀಮತಿ ಮೋಟಮ್ಮ:–** ಹೌದು, ಶ್ರೀಮತಿ ತಾರಾ ಅನೂರಾಧ ಅವರು ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಚುನಾವಣೆಯ ಸಂದರ್ಭದಲ್ಲಿ ಪುಣ್ಯಕೋಟಿಯ ಕತೆಯನ್ನು ಇಡೀ ರಾಜ್ಯದ ತುಂಬಾ ಸುತ್ತಾಡಿ ಹೇಳಿದವರು ಇವರು, ಮತ್ತೆ ಇಲ್ಲಿ twist ಮಾಡುತ್ತಿದ್ದಾರೆ. Twist ಮಾಡುವುದರಲ್ಲಿ ಇವರು ನಿಸ್ಸೀಮರು.

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಅವರು ಕೇವಲ procedural lapses ಬಗ್ಗೆ ಮಾತನಾಡಿದ್ದಾರೆ. ನಾವು ಬಹಳಷ್ಟು ಸಂದರ್ಭಗಳಲ್ಲಿ ನಿಯಮಾವಳಿ ಪುಸ್ತಕವನ್ನು ತೆಗೆದು ನೋಡುತ್ತೇವೆ. ಈ ಅರ್ಧ ಗಂಟೆ ಕಾಲಾವಧಿ ಚರ್ಚೆಯ ನಿಯಮದ ಪ್ರಕಾರ ಅರ್ಧ ಗಂಟೆ ಚರ್ಚೆ ಉದ್ಭವಿಸಿದ ವಿಷಯದ ಬಗ್ಗೆ ಎಂದು ಇದೆ. ಅದಕ್ಕೆ ಮಾತ್ರ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**(ಗೊಂದಲ)**

**ಶ್ರೀ ಬಸವರಾಜ ಎಸ್.ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮೋಟಮ್ಮನವರು ತಿಳಿಸಿದ ವಿಚಾರವನ್ನು ಅನುಷ್ಠಾನಗೊಳಿಸಿದರೆ ಸಾಕು.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ನಾನು ತಮ್ಮನ್ನು ಕೇಳಬಯಸುವುದೇನೆಂದರೆ, ಇದು ಅರ್ಧ ಗಂಟೆ ಕಾಲಾವಧಿ ಚರ್ಚೆಯ ನಿಯಮದ ಅಡಿಯಲ್ಲಿ ಅವಕಾಶ ಕೊಟ್ಟಿರುವಂತಹ ವಿಷಯವಾದರೂ ಸ್ವಲ್ಪ ಜಾಸ್ತಿಯಾಗಿದೆ, ಇರಲಿ ಪರವಾಗಿಲ್ಲ. ಎಲ್ಲ ಸದಸ್ಯರೂ ಈ ಚರ್ಚೆಯಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದೀರಿ. ಏನೇ ಆದರು ಸಹ ನನಗೆ ಸಮಯದ ಸಮಸ್ಯೆ ಬರುತ್ತದೆ. ಆದ್ದರಿಂದ ತಾವು ಇನ್ನೂ ಎಷ್ಟು ಹೊತ್ತಿನವರೆಗೆ ಮಾತನಾಡುತ್ತೀರಿ ಎನ್ನುವುದನ್ನು ಈಗ ತಿಳಿಸಿಬಿಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಇನ್ನು ಸುಮಾರು 15 ರಿಂದ 20 ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ರಾಷ್ಟ್ರಕವಿ ಕುವೆಂಪುರವರ 'ಭರತಭೂಮಿ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾಯಿ' ಇದು ಪ್ರೌಢಶಾಲೆಯ ಪಠ್ಯಪುಸ್ತಕದಲ್ಲಿತ್ತು. ಅದಕ್ಕಿಂತ ಎಳೆಯ ವಯಸ್ಸಿನಲ್ಲಿಯೇ ಅದರ ಪರಿಚಯವಾಗಲಿ, ಮಕ್ಕಳ ಮೇಲೆ ಅದರಿಂದ ಹೆಚ್ಚು ಪರಿಣಾಮವಾಗಲಿ ಎಂದು...

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಈಗ ತಾವು ಪಠ್ಯಪುಸ್ತಕದ ಬಗ್ಗೆ ಮಾತನಾಡುವುದಾದರೆ ಅದು ಈ ಸಂದರ್ಭದಲ್ಲಿ ಬೇಡ. ಏಕೆಂದರೆ ಎಲ್ಲರೂ ಬುದ್ಧಿವಂತರೇ, ಯಾರೂ ದಡ್ಡರಿಲ್ಲ. ಉಗ್ರಪ್ಪನಂತಹವರು ವಿಷಯದ ಬಗ್ಗೆ ಮಾತನಾಡುತ್ತಾರೆ ಎಂದು ನಾನು ನಿಮ್ಮಿಂದ ಆಸೆ ಪಡುತ್ತೇನೆ. Procedural lapses ಆಗಿದೆ ಎನ್ನುವಂತಹ ವಿಷಯದ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಿದ್ದಾರೆ. ಸಚಿವರು ಅದರ ಬಗ್ಗೆ ಕೊಟ್ಟಿರುವಂತಹ ಉತ್ತರದಿಂದ ಅವರಿಗೆ ಅಷ್ಟು ಸಮಾಧಾನವಾಗಿಲ್ಲ. ಅದರಲ್ಲಿ ಆ procedural lapses ಆಗಿದೆಯೋ-ಇಲ್ಲವೋ ಎನ್ನುವುದರ ಬಗ್ಗೆ ತಾವು ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲಿದರೆ ಸಚಿವರಿಗೂ ಒಳ್ಳೆಯದಾಗುತ್ತದೆ; ಸದನಕ್ಕೂ ಒಳ್ಳೆಯದಾಗುತ್ತದೆ. ಪ್ರಾಸಂಗಿಕವಾಗಿ ಮಾತನಾಡಿ, ಆದರೆ ಈ ವಿಷಯದ ಬಗ್ಗೆ ತಾವು ಹೆಚ್ಚು ಬೆಳಕನ್ನು ಚೆಲ್ಲಿದರೆ ಒಳ್ಳೆಯದು ಎಂಬುದನ್ನಷ್ಟೇ ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ಮುಂದೆ ಒಂದು issue ಇದೆ. ಕೆಲವರು ಅವರಿಗೆ ಬೇಕಾಗಿರುವಂತಹ selected issues ಗಳನ್ನು ತೆಗೆದುಕೊಂಡು ರಾಜ್ಯದ ಜನತೆಯನ್ನು ತಪ್ಪುದಾರಿಗೆ ಎಳೆಯತಕ್ಕಂತಹ ಕೆಲವು ವ್ಯವಸ್ಥಿತವಾದ ಪ್ರಯತ್ನಗಳು ನಡೆದಿವೆ. ಹಾಗಾಗಿ ನನ್ನ ಅನಿಸಿಕೆ ಏನೆಂದರೆ, ರಾಷ್ಟ್ರಕವಿ ಕುವೆಂಪುರವರ 'ಭರತಭೂಮಿ ನಮ್ಮ ತಾಯಿ' ಇದನ್ನು ಏಳನೇ ತರಗತಿಯಲ್ಲಿ ಮುಂದುವರೆಸಿದ್ದಾರೆ. ಇದರಲ್ಲಿ ತಪ್ಪೇನಿದೆ? ಇದರ ಜೊತೆಗೆ ಮೊಟ್ಟಮೊದಲಿಗೆ ಮಹಿಳೆಯರಿಗೆ ಶಿಕ್ಷಣ ಕೊಟ್ಟಂತಹ ಸಾವಿತ್ರಿಬಾಯಿ ಫುಲೆ ಅವರ ಜೀವನ ಚರಿತ್ರೆಯನ್ನು ಈ ಪಠ್ಯಪುಸ್ತಕದಲ್ಲಿ ಅಳವಡಿಸಿದ್ದಾರೆ. ಇದರಲ್ಲಿ ಏನು ತಪ್ಪು? 12ನೇ ಶತಮಾನದ ಧಾರ್ಮಿಕ ನಾಯಕರು, ಚಿಂತಕರು ಸಾಮಾಜಿಕ ನ್ಯಾಯದ ಕುರಿತು ಒಂದು ರೀತಿಯ ಹೊಸ ಆಯಾಮವನ್ನು ಸೃಷ್ಟಿ ಮಾಡಿದರು. ಬಸವಣ್ಣನವರ ಜೀವನದರ್ಶನ, ಸ್ವಾತಂತ್ರ್ಯ ಹೋರಾಟಗಾರರಾದ ಸಂಗೊಳ್ಳಿ ರಾಯಣ್ಣನ ವಿಚಾರವನ್ನು ಪಠ್ಯಪುಸ್ತಕದಲ್ಲಿ ಏನು ಸೇರ್ಪಡೆ ಮಾಡಿದ್ದಾರೆ, ಈ ಪರಿಷ್ಕರಣೆಯಲ್ಲಿ ಯಾವ ತಪ್ಪಿದೆ; ಯಾವ irregularities ಇದೆ? ಅದೇ ರೀತಿಯಲ್ಲಿ ನಕಾರಾತ್ಮಕ ಸಂದೇಶವೊಂದನ್ನು ನಾವು ಗಮನಿಸಬೇಕಾಗುತ್ತದೆ.

Oscar Leonard Carl Pistorius ಎನ್ನುವಂತಹ ಕ್ರೀಡಾಪಟು ಒಬ್ಬರ ಬಗ್ಗೆ ಒಂದು ಪಾಠ ಪ್ರಸ್ತಾಪವಾಗಿದೆ. ಅವನ ಸಾಧನೆ ಒಂದು ಕಡೆ ಇರಲಿ, ಆದರೆ ಅವನು ತನ್ನ ಪ್ರೇಯಸಿಯನ್ನು ಕೊಂದು ಜೈಲಿಗೆ ಹೋದಂತಹವನು. 2012ರಲ್ಲಿ ಯಾವ ಪಠ್ಯಪುಸ್ತಕ ರಚನೆಯಾಗಿತ್ತೋ, ಅದರಲ್ಲಿ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಠ್ಯವನ್ನು ಇಟ್ಟಿದ್ದರು. ಅದನ್ನು ಮುಂದುವರೆಸಬೇಕೆ? ಒಬ್ಬ ಅಂತರರಾಷ್ಟ್ರೀಯ ಕ್ರೀಡಾಪಟು ಸಾಧನೆಯ ಜೊತೆಗೆ ತನ್ನ ಪ್ರೇಯಸಿಯನ್ನು ಕೊಂದು ಜೈಲಿಗೆ ಹೋಗಿದ್ದಾನೆಂದು ಹೇಳಿದರೆ ಅದು ಎಳೆಯ ವಯಸ್ಸಿನ ಮಕ್ಕಳ ಮೇಲೆ ಏನು ಪರಿಣಾಮವಾಗಬಹುದು ಎನ್ನುವುದರ ಚಿಂತನೆಯಾಗಬೇಕು. ಅದರ ಬದಲು ಇನ್ನೊಬ್ಬ ಕ್ರೀಡಾಪಟುವಿನ/ಸಾಧಕನ ಪಠ್ಯವನ್ನು ಬದಲಾವಣೆ ಮಾಡಿರತಕ್ಕಂಥದ್ದು ಯಾವ ತಪ್ಪು?

**(338) 21.03.2017 05.50 SV-MD**

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):–**

ಈ ರೀತಿಯ ಬದಲಾವಣೆಗಳನ್ನು ಮಾಡತಕ್ಕಂತಹ ಹಿನ್ನೆಲೆಯಲ್ಲಿ ಕನ್ನಡೇತರ ಪಠ್ಯಪುಸ್ತಕಗಳಲ್ಲಿ ಗೋಕಾಕ್‌ರವರ ‘The Song of India’ ಇದನ್ನು ಪ್ರಸ್ತಾಪ ಮಾಡಿರತಕ್ಕಂಥದ್ದಿದೆ. ಇದನ್ನು ಪರಿಷ್ಕರಣೆ ಮಾಡಿರುವುದರಲ್ಲಿ ಯಾವ ತಪ್ಪಿದೆ? ಅದೇ ರೀತಿಯಲ್ಲಿ ಎಂಟನೇ ತರಗತಿಯ ಸಂಸ್ಕೃತ ಪಠ್ಯದಲ್ಲಿ ಅಕ್ಕಮಹಾದೇವಿಯ ಬಗ್ಗೆ, ಏಳನೇ ತರಗತಿಯ ಸಂಸ್ಕೃತ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಬಗ್ಗೆ ಪ್ರಸ್ತಾಪಿಸಿರುವುದರಲ್ಲಿ ಏನು ತಪ್ಪಿದೆ?

**ಶ್ರೀ ಬಸನಗೌಡ ಪಾಟೀಲ ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದರಲ್ಲಿ ತಪ್ಪಿದೆ ಎಂದು ಯಾರು ವಾದ ಮಾಡುತ್ತಿದ್ದಾರೆ?

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಹಾಗಾದರೆ ಪರಿಷ್ಕರಣೆಯಲ್ಲಿ ತಪ್ಪಿಲ್ಲವೆಂದು ಹೇಳಲಿ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವು ತಪ್ಪಿದೆ ಎಂದು ಹೇಳುತ್ತಿಲ್ಲ. Procedural lapses ಇದೆ ಎಂದು ಹೇಳುತ್ತಿದ್ದೇವೆ.

**ಶ್ರೀ ಬಸನಗೌಡ ಪಾಟೀಲ್ ಯತ್ನಾಳ್:–** ಇಲ್ಲಿ procedure ಬಗ್ಗೆ ಚರ್ಚೆಯಾಗುತ್ತಿದೆ. ಮಾನ್ಯ ಉಗ್ರಪ್ಪನವರು ಹೋಗಿ ಹೋಗಿ ಬಸವಣ್ಣನವರು, ಸಂಗೊಳ್ಳಿ ರಾಯಣ್ಣನ ವಿಷಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ಇಲ್ಲಿ ಪ್ರಶ್ನೆಯೇ ಇಲ್ಲ.

**ಸಭಾಪತಿಯವರು:–** ಅವರನ್ನು ಮಾತನಾಡಲು ಬಿಡಿ. ಮಾತನಾಡುವುದನ್ನು ಕೇಳಲು ಸಹನೆ ಇರಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸೋಮಣ್ಣ ಬೇವಿನಮರದ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸಂಗೊಳ್ಳಿ ರಾಯಣ್ಣನ ಬಗ್ಗೆ ಅಪಾರವಾದ ಗೌರವವಿದೆ. ಸೇರಿಸಿರುವುದರ ಜೊತೆಯಲ್ಲಿಯೇ ಯಾವುದನ್ನು ಬಿಡಲಾಗಿದೆ ಎಂದೂ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದನ್ನು ಅವರು ಮಾತನಾಡುವ ಸಂದರ್ಭದಲ್ಲಿ ಹೇಳಲಿ. ಹತ್ತನೇ ತರಗತಿಯ ತಮಿಳು ಪಠ್ಯದಲ್ಲಿ ಆದಿಕವಿ ಪಂಪನ ಪರಿಚಯ ಮಾಡಿರುವಂಥದ್ದಿದೆ. ಇದರಲ್ಲಿ ಏನು ತಪ್ಪು? ಹಾಗೆಯೇ ಮರಾಠಿ ಪುಸ್ತಕದಲ್ಲಿ ಕನ್ನಡ ಮತ್ತು ಮರಾಠಿ ಭಾಷಾ ಬಾಂಧವ್ಯದ ಬಗ್ಗೆ, ಇವತ್ತು ಗಡಿಯಲ್ಲಿ ಏನು ನಡೆಯುತ್ತಿದೆಯೋ ಆ ಒಂದು ವಿಷಯದಲ್ಲಿ ಪಾಠವನ್ನು ಅಳವಡಿಸಿದ್ದಾರೆ. ಇದರಲ್ಲಿ ಏನು ತಪ್ಪಿದೆ? ಅದೇ ರೀತಿ ಏಳನೇ ತರಗತಿಯ ಹಿಂದಿ ಪಠ್ಯದಲ್ಲಿ 'ಅಪ್ನಾ ಕರ್ನಾಟಕ್' ಎನ್ನುವಂತಹ ಪಠ್ಯವನ್ನು ಅದರಲ್ಲಿ ಹೇಳಿದ್ದಾರೆ, ಏನು ತಪ್ಪು? ಏಳನೇ ತರಗತಿಯ ತುಳು ಪಠ್ಯದಲ್ಲಿ ನಾರಾಯಣಗುರು ಅವರ ಜೀವನ ಚರಿತ್ರೆಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದೇ ರೀತಿ ಎಂಟನೇ ತರಗತಿಯ ಪಠ್ಯಪುಸ್ತಕದಲ್ಲಿ ಹಣ್ಣು ಮಾರಿ, ಅದರಿಂದ ಗಳಿಸಿದಂತಹ ಹಣದಿಂದ ಶಾಲೆಗಳನ್ನು ಕಟ್ಟಿಸಿದಂತಹ ಒಂದು ಅಜ್ಜಿಯ ವಿಚಾರವನ್ನು ಪರಿಚಯ ಮಾಡಿರುವಂಥದ್ದಿದೆ. ನಿಜಕ್ಕೂ ಸಹ ಇದು ಅತ್ಯಂತ ಆದರ್ಶಪ್ರಾಯವಾಗಿರತಕ್ಕಂಥದ್ದು.

ಚನ್ನಗಿರಿ ತಾಲ್ಲೂಕಿನಲ್ಲಿ ಸುಮಾರು 400 ಎಕರೆಯಷ್ಟು ಕೆರೆ ಇರುವುದು ಮಾನ್ಯ ಸಭಾಪತಿಯವರಿಗೂ ತಿಳಿದಂತಹ ವಿಚಾರ. ಒಂದು ಕಾಲದಲ್ಲಿ ಅದನ್ನು 'ಸೂಳೆಕೆರೆ' ಎಂದು ಕರೆಯಲಾಗುತ್ತಿತ್ತು. ಮಾಜಿ ಮುಖ್ಯಮಂತ್ರಿಗಳಾದ ದಿ:ಶ್ರೀ ಜೆ.ಹೆಚ್.ಪಟೇಲರ ಕಾಲದಲ್ಲಿ ಅದನ್ನು 'ರಾಣಿಕೆರೆ' ಅಥವಾ 'ಶಾಂತಿಸಾಗರ' ಎಂದು ಪುನರ್ ನಾಮಕರಣ ಮಾಡಲಾಯಿತು. ಏಕೆಂದರೆ ಆಕೆಯ ಕಾಯಕದ ಮೂಲಕ ಬಂದಿರತಕ್ಕಂತಹ ಹಣವನ್ನು ಬಳಕೆ ಮಾಡಿಕೊಂಡು ಒಂದು ಸಾಮಾಜಿಕ ಜವಾಬ್ದಾರಿಯನ್ನು ಮೆರೆದಿರತಕ್ಕಂತಹ ಹಿನ್ನೆಲೆಯಲ್ಲಿ ಹಾಗೂ ಇತಿಹಾಸದ ಪುಟದಲ್ಲಿ ಆಕೆಯ ಹೆಸರು ಅಜರಾಮರವಾಗಿ ಉಳಿಯಬೇಕೆನ್ನತಕ್ಕಂತಹ ಉದ್ದೇಶದಿಂದ ಇದನ್ನು ಮಾಡಲಾಯಿತು. ನಾವು ಯಾರು ಎಷ್ಟೇ ಹೇಳಿದರೂ ಸಹ ಇಂತಹ ದುಡಿಮೆಯಿಂದ ಕಟ್ಟಿಸಿರತಕ್ಕಂತಹ ಕೆರೆ ಎಂಬುದನ್ನು ಎಲ್ಲರೂ ನೆನಪಿಸಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಇಲ್ಲಿ ಈ ಪಾಠವನ್ನು ಪರಿಚಯಿಸಲಾಗಿದೆ. ಇದರಲ್ಲಿ ಏನು ತಪ್ಪು? ಹಾಗೆಯೇ ಉರ್ದು ಪಠ್ಯದಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಪಾಠವನ್ನು ಪರಿಚಯಿಸಲಾಗಿದೆ. ಇದರಲ್ಲಿ ಏನು ತಪ್ಪಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ರೀತಿಯ ಅನೇಕ ವಿಚಾರಗಳಲ್ಲಿ ಬದಲಾವಣೆಯನ್ನು ಮಾಡುತ್ತಾ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿಯೂ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದಾರೆ. ಐದನೇ ತರಗತಿಯ ಪಠ್ಯವನ್ನು ಪೂರ್ಣವಾಗಿ ಪರಿಸರ ಅಧ್ಯಯನಕ್ಕೆ ಮೀಸಲಾಗಿಟ್ಟಿರುವುದರಿಂದ ಆ ಪಠ್ಯದಲ್ಲಿದ್ದ ಸಮಾಜ ವಿಜ್ಞಾನದ ವಿಷಯಗಳು ಆರನೇ ತರಗತಿಯ ಪಠ್ಯಕ್ಕೆ ಸೇರ್ಪಡೆ ಮಾಡಿರತಕ್ಕಂಥದ್ದಿದೆ. ಆರನೇ ತರಗತಿಯ ಪಠ್ಯಕ್ಕೆ 'ನಮ್ಮ ಕರ್ನಾಟಕ' ಎನ್ನುವ ಪಠ್ಯವನ್ನೂ ಸಹ ಅಳವಡಿಸಲಾಗಿದೆ. ಅದೇ ರೀತಿ ಹಿಂದೆ ಪರಿಷ್ಕರಣೆಯಾಗಿದ್ದಂತಹ ಪಠ್ಯಪುಸ್ತಕಗಳಲ್ಲಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಕಲ್ಬುರ್ಗಿ, ಬೆಳಗಾವಿ, ಮೈಸೂರು ಮತ್ತು ಬೆಂಗಳೂರು ಪ್ರದೇಶಗಳ ಭೌಗೋಳಿಕ ವಿಚಾರಗಳ ಹಿನ್ನೆಲೆಯಲ್ಲಿ ಮತ್ತು ಆಯಾ ಭಾಗಗಳ ಯಾವ ನಾಯಕರು ಸಮಾಜಕ್ಕೆ ಪ್ರೇರಣೆಯನ್ನು ನೀಡಿದ್ದರೋ, ಸೇವೆಯನ್ನು ಮಾಡಿದ್ದರೋ ಅವರನ್ನು ಕಲ್ಬುರ್ಗಿಗೆ ಸೀಮಿತ, ಮೈಸೂರಿಗೆ ಸೀಮಿತ ಎಂದು ಮಾಡಲಾಗುತ್ತಿತ್ತು. ಬಸವಣ್ಣನವರ ಪ್ರಸ್ತಾಪ ಬೆಂಗಳೂರು, ಮೈಸೂರು ವಿಭಾಗಗಳ ಪಠ್ಯಪುಸ್ತಕಗಳಲ್ಲಿ ಇರಲಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರಸ್ತಾಪ ಕಲ್ಬುರ್ಗಿ ವಿಭಾಗದಲ್ಲಿ ಇರಲಿಲ್ಲ. ಈಗ ಇಡೀ ರಾಜ್ಯಕ್ಕೆ ಅಖಂಡ ಕರ್ನಾಟಕದ ಎಲ್ಲಾ ಮಹನೀಯರ ಪರಿಚಯವನ್ನು ಮಾಡುತ್ತಾ ಬದಲಾವಣೆಗಳನ್ನು ಮಾಡಿರುವುದನ್ನು ನಾವು ಇವತ್ತು ನೋಡಬಹುದು. ಅದೇ ರೀತಿ ಏಳನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ 'ಭಕ್ತಿಪಂಥ' ಕುರಿತಾದಂತಹ ಒಂದು ಪಾಠವಿದೆ. ಹಾಗೆಯೇ ಭಕ್ತಿಪಂಥದ ಜೊತೆಯಲ್ಲಿಯೇ 'ಸೂಫಿಪಂಥ'ದ ಪರಿಚಯವನ್ನು ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಈ ರೀತಿ ಬದಲಾವಣೆಗಳನ್ನು ಮಾಡುವುದರ ಜೊತೆ ಜೊತೆಗೆ ಮಹಿಳಾ ಸುಧಾರಕರು ಮತ್ತು ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಪ್ರತ್ಯೇಕ ಪಾಠವನ್ನು ಬರೆಸಿ ಸೇರಿಸಲಾಗಿದೆ. ಇದು ಲಿಂಗತ್ವ ಸಮಾನತೆಗೆ ಕೊಟ್ಟ ಮನ್ನಣೆ, ಸಂವಿಧಾನಾತ್ಮಕವಾದಂತಹ ಆಶಯ. ಈಗಾಗಲೇ ಇರುವ ಸಮಾಜ ಸುಧಾರಕರ ಪಾಠಕ್ಕೆ 'ಜ್ಯೋತಿಬಾ ಫುಲೆ'ಯಂತಹವರ ಪರಿಚಯವನ್ನೂ ಸೇರಿಸಲಾಗಿದೆ. ಇದರಲ್ಲಿ ಏನು ತಪ್ಪಿದೆ? ಇದರ ಜೊತೆಗೆ ನಾಡಪ್ರಭುಗಳ, ಬೇರೆ ಬೇರೆ ಕಡೆಯ ಪಾಳೇಗಾರರನ್ನು ಪರಿಚಯಿಸಲಾಗಿದೆ. ಉದಾಹರಣೆಗೆ ಹಲವು ಕಡೆ ಗಲಾಟೆಗಳಾದಾಗ "ಏನಯ್ಯಾ, ಪಾಳೆಗಾರಿಕೆ ಮಾಡುತ್ತೀಯ?" ಎಂದು ಹೇಳಲಾಗುತ್ತದೆ. ಶ್ರೀಯುತ ಹೊರಟ್ಟಿಯವರಂತಹ ನನ್ನ ಸ್ನೇಹಿತರು ಕೇಳಿದಾಗ, "ಹೌದು, ನಾನು ಪಾಳೇಗಾರರ ಮೂಲದಿಂದ ಬಂದಂಥವನು" ಎಂದು ಅನೇಕ ಸಾರಿ ಹೇಳುತ್ತೇನೆ. ಪಾಳೇಗಾರರ ವಂಶದಿಂದ ಬಂದಂಥವರು ಅಲ್ಲೊಬ್ಬರು ಇಲ್ಲೊಬ್ಬರು ಗಲಾಟೆ ಮಾಡಿರಬಹುದು; ಇಲ್ಲ ಎಂದು ಹೇಳುವುದಿಲ್ಲ. ಉದಾಹರಣೆಗೆ ಚಿತ್ರದುರ್ಗದ ಪಾಳೇಗಾರರನ್ನು ತೆಗೆದುಕೊಂಡರೆ ಅಥವಾ ಸುರಪುರದ ಪಾಳೆಯಗಾರರನ್ನು ತೆಗೆದುಕೊಂಡರೆ ಬಹುಶಃ ಕರ್ನಾಟಕದ ಇತಿಹಾಸದಲ್ಲಿ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದವರು ನಮ್ಮ ಸ್ನೇಹಿತರ ಊರಿನವರಾದ ಹಲಗಲಿಯ ಬೇಡರು ಹಾಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನೊಂದು ಕಡೆ ಸುರಪುರದ ಪಾಳೇಗಾರರ ಸಿಂಧೂರ ಲಕ್ಷ್ಮಣ. ಅಂದು ಶಸ್ತ್ರಗಳನ್ನು ತ್ಯಜಿಸಬೇಕೆಂದು ಹೇಳಿದಾಗ ಶಸ್ತ್ರಗಳು ನಮ್ಮ ಆಜನ್ಮಹಕ್ಕು ಎಂದು ಹೇಳಿದಂತಹವರು.

**(339)/21-3-2017/6-00/RC-AK**

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು):-**

ನಾನು ಅಂತಿಮವಾಗಿ ಒಂದಾಗಬೇಕು ಎಂದು ಈಗಲೂ ಹೇಳುವಂಥವನು. ಇತಿಹಾಸದಲ್ಲಿ ನೋಡಿದರೆ ನಾಡಪ್ರಭುಗಳು ಮತ್ತು ಪಾಳೇಗಾರರು ಕೊಟ್ಟಂತಹ ಕೊಡುಗೆಗಳು ಅಪಾರ. ಇವರ ಕಾಲದಲ್ಲಿ ಗುಡಿ-ಗುಂಡಾರಗಳನ್ನು, ಕೋಟೆ-ಕೊತ್ತಲುಗಳನ್ನು, ಕಲ್ಯಾಣಿಗಳನ್ನು, ದೇವಸ್ಥಾನಗಳನ್ನು, ಕೆರೆ-ಕುಂಟೆಗಳನ್ನು ಕಟ್ಟಿಸಿದ್ದಾರೆ. ಸಾಲು ಮರಗಳನ್ನು ಹಾಕಿರುವಂಥದ್ದು, ರಸ್ತೆಗಳನ್ನು ನಿರ್ಮಿಸಿರುವಂಥದ್ದು ಇದೆ. ಅಂದರೆ ಪಾಳೇಗಾರರ ಕೊಡುಗೆ ಅಪಾರವಾಗಿದೆ. ಇವತ್ತು ಪಠ್ಯಪುಸ್ತಕದಲ್ಲಿ ಇವೆಲ್ಲದರ ಪರಿಚಯವನ್ನು ಪ್ರಾಮಾಣಿಕವಾಗಿ ಮಾಡುವಂತಹ ಎಲ್ಲಾ ರೀತಿಯಾದಂತಹ ಪ್ರಯತ್ನವನ್ನು ಮಾಡಲಾಗಿದೆ.

ಅದೇ ರೀತಿ ಇತಿಹಾಸದ ಪಠ್ಯಗಳಲ್ಲಿ ಎಂಟನೇ ತರಗತಿಯಲ್ಲಿ ಮಾನವ ಹಕ್ಕುಗಳ ಕುರಿತಾದಂತಹ ಒಂದು ಪಾಠವನ್ನು ಸಹ ಪರಿಚಯ ಮಾಡಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳಿಗೆ 'administration' ಎಂದರೆ ಏನು ಎಂಬುದು ಗೊತ್ತಾಗಬೇಕೆಂದು ರಾಜ್ಯ ಮತ್ತು ಕೇಂದ್ರ ಸರ್ಕಾರದ ವರದಿಗಳ ಆಧಾರದ ಹಿನ್ನಲೆಯಲ್ಲಿ ಸಾರ್ವಜನಿಕ ಆಡಳಿತದ ಪರಿಚಯವನ್ನು ಸಹ ಮಾಡಿದ್ದಾರೆ. ಸಮಾಜ ವಿಜ್ಞಾನದಲ್ಲಿ ಜಾತ್ಯಾತೀತತೆ, ಸಮಾನತೆ, ಸೌಹಾರ್ದತೆಯ ತತ್ವಗಳಿಗೆ ದಕ್ಕೆಯಾಗದಂತೆ ಪರಿಷ್ಕರಣೆ ಮಾಡಿದ್ದಾರೆ. ಇದರಲ್ಲಿ ಏನು ತಪ್ಪಿದೆ? ಈ ರೀತಿಯ ಅನೇಕ ಬದಲಾವಣೆಗಳನ್ನು ಮಾಡಿರುವಂತಹ ಹಿನ್ನಲೆಯಲ್ಲಿ ಅದು ವಿಜ್ಞಾನದಲ್ಲಿರಬಹುದು, ಗಣಿತದಲ್ಲಿರಬಹುದು, ಇನ್ನಿತರ ಏನೆಲ್ಲಾ ಪಠ್ಯಪುಸ್ತಕಗಳಿವೆ ಇದು ಸಾರ್ವಜನಿಕರ ಅಭಿಪ್ರಾಯ, ಶಿಕ್ಷಣ ತಜ್ಞರ ಅಭಿಪ್ರಾಯ, ಸಂಘ-ಸಂಸ್ಥೆಗಳ ಅಭಿಪ್ರಾಯ, ವಿಧ್ವಾಂಸರ ಅಭಿಪ್ರಾಯ, ಪೋಷಕ ಸಂಘ-ಸಂಸ್ಥೆಗಳ ಅಭಿಪ್ರಾಯ, ಶಿಕ್ಷಕರ ಅಭಿಪ್ರಾಯ, ಮಹಿಳಾ ಸಂಘಟನೆಗಳ ಅಭಿಪ್ರಾಯವನ್ನು 2014ನೇ ಸಾಲಿನಿಂದ ಇಲ್ಲಿಯವರೆಗೂ ಪಡೆದಿರುವಂತಹ ಹಿನ್ನೆಲೆಯಲ್ಲಿ 27 ಸಮಿತಿಗಳು ಪರಿಷ್ಕರಣೆ ಮಾಡಿ, ಎಲ್ಲಾ ಆಕ್ಷೇಪಣೆಗಳನ್ನು ಗಮನದಲ್ಲಿಟ್ಟುಕೊಂಡು ಬದಲಾವಣೆಯನ್ನು ತರುವುದರ ಮೂಲಕ ನಮ್ಮ ಸಂವಿಧಾನದ ಆಶಯದ ರೀತ್ಯಾ ಜಾತಿ ರಹಿತ, ವರ್ಗ ರಹಿತ, ಶೋಷಣೆಯ ರಹಿತ, ಸಮಪಾಲು, ಸಮಬಾಳು, ಸಮಾನ ಅವಕಾಶದ ಕಲ್ಪನೆಯನ್ನು ಕೊಡುವಂತಹ ನಾವೆಲ್ಲರೂ ಭಾರತೀಯರು, ಭಾರದಲ್ಲಿರುವಂಥವರು ಒಂದೇ ಎನ್ನುವಂತಹ ವಿಚಾರದ ಹಿನ್ನಲೆಯಲ್ಲಿ ಪರಿಷ್ಕರಣೆಯನ್ನು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ಪರಿಷ್ಕರಣೆಯಲ್ಲಿ ಬಹುಶಃ ಆಕಸ್ಮಿಕವಾಗಿ ಇನ್ಯಾರೋ ಪ್ರೆಸ್ ಕಟಿಂಗ್ಸ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. Press Conference ನಲ್ಲಿ ಹೇಳಿರುವಂಥದ್ದನ್ನೆ ಅಂತಿಮ ಎಂದು ತೆಗೆದುಕೊಳ್ಳುವುದು ಅಷ್ಟೊಂದು ಸಮಂಜಸವಲ್ಲವೆಂದು ಹೇಳಬಯಸುತ್ತೇನೆ.

ಇನ್ನು, ಪರಿಷ್ಕರಣೆಯ ಪೂರ್ಣ ಜವಾಬ್ದಾರಿಯನ್ನು ಹೊತ್ತಿರುವಂಥವರು ಸನ್ಮಾನ್ಯ ಬರಗೂರು ರಾಮಚಂದ್ರಪ್ಪನವರು. ಸನ್ಮಾನ್ಯ ಬರಗೂರು ರಾಮಚಂದ್ರಪ್ಪನವರು ನನ್ನ ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರಿನವರು. ಸರಿಯೋ-ತಪ್ಪೋ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ನನ್ನ ಸಮಾಜಕ್ಕೆ ಸೇರಿರುವಂಥವರು. ।ನಾಡೋಜ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇತ್ತೀಚೆಗೆ ನಡೆದಂತಹ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿದ್ದಂತಹ ಬಂಡಾಯ ಸಾಹಿತಿ, ಬಹುಶಃ ಬರಗೂರು ರಾಮಚಂದ್ರಪ್ಪನವರಿಗೆ ಸಾಟಿ ಎಂದರೆ ಬರಗೂರು ರಾಮಚಂದ್ರಪ್ಪನವರೆ. ಅಂತಹ ಮಹಾನ್ ವಿದ್ವಾಂಸ, ಮಹಾನ್ ವಿಚಾರವಂತ. ಅವರು ನಿಷ್ಪಕ್ಷಪಾತವಾಗಿ ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ ಪಠ್ಯಪುಸ್ತಕ ಪರಿಷ್ಕರಣೆ ಮಾಡಿರುವಂಥದ್ದು.

ಈ ಪಠ್ಯ ಪುಸ್ತಕದ ಬಗ್ಗೆ ನಾವು ಒಂದು ರೀತಿ ರಾಜಕಾರಣ ಬೆರೆಸುವಂಥದ್ದು ಬಹುಶಃ ನಮಗ್ಯಾರಿಗೂ ಸಹ ಶೋಭೆ ತರುವಂಥದ್ದಲ್ಲ. ಈ ಸದನಕ್ಕೂ ಸಹ ಶೋಭೆ ತರುವಂಥದ್ದಲ್ಲ. ನಾನು ಈ ಸದನದ ಮೂಲಕ ಹೇಳಬಯಸುವುದೇನೆಂದರೆ, ಅತ್ಯಂತ ಉತ್ತಮವಾಗಿ ಕೆಲಸ ಮಾಡಿರುವಂತಹ ಸನ್ಮಾನ್ಯ ಬರಗೂರು ರಾಮಚಂದ್ರಪ್ಪನವರನ್ನು ಮತ್ತು 27 ಸಮಿತಿಗಳಲ್ಲಿರುವಂತಹ 170 ಜನ ಎಲ್ಲಾ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಅತ್ಯಂತ ಹೃದಯಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಬದಲಾವಣೆಗಳ ಮೂಲಕ ಹೊಸ ಪೀಳಿಗೆಯವರಿಗೆ ಹೊಸದಾಗಿ ಅಪ್‌ಡೇಟ್ ಆಗಿರುವಂತಹ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವಂತಹ ಒಂದು ಹೊಸ ಸಂಪ್ರದಾಯಗಳನ್ನು ಮಾಡುವಂಥದ್ದಕ್ಕೆ ಇವತ್ತು ಸಂವಿಧಾನದತ್ತವಾಗಿರುವಂಥಹ State List ನ ಪ್ರಕಾರ ರಾಜ್ಯ ಸರ್ಕಾರಕ್ಕೆ ಇರುವಂತಹ ಅಧಿಕಾರವನ್ನು ಚಲಾಯಿಸಿದ್ದಾರೆ. ಕೇಂದ್ರದ N.C.E.R.T. (National Council of Educational Research and Training) ಅವರಿಗೆ ನಮ್ಮ ಮೇಲೆ dictate ಮಾಡುವಂತಹ ಯಾವ ಅಧಿಕಾರ ಇಲ್ಲ. ಯಾರೇ dictate ಮಾಡಿದರೂ ಅದು ಸಂವಿಧಾನ ಬಾಹಿರವಾಗುತ್ತದೆ. ಅದನ್ನು ನನ್ನ ಸನ್ಮಿತ್ರರು ಅರ್ಥ ಮಾಡಿಕೊಳ್ಳಬೇಕು. ಹಾಗಾಗಿ ಇವತ್ತೇನಾದರು ಇಲ್ಲಾ ರೀ ಅವರು ಫೈನಲೈಸ್ ಮಾಡುತ್ತಾರೆ, Next year ಏಕೆ ಎಂದು ಕೇಳುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಅವರು ಫೈನಲೈಸ್ ಮಾಡಿದರೆ ಅದು central schools ಗೆ apply ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಟೇಟ್ ಸಿಲಬಸ್ ಏನಿದೆ, ಅದಕ್ಕೆ ರಾಜ್ಯ ಸರ್ಕಾರದ ಸಾರ್ವಭೌಮತ್ವ ಇದೆ. ರಾಜ್ಯ ಸರ್ಕಾರ ಯಾವುದು ಸರಿ ಇದೆ ಎನ್ನುವಂತಹ ವಿಚಾರದ ಹಿನ್ನಲೆಯಲ್ಲಿ ಪಠ್ಯ ಪುಸ್ತಕಗಳನ್ನು ಸಿದ್ದಪಡಿಸುವಂತಹ ಹಕ್ಕು ರಾಜ್ಯ ಸರ್ಕಾರಕ್ಕೆ ಇರುವಂಥದ್ದನ್ನು ಕೇಂದ್ರ ಸರ್ಕಾರಕ್ಕೆ ನೀವು ಒಪ್ಪಿಸುವಂತಹ ಕೆಲಸವನ್ನು ಮಾಡಬೇಡಿ. ಸನ್ಮಾನ್ಯ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಏನು ಘೋಷಣೆ ಮಾಡಿದ್ದಾರೆ ಅದರ ರೀತ್ಯಾ ಉತ್ತಮವಾಗಿರುವಂತಹ ಕೆಲಸವನ್ನು ಮಾಡಿರುವಂಥದ್ದಕ್ಕೆ ಸರ್ಕಾರವನ್ನು ಮತ್ತು ಎಲ್ಲಾ ಸಮಿತಿಗಳನ್ನು ಅತ್ಯಂತ ಹೃದಯ ಪೂರ್ವಕವಾಗಿ ಅಭಿನಂದನೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು. ಈಗ ಸಮಯದ ಪ್ರಶ್ನೆ ಬರುತ್ತದೆ. ಇದುವರೆಗೂ ಆಗಿರುವಂತಹ ಚರ್ಚೆಗೆ ಮಾನ್ಯ ಸಚಿವರು ಉತ್ತರ ಕೊಡಲಿ. ಅವರು ಚರ್ಚೆಗೆ ಉತ್ತರ ಕೊಟ್ಟಮೇಲೆ ಕ್ಲಾರಿಫಿಕೇಶನ್‌ಗೆ ಅವಕಾಶ ಕೊಡುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇದುವರೆಗೂ ಆಗಿರುವಂತಹ ಚರ್ಚೆಗೆ ....

**ಸಭಾಪತಿಯವರು:–** ನಿಮಗೆ ಉತ್ತರ ಬೇಡವೆ? You are not interested in answer.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇದುವರೆಗೂ ಮಾನ್ಯ ಉಗ್ರಪ್ಪನವರು ಮಾತನಾಡಿರುವಂತಹ ಚರ್ಚೆಗೆ ...

**ಸಭಾಪತಿಯವರು:–** ಅವರಿಗೆ ಹೇಗೆ ನೀವು ಉತ್ತರ ಕೊಡುತ್ತೀರಿ? ನೀವು ಸಚಿವರಿಗೆ ಕೇಳಿದ್ದೀರಿ, ಸಚಿವರು ಉತ್ತರ ಕೊಡುತ್ತಾರೆ. ಆ ಉತ್ತರ ನಿಮಗೆ ಸಮಾಧಾನವಾದರೆ ಸರಿ. ಇಲ್ಲದೆ ಹೋದರೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರ ಉತ್ತರ ಬೇಡವೆ? You don't want a reply? ಸರಿ ನಾನು ಆರು ಗಂಟೆ ಹದಿನೈದು ನಿಮಿಷಕ್ಕೆ I will adjourn the House without an answer from the Government. Without answer I am going to adjourn the House. Without answer, if you want me to adjourn the House, O.K. But if you want an answer, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು, ಶ್ರೀ ಅರುಣ ಶಹಾಪುರ ಮತ್ತು ಶ್ರೀಮತಿ ತಾರಾಅನೂರಾಧ ರವರು ಸರ್ಕಾರ ಕೈಗೊಂಡಿರುವಂತಹ ಪಠ್ಯಪುಸ್ತಕ ಪರಿಷ್ಕರಣೆ ಕುರಿತಂತೆ ಆಗಿರುವಂತಹ ಲೋಪಗಳನ್ನು ಸದನದ ಗಮನ ಸೆಳೆಯುವಂತಹ ಪ್ರಯತ್ನ ಮಾಡಿ ಪ್ರಶ್ನೋತ್ತರ ವೇಳೆಯಲ್ಲಿ ಕೇಳಿದಂತಹ ಪ್ರಶ್ನೆಗೆ ಸರ್ಕಾರದ ಉತ್ತರಂದ ಹಿನ್ನೆಲೆಯಲ್ಲಿ ಇನ್ನೂ ಸುಧೀರ್ಘವಾಗಿ ಚರ್ಚೆ ಮಾಡುವಂತಹ ಅವಕಾಶ ಕೋರಿದ್ದಕ್ಕೆ ತಾವು ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಿರುತ್ತೀರಿ. ಅತ್ಯಂತ ಪ್ರಮುಖವಾಗಿ ಶ್ರೀ ರಾಮಚಂದ್ರಗೌಡರು ಸರ್ಕಾರದ ಉತ್ತರವನ್ನು ಒಪ್ಪದಿದ್ದ ಹಿನ್ನೆಲೆಯಲ್ಲಿ ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ತಾವು ಅನುಮತಿಸಿದ್ದೀರಿ. ಅದರ ಜೊತೆಗೆ ಸರ್ಕಾರ ತರಾತುರಿಯಲ್ಲಿ ಮಾಡಿರುವಂತಹ ಕೆಲಸ ಲಕ್ಷಾಂತರ ಪುಸ್ತಕಗಳನ್ನು ಮುದ್ರಣ ಮಾಡಿ ಮುಂದಿನ ವರ್ಷ ಮತ್ತೆ ಹೊಸದಾಗಿ ಮುದ್ರಣ ಮಾಡುವಂತಹ ಅವಕಾಶಕಗಳಾಗುತ್ತದೆ ಎನ್ನುವ ಮಾತನ್ನು ಏನು ಹೇಳಿದ್ದಾರೆ ಅದಕ್ಕೆ ನಾನು ಸ್ಪಷ್ಟೀಕರಣ ಕೊಡಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಸರ್ಕಾರ ಸುಮಾರು 511 ಪಠ್ಯ ಕಾರ್ಯಕ್ರಮಗಳನ್ನು ಮುದ್ರಣ ಮಾಡುತ್ತದೆ. ಪ್ರತೀ ವರ್ಷ ಸುಮಾರು 5 ಕೋಟಿ ಪುಸ್ತಕಗಳನ್ನು ಮುದ್ರಣ ಮಾಡುವಂತಹ ವ್ಯವಸ್ಥೆ ಇದೆ. ಅದರಲ್ಲಿ ರಾಜ್ಯದಲ್ಲಿ ಸುಮಾರು 67 ಲಕ್ಷ ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡುವಂತಹ ವ್ಯವಸ್ಥೆ ಇದೆ. ಅದೇ ರೀತಿ ಪುಸ್ತಕಗಳನ್ನು ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಮಾರಾಟದ ರೂಪದಲ್ಲಿ ಕೊಡುವಂತಹ ವ್ಯವಸ್ಥೆ ಇದೆ. ಪ್ರತೀ ವರ್ಷ ಇಷ್ಟೇ ಪ್ರಮಾಣದ ಪುಸ್ತಕಗಳನ್ನು ನಾವು ಮುದ್ರಣ ಮಾಡುತ್ತಾ ಬಂದಿದ್ದೇವೆ. ಅದರಂತೆ ಈ ವರ್ಷವು ಸಹ ಮುದ್ರಣ ಮಾಡಿದ್ದೇವೆ. ಹಾಗಾಗಿ ಮುಂದಿನ ವರ್ಷ ಮುದ್ರಣ ಮಾಡುವುದು ಬೇಡ ಎನ್ನುವಂತಹ ಪ್ರಶ್ನೆಯೇ ಇಲ್ಲ. ಮಕ್ಕಳಿಗೆ ಕೊಡುವಂತಹ ಪಠ್ಯಪುಸ್ತಕಗಳನ್ನು ಪ್ರತೀ ವರ್ಷ ಮುದ್ರಣ ಮಾಡಿಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಹಿಂದಿನಿಂದಲೂ ಜಾರಿಯಲ್ಲಿ ತಂದಿದೆ. ಅದು ನಡೆಯುತ್ತಾ ಬಂದಿದೆ.

ಜೊತೆಗೆ ಶ್ರೀ ಅರುಣ ಶಹಾಪುರ ಅವರು ಪ್ರಮುಖವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಸಮಿತಿಯು ದಿನಾಂಕ:24.11.2014ರಂದು ರಚನೆ ಆಗಿ 2 ವರ್ಷಗಳ ಕಾಲ ಪರಿಷ್ಕರಣೆ ಮಾಡುವಂತಹ ಜವಾಬ್ದಾರಿ ಅವರಿಗೆ ಕೊಟ್ಟಿದ್ದರೂ ಸಹ ನಾವು ಅದನ್ನು ದಿನಾಂಕ:05.11.2016ರಂದು ಅದಕ್ಕೆ terms of reference ಕೊಟ್ಟಿದ್ದೇವೆ. ಇದು ಬಹಳ ಸ್ಪಷ್ಟವಾದಂತಹ ವಿಚಾರ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(340) 21.03.2017 KG.AK 6.10**

**ಶ್ರೀ ತನ್ವೀರ್ ಸೇಠ್ (ಮುಂದು):**

ಸರ್ಕಾರದ ಸಚಿವ ಸಂಪುಟ ಪುನರ್ ರಚನೆಯಾಗಿ ನನಗೆ ಇದರ ಜವಾಬ್ದಾರಿಯನ್ನು ಕೊಟ್ಟ ಮೇಲೆ Karnataka Textbook Society ಜೊತೆಗೆ ನಮ್ಮ ಇ.ಸಿ. ಸಭೆಯನ್ನು conduct ಮಾಡಿದ್ದೇನೆ. 27 ಸಮಿತಿಗಳ ಅಧ್ಯಕ್ಷರು ಮತ್ತು ಸರ್ವ ಸಮಿತಿಗಳ ಅಧ್ಯಕ್ಷರುಗಳು ಮತ್ತು ಮಾನ್ಯ ಸಾಹಿತಿ ಬರಗೂರು ರಾಮಚಂದ್ರಪ್ಪನವರ ಜೊತೆಗೆ ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎನ್ನುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನಾನು ಈ ಇಲಾಖೆಯ ಸಚಿವನಾದ ನಂತರ ಕೆಲವೊಂದು ವಿಚಾರಗಳನ್ನು ಖಾತ್ರಿ ಪಡಿಸಿಕೊಳ್ಳಬೇಕಾಗಿರುವುದು ನನ್ನ ಜವಾಬ್ದಾರಿ ಆಗಿತ್ತು. ಆ ಕಾರಣದಿಂದ ನಾವು ಎನ್.ಸಿ.ಎಫ್ 2005, ಕೆ.ಸಿ.ಎಫ್ 2007 ಮತ್ತು Learning Indicators of 2014, N.C.E.R.T. ಅವರು ಏನು ಕೊಟ್ಟಿದ್ದಾರೆ ಅದನ್ನು ಪಠ್ಯ ಕಾರ್ಯಕ್ರಮದಲ್ಲಿ ಪರಿಷ್ಕರಣೆ ಮಾಡುವಂತಹ ಸಂದರ್ಭದಲ್ಲಿ ಇದನ್ನು ಅಳವಡಿಸಿಕೊಂಡಿರಬೇಕು ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಪತ್ರ ಬರೆದಂತಹದ್ದು. ಇಲಾಖೆಯಿಂದ Terms of Reference ನಿಂದ ಏನು ಕೊಟ್ಟಿದ್ದರು, ಅದರಂತೆ ಅವರು ಏನು ಮಾಡಿದ್ದಾರೆ ಅದನ್ನು ಮತ್ತೆ ನೋಡುವಂತಹ ಕೆಲಸವನ್ನು ಮಾಡಿಕೊಂಡು ಬರಬೇಕು. ನಾನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿರುವುದು ನಿಜ. ಪಠ್ಯ ಪುಸ್ತಕಗಳ ಪರಿಷ್ಕರಣೆ ಮುಗಿದಿದೆಯೇ ಎನ್ನುವಂತಹ ಪ್ರಶ್ನೆಗೆ, ಇಲ್ಲ ನಡೆಯುತ್ತಿದೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಪರಿಷ್ಕರಣೆ ಅಂದ ತಕ್ಷಣ ಅದರ ರೂಪುರೇಷೆಗಳು ಏನೂ ಇರಬೇಕು, ಕೇಳುವಂತಹ ಪಠ್ಯ ಪುಸ್ತಕಗಳ ಪರಿಷ್ಕರಣೆ ತಿದ್ದುವಂತಹದ್ದು ಅಥವಾ ಕೆಲವೊಂದನ್ನು ಸೇರ್ಪಡೆ ಮಾಡುವಂತಹದ್ದು, ಕೆಲವೊಂದನ್ನು ತೆಗೆದು ಹಾಕುವಂತಹದ್ದು ಅಷ್ಟೇ ಪರಿಷ್ಕರಣೆ ಅಲ್ಲ. ನಾವು ಮಾಡುವಂತಹದ್ದು ಏನಿದೆ ಅದಕ್ಕೆ ಡಿ.ಟಿ.ಪಿ. ಮಾಡುವಂತಹ ಕಾರ್ಯ ಇರುತ್ತದೆ. book mark ಮಾಡುವಂತಹ Page Maker ಏನಿದೆ ಅದರ ಪ್ರಕಾರ, ಆ ಪುಸ್ತಕಕ್ಕೆ ಒಂದು ರೂಪವನ್ನು ಕೊಡುವಂತಹದ್ದು ಇರುತ್ತದೆ. ತದನಂತರ ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡುವುದಕ್ಕೆ ಅಕ್ಷರಗಳನ್ನು ತಿದ್ದುವುದಕ್ಕೆ ಮತ್ತೊಂದು ಕೆಲಸ ಮಾಡಬೇಕಾಗುತ್ತದೆ. ಇದಾದ ಮೇಲೆ ಅದರ soft copy ಅನ್ನು ಪಡೆದು ಮೂರು ಜನ ಅಧಿಕಾರಿಗಳಿಗೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಆದೇಶ ಮಾಡಿದ್ದೆ. ಅವರು ಇಲ್ಲ ಸಮಿತಿಯವರು ಮಾಡಿ ಕೊಟ್ಟ ಮೇಲೆ ನೀವು ಮಾಡಿಕೊಳ್ಳಿ ಅದರ ಜೊತೆ ಜೊತೆಗೆ ಮಾಡಿದಂತಹ ಸಂದರ್ಭದಲ್ಲಿ ಗೊಂದಲಗಳು ಸೃಷ್ಟಿಯಾಗುತ್ತವೆ ಎಂದು ಹೇಳಿದ್ದ ಕಾರಣಕ್ಕಾಗಿ ನಾನು ಅದನ್ನು ತಡೆ

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಡಿದೆ. ನಂತರ ಅದರ ಕೆಲಸವನ್ನು ಇಲಾಖೆ ಪೂರ್ಣ ಜವಾಬ್ದಾರಿಯಿಂದ ಮಾಡಿಕೊಂಡು ಬಂದಿದೆ. ಬೆಳಗಾವಿಯ ಅಧಿವೇಶದಲ್ಲಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ದಿನಾಂಕ 28–11–2016 ರಂದು ಪ್ರತಿ ವರ್ಷ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ಕೊಡುವಂತಹ ಸಂದರ್ಭದಲ್ಲಿ ಆಗುವಂತಹ ವಿಳಂಬವನ್ನು ಮನಗಂಡು ಅಕ್ಟೋಬರ್ ಕೊನೆಯ ಮತ್ತು ನವೆಂಬರ್ ಮೊದಲನೆಯ ವಾರದಲ್ಲಿ tender process ಪ್ರಾರಂಭ ಮಾಡಲಾಗಿದೆ ಎಂದು ತಿಳಿಸಿದ್ದೆ. ಐದು ಕೋಟಿ ಪುಸ್ತಕಗಳನ್ನು ಮುದ್ರಣ ಮಾಡುವಂತಹದ್ದು ಮತ್ತು ಅದರಲ್ಲಿ 511 ಪ್ರಕಾರದ ಪುಸ್ತಕಗಳನ್ನು ಮುದ್ರಣ ಮಾಡುವಂತಹ ಸಂದರ್ಭ ಬಂದಾಗ ಟೆಂಡರ್‌ಗಳನ್ನು ಮಾಡುವಂತಹ ಸಂದರ್ಭದಲ್ಲಿ ಸುಮಾರು 72 ಪ್ಯಾಕೇಜ್‌ಗಳನ್ನು ಮಾಡಿ ಟೆಂಡರ್ ಮಾಡಬೇಕಾಗುತ್ತದೆ. Tender process ನಲ್ಲಿ ನಮಗೆ K.T.P.P. Act ಪ್ರಕಾರ, 60 ದಿವಸಗಳ ಕಾಲವಕಾಶ ಕೊಟ್ಟು ಕರೆಯಬೇಕಾಗುತ್ತದೆ. ನಂತರ ಅವರ ಜೊತೆಗೆ technical bid ಮತ್ತೇ financial bid open ಮಾಡಿದ ಮೇಲೆ ಅವರಿಗೆ ಮುದ್ರಣದ ವಸ್ತುವನ್ನು ಕೊಡಬೇಕಾಗಿರುತ್ತದೆ. ಅದಕ್ಕೆ ಸಮಯ ಬೇಕಾಗಿರುವುದರಿಂದ, ಆ ಕಾರ್ಯವನ್ನು ಮುಂಚಿತವಾಗಿ ಪ್ರಾರಂಭ ಮಾಡಿರುವುದು ನಿಜ. ಅದನ್ನು ಮಾಡಿದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ಮತ್ತು ನಮ್ಮ ಸರ್ಕಾರದ ಮುಖ್ಯಸ್ಥರ ಜೊತೆಗೆ ಆಗಿರುವಂತಹ ಯಾವುದೇ ಸಭೆಯನ್ನು ಗೌಪ್ಯವಾಗಿ ಮಾಡಿರುವುದಿಲ್ಲ. ಮಾನ್ಯ ಸಭಾಪತಿಯವರೇ, ಇಲ್ಲಿ Education Council Meeting ಅನ್ನು ಅವರ ಅಧ್ಯಕ್ಷತೆಯಲ್ಲಿ ಮಾಡಲಿಕ್ಕೆ ಸಾಧ್ಯವೇ ? ಎನ್ನುವ ಪ್ರಶ್ನೆ ಉದ್ಭವಿಸಿದೆ. ನಮ್ಮ ನಡವಳಿಕೆಗಳನ್ನು ಪಡೆಯುವಂತಹ ಸಂದರ್ಭದಲ್ಲಿ ಅವರು ಪಠ್ಯ ಪುಸ್ತಕದ ಸೊಸೈಟಿಯ ಸಭೆ ಎಂದು ಮಾಡಿಕೊಂಡಿದ್ದು, ಅದನ್ನು ಯಾವ ರೀತಿಯಲ್ಲಿ ಮಾಡಿಕೊಂಡಿದ್ದಾರೆ ಅದು ಒಂದು ಕಡೆ. ಆದರೆ, ಬರೆಯುವಂತಹ ವಿಚಾರದಲ್ಲಿ ಆಗಿರುವಂತಹ ಲೋಪಗಳು ಮಾನ್ಯ ಮುಖ್ಯ ಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡಬೇಕು ಅಥವಾ ಅವರ ಜೊತೆಗೆ ಸಭೆ ಮಾಡುವಂತಹದ್ದು ತಪ್ಪು ಎನ್ನುವುದು ಎಲ್ಲಿಯೂ ಇಲ್ಲ. ನಾನು ಸಹ ಅವರ ಸಲಹೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಜೊತೆಗೆ ಈ ರಾಜ್ಯದ ಹಿತ ಕಾಪಾಡುವಂತಹ ಸನ್ನಿವೇಶಗಳು ಬಂದಾಗ, ಈಗಾಗಲೇ ಮಾನ್ಯ ಸದಸ್ಯರಾದ ರಮೇಶ್‌ಬಾಬು ಮತ್ತು ಮಾನ್ಯ ಉಗ್ರಪ್ಪನವರು ಅನೇಕ ಸನ್ನಿವೇಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಒಂದು ಅಂಶವನ್ನು ಬಹಳ ಸ್ಪಷ್ಟವಾಗಿ ಇಲ್ಲಿ ಹೇಳುತ್ತೇನೆ. ನಮ್ಮಲ್ಲಿ ಇರುವಂತಹ ನಿಯಮಾವಳಿಗಳನ್ನು ಎಲ್ಲೂ ತಿದ್ದುವಂತಹದಾಗಲೀ ಅಥವಾ ಸರಳಗೊಳಿಸುವುದಾಗಲೀ ಮಾಡಿಲ್ಲ. We have followed all due procedures ಇದನ್ನು ಮಾಡುವಂತಹ ಕೆಲಸವನ್ನು 27 ವಿಷಯ ಸಮಿತಿಗಳಲ್ಲಿ ಮಾಡಿಕೊಂಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದಿದ್ದೇವೆ. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳು, ಉಪನ್ಯಾಸಕರು ಇವರ ಅಧ್ಯಕ್ಷತೆಯಲ್ಲಿ ಮಾಡಿರುವಂತಹ ಸಮಿತಿಗಳಲ್ಲಿ ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು, ಶಿಕ್ಷಣ ತಜ್ಞರನ್ನು ಸುಮಾರು 170 ಜನರನ್ನು ವಿವಿಧ 27 ವಿಷಯ ಸಮಿತಿಗಳಲ್ಲಿ ನೇಮಕ ಮಾಡಿರುವುದು ನಿಜ. ಇದನ್ನು ಮಾಡುವಂತಹ ಸನ್ನಿವೇಶಗಳಲ್ಲಿ ಮತ್ತು ನಾನು ಮೊನ್ನೆ ದಿವಸ ಉತ್ತರ ಕೊಡುವಂತಹ ಸಂದರ್ಭದಲ್ಲಿ ಇನ್ನೂ 103 ಅನ್ನು ಮಾಡಬೇಕೆಂದು ಹೇಳಿದ್ದೇನೆ. ನಮ್ಮಲ್ಲಿ ದಿನನಿತ್ಯ ಹಗಲು ರಾತ್ರಿ ಕೆಲಸ ನಡೆಯುತ್ತಿದೆ. ಪರಿಷ್ಕರಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಪರಿಶೀಲನೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಮುದ್ರಣಕ್ಕೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇದರಲ್ಲಿ ಯಾವುದು ಉಳಿದಿದೆ ಎಂದು ಹೇಳಿದರೆ, ನಾವು ಸುಮಾರು 7 ಭಾಷೆಗಳಲ್ಲಿ ಅನುವಾದ ಮಾಡಬೇಕಾದಂತಹ ಸಂಗತಿ. ಅದನ್ನು ನಮ್ಮ ಕೆ.ಸಿ.ಎಫ್ 2005 ರಲ್ಲಿ ರಾಜ್ಯದಲ್ಲಿ ಇದು ಪರಿಷ್ಕರಣೆ ಮಾಡುವಂತಹ ಕಾರ್ಯ ಆಗಿದೆ. ಪರಿಷ್ಕರಣೆ ಮಾಡುವಂತಹ ಕೆಲಸ ಹೊಸದೇನು ಅಲ್ಲ. ನಮ್ಮಲ್ಲಿ ಸುಮಾರು common core elements ಇರುವಂತಹದ್ದು. ಸುಮಾರು 10 common core elements ಅನ್ನು ಮುಂದೆ ಇಟ್ಟಿಕೊಂಡು 1986 ರಲ್ಲಿ ನಮ್ಮ ಪರಿಷ್ಕರಣೆ ಮಾಡುವಂತಹ ಅಥವಾ ಒಟ್ಟಿಗೆ revision ಮಾಡಿ ಹೊಸ ಪಠ್ಯ ಕಾರ್ಯಕ್ರಮಗಳನ್ನು ತರುವಂತಹ ಕೆಲಸ ಆಗಿತ್ತು. ನಂತರ ನಾವು ಸತತವಾಗಿ ಪರಿಷ್ಕರಣೆ ಮಾಡುತ್ತಾ ಬಂದಿದ್ದು 1989 ಮತ್ತು 1990 ರಲ್ಲಿ ಆಗಿದೆ. 1999 ಮತ್ತು 2000 ರಲ್ಲಿ ಆಗಿದೆ. ಮತ್ತೇ 2001 ರಿಂದ 2005 ರವರೆಗೆ ಹಂತ ಹಂತವಾಗಿ ಪಠ್ಯ ಪುಸ್ತಕಗಳು ಬದಲಾವಣೆ ಆಗಿರುವಂತಹ ನಿದರ್ಶನಗಳು ನಮ್ಮ ಮುಂದೆ ಇದೆ. ಆದರೆ, ಸ್ಪಷ್ಟವಾಗಿ 'once in five years' ಎನ್ನುವುದು ಇಲ್ಲ. ಆದರೆ, ಪಠ್ಯ ಪುಸ್ತಕ ಪರಿಷ್ಕರಣೆ ಆಗುತ್ತಾ ಬಂದಿದೆ. ಸರ್ಕಾರ 2012ನೇ ಸಾಲಿನಲ್ಲಿ ಪರಿಷ್ಕರಣೆ ಮಾಡುವಂತಹ ಕೆಲಸವನ್ನು ಮಾಡಿದೆ. ಆಗ ಅನೇಕ ಆಕ್ಷೇಪಣೆಗಳು ಬಂದಿದ್ದವು ಅವುಗಳಲ್ಲಿ ಕೆಲವನ್ನು ಪರಿಗಣಿಸಿದ್ದರು. ಕೆಲವೊಂದನ್ನು ಹಾಗೆ ಬಿಟ್ಟಿದ್ದರು. ನಮಗೆ ಸತತವಾಗಿ ದೂರುಗಳು ಬರುತ್ತಿದ್ದ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯ ಮಂತ್ರಿಗಳು 2014ನೇ ಆಯವ್ಯಯದ ಭಾಷಣದಲ್ಲಿ ಪರಿಷ್ಕರಣೆ ಮಾಡುವಂತಹ ಘೋಷಣೆ ಮಾಡಿದಂತಹ ಹಿನ್ನೆಲೆಯಲ್ಲಿ, ದಿನಾಂಕ 24-11-2014 ರಂದು ವಿವಿಧ ಸಮಿತಿಗಳನ್ನು ರಚನೆ ಮಾಡಲಾಗಿದೆ. ನಂತರ 2015ರ ಮೇ ತಿಂಗಳಿನಲ್ಲಿ ಸಾಹಿತಿ ಮಾನ್ಯ ಬರಗೂರು ರಾಮಚಂದ್ರಪ್ಪನವರನ್ನು ಸರ್ವ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಮೇಲೆ ಪಾರದರ್ಶಕವಾಗಿ ಏನೆಲ್ಲಾ ಮಾಡಬೇಕಾಗಿತ್ತೋ ಅದೆಲ್ಲವನ್ನು ಮಾಡಿಕೊಂಡು ಬಂದಿದ್ದೇವೆ. ನಮ್ಮಲಿ ಜೊತೆ ಜೊತೆಗೆ ಈಗಾಗಲೇ modules ಮಾಡಿದ್ದೇವೆ. ನಾಲ್ಕು ವಿಭಾಗದಲ್ಲಿ ಶಿಕ್ಷಕರ ತರಬೇತಿ ಕಾರ್ಯಗಳನ್ನು ನಂತರ ಪೋಷಕರು ಯಾರು ಯಾರು ಆಕ್ಷೇಪಣೆಗಳನ್ನು ಕೊಟ್ಟಿದ್ದರು ಅವರನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ಬರಮಾಡಿಕೊಂಡು ಅವರ ಜೊತೆಗೆ ಸಮಾಲೋಚನೆ ಮಾಡಿ ಅವರ ಅನಿಸಿಕೆಗಳನ್ನು ಪಡೆಯುವಂತಹ ಕೆಲಸವನ್ನು ಮತ್ತು ಅನೇಕ ವಿವಿಧ ಸಂಗತಿಗಳನ್ನು ಎಲ್ಲೆಲ್ಲಿ ಪಾಲನೆ ಮಾಡಬೇಕಾಗಿತ್ತು ಅದನ್ನು ಮಾಡಿದ್ದೇವೆ. ರಾಯಚೂರಿನಲ್ಲಿ ಜರುಗಿದಂತಹ 82ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಾಹಿತಿ ಮಾನ್ಯ ಬರಗೂರು ರಾಮಚಂದ್ರಪ್ಪನವರನ್ನು ಆಯ್ಕೆ ಮಾಡಿರುವಂತಹ ಹಿನ್ನೆಲೆಯಲ್ಲಿ, ಡಿಸೆಂಬರ್ 8ನೇ ತಾರೀಖಿನ ಸಮ್ಮೇಳನದ ನಂತರ ಅವರು ಮಾಡಿರುವಂತಹ ಪರಿಷ್ಕರಣೆಯ ಎಲ್ಲಾ ಪ್ರಕರಣಗಳನ್ನು ಸರ್ಕಾರಕ್ಕೆ ಮುಟ್ಟಿಸುವಂತಹ ಕೆಲಸವನ್ನು ಮಾಡುತ್ತಾರೆ ಎನ್ನುವ ಮಾತನ್ನು ನಾನು ಹೇಳಿದ್ದೆ. ಕೆಲವೊಂದು ನ್ಯೂನ್ಯತೆಗಳನ್ನು ಅಥವಾ ನಮ್ಮಲ್ಲಿ ಇದ್ದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ ನಂತರ ಜನವರಿ 20 ಅಥವಾ 21ನೇ ತಾರೀಖಿನಿಂದ ಅವರು ಮಾಡಿರುವಂತಹದ್ದನ್ನು ನಮಗೆ ಕೊಡುವಂತಹ ಕೆಲಸವನ್ನು ಮಾಡಿದರು. ಈಗಾಗಲೇ ಪುಸ್ತಕಗಳನ್ನು ಮುದ್ರಣ ಮಾಡುವುದಕ್ಕೆ ಕಳುಹಿಸಿದ್ದೇವೆ.

**(341) 6.20 21-03-2017:ಎಂವಿ:ಆರ್‌ಎನ್**

**ಶ್ರೀ ತನ್ವೀರ್ ಸೇಠ್ (ಮುಂದು):-**

ರಾಜ್ಯದ ಮಕ್ಕಳ ಹಿತ ಕಾಪಾಡುವಂಥದ್ದು ನಮ್ಮ ಕರ್ತವ್ಯ, ಅದನ್ನು ನಾವು ಅತ್ಯಂತ ಜವಾಬ್ದಾರಿಯುತವಾಗಿ ಮಾಡುತ್ತಾ ಬಂದಿದ್ದೇವೆ. The National Curriculum Framework (NCF 2005) ಮತ್ತು *Karnataka Curriculum Framework (KCF 2007)* ಮತ್ತು learning indicators of 2014, ಎಲ್ಲೆಲ್ಲಿ ಅಳವಡಿಸಬೇಕಾಗಿದೆ ಅದೆಲ್ಲವನ್ನು ನಾವು ಮಾಡಿದ್ದೇವೆ. ಇದನ್ನು ಹಂತ-ಹಂತವಾಗಿ ಪರಿಷ್ಕರಣೆ ಮಾಡಿರುವ ಪರಿಣಾಮವಾಗಿ, ಒಂದನೇ ತರಗತಿಯಿಂದ ಮೂರನೇ ತರಗತಿಯವರೆಗೆ ಮಾಡಿರುವಂತಹ ಪಠ್ಯಪುಸ್ತಕಗಳಲ್ಲಿ, ನಂತರ ಮೂರನೇ ತರಗತಿಯಿಂದ ನಾಲ್ಕನೇ ತರಗತಿಗೆ ಹೋದಂತಹ ಸಂದರ್ಭದಲ್ಲಿ ಮಕ್ಕಳು ಅದೇ ಪಾಠವನ್ನು ಓದುವಂತಹ ಒಂದು ಪ್ರಸಂಗವಿತ್ತು ಮತ್ತು ಆರನೇ ತರಗತಿಯ ಪಠ್ಯಕ್ರಮದ ಪಾಠಗಳನ್ನು ಏಳನೇ ತರಗತಿಯಲ್ಲಿ ಓದುವಂತಹ ಪ್ರಸಂಗವಿತ್ತು. ಕೆಲವೊಮ್ಮೆ ಮೂರನೇ ತರಗತಿಯಲ್ಲಿ ಅತ್ಯಂತ ಹೆಚ್ಚಿನ ಪಾಠಗಳನ್ನು ಕೊಟ್ಟು, ನಾಲ್ಕನೇ ತರಗತಿಯಲ್ಲಿ ಅದನ್ನು ಕಡಿಮೆ ಮಾಡುವಂತಹ ಕೆಲಸ ಮಾಡಿದ್ದರು. ಈ ಹಿಂದೆ ಪರಿಷ್ಕರಣೆ ಆಗುವಂತಹ ಸನ್ನಿವೇಶದಲ್ಲಿ ಶಿಕ್ಷಕರಿಂದ ಪಾಠ ಪ್ರವಚನಗಳನ್ನು ಮಾಡುವುದಕ್ಕೆ ಕಷ್ಟ ಸಾಧ್ಯ ಎನ್ನುವುದಕ್ಕೆ ಇದನ್ನು ಇಳಿಮುಖ ಮಾಡುವಂತಹ ಪರಿಷ್ಕರಣೆಯನ್ನು ನಮ್ಮ ರಾಜ್ಯದಲ್ಲಿ ನೋಡಿದ್ದೇವೆ. ಹಾಗಾಗಿ ಈ procedure ವಿಚಾರದಲ್ಲಿ ಅವರು ಸ್ಪಷ್ಟವಾಗಿ ಕೇಳುತ್ತಿರುವುದರಿಂದ, ಯಾವುದೇ procedure lapses ಆಗಿರುವುದಿಲ್ಲ. ಸಮಯಕ್ಕೆ ಸರಿಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ತಲುಪಿಸುವಂತಹ ಕಾರ್ಯದಲ್ಲಿ ನಾವುಗಳು ಈಗಾಗಲೇ ಕಾರ್ಯಪ್ರವೃತರಾಗಿದ್ದೇವೆ. ಕೇಂದ್ರ ಸರ್ಕಾರದವರು ಹೊಸ ಶಿಕ್ಷಣ ನೀತಿಯನ್ನು ಏನು ಮಾತನಾಡಿದರು. ಅದೆಲ್ಲಾ ನಿನ್ನೆ ಪತ್ರಿಕೆಗಳಲ್ಲಿ ಬಂದಿದೆ, ಯಾವುದೇ ರೀತಿಯಿಂದಲೂ ಕೇಂದ್ರ ಸರ್ಕಾರದಿಂದ ಇನ್ನೂ ಏನೂ ಆಗಿಲ್ಲ. ಕೇಂದ್ರದ ಮಾನವ ಸಂಪನ್ಮೂಲ ಸಚಿವರು ಮತ್ತು ಸಚಿವಾಲಯದಿಂದ ಕೂಡ ಹೇಳಿದ್ದಾರೆ. ಬರುವಂತಹ ದಿನಗಳಲ್ಲಿ ಇನ್ನೂ ಅವರು ಒಂದು Draft Notification ಅನ್ನು ಮೊದಲು ಮಾಡಬೇಕಾಗುತ್ತದೆ. Draft Notification ಮಾಡಿದ ಮೇಲೆ, ಅದರ recommendations ಅನ್ನು ತೆಗೆದುಕೊಂಡು ಹೊಸ ಶಿಕ್ಷಣ ನೀತಿಯನ್ನು ಮಾಡಬೇಕಾಗಿರುವಂಥದ್ದು, ಅದಕ್ಕಿಂತ ಮುಂಚಿತವಾಗಿ ಕರ್ನಾಟಕ ಶಿಕ್ಷಣ ನೀತಿಯನ್ನು ಈ ಬಾರಿಯ ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಘೋಷಣೆ ಮಾಡಿರುವಂತಹ ಹಿನ್ನೆಲೆಯಲ್ಲಿ, ಕರ್ನಾಟಕ ಜ್ಞಾನ ಆಯೋಗ ನೀಡಿರುವಂತಹ ಶಿಫಾರಸ್ಸುಗಳನ್ನು *KCF 2007* ಅನ್ನು ಪರಿಷ್ಕರಣೆ ಮಾಡುವಂತಹ ಕೆಲಸ ಈಗ ನಮ್ಮಲ್ಲಿರುವಂತಹ NCF 2005 ಅನ್ನು ಮತ್ತು learning indicators ಮುಂದಿಟ್ಟುಕೊಂಡು, ಕರ್ನಾಟಕ ತನ್ನದೇ ಆದಂತಹ ಶಿಕ್ಷಣ ನೀತಿಯನ್ನು ತರುವುದಕ್ಕೆ ಮುಂದಾಗಿದೆ, ಏಕೆಂದರೆ ಸಂವಿಧಾನ ಬದ್ಧವಾಗಿ ರಾಜ್ಯಕ್ಕೆ ಇರುವಂತಹ ಅಧಿಕಾರವನ್ನು ಚಲಾಯಿಸಿ ನಮ್ಮ ಕೆಲಸವನ್ನು ಮಾಡುವುದಕ್ಕೆ ನಾವು ಮುಂದಾಗುತ್ತಿದ್ದೇವೆ. ಒಂದು ಬಹಳ ಸ್ಪಷ್ಟವಾಗಿ ಹೇಳಬೇಕಾಗಿರುವಂಥದ್ದು, ನಮ್ಮ ರಾಜ್ಯದ ಮಕ್ಕಳು ರಾಜ್ಯದ ನೆಲೆಯಲ್ಲಿ ಓದುತ್ತಿರುವಂತಹ ಸಂದರ್ಭದಲ್ಲಿ ರಾಜ್ಯ ಪಠ್ಯ ಕಾರ್ಯಕ್ರಮಗಳು ಮತ್ತು ಕೇಂದ್ರದ ಪಠ್ಯ ಕಾರ್ಯಕ್ರಮಗಳು ಮತ್ತು ಅಂತರರಾಷ್ಟ್ರೀಯ ಮಟ್ಟದ ಪಠ್ಯ ಕಾರ್ಯಕ್ರಮಗಳು, ಈ ಎಲ್ಲವೂ ಜೊತೆಗೆ ಸೇರಿ, CET ಮತ್ತು NEET ಪರೀಕ್ಷೆಗಳು ಬರುತ್ತಿರುವಂತಹ ಸನ್ನಿವೇಶದಲ್ಲಿ, ನಮ್ಮ ಮಕ್ಕಳಿಗೆ ಎಲ್ಲೂ ಸಮಸ್ಯೆ ಉಂಟಾಗಬಾರದು ಎಂಬ ಕಾರಣದಿಂದ, ಈ ಹಿಂದೆ ಅಂದರೆ ಐದು ವರ್ಷಗಳ ಹಿಂದೆಯೇ ದ್ವಿತೀಯ ಪಿ.ಯು.ಸಿ.ಗೆ ನಾವು The National Council of Educational Research and Training (NCERT) ಪುಸ್ತಕಗಳನ್ನು ತೆಗೆದುಕೊಂಡಿದ್ದೆವು. ನಂತರ ಅದನ್ನು ಪ್ರಥಮ ಪಿ.ಯು.ಸಿ.ಗೆ ಮುಂದುವರಿಸಿದ್ದೆವು. ಅದನ್ನು ವಿಜ್ಞಾನ ವಿಭಾಗಕ್ಕೆ ಮಾತ್ರ ಅಳವಡಿಸಿಕೊಂಡಿದ್ದೆವು. ಈ ವರ್ಷದಿಂದ ಅದನ್ನು Commerce combination ಗೂ ಸಹ NCERT ಪುಸ್ತಕಗಳನ್ನು ತರುವುದರ ಜೊತೆಗೆ, ಒಂಭತ್ತನೇ ತರಗತಿಯ ವಿಜ್ಞಾನ ಮತ್ತು ಗಣಿತ ಮತ್ತು ಹತ್ತನೇ ತರಗತಿಯ ವಿಜ್ಞಾನ ಮತ್ತು ಗಣಿತ ಇದಕ್ಕೂ ಸಹ NCERT ಪುಸ್ತಕಗಳನ್ನು ತರಬೇಕು ಎನ್ನುವುದನ್ನು ನಾವುಗಳು ಒಪ್ಪಿಕೊಂಡು. ಏಕೆಂದರೆ ಮಕ್ಕಳು ಪಿ.ಯು.ಸಿ.ಗೆ

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಂದ ಕೂಡಲೆ ಅವರಿಗೆ ಅದು ಸಮಸ್ಯೆ ಆಗಬಾರದು, ಮಕ್ಕಳ ಹಿತದೃಷ್ಟಿಯಿಂದ ಅವರ ಶೈಕ್ಷಣಿಕ ಪ್ರಗತಿಯನ್ನು ಮನಗಂಡು, ನಾವು ಮಾಡಿರುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆ, ಈ ಹಿಂದೆ 2012ರಲ್ಲಿ ಆದಂತಹ ಪುಸ್ತಕಗಳು ಏನು ಇದೆ. ಆ ಪುಸ್ತಕಗಳಲ್ಲಿ ಇರುವಂತಹ ಕೆಲವು ಅಂಶಗಳನ್ನು ಮತ್ತು ಲೋಪಗಳನ್ನು ತೆಗೆದುಹಾಕಿ, ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾವು ಮಾಡುವುದಕ್ಕೆ ಮುಂದಾಗಿದ್ದೆವು, ಅದನ್ನೆ ಮಾಡಿಕೊಂಡು ಹೋಗುತ್ತಿರುವಂತಹ ಹಿನ್ನೆಲೆಯಲ್ಲಿ ಯಾವುದೇ ಲೋಪಗಳನ್ನು ಮಾಡಿಲ್ಲ. ರಾಜ್ಯ ಸರ್ಕಾರ ಮಕ್ಕಳ ಹಿತವನ್ನು ಮುಂದಿಟ್ಟುಕೊಂಡು ನಾವು ಮಾಡಿರುವಂತಹ ಈ ಕೆಲಸದಲ್ಲಿ ಯಾವುದೇ ಲೋಪ-ದೋಷಗಳು ಆಗಿಲ್ಲ. ಜೂನ್ ಒಂದನೇ ತಾರೀಖಿನಿಂದ ಹೊಸ ಶೈಕ್ಷಣಿಕೆ ವರ್ಷ ಪ್ರಾರಂಭವಾಗುವಂತಹ ಸಂದರ್ಭದಲ್ಲಿ, ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಪಠ್ಯಪುಸ್ತಕಗಳನ್ನು ಕೊಡುವಂತಹ ವ್ಯವಸ್ಥೆ ಮಾಡುವುದಕ್ಕೆ ನಾವು ಮುಂದಾಗಿದ್ದೇವೆ ಎನ್ನುವ ಮಾತನ್ನು ತಮ್ಮ ಮೂಲಕ ಸದನಕ್ಕೆ ಹೇಳಬಯಸುತ್ತೇನೆ.

**ಸಭಾಪತಿಯವರು:-** ಈ ವಿಷಯ ಪ್ರಶ್ನೋತ್ತರ ಅವಧಿಯಲ್ಲಿ ಬಂದಿರುವುದು, ಇದರ ಚರ್ಚೆಯಾಗುವುದಕ್ಕೆ ಅರ್ಧಗಂಟೆಯ ಕಾಲಾವಕಾಶ ಕೊಡಬೇಕೆಂದು, ಆದರೆ ಅರ್ಧಗಂಟೆಯ ಬದಲು ಸುಮಾರು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ಆದುದರಿಂದ ಈ ವಿಷಯದ ಚರ್ಚೆ ಇಲ್ಲಿಗೆ ಮುಗಿಯಿತು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅನ್ಯಾಯ ಇದು, ಒಂದು ಕೋಟಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆ, ಮಾನ್ಯ ಸದಸ್ಯರಾದಂತಹ ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣರವರದ್ದು. ಆಯಿತು ನಾನೇನು ಮಾಡುವುದಕ್ಕೆ ಬರುವುದಿಲ್ಲ. I cannot dictate, Hon'ble Minister has answered.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:-**ಆಯಿತು ಹೋಗಿ. I will not allow.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ, ನಾವು ನಿಮ್ಮ ರೂಲಿಂಗ್ ಬಗ್ಗೆ ಪ್ರಶ್ನೆ ಮಾಡುವುದಿಲ್ಲ, ಈಗ ಪ್ರಶ್ನೆ ಏನೆಂದರೆ ನಾವು ಎತ್ತಿದ ಒಂದು ಪ್ರಶ್ನೆಗೂ ಕೂಡ ಉತ್ತರ ಸಿಗಲಿಲ್ಲ. ಇದು ಯಾವ ನ್ಯಾಯ.

**ಸಭಾಪತಿಯವರು:–** ನಾನು ಏನೂ ಮಾಡುವುದಕ್ಕೆ ಬರುವುದಿಲ್ಲ. I cannot help you.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರು technical ground ಮೇಲೆ ಕೇಳಿರುವುದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

**(ಈ ಹಂತದಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ವಿರೋಧಪಕ್ಷದ ನಾಯಕರು ಸೇರಿದಂತೆ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾ ತ್ಯಾಗ ಮಾಡಿದರು)**

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಈಗ ಇಲ್ಲಿ ವಿರೋಧಪಕ್ಷದ ನಾಯಕರು ನಾಯಕರೆ ಅಥವಾ ಮಾನ್ಯ ಸದಸ್ಯರು ನಾಯಕರೆ ಎಂಬುದು ನನಗೆ ಸಂಶವಿದೆ. ಮಾನ್ಯ ಸದಸ್ಯರಾದಂತಹ ಶ್ರೀ ಅರುಣ ಶಹಾಪುರ ಅವರು ಕರೆಕೊಟ್ಟಾಗ ಸಭೆಯ ವಿರೋಧಪಕ್ಷದ ನಾಯಕರು ಅವರ ಹಿಂದೆ ಹೋಗುತ್ತಾರೆ ಎಂದರೆ ಇದಕ್ಕಿಂತ ವಿಪರ್ಯಾಸ ಇನ್ನೇನೂ ಇಲ್ಲ.

**ಸಭಾಪತಿಯವರು:–** ಆಯಿತು ಬಿಡಿ, ಅದರ ಬಗ್ಗೆ ಚರ್ಚೆ ಬೇಡ, ಮಾನ್ಯ ಸದಸ್ಯರಾದಂತಹ ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ ಅವಕಾಶ ಕೊಡಿ. ನೀವು ಆ ನೋಟಿಸ್ ಓದಿ ಇವೊತ್ತು ನಿಮ್ಮ calling attention notice list ಆಗಿದೆ. ನೀವು ನೋಡಿಕೊಳ್ಳಲಿಲ್ಲವೆ, ಅವರು ನೋಡಿಕೊಂಡಿಲ್ಲ, ಅವರದ್ದೇ ಇದೆ ಎಂಬುದನ್ನು ಅವರು ಓದಿಲ್ಲ, ನಾನೇನು ಮಾಡಲಿ ಹಾಗಾದರೆ ನಾನು ಪಾಠ ಹೇಳಿ ಕೊಡಬೇಕು ನನ್ನ ಗತಿ ನೋಡಿ.

**7. ಗಮನ ಸೆಳೆಯುವ ಸೂಚನೆ**

**ವಿಷಯ:** ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊದಗೇರಿಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ರಾಜಾಶ್ರೀ ಷಹಜೀ ಇವರ ಸಮಾಧಿ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ.

******

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊದಗೇರಿಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ರಾಜಾಶ್ರೀ ಷಹಜೀ ಇವರ ಸಮಾಧಿ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು):–** ಮಾನ್ಯ ಸಭಾಪತಿಯವರೆ,

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ತಾವು ಈ ಉತ್ತರದ ಬಗ್ಗೆ ಏನಾದರೂ clarification ಕೇಳುವುದಾದರೆ ಕೇಳಬಹುದು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ನಾನು ಇದನ್ನು ಬಜೆಟ್ ಮುಗಿಯುವುದಕ್ಕಿಂತ ಮೊದಲು ಕೊಟ್ಟಿದ್ದೇನೆ. ಆದುದರಿಂದ ಈ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಸಿದ್ದರಾಮಯ್ಯನವರು ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಪ್ರಥಮವಾಗಿ ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ಬಹಳ ದಿನಗಳ ಬೇಡಿಕೆಯಿತ್ತು, ಆ ಬೇಡಿಕೆಯನ್ನು ಪೂರೈಸಿದ್ದಾರೆ, ಆದುದರಿಂದ ಆದಷ್ಟು ಬೇಗನೆ ಈ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 2012–13ರಲ್ಲಿ 50 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಒಂದು ಪ್ರವಾಸಿ ಮಂದಿರ ಮಂಜೂರಾತಿ ಆಗಿತ್ತೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಬಹುಶಃ ಆ ಸಮಾಧಿಗೆ ಹೊಂದಿಕೊಂಡೇ ಸುಮಾರು ಎರಡರಿಂದ ಮೂರು ಎಕರೆ ಜಮೀನನ್ನು ಆ ಸಮಾಜದವರು ಅಲ್ಲಿ ಗುರುತಿಸಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಅಲ್ಲಿ ಖುಲ್ಲಾ ಜಮೀನು ಇದೆ, ಅದನ್ನು ಸರ್ಕಾರದ ವತಿಯಿಂದ ವಶಪಡಿಸಿಕೊಂಡು ಅಲ್ಲಿ ಒಂದು ಪ್ರವಾಸಿ ಮಂದಿರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(342) 21.03.2017 06.30 LL-RN**

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರುಗಳದ್ದು ಎರಡು ವಿಷಯಗಳಿವೆ. ಒಂದು ಆದಷ್ಟು ಬೇಗ ಎಂದು ಶ್ರೀ ಘೋಟ್ನೇಕರ್‌ರವರು ಹೇಳಿದ್ದಾರೆ. ಇನ್ನೊಂದು ಭೂಮಿ ಬಗ್ಗೆ ಇದೆ. ಅಲ್ಲಿ ಭೂಮಿ ಇದೆ. ಅದನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಗೌರವಾನ್ವಿತ ಸದಸ್ಯರುಗಳು ಕೇಳಿದ್ದಾರೆ. ಆ ಎರಡು ಪ್ರಶ್ನೆಗಳಿಗೆ ಉತ್ತರ ಹೇಳಿಬಿಡಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೆ, ನಾನು ಆಗಲೇ ಹೇಳಿದಂತೆ, ASI (Archaeological Survey of India) monumentಗೆ ಅದನ್ನು ಗುರುತಿಸಲಾಗಿದೆ. ಆದುದರಿಂದ, ಆ monument ಆವರಣದಲ್ಲಿ ನಮಗೆ ಅಭಿವೃದ್ಧಿ ಮಾಡುವುದಕ್ಕೆ ಸಾಕಷ್ಟು ಕಷ್ಟಗಳಾಗುತ್ತವೆ. ಮಾನ್ಯ ಸದಸ್ಯರಾದಂತಹ ಶ್ರೀನಿವಾಸ್ ಮಾನೆಯವರ ನಿಯೋಗ ಒಂದು ಬಾರಿ ನನ್ನ ಬಳಿ ಬಂದಿತ್ತು. ಅವರು ಬಂದು ಹೇಳಿದ ನಂತರ ASI(Archaeological Survey of India), ರಾಜ್ಯ ಪುರಾತತ್ವ ಇಲಾಖೆಯವರು ಮತ್ತು ಪ್ರವಾಸೋದ್ಯಮ ಇಲಾಖೆಯವರು ಸೇರಿ ಸಭೆ ಮಾಡಿ ಯಾವ ರೀತಿ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕೆಂದು ನಾವು ಆಗಲೇ ಪರಿಶೀಲನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, 2-3 ಎಕರೆ ಜಮೀನನ್ನು ಆ ಸಮಾಜದ ವತಿಯಿಂದ ಕೊಡುತ್ತಿದ್ದರೆ ಮತ್ತು ಆ ಜಮೀನನ್ನು ಸರ್ಕಾರಕ್ಕೆ ಹಸ್ತಾಂತರಿಸಿದರೆ, ಅದಕ್ಕೆ ಅಭಿವೃದ್ಧಿ ಮಾಡಿಸಿಕೊಡುತ್ತೇವೆ. ಅದೇ ರೀತಿಯಲ್ಲಿ ಮಾನ್ಯ ಘೋಟ್ನೇಕರ್‌ರವರು ಆದಷ್ಟು ಶೀಘ್ರವಾಗಿ ಮಾಡಬೇಕೆಂದು ಹೇಳಿದ್ದಾರೆ. ಆ 2–3 ಎಕರೆ ಜಮೀನನ್ನು ಸರ್ಕಾರಕ್ಕೆ ನೀಡಿದರೆ, interpretation centre ಮತ್ತು ಮಾಸ್ಟರ್ ಪ್ಲಾನ್ ಮಾಡಿ ಆದಷ್ಟು ಬೇಗ ನಾವು ಮಾಡಿಕೊಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಧನ್ಯವಾದಗಳು. ಈಗ ಒಂದು ಲಘು ಪ್ರಕಟಣೆ.

**8. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವಂತಹ ಶ್ರೀ ಹೆಚ್.ಕೆ.ಪಾಟೀಲ್‌ರವರು ಒಂದು ಮನವಿ ಕಳುಹಿಸಿಕೊಟ್ಟಿದ್ದಾರೆ. ಇಂದು ಸಂಜೆ 07–00 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿರುವ **'ಯುಗಪುರುಷ'** ಎಂಬ ನಾಟಕಕ್ಕೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಆಮಂತ್ರಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಯವಿಟ್ಟು ತಾವು ಸದನದಲ್ಲಿರುವ ಎಲ್ಲಾ ಸದಸ್ಯರು ಇದನ್ನು ಗಮನಿಸಿ 07–00 ಗಂಟೆಗೆ ಪ್ರಾರಂಭವಾಗುವಂತಹ 'ಯುಗಪುರುಷ' ಎಂಬ ನಾಟಕ ಇದನ್ನು ಎಲ್ಲರಿಗೂ ಕಳುಹಿಸಿಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಇದೊಂದು ಚೆನ್ನಾಗಿ ಇರತಕ್ಕಂತಹ ನಾಟಕ, ಬಹಳ ಚೆನ್ನಾಗಿ ಮಾಡುತ್ತಾರೆಂದು ನನ್ನ ಬಳಿ ಮಾಹಿತಿಯಿದೆ. ಇದನ್ನು ತಾವೆಲ್ಲರೂ ಗಮನಿಸಿಬೇಕು ಮತ್ತು ಹಾಜರಾಗಬೇಕೆಂದು ಮಾನ್ಯ ಸಚಿವರ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 06 ಗಂಟೆ 32 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 22ನೇ ಮಾರ್ಚ್ ಮಾಹೆ 2017ರ ಬುಧವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)**

*******

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"